"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**1ನೇ ಫೆಬ್ರವರಿ 2021**
**ಸೋಮವಾರ**

## ವಿಷಯಾನುಕ್ರಮಣಿಕೆ


1. ಪ್ರಕಟಣೆ
2. ನೂತನ ಸಚಿವರ ಪರಿಚಯ
3. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**165** – ರಾಜ್ಯದಲ್ಲಿರುವ ವಸತಿ ಶಾಲೆಗಳ ಬಗ್ಗೆ
- ಶ್ರೀ ಅರುಣ ಶಹಾಪುರ (ಶ್ರೀ ಶಶೀಲ್ ಜಿ.ನಮೋಶಿಯವರ ಪರವಾಗಿ)
- ಶ್ರೀ ಬಿ.ಶ್ರೀರಾಮುಲು(ಸಮಾಜ ಕಲ್ಯಾಣ ಸಚಿವರು)

**106** – ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ನಿಗಮ ಮಂಡಳಿಗಳ ಬಗ್ಗೆ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಬಿ.ಶ್ರೀರಾಮುಲು(ಸಮಾಜ ಕಲ್ಯಾಣ ಸಚಿವರು)

**145** – ಕ್ಯಾನ್ಸರ್ ಆಸ್ಪತ್ರೆಗಳನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರಾರಂಭಿಸುವ ಬಗ್ಗೆ
- ಶ್ರೀ ಅ.ದೇವೇಗೌಡ
- ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**181** – ಕೊರೋನ ಸೋಂಕಿನ ವಿರುದ್ಧ ಬಳಸಲಾಗುವ ಲಸಿಕೆಯ ಬಗ್ಗೆ
- ಶ್ರೀ ಪಿ.ಆರ್.ರಮೇಶ್
- ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**182** – ಮಕ್ಕಳ ಖಾಯಿಲೆಗೆ ಸಂಬಂಧಿಸಿದ ಲಸಿಕೆಗಳ ಬಗ್ಗೆ
- ಶ್ರೀಮತಿ ಭಾರತಿ ಶೆಟ್ಟಿ
- ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**140** – ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಮಾಹಿತಿ ಬಗ್ಗೆ
- ಶ್ರೀ ಚಿದಾನಂದ್ ಎಂ.ಗೌಡ
- ಶ್ರೀ ಎಸ್. ಸುರೇಶ್‌ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

170 – ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳ ಬಗ್ಗೆ
- ಶ್ರೀ ಎಸ್.ವ್ಹಿ.ಸಂಕನೂರ
- ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

90 – ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಯೋಜನೆಗಳ ಬಗ್ಗೆ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

191 – ಕಾರ್ಮಿಕರಿಗೆ ಮೊಬೈಲ್ ಕ್ಲಿನಿಕ್‌ಗಳನ್ನು ಪ್ರಾರಂಭಿಸುವ ಬಗ್ಗೆ
- ಶ್ರೀ ಎಂ.ನಾರಾಯಣಸ್ವಾಮಿ (ಶ್ರೀ ಬಿ.ಕೆ.ಹರಿಪ್ರಸಾದ್‌ರವರ ಪರವಾಗಿ)
- ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ (ಕಾರ್ಮಿಕ ಸಚಿವರು)

200 – ವಿದ್ಯಾ ಸಂಸ್ಥೆಗಳು ಲೋಕೋಪಯೋಗಿ ಇಲಾಖೆಯಿಂದ ಕಟ್ಟಡ ಸ್ಥಿರತೆ ಪ್ರಮಾಣ ಪತ್ರವನ್ನು ಪಡೆಯುವ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಬಗ್ಗೆ
- ಶ್ರೀ ಕೆ.ಗೋವಿಂದರಾಜ್
- ಶ್ರೀ ಎಸ್. ಸುರೇಶ್‌ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

04. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ) ಹಾವೇರಿ ಜಿಲ್ಲೆ, ಶಿಗ್ಗಾವಿ ತಾಲ್ಲೂಕಿನಲ್ಲಿ ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯನ್ನು ಪ್ರತಿಷ್ಠಾಪನೆ ಮಾಡಲು ಸ್ಥಳ ಮಂಜೂರಾತಿ ಬಗ್ಗೆ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಕಲ್ಯಾಣ ಕರ್ನಾಟಕದ ತೊಗರಿ ಬೆಳೆಗೆ ಬೆಂಬಲ ಬೆಲೆ ನಿಗದಿ ಮಾಡುವ ಬಗ್ಗೆ
- ಶ್ರೀ ವಿಜಯ್ ಸಿಂಗ್(ಶ್ರೀ ಶ್ರೀನಿವಾಸ ವಿ.ಮಾನೆಯವರ ಪರವಾಗಿ)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಇ) ಸಿ.ಆರ್.ಪಿ.ಎಫ್.ಹುತಾತ್ಮ ಯೋಧ ಉದಯಕುಮಾರ್‌ನ ಪತ್ನಿ ರೇಖಿರವರಿಗೆ ಅವರ ಮನೆ ಬಾಡಿಗೆದಾರರು ವಂಚಿಸಿರುವ ಬಗ್ಗೆ
- ಶ್ರೀ ಹರೀಶ್ ಕುಮಾರ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

ಈ) ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಲೋಂಡಾ–ಗೋವಾ ರಾಷ್ಟ್ರೀಯ ಹೆದ್ದಾರಿಯನ್ನು ದುರಸ್ಥಿಪಡಿಸುವ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**05. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ, ಅಕ್ರಮವಾಗಿ ಸಂಗ್ರಹಿಸಿದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಬಗ್ಗೆ.

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಆಯನೂರು ಮಂಜುನಾಥ್
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಮುರುಗೇಶ್ ನಿರಾಣಿ(ಗಣಿ ಮತ್ತು ಭೂ ವಿಜ್ಞಾನ ಸಚಿವರು)
– ಶ್ರೀ ಆರ್.ಪ್ರಸನ್ನ ಕುಮಾರ್
– ಶ್ರೀ ಆರ್.ಬಿ.ತಿಮ್ಮಾಪೂರ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಪಿ.ಆರ್.ರಮೇಶ್
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎಸ್.ರವಿ
– ಶ್ರೀ ಹೆಚ್.ಎಂ.ರಮೇಶ್‌ಗೌಡ

**06. ಪ್ರಕಟಣೆ**

**07. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ**

ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ, ಅಕ್ರಮವಾಗಿ ಸಂಗ್ರಹಿಸಿದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಬಗ್ಗೆ

– ಶ್ರೀ ಕೆ.ಸಿ.ಕೊಂಡಯ್ಯ
– ಡಾ:ತೇಜಸ್ವಿನಿಗೌಡ

**08. ಪ್ರಕಟಣೆ**

~ ~ ~

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(29)/01.02.2021/11.30/ಹೆಚ್‌ವಿಃಬಿಎನ್‌ಎಸ್**

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 01ನೇ ಫೆಬ್ರವರಿ 2021**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 33 ನಿಮಿಷಗಳಿಗೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 01.ಪ್ರಕಟಣೆಗಳು

**ಸಭಾಪತಿಯವರುಃ–** (ಅ)2020–2021ನೇ ಸಾಲಿನ ನೀತಿ ನಿರೂಪಣಾ ಸಮಿತಿಗೆ ಈ ಕೆಳಕಂಡ ಸದಸ್ಯರುಗಳನ್ನು ನಾಮನಿರ್ದೇಶನಗೊಳಿಸಲಾಗಿದೆಯೆಂದು ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗುತ್ತಿದೆ;

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 194(2)ರ ಮೇರೆಗೆ ;

1. ಶ್ರೀ ಎಂ.ಕೆ.ಪ್ರಾಣೇಶ್ : ಉಪ ಸಭಾಪತಿಯವರು ಹಾಗೂ ಸಮಿತಿಯ ಅಧ್ಯಕ್ಷರು
2. ಶ್ರೀ ಬಿ.ಕೆ.ಹರಿಪ್ರಸಾದ್ : ಸದಸ್ಯರು
3. ಡಾಃತೇಜಸ್ವಿನಿಗೌಡ : ಸದಸ್ಯರು
4. ಶ್ರೀ ಕೆ.ಟಿ.ಶ್ರೀಕಂಠೇಗೌಡ : ಸದಸ್ಯರು
5. ಶ್ರೀ ಎಸ್.ವಿ.ಸಂಕನೂರ : ಸದಸ್ಯರು
6. ಶ್ರೀ ಸಿ.ಆರ್.ಅಪ್ಪಾಜಿಗೌಡ : ಸದಸ್ಯರು
7. ಶ್ರೀ ಪಿ.ಆರ್.ರಮೇಶ್ : ಸದಸ್ಯರು

(ಆ) ದಿನಾಂಕಃ29.01.2021ರಂದು ಸದನದ ಕಾರ್ಯಕಲಾಪಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಈ ಸದನದ ಸದಸ್ಯರೊಬ್ಬರು ಆಕ್ಷೇಪಾರ್ಹ ಮಾಹಿತಿಯನ್ನು ತಮ್ಮ ಮೊಬೈಲ್‌ನಲ್ಲಿ ವೀಕ್ಷಣೆ ಮಾಡುತ್ತಿದ್ದರು ಎಂಬುದಾಗಿ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ಅಂಶವು ಪೀಠದ ಗಮನಕ್ಕೆ ಬಂದಿರುತ್ತದೆ. ಇಂತಹ ಸುದ್ದಿಗಳಿಂದ ಸದನದ ಗೌರವ ಹಾಗೂ ಘನತೆಗೆ ಧಕ್ಕೆಯಾಗಬಾರದು ಎನ್ನುವ ಕಾರಣಕ್ಕಾಗಿ ಸ್ವಯಂ ಪ್ರೇರಿತವಾಗಿ ಈ ವಿಷಯದಲ್ಲಿನ ಸತ್ಯಾಸತ್ಯತೆಯನ್ನು ತಿಳಿಯಲು ವಿಧಾನ ಪರಿಷತ್ತಿನ ನೀತಿ ನಿರೂಪಣಾ ಸಮಿತಿಗೆ ವಹಿಸಲು ತೀರ್ಮಾನಿಸಲಾಗಿದೆ. ಸದನದ ಎಲ್ಲ ಸದಸ್ಯರು ಮತ್ತು ಮಾಧ್ಯಮ ಮಿತ್ರರು ಈ ಸದನದ ಗೌರವವನ್ನು ಕಾಪಾಡಲು ಸಹಕರಿಸಬೇಕೆಂದು ಈ ಮೂಲಕ ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**02. ನೂತನ ಸಚಿವರ ಪರಿಚಯ**

**ಸಭಾಪತಿಯವರು:- ನೂತನವಾಗಿ ಸಚಿವರಾಗಿರುವ ಮಾನ್ಯ ಶ್ರೀ ಮುರುಗೇಶ್ ಆರ್.ನಿರಾಣಿಯವರು ಸದನಕ್ಕೆ ಆಗಮಿಸಿದ್ದಾರೆ. ಅವರನ್ನು ಸ್ವಾಗತಿಸುತ್ತಿದ್ದೇನೆ.**

**03. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಸಭಾಪತಿಯವರುಃ-** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 16(331) ಅನ್ನು ಕೇಳಿರುವ ಮಾನ್ಯ ಸದಸ್ಯರಾದ ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿಯವರು ಸದನದಲ್ಲಿ ಹಾಜರಿಲ್ಲ. ಮುಂದಿನ ಪ್ರಶ್ನೆ ಶ್ರೀ ಅ.ದೇವೇಗೌಡರದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು)ಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಕೆಳಮನೆಯಲ್ಲಿ ಉತ್ತರ ನೀಡುತ್ತಿರುವುದರಿಂದ ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು 10 ನಿಮಿಷಗಳ ನಂತರ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ಕೊವಿಡ್-19ನಂತಹ ಮಾರಕ ರೋಗದಿಂದಾಗಿ ನಾವೆಲ್ಲರೂ ಬಹಳಷ್ಟು ತೊಂದರೆಗೀಡಾಗಿರುವ ವಿಚಾರ ಎಲ್ಲರಿಗೂ ತಿಳಿದಿದೆ. ಅದರ ಬಗ್ಗೆ ಮಾನ್ಯ ಸದಸ್ಯರು ಗಂಭೀರವಾಗಿರುವ ಪ್ರಶ್ನೆ ಕೇಳುವಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಮಾನ್ಯ ಸಚಿವರೇ ಸದನದಲ್ಲಿ ಹಾಜರಿಲ್ಲದಿದ್ದರೆ, ಯಾವ ರೀತಿ ಸದನ ನಡೆಸುವುದು? ಮಾನ್ಯ ಸಭಾನಾಯಕರು ಸಹ ಸದನದಲ್ಲಿ ಹಾಜರಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 165**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ(ಶ್ರೀ ಶಶಿಲ್.ಜಿ.ನಮೋಶಿಯವರ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ತಮ್ಮ ಮೂಲಕ ಒಂದೇ ಒಂದು ಅಂಶದ ಬಗ್ಗೆ ಸರ್ಕಾರದ ಗಮನ ಸೆಳೆಯಲು ಇಚ್ಛಿಸುತ್ತಿದ್ದೇನೆ. 'ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುತ್ತಿರುವ ವಸತಿ ಶಾಲೆಗಳ ಸಂಖ್ಯೆಯೆಷ್ಟು' ಎನ್ನುವ ನನ್ನ ಪ್ರಶ್ನೆಗೆ, ' ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ವಸತಿ ಶಾಲೆಗಳ ಸಂಖ್ಯೆ:68, ಪರಿಶಿಷ್ಟ ವರ್ಗಗಳಿಗೆ ಸೇರಿರುವ ವಸತಿ ಶಾಲೆಗಳ ಸಂಖ್ಯೆ:119, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ನಡೆಸುತ್ತಿರುವ ವಸತಿ ಶಾಲೆಗಳ ಸಂಖ್ಯೆ:826' ಹೀಗೆ ಮೂರು ರೀತಿಯ ಶಾಲೆಗಳನ್ನು ನಡೆಸುತ್ತಿರುವುದಾಗಿ ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರವನ್ನು ನೀಡಿದ್ದಾರೆ. 'ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ' ಎನ್ನುವುದು ಸರ್ಕಾರಿ ಇಲಾಖೆಯೇ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಯೇ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ. ಈ ರೀತಿ ಒಂದೇ ಇಲಾಖೆಯ ವತಿಯಿಂದ ಮೂರು ವ್ಯವಸ್ಥೆಗಳಡಿಯಲ್ಲಿ ಒಂದೇ ರೀತಿಯ ಶಾಲೆಗಳನ್ನು ನಡೆಸುವ ಔಚಿತ್ಯವೇನು ಎನ್ನುವುದರ ಬಗ್ಗೆ ಕೂಡ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ. ಈ ಮೂರು ವಿಭಾಗಗಳಲ್ಲಿ ಆಡಳಿತ ನಡೆಸುವುದರ ಬದಲಿಗೆ ಒಂದು ವಸತಿ ಶಿಕ್ಷಣ ಸಂಸ್ಥೆಗಳ ನಿರ್ದೇಶನಾಲಯವನ್ನು ಪ್ರಾರಂಭ ಮಾಡುವ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕಾಗಿದೆ.

**ಶ್ರೀ ಬಿ.ಶ್ರೀರಾಮುಲು:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಸರಿಯಾಗಿದೆ. ಏಕೆಂದರೆ, ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಮೂರು ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೆಲವೊಂದು ವಸತಿ ಶಾಲೆಗಳು ನಡೆಯುತ್ತಿವೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವಸತಿ ಶಾಲೆಗಳನ್ನು ಸಹ ನಡೆಸಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(30) 1.2.2021 : 11.40 : ಪಿಕೆ:ಜಿಆರ್

**ಶ್ರೀ ಬಿ.ಶ್ರೀರಾಮುಲು (ಮುಂದು):-**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲೂ ವಸತಿ ಶಾಲೆಗಳು ನಡೆಯುತ್ತಿವೆ. ಮೊದಲು, ಸಮಾಜ ಕಲ್ಯಾಣ ಇಲಾಖೆ ಮತ್ತು ಬೇರೆ ಬೇರೆ ನಿಗಮಗಳಲ್ಲಿ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ ಶಾಲೆಗಳಿತ್ತು. ಅವುಗಳು ಜಾಸ್ತಿ ಇರುವುದರಿಂದ, ಜನರಿಗೆ ಗೊಂದಲ ಉಂಟಾಗುತ್ತದೆ ಎನ್ನುವ ಕಾರಣಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಎಂದು ಮಾಡಿದ್ದೇವೆ. ರಾಜ್ಯದಲ್ಲಿ ಏನು ಒಟ್ಟು ಸುಮಾರು 1013 ವಸತಿ ಶಾಲೆಗಳು ನಡೆಯುತ್ತಿದ್ದು, ಅವೆಲ್ಲವೂ ಸಕ್ರಿಯವಾಗಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಸತಿ ಶಾಲೆಗಳು ನಡೆಯುತ್ತಿವೆ. ಮಾನ್ಯ ಸದಸ್ಯರು ತಮ್ಮ ಎರಡನೆಯ ಪ್ರಶ್ನೆಯಲ್ಲಿ, ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಮಾನ್ಯ ಸಭಾಪತಿಯವರೇ, 9438 ಮಂದಿ ಬೋಧಕ ಮತ್ತು 10420 ಮಂದಿ ಬೋಧಕೇತರ ಸಿಬ್ಬಂದಿಗಳಿದ್ದಾರೆ. ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 7119 ಜನ ಗ್ರೂಪ್ ಡಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ.

ಮಾನ್ಯ ಸದಸ್ಯರು, ಕೆಲವು ಮಂದಿಗೆ ಸಂಬಳ ಸಿಗುತ್ತಿಲ್ಲ ಎನ್ನುವ ಪ್ರಶ್ನೆಯಲ್ಲಿ ಕೇಳಿದ್ದಾರೆ. ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಅವರಿಗೆ ವೇತನ ನೀಡಿಲ್ಲ. ಈ ವಿಷಯವಾಗಿ ಆರ್ಥಿಕ ಇಲಾಖೆಗೆ ಪತ್ರ ಬರೆದಿದ್ದೇವೆ. ಅಲ್ಲಿಂದ ಕ್ಲಿಯರೆನ್ಸ್ ಬಂದನಂತರ ವೇತನ ಬಿಡುಗಡೆ ಮಾಡುವಂತಹ ಕೆಲಸ ಮಾಡುತ್ತೇವೆ. ಒಂದು ತಿಂಗಳಿಗೆ ಸುಮಾರು ರೂ. 13 ಕೋಟಿ ವೆಚ್ಚ ಬರುತ್ತದೆ. 4-5 ತಿಂಗಳಿಗೆ ಆ ಮೊತ್ತ ಸುಮಾರು ರೂ. 65 ಕೋಟಿ ಬರಬಹುದು. ಆರ್ಥಿಕ ಇಲಾಖೆಯಿಂದ ಆದಷ್ಟುಬೇಗ ಕ್ಲಿಯರ್ ಆಗುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ. ನಾನು ನೀಡಿರುವ ಉತ್ತರದ ಅನುಬಂಧದಲ್ಲಿ ಎಲ್ಲಾ ವಿಚಾರಗಳ ಬಗ್ಗೆ ವಿವರ ಕೊಟ್ಟಿದ್ದು, ಆ ವಿವರಗಳು ಮಾನ್ಯ ಸದಸ್ಯರಿಗೆ ಸಮಾಧಾನ ಕೊಡುವಂಥದ್ದಾಗಿದೆ ಎಂದು ಭಾವಿಸುತ್ತೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಪ್ರಶ್ನೆ ಕೇಳಿದ್ದೇನೆ. ಒಂದು ಇಲಾಖೆಯಲ್ಲಿ ಮೂರು ತರಹದ ಆಡಳಿತ ಬೇಕೇ? ಇಲಾಖೆಯು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಎಂಬ ಹೆಸರಿನಲ್ಲಿ ನಡೆಸುತ್ತಿರುವುದು ಎಷ್ಟರಮಟ್ಟಿಗೆ ಸರಿ? ಈ ವಸತಿ ಶಾಲೆಗಳು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ್ದೋ ಅಥವಾ ಅಲ್ಲವೋ ಹೇಳಬೇಕು. ಪರಿಸ್ಥಿತಿ ಏನಿದೆ ಎಂದರೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಖಾಯಂ ನೌಕರರ ಸಂಖ್ಯೆ 5216. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರು ಸಂಖ್ಯೆ 13224. ಬರುವ ಎಲ್ಲಾ ಸರ್ಕಾರಗಳು ದಲಿತೋದ್ಧಾರದ ಘೋಷಣೆಗಳನ್ನು ಮಾಡುತ್ತವೆ. ಆದರೆ ಆ ವರ್ಗಕ್ಕೆ ಸೇರಿರುವ ಮಕ್ಕಳ ಶಾಲೆಗಳ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ನೋಡುವುದಿಲ್ಲ. ಎಲ್ಲೋ ಒಂದು ಕಡೆ ಅವರಿಗೆ ವಂಚನೆ ಮಾಡುತ್ತಿದ್ದೇವೇನೋ ಎನ್ನುವ ಭಾವನೆ ಮುಡುತ್ತದೆ. ಆ ವರ್ಗದಲ್ಲಿ ಬರುವಂತಹ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಗಳು ಈ ಶಾಲೆಗಳಿಗೆ ಬರುತ್ತಾರೆ. ಆದರೆ, ಸಂಘ ಎಂದು ಮಾಡಿ, ಅನುದಾನಿತ ವ್ಯವಸ್ಥೆ ಅಡಿ ಬಂದರೂ ಸರಿಯಾಗಿ ಶಿಕ್ಷಕರನ್ನೂ ಕೊಡಲಿಲ್ಲ, ಸಂಬಳವನ್ನೂ ಕೊಡುತ್ತಿಲ್ಲ ಮತ್ತು ಇರಬೇಕಾದಷ್ಟು ಕಟ್ಟಡಗಳೂ ಇಲ್ಲ. ತಾವು ಬೇಕಾದರೆ ದಯವಿಟ್ಟು ಅನುಬಂಧವನ್ನು ನೋಡಬಹುದು. ಈ ನಿಟ್ಟಿನಲ್ಲಿ ಕಾಯಕಲ್ಪ ಕೊಡಲು ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದ ಪ್ರತಿನಿಧಿಗಳನ್ನು ಕರೆದು ಅವರ ಸಹಕಾರ ಪಡೆದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿ ಗುತ್ತಿಗೆ ಆಧಾರದ ಮೇಲೆ 13224 ಮಂದಿ ಕೆಲಸ ನಿರ್ವಹಿಸುತ್ತಿದ್ದಾರೆ ಮತ್ತು ಇದು ಸರ್ಕಾರದ ಅಂಗ ಸಂಸ್ಥೆ ಹೌದೋ ಅಲ್ಲವೋ ಎಂದು ಕೇಳಿದಂತಹ ಪ್ರಶ್ನೆ ಸರಿಯಾಗಿಯೇ ಇದೆ. ನಾನು ಖಂಡಿತವಾಗಿ ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವ ಕೆಲಸ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 106**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ನಿಗಮ-ಮಂಡಳಿಗಳೆಷ್ಟು ಹಾಗೂ ನಿಗಮ ಮಂಡಳಿಗಳ ಕಾರ್ಯವೈಖರಿಗಳೇನು ಎಂದು ಕೇಳಿರುವ ಪ್ರಶ್ನೆಗೆ ವಿವರಗಳನ್ನು ಕೊಟ್ಟಿದ್ದಾರೆ. ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಇವುಗಳಿಗೆ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ ಎನ್ನುವ ಮಾಹಿತಿ ಕೊಟ್ಟಿಲ್ಲ. ಈ ವರ್ಷ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ ಮತ್ತು ಎಷ್ಟು ಯೋಜನೆಗಳನ್ನು ಇದರಡಿ ಕೈಗೆತ್ತಿಕೊಂಡಿದ್ದಾರೆ ಎನ್ನುವುದನ್ನು ಹೇಳಬೇಕು.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮ, ಸ್ವಯಂ ಉದ್ಯೋಗ ಯೋಜನೆ-ಪ್ರವಾಸಿ ಟ್ಯಾಕ್ಸಿ ಇದಕ್ಕೆ 2018-19, 2019-20ಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ. ಸ್ವಯಂ ಉದ್ಯೋಗ ಯೋಜನೆ-ವೃತ್ತಿ ಕೌಶಲ್ಯ ಇದಕ್ಕೂ 2018-19 ಮತ್ತು 2019-20ನೇ ಸಾಲುಗಳಲ್ಲಿ ಹಣ ಬಿಡುಗಡೆ ಮಾಡಿಲ್ಲ. ಇದಕ್ಕೆ ತಾವೇನಾದರೂ ಪ್ರಾವಿಷನ್ ಮಾಡಿ ಕೊಡುತ್ತೀರಾ? ಮಾನ್ಯ ಸಭಾಪತಿಯವರೇ, ತಾಂಡಾ ಅಭಿವೃದ್ಧಿ ನಿಗಮಕ್ಕೆ ಸಂಬಂಧಪಟ್ಟಂತೆ, ಸಂಪರ್ಕ ರಸ್ತೆಗೆ 2018-19 ಮತ್ತು 2019-20ನೇ ಸಾಲಿಗೆ ಹಣ ಕೊಟ್ಟಿಲ್ಲ. ಅಂಗನವಾಡಿ ಕೆಲಸಗಳಿಗೆ 2018-19 ಮತ್ತು 2019-20 ನೇ ಸಾಲುಗಳಲ್ಲೂ ಹಣ ಬಿಡುಗಡೆ ಮಾಡಿಲ್ಲ. ವಿಶೇಷವಾಗಿ, ತಾಂಡ ಅಭಿವೃದ್ಧಿ ನಿಗಮದ ಅಡಿ, ಟ್ಯಾಕ್ಸಿಗಾಗಲಿ ಅಥವಾ ಇತರ ಯೋಜನೆಗಳಿಗೆ ಯಾವುದೇ ಹಣ ಬಿಡುಗಡೆಯಾಗಿಲ್ಲ. ಸಾಕಷ್ಟು ಹಣ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಮತ್ತು ಇತರ ಅಭಿವೃದ್ಧಿ ನಿಗಮಗಳಿಗೆ ಕೊಟ್ಟಿದ್ದಾರೆ. ಇದನ್ನು ಗಮನಿಸಿದರೆ ಇಲ್ಲಿ ತಾರತಮ್ಯ ಆಗುತ್ತಿದೆ ಎಂದೆನಿಸುತ್ತದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ಎಲ್ಲದಕ್ಕೂ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ಮತ್ತು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳಿದರು. ಕೋವಿಡ್-19 ಬಂದ ಹಿನ್ನೆಲೆಯಲ್ಲಿ ನಮ್ಮ ಇಲಾಖೆಯಲ್ಲಿ ಆರ್ಥಿಕ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾಧಾನಕರವಾಗಿಲ್ಲ. ಆದ್ದರಿಂದ ನಾನು ಈಗಾಗಲೇ ಆರ್ಥಿಕ ಇಲಾಖೆಗೆ, ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ರೂ. 100 ಕೋಟಿ ಹಣವನ್ನು ಕೊಡಬೇಕು ಎಂದು ತಿಳಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಆದೇಶವನ್ನು ಮಾಡಿದ್ದಾರೆ. ಬೇರೆ ಬೇರೆ ಕಡೆ ಸೇವಿಂಗ್ಸ್ ಏನಿದೆ ಅದನ್ನು ತೆಗೆದುಕೊಂಡು ಈ ಕೆಲಸ ಮಾಡುವಂತಹ ವ್ಯವಸ್ಥೆ ಮಾಡಿಸುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ವಿಶೇಷವಾಗಿ, ತಾಂಡ ಅಭಿವೃದ್ಧಿ ನಿಗಮಕ್ಕೆ ಮತ್ತು ಪ್ರವಾಸಿ ಟ್ಯಾಕ್ಸಿ ಯೋಜನೆ ಏನಿವೆ ಇವುಗಳಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. ಈ ದಿಸೆಯಲ್ಲಿ ಸರ್ಕಾರದ ಮುಂದೆ ಪ್ರಸ್ತಾವ ಇತ್ತು ಎಂದು ನಾನು ಭಾವಿಸುತ್ತೇನೆ. ಮಾನ್ಯ ಸಭಾಪತಿಯವರೇ, ಇವುಗಳಿಗೆ ಸಂಪೂರ್ಣ ಹಣ ಬಿಡುಗಡೆ ಆಗಿಲ್ಲ; ಈ ಕುರಿತು ಮಾನ್ಯ ಸಚಿವರು ಬೆಳಕು ಚೆಲ್ಲಬೇಕು.

**ಶ್ರೀ ಬಿ. ಶ್ರೀ ರಾಮುಲು:-** ಮಾನ್ಯ ಸಭಾಪತಿಯವರೇ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮಕ್ಕೆ ಈಗಾಗಲೇ ರೂ. 200 ಕೋಟಿ ಕೊಡಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಕುರಿತು ಆರ್ಥಿಕ ಇಲಾಖೆಗೆ ಬರೆದಿದ್ದೇನೆ. ಆರ್ಥಿಕ ಇಲಾಖೆಯಲ್ಲಿ ಕ್ಲಿಯರೆನ್ಸ್ ಆದ ತಕ್ಷಣ ತಾಂಡ ಅಭಿವೃದ್ಧಿ ನಿಗಮಕ್ಕೆ ಹಣ ಕೊಡುವಂತಹ ಕೆಲಸ ಮಾಡುತ್ತೇವೆ. ಪ್ರವಾಸಿ ಟ್ಯಾಕ್ಸಿ ವಿಚಾರವಾಗಿ ಹೇಳುವುದಾದರೆ, ಮುಂಚೆ ಅವರಿಗೆ ಸುಮಾರು ರೂ. 5 ಲಕ್ಷಗಳನ್ನು ಕೊಡಲಾಗುತ್ತಿತ್ತು. ಹಿಂದೆ, ಬ್ಯಾಂಕಿಗೆ ಹೋಗಿ ಅವರು ಲೋನ್ ತೆಗೆದುಕೊಂಡು ಪಡೆದುಕೊಳ್ಳಬೇಕಾಗುತ್ತಿತ್ತು. ಆದರೆ ಈಗ ಇಲಾಖೆಯಿಂದ 25 ಸಾವಿರಗಳನ್ನು ಸಬ್ಸಿಡಿಗಳನ್ನು ನೇರವಾಗಿ ಕೊಡುತ್ತಿದ್ದೇವೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಈಗ ಈ ಬಜೆಟ್ ಅಧಿವೇಶನ ಮುಗಿಯುತ್ತದೆ. ಈ ವರ್ಷದಲ್ಲಿ ಹಣವೇ ಬಿಡುಗಡೆಯಾಗಿಲ್ಲ. ಹಣವನ್ನು ಈ ವರ್ಷದಲ್ಲೇ ಬಿಡುಗಡೆ ಮಾಡುತ್ತಾರೆಯೇ ಅಥವಾ ಮುಂದಿನ ಆಯವ್ಯಯದಲ್ಲಿ ಬಿಡುಗಡೆ ಮಾಡುತ್ತಾರೆಯೇ? ಮುಖ್ಯಮಂತ್ರಿಗಳು ತಾಂಡ ಅಭಿವೃದ್ಧಿ ನಿಗಮಕ್ಕೆ ರೂ. 200 ಕೋಟಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಆಯವ್ಯಯದಲ್ಲಿ ತೋರಿಸಿದ್ದರು. ಅದು ಬಿಡುಗಡೆಯಾಗಿಲ್ಲ. ಅಂದರೆ, ಹಿಂದಿನ ವರ್ಷದ ಮೊತ್ತವನ್ನು ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡದೇ ಹೋದರೆ ಈ ವರ್ಷ ಹಣವನ್ನೇ ಬಿಡುಗಡೆ ಮಾಡುವುದಿಲ್ಲವೇ? ಈ ವರ್ಷ ಸದರಿ ನಿಗಮಕ್ಕೆ ಯಾವುದೇ ಹಣ ಕೊಟ್ಟಿಲ್ಲವೇ? ಈಗ ಮತ್ತೆ ಬಜೆಟ್ ಮಂಡಿಸಲಾಗುತ್ತಿದೆ. ದಯವಿಟ್ಟು ಉತ್ತರ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಎಲ್ಲಾ ನಿಗಮಗಳಿಗೆ ಕೊಡಲು ಹಣ ಮೀಸಲಿಟ್ಟಿದೆ. ತಾಂಡ ಅಭಿವೃದ್ಧಿ ನಿಗಮ ಮತ್ತು ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ತಲಾ ರೂ. 200 ಕೋಟಿ ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ನನಗೆ ಹೇಳಿದ್ದಾರೆ. ನನ್ನ ಇಲಾಖೆಯಲ್ಲಿ ಬೇರೆ ಬೇರೆ ಕಡೆ ಉಳಿದಿರುವಂತಹ ಮೊತ್ತವನ್ನು ತೆಗೆದುಕೊಂಡು ಆದಷ್ಟು ಬೇಗ ಬಜೆಟ್ ಮುಂಚೆ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 145**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿರುವ ಕ್ಯಾನ್ಸರ್ ಆಸ್ಪತ್ರೆಗೆ ನಮ್ಮ ರಾಜಕಾರಣಿಗಳು ಮತ್ತು ಅಧಿಕಾರಿಗಳು ಹೋಗಿ ನೋಡುವುದಿಲ್ಲ ಎಂದು ಭಾವಿಸುತ್ತೇನೆ. ಬೆಂಗಳೂರಿನಲ್ಲಿ 1 ಕೋಟಿ ಜನಸಂಖ್ಯೆ ಇದೆ. ಆದ್ದರಿಂದ, ಬೆಂಗಳೂರಿನ 4 ದಿಕ್ಕುಗಳಲ್ಲಿ ಕ್ಯಾನ್ಸರ್ ಆಸ್ಪತ್ರೆಗಳನ್ನು ತೆರೆದರೆ ಬಡವರು ಬದುಕುವಂತಹ ಕೆಲಸ ಮಾಡಿದಂತಾಗುತ್ತದೆ. ನಾನು ಖುದ್ದಾಗಿ ಒಬ್ಬ ರೋಗಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನೋಡಿದಾಗ, ಸಾವಿರಾರು ಜನ ರೋಗಿಗಳು ಕ್ಯೂನಲ್ಲಿ ನಿಂತಿರುವುದನ್ನು ಕಂಡಿದ್ದೇನೆ. ಸರ್ಕಾರದ ಜಾಗಗಳೇನು ಹರಾಜು ಹಾಕುವಂಥದ್ದಿದೆಯೋ ಅಂಥದ್ದನ್ನು ರಿಸರ್ವ್ ಮಾಡಬೇಕು. ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಆಸ್ಪತ್ರೆಗೋಸ್ಕರ ಜಾಗವನ್ನು ಗುರುತು ಮಾಡಿ, ಅಲ್ಲಿ ಮುಂದಿನ ದಿನಗಳಲ್ಲಿ ಆಸ್ಪತ್ರೆಗಳನ್ನು ತೆರೆದರೆ ಸಾಮಾನ್ಯ ಜನರಿಗೆ, ಬಡವರಿಗೆ ಅನುಕೂಲವಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಡಾ: ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇನೆ. ಆದರೆ ಅವರು ಹೊಸದಾಗಿ, ಬೆಂಗಳೂರಿನಲ್ಲಿ 4 ಕಡೆ ಕ್ಯಾನ್ಸರ್ ಯುನಿಟ್‌ಗಳನ್ನು ಮಾಡಬೇಕೆಂದು ಕೇಳುತ್ತಿದ್ದಾರೆ. ಕರ್ನಾಟಕದಲ್ಲಿ ಪ್ರತಿವರ್ಷ 65 ಸಾವಿರ ಜನ ಹೊಸದಾಗಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಹಾಗಾಗಿ, ತುಮಕೂರು, ಬಿಜಾಪುರ, ಹಾಸನ ಮತ್ತು ಮಂಡ್ಯ ವೈದ್ಯಕೀಯ ಸರ್ಕಾರಿ ಕಾಲೇಜುಗಳನ್ನು ಈ ಸೆಂಟರ್‌ಗಳನ್ನು ಈಗಾಗಲೇ ಪ್ರಾರಂಭ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಕೆಲವು ಪ್ರಕ್ರಿಯೆಗಳು ಕೂಡ ಪ್ರಾರಂಭವಾಗಿವೆ.

**(ಮುಂದು)**

**(31) 01–02–2021/11.50/ಡಿಎಸ್–ಜಿಆರ್**

**ಡಾ॥ಕೆ.ಸುಧಾಕರ್(ಮುಂದು):–**

ಆದರೆ ಬೆಂಗಳೂರಿನಲ್ಲಿ ಕಿದ್ವಾಯಿ ಮಹಾ ಸಂಸ್ಥೆಯವರು ಪ್ರತಿ ವರ್ಷ 20,000 ರೋಗಿಗಳಿಗೆ ಚಿಕಿತ್ಸೆಯನ್ನು ಕೊಡುತ್ತಿದ್ದಾರೆ. ಆದರೆ ಹೊಸದಾಗಿ ಬೆಂಗಳೂರಿನಲ್ಲಿ ಇನ್ನೂ 4 ಕೇಂದ್ರಗಳನ್ನು ಮಾಡಬೇಕೆನ್ನುವ ಪ್ರಸ್ತಾವನೆ ಈಗ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ. ಮಾನ್ಯ ಸದಸ್ಯರ ಮನವಿ ಮೇರೆಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ನಮ್ಮ ಸರ್ಕಾರಕ್ಕೂ ಕೂಡ ಗಮನ ಇದೆ, 65,000 ಜನರು ಎಂದರೆ, ನಮ್ಮ ಜನಸಂಖ್ಯೆಗೆ ವರ್ಷದಲ್ಲಿ 0.1 ಪರ್ಸೆಂಟ್‌ನಷ್ಟು ಹೆಚ್ಚಾಗುತ್ತಿದೆ. ಹಾಗಾಗಿ ಕ್ಯಾನ್ಸರ್ ಸಂಸ್ಥೆಗಳ ಕೇಂದ್ರಗಳನ್ನು ರಾಜ್ಯದಲ್ಲಿ ವಿಭಾಗವಾರು ಮಾಡಬೇಕೆನ್ನುವ ಆಲೋಚನೆ ಸರ್ಕಾರದ ಮುಂದೆ ಇದೆ. ಮಾನ್ಯ ಸದಸ್ಯರು ಅನೇಕ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಎಲ್ಲಾ ವೈದ್ಯಕೀಯ ಕಾಲೇಜುಗಳಲ್ಲೂ ಇದರ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆನ್ನುವ ಆಲೋಚನೆ ಸರ್ಕಾರಕ್ಕೆ ಇದೆ. ಇವತ್ತು ಇರತಕ್ಕಂಥ ಆರ್ಥಿಕ ಪರಿಸ್ಥಿತಿಯ ಅನುಗುಣವಾಗಿ ನಾವು ಹಂತ ಹಂತವಾಗಿ ಇವೆಲ್ಲಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:181**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಖಂಡಿತವಾಗಿಯೂ ಸರಿಯಾದ ಉತ್ತರವನ್ನು ಒದಗಿಸಿಲ್ಲ. ಇದು ಬಹಳ ಗಂಭೀರವಾಗಿರುವಂತಹ ವಿಚಾರವಾಗಿರುವುದರಿಂದ ನಾನು ಪ್ರಶ್ನೆಗಳನ್ನು ಕೇಳುವುದಕ್ಕೆ ತಾವು ಸ್ವಲ್ಪ ಕಾಲಾವಕಾಶ ಕೊಡಬೇಕಾಗುತ್ತದೆ.

ನಾನು ಐದು ಪ್ರಶ್ನೆಗಳನ್ನು ಕೇಳಿದ್ದೇನೆ. ರಾಷ್ಟ್ರ ಮಟ್ಟದಲ್ಲಿ ಕೊರೋನಾ ಸೋಂಕಿನ ವಿರುದ್ಧ ಬಳಸಲಾಗುವ ಲಸಿಕೆಯ ಎಷ್ಟು ವಿಧಗಳಿಗೆ ರಾಜ್ಯದಲ್ಲಿ ಇಲ್ಲಿಯವರೆಗೆ ಕ್ಲಿನಿಕಲ್ ಟ್ರಯಲ್ ನಡೆಸಲಾಗಿದೆ; ಈ ಲಸಿಕೆಯ ಕ್ಲಿನಿಕಲ್ ಟ್ರಯಲ್ ನಡೆಸಲು ರಾಜ್ಯ ಸರ್ಕಾರದಿಂದ ಅಥವಾ ಕೇಂದ್ರ ಸರ್ಕಾರದಿಂದ ಯಾವುದಾದರೂ ಮಾನದಂಡಗಳನ್ನು ರೂಪಿಸಲಾಗಿದೆಯೇ; ರಾಜ್ಯದಲ್ಲಿ ಒಟ್ಟು ಎಷ್ಟು ವ್ಯಕ್ತಿಗಳು ಕ್ಲಿನಿಕಲ್ ಟ್ರಯಲ್‌ಗಳಿಗೆ ಒಳಪಟ್ಟಿದ್ದಾರೆ; ಕ್ಲಿನಿಕಲ್ ಟ್ರಯಲ್‌ಗೆ ಒಳಪಡುವ ವ್ಯಕ್ತಿಗಳಿಂದ ಲಿಖಿತ ಅನುಮತಿ ಪತ್ರ ಪಡೆಯಲಾಗಿದಯೇ ಮತ್ತು ಅವರ ಕುಟುಂಬ ಸದಸ್ಯರಿಗೂ ಮಾಹಿತಿ ನೀಡಲಾಗಿದೆಯೇ; ಈ ಕ್ಲಿನಿಕಲ್ ಟ್ರಯಲ್‌ಗಳಿಗೆ ಒಳಪಟ್ಟ ವ್ಯಕ್ತಿಗಳಿಂದ ಅಥವಾ ಅವರ ಕುಟುಂಬಸ್ಥರಿಂದ ಸರ್ಕಾರಕ್ಕೆ ಯಾವುದಾದರೂ ದೂರುಗಳನ್ನು ಸಲ್ಲಿಸಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ; ಕಲ್ಪಿಸಲಾಗಿದ್ದಲ್ಲಿ ಇಲ್ಲಿಯವರೆಗೆ ಒಟ್ಟು ಎಷ್ಟು ದೂರುಗಳು ಸಲ್ಲಿಕೆಯಾಗಿದೆ ಮತ್ತು ಈ ದೂರುಗಳ ಕುರಿತು ಸರ್ಕಾರದ ಕ್ರಮವೇನು ಎಂದು ನಾನು ರಾಜ್ಯ ಸರ್ಕಾರಕ್ಕೆ ಪ್ರಶ್ನೆಗಳನ್ನು ಕೇಳಿದ್ದೇನೆ. ನಾನು ಪಾರ್ಲಿಮೆಂಟ್ ಮೆಂಬರ್ ಅಲ್ಲ. ದಯವಿಟ್ಟು 7th Schedule of the Constitution of India ಅನ್ನು ಓದಿ. 7th Schedule of the Constitution of India ಅನ್ನು ಓದಿದ್ದರೆ ಅದರಲ್ಲಿ 'ಸ್ಟೇಟ್ ಲಿಸ್ಟ್' ಮತ್ತು 'ಯೂನಿಯನ್ ಲಿಸ್ಟ್' ಎಂದು ಇದೆ. ಆರೋಗ್ಯದ ವಿಚಾರ ಬಂದಾಗ ನಾವು State issues ನಲ್ಲೇ ಬರುತ್ತೇವೆ. ಇದರಲ್ಲಿ ಬಹಳ ಗಂಭೀರವಾದಂತಹ ವಿಚಾರಗಳಿವೆ. ಇಂತಹ ವಿಚಾರಗಳಿದ್ದಾಗ public health and sanitation, hospitals and dispensaries ಇವುಗಳು State issues. ಕ್ಲಿನಿಕಲ್ ಟ್ರಯಲ್ ಆಗಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ನಾನು ಬಹಳ ಗಂಭೀರವಾಗಿರುವಂತಹ ವಿಚಾರಗಳನ್ನು ನಾನು ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ಕೊಡುತ್ತಿರುವಂತಹ vaccination ಏನಿದೆ, ಆ vaccination ಗೆ ಯಾವುದೇ ರೀತಿಯ ಮಾನದಂಡಗಳಿಲ್ಲ. ವಾರಿಯರ್ಸ್ ಎಂದು ಹೇಳುತ್ತಿದ್ದಾರೆ, Frontline warriors ಯಾರು? Medical Attenders ಇರಬಹುದು ಅಥವಾ non-Medical Attenders or security people ಇರಬಹುದು. ಇವರಿಗೆಲ್ಲಾ ಗಂಭೀರವಾಗಿ vaccine inject ಮಾಡುತ್ತಿದ್ದಾರೆ. ಮೊದಲು ಒಂದು course ಅನ್ನು ಕೊಡುತ್ತಾರೆ, ಆಮೇಲೆ 28 ದಿನಗಳಾದ ಮೇಲೆ ಮತ್ತೊಂದು course ಅನ್ನು ಕೊಡುತ್ತಿದ್ದಾರೆ. ಮೊದಲ ಲಸಿಕೆ ಕೊಟ್ಟಾದ ಮೇಲೆ ಅವರ ದೇಹದಲ್ಲಿ antibodies ಇದೆಯೇ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆಯೇ? ಇಲ್ಲ. ಇದು ಬಹಳ ಗಂಭೀರವಾಗಿರುವಂತಹ ವಿಚಾರ. First phase vaccination ಮಾಡಿದ ಮೇಲೆ, second phase vaccination ಮಾಡುವಾಗ ಅವರ ದೇಹದಲ್ಲಿ antibodies ಇದೆಯೇ ಎಂಬುದನ್ನು ಮತ್ತೊಮ್ಮೆ ಪರಿಶೀಲನೆ ಮಾಡುತ್ತಿದ್ದೀರಾ? ಇಲ್ಲ. ಇನ್ನು 28 ದಿನಗಳಾಗಿಲ್ಲವೆಂದು second phase vaccination ಕೊಟ್ಟಿಲ್ಲ. ಇವತ್ತು ಎರಡು ರೀತಿಯ ಲಸಿಕೆಗಳಿವೆ. ಯೂರೋಪ್ ದೇಶದಲ್ಲಿರುವಂತಹ ವ್ಯಾಕ್ಸಿನ್, ಮತ್ತೊಂದು ಭಾರತ ದೇಶದ ವ್ಯಾಕ್ಸಿನ್. ಪ್ರೋಸಸ್ ಮಾಡಿ ಪ್ಯಾಕೇಜ್ ಮಾಡುವುದು ಇವರ ಕೆಲಸ ಅಷ್ಟೆ. ಅದು 'Made in India' ಅಲ್ಲ. It is only processed by taking the combination. ಮತ್ತೊಂದು ಬಹಳ ಗಂಭೀರವಾದಂತಹ ವಿಷಯವನ್ನು ನಾನು ಹೇಳುತ್ತಿದ್ದೇನೆ. ಪಲ್ಸ್ ಪೋಲಿಯೋದಲ್ಲಿ Vaccine Vial Monitor ಹಾಕುತ್ತಾರೆ. That is VVM. VVM is used to detect cold chain maintenance of the vaccine. ಕೋವಿಡ್‌ಗೆ ನೀಡುವ ಇಂತಹ ಒಂದು ವ್ಯಾಕ್ಸಿನ್‌ಗೆ VVM ಹಾಕಿಲ್ಲ. ದೆಹಲಿಯಲ್ಲಿರುವಂತಹ ವಾತಾವರಣಕ್ಕೂ, ಬೆಂಗಳೂರಿನಲ್ಲಿರುವ ವಾತಾವರಣಕ್ಕೂ ಬಹಳ ವ್ಯತ್ಯಾಸವಿದೆ ಮತ್ತು ಅದರ ಗುಣಮಟ್ಟವನ್ನು ನಿರ್ವಹಣೆ ಮಾಡುವುದಕ್ಕೆ ಯಾವುದೇ ರೀತಿಯ ಕ್ರಮ ತಗೆದುಕೊಂಡಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಇವರ ವ್ಯಾಕ್ಸಿನ್ ಅನ್ನು ಜನರು ಹೇಗೆ ಅವಲಂಬಿಸುವುದಕ್ಕಾಗುತ್ತದೆ? ಮಾನ್ಯ ಸಚಿವರು ಈ ಸಭೆಯನ್ನೋ ಅಥವಾ ನನ್ನನ್ನೋ ಅಥವಾ ರಾಜ್ಯದ ಜನತೆಯನ್ನು ಬಹಳ ಹಗುರವಾಗಿ ತೆಗೆದುಕೊಂಡಿದ್ದಾರೆಂದು ನಾನು ಖಂಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಈ ವಿಚಾರ ಬಹಳ ಗಂಭೀರವಾಗಿದೆ. ಆದರೆ ಇದು ಪ್ರಶ್ನೋತ್ತರ. ಈಗ ಅದರ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ತಮ್ಮ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ, ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು ಸರಿಯಾಗಿದಯೇ?

**ಡಾ||ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮಾನ್ಯ ಸದಸ್ಯರು ಕೋವಿಡ್ ಲಸಿಕೆಯ ಕ್ಲಿನಿಕಲ್ ಟ್ರಯಲ್‌ಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಸಾಮಾನ್ಯವಾಗಿ ಯಾವುದೇ ಲಸಿಕೆಯ ಕ್ಲಿನಿಕಲ್ ಟ್ರಯಲ್‌ಗಳಾಗಬೇಕಾದರೆ ಅದು ಕೇಂದ್ರ ಸರ್ಕಾರದ ಅಧೀನದಲ್ಲಿರುತ್ತದೆ. ರಾಜ್ಯ ಸರ್ಕಾರದ ಅಧೀನಕ್ಕೆ ಬರುವುದಿಲ್ಲ. We will not have any information. ಅದು ಒಂದನೇ ಹಂತದ ಕ್ಲಿನಿಕಲ್ ಟ್ರಯಲ್ ಇರಬಹುದು ಅಥವಾ ಎರಡನೇ ಹಂತದ ಕ್ಲಿನಿಕಲ್ ಟ್ರಯಲ್ ಇರಬಹುದು. ಅಂತಿಮವಾಗಿ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ಎಂದೇನು ಹೇಳುತ್ತೇವೆ, it is an efficacy level, which is given to masses. ಅದಾದ ಮೇಲೆ ಕೇಂದ್ರ ಸರ್ಕಾರದವರು ಇದು ಯೋಗ್ಯವಾಗಿದೆ ಎಂದು ಅದಕ್ಕೆ ಅನುಮತಿಯನ್ನು ಕೊಡುತ್ತಾರೆ. ಹಾಗಾಗಿ ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಅಂಕಿ ಅಂಶಗಳ ಮಾಹಿತಿ ರಾಜ್ಯ ಸರ್ಕಾರದಲ್ಲಿ ಲಭ್ಯವಿರುವುದಿಲ್ಲ. ಇದು ಕೇಂದ್ರ ಸರ್ಕಾರಕ್ಕೆ ಕೇಳುವಂತಹ ಪ್ರಶ್ನೆಯಾಗಿದೆ. ಆದರೂ ಕೂಡ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ; ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಏನು ಮಾರ್ಗಸೂಚಿಯನ್ನು ಕೊಟ್ಟಿದೆ ಆ ಎಲ್ಲಾ ಮಾರ್ಗಸೂಚಿಗಳನ್ನು ಯಥಾವತ್ತಾಗಿ ನಾವು ಲಸಿಕೆ ಕೊಡುವ ಹಂತದಲ್ಲಿ ಇಲ್ಲಿ ಪಾಲಿಸುತ್ತಿದ್ದೇವೆ. ಹಾಗಾಗಿ ಇವತ್ತು ಇಡೀ ದೇಶವನ್ನು ಹೋಲಿಕೆ ಮಾಡಿದಾಗ ಕರ್ನಾಟಕ ರಾಜ್ಯದಲ್ಲಿ ಮೂರು ಲಕ್ಷಕ್ಕಿಂತಲೂ ಹೆಚ್ಚು ಜನರಿಗೆ ಲಸಿಕೆ ಕೊಟ್ಟಿರುವಂತಹ ನಮ್ಮ ರಾಜ್ಯಕ್ಕೆ ಆ ಹೆಗ್ಗಳಿಕೆ ಬಂದಿದೆ. ಇದರಲ್ಲಿ ಯಾವುದೇ ಒಂದು ತೀವ್ರತರವಾದಂತಹ ಅಡ್ಡ ಪರಿಣಾಮಗಳು ಎಲ್ಲೂ ಕಂಡುಬಂದಿಲ್ಲ. Covaxin ಎನ್ನುವಂಥದ್ದು ಸಂಪೂರ್ಣ ಭಾರತೀಯ ಲಸಿಕೆ. We should all be proud. ಹತ್ತು ತಿಂಗಳಲ್ಲಿ ನಮ್ಮ ಭಾರತೀಯರು ಸಂಶೋಧನೆ ಮಾಡಿ ನಮ್ಮ indigenous product ಇವತ್ತು ತಯಾರಾಗಿದೆ ಎಂದರೆ, ಎಲ್ಲರಿಗೂ ಸಲ್ಲುವಂತಹ ಹೆಮ್ಮೆ ಎಂದು ನಾವು ಹೇಳಬೇಕಾಗುತ್ತದೆ. ಈ ಹತ್ತು ತಿಂಗಳೊಳಗೆ ಮಾಡಿರುವಂತಹ ಭಾರತದ ಲಸಿಕೆಗೆ ಎಲ್ಲಾ ಕಡೆ ಬೇಡಿಕೆ ಇದೆ. ಏನೋ ಒಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದೇಶಕ್ಕೆ ನಾವು ನಮ್ಮತನವನ್ನು, ನಮ್ಮ ಸಂಶೋಧನಕಾರರನ್ನು ಇವತ್ತು ಗೌರವದಿಂದ ಕಾಣಬೇಕಾಗುತ್ತದೆ. ನಿಜವಾಗಿಯೂ ಕೂಡ ಅವರನ್ನು ಅಭಿನಂದಿಸಬೇಕಾಗುತ್ತದೆ. ಇವತ್ತು ಮೊಟ್ಟ ಮೊದಲ ಬಾರಿಗೆ ಈ ದೇಶದಲ್ಲಿ ವಿ.ಐ.ಪಿ., ಸಂಸ್ಕೃತಿ ಎನ್ನುವುದು ಹೋಗಿದೆ. ಸ್ವಾಭಾವಿಕವಾಗಿ ಸಾಮಾನ್ಯವಾಗಿ ದೊಡ್ಡ ದೊಡ್ಡ ಜನರಿಗೆ ಸಿಗಬೇಕಾಗಿರುವಂತಹ ಲಸಿಕೆ ಇವತ್ತು ಗ್ರೂಪ್–ಡಿ ನೌಕರರು ಮೊದಲ ಲಸಿಕೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಅವರು ಲಸಿಕೆ ತೆಗೆದುಕೊಳ್ಳುವಾಗ ಅವರ ಕಣ್ಣಲ್ಲಿ, ಮುಖದಲ್ಲಿ ಎಷ್ಟು ಸಂತೋಷ ಇತ್ತು ಎಂಬುದನ್ನು ನಾನು ಗಮನಿಸಿದ್ದೇನೆ. ಹಾಗಾಗಿ ಇವತ್ತು ಹೊಸ ಭಾರತದ ಕಲ್ಪನೆ ಏನಿದೆ, ಅದರ ಅನ್ವಯ ಇವತ್ತು ಲಸಿಕೆ ಕೊಡುವಂಥದ್ದಾಗುತ್ತಿದೆ. ಹಾಗಾಗಿ ಲಸಿಕೆ ಬಗ್ಗೆ ಮಾನ್ಯ ಸದಸ್ಯರಿಗೆ ವಿವರವಾದಂತಹ ಮಾಹಿತಿ ಬೇಕೆಂದರೆ ಕೇಂದ್ರ ಸರ್ಕಾರಕ್ಕೆ ಬರೆಯಬಹುದು. ಅವರು ಕೆಲವು ಮಾಹಿತಿಗಳನ್ನು ಶೇರ್ ಮಾಡುತ್ತಾರೆಂದು ನನ್ನ ಅನಿಸಿಕೆಯಾಗಿದೆ. ರಾಜ್ಯ ಸರ್ಕಾರ ಎಲ್ಲಾ ಮಾರ್ಗಸೂಚಿಗಳನ್ನು ಪಾಲನೆ ಮಾಡಿದೆ. ಮಾನ್ಯ ಸದಸ್ಯರಿಗೆ ಅದರ ಬಗ್ಗೆ ಅನುಮಾನ ಬೇಡ. ರಾಜ್ಯ ಸರ್ಕಾರ ಏನೆಲ್ಲಾ ಮಾರ್ಗಸೂಚಿಗಳನ್ನು ತಂದಿದ್ದೇವೆಂದು ಅವರ ಜೊತೆಯಲ್ಲಿ ಹಂಚಿಕೆ ಮಾಡಿಕೊಳ್ಳುವುದಕ್ಕೆ ನಾವು ತಯಾರಿದ್ದೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರುವಂತಹ ವಿಚಾರ ಎಂದು ಮಾನ್ಯ ಸಚಿವರು ಕೂಡ ಹೇಳಿದ್ದಾರೆ. ಪ್ರತಿ ಮನುಷ್ಯನಲ್ಲೂ ನನ್ನ ದೇಹದಲ್ಲಿರುವಂತಹ antibodies ಗೂ ನಿಮ್ಮ ದೇಹದಲ್ಲಿರುವಂತಹ antibodies ಗೂ ಬಹಳ ವ್ಯತ್ಯಾಸ ಇರುತ್ತದೆ. ಪ್ರತಿಯೊಂದು human body or person ಅನ್ನು ಅಸೆಸ್ ಮಾಡದೆ ಈ ವ್ಯಾಕ್ಸಿನೇಷನ್‌ನ್ನು.....

**ಡಾ||ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ರೋಗ ನಿರೋಧಕ ಶಕ್ತಿಯ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಎಲ್ಲಾ ಲಸಿಕೆಗಳು 0.5 ಎಂ.ಎಲ್. ಇದೆ. ಮೊದಲ ಲಸಿಕೆ ಕೊಟ್ಟಾಗ ಒಬ್ಬ ವ್ಯಕ್ತಿ 28 ದಿನಗಳವರೆಗೆ ಕಾಯಬೇಕಾಗುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(32)ದಿನಾಂಕ:01-02-2021/12-00/ಬಿಕೆಪಿ/ಎಂಡಿ**

**ಡಾ|| ಕೆ. ಸುಧಾಕರ್(ಮುಂದು):-**

28 ದಿನಗಳ ನಂತರ 2ನೇ dose ತೆಗೆದುಕೊಳ್ಳಬೇಕು. ಅದೂ ಕೂಡ 0.5 ml ಇರುತ್ತದೆ. ಆ 2ನೇ dose ತೆಗೆದುಕೊಂಡ ಮೇಲೆ 2 ವಾರಗಳ ನಂತರ ನಮ್ಮಲ್ಲಿ antibodies ಅಥವಾ ರೋಗ ನಿರೋಧಕ ಶಕ್ತಿ ಉತ್ಪಾದನೆಯಾಗುತ್ತದೆ. ಅಂದರೆ ಸರಿ-ಸುಮಾರು 45 ದಿವಸಗಳು ಬೇಕು. ಈ 45 ದಿವಸಗಳ ಒಳಗಡೆ, ಈ window ಒಳಗಡೆ ಕೋವಿಡ್‌ಗೆ ಯಾರಾದರೂ expose ಆದರೆ ಅದು ಅವರಿಗೆ ಬರುತ್ತದೆ. ತಾವು ಹೇಳಿರುವಂತಹ 3-4 ಪ್ರಕರಣಗಳು ಸತ್ಯವಿದೆ. ಕೆಲವು ವೈದ್ಯರುಗಳು ಏನು 5-6 ದಿವಸಗಳಲ್ಲಿ ತೆಗೆದುಕೊಂಡಿದ್ದಾರೆ ಅವರುಗಳು ಕೋವಿಡ್‌ಗೆ expose ಅಗಿರುವುದರಿಂದ ಅವರಿಗೆ ಕೋವಿಡ್ ಬಂದಿದೆ. 45 ದಿವಸಗಳು ಕೋವಿಡ್‌ಗೆ expose ಆಗದಿದ್ದರೆ ಖಂಡಿತವಾಗಿಯೂ ಸಹ ಅವರಲ್ಲಿ ರೋಗ ನಿರೋಧಕ ಶಕ್ತಿ ಉತ್ಪಾದನೆಯಾಗುತ್ತದೆ. ಅವರುಗಳಿಗೆ ಯಾವುದೇ ತೊಂದರೆಗಳು ಮುಂದಕ್ಕೆ ಆಗುವುದಿಲ್ಲ. ಹಾಗಾಗಿ ಅವರು 2 dose ಗಳನ್ನು ತೆಗೆದುಕೊಳ್ಳುವುದು ಮುಖ್ಯ.

**ಶ್ರೀಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು VVM (Vaccine Vial Monitor) ಬಗ್ಗೆ ಹೇಳಲಿಲ್ಲ. ಅದರ ಬಗ್ಗೆ ಹೇಳಬೇಕು. Vaccine Vial Monitor ಇರತಕ್ಕಂತಹದು, ಪೋಲೀಯೋಗೆ ಆಗುತ್ತದೆ. ಈ vaccine ನಲ್ಲಿ ಅದು ಇರುವುದಿಲ್ಲ. That is the defect. ಇದರಿಂದ ಏನಾಗುತ್ತದೆ ಎಂದರೆ, we cannot detect the cold chain.

**ಡಾ|| ಕೆ. ಸುಧಾಕರ್:-** ಪೋಲಿಯೋ ಲಸಿಕೆಯೇ ಬೇರೆ, ಈ ಲಸಿಕೆಯೇ ಬೇರೆ. ಎಲ್ಲಾ ಲಸಿಕೆಗಳನ್ನು ಒಂದೇ ರೀತಿಯಲ್ಲಿ ಮಾಡಬೇಕೆಂದರೆ ಆಗುವುದಿಲ್ಲ. ಯಾವುದೇ ರೀತಿ ತೊಂದರೆಯಾಗುವುದಿಲ್ಲ.

**ಶ್ರೀಪಿ.ಆರ್. ರಮೇಶ್:-**ಮಾನ್ಯ ಸಭಾಪತಿಯವರೆ, ನಾನು ಈ ಲಸಿಕೆಯ ವಿಚಾರದಲ್ಲಿ ಕೆಲವು ತಜ್ಞರ ಹತ್ತಿರ ಮಾತನಾಡಿದ್ದೇನೆ. It is must for this vaccine, ಇದರಲ್ಲಿ ಹಾಕಿಲ್ಲವೆಂದು ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಕೆ. ಸುಧಾಕರ್:–** ಇದು antibodies check ಮಾಡುವಂಥ ಒಂದು ಟೆಸ್ಟ್ ಆಗಿದೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು ಇನ್ನು 13 ಪ್ರಶ್ನೆಗಳು ಬಾಕಿ ಇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 182**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 12 ಲಸಿಕೆಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. 12ನೇ ಲಸಿಕೆ ಬಹುಶಃ ಕೊರೋನಾ ಲಸಿಕೆಯಾಗಿರುತ್ತದೆ. ಮಾನ್ಯ ಸಚಿವರಲ್ಲಿ ನಾನು ಕೇಳಬಯಸುವುದೇನೆಂದರೆ ಕೊರೋನಾ ಲಸಿಕೆಯನ್ನು ಮಕ್ಕಳಿಗೂ ಕೊಡುವಂತಹ ಉದ್ದೇಶ ಏನಾದರೂ ಸರ್ಕಾರದ ಮುಂದೆ ಇದೆಯೇ, ಮತ್ತೆ, ಖಾಯಿಲೆಗಳಿಂದ ಯಾವುದೇ ಮಕ್ಕಳ ಮರಣ ಸಂಭವಿಸಿರುವುದಿಲ್ಲ ಹಾಗೂ ಕಳೆದ ಮೂರು ವರ್ಷಗಳಲ್ಲಿ ಮಕ್ಕಳು ಕೆಲವೊಂದು ಖಾಯಿಲೆಯಿಂದ ಮರಣ ಹೊಂದಿರುವುದರ ಬಗ್ಗೆ ಮಕ್ಕಳ ಅಂಕಿ ಅಂಶಗಳನ್ನು ತಾವು ಕೊಟ್ಟಿದ್ದಾರೆ. ಈ ಅಂಕಿ ಅಂಶದಲ್ಲಿ ಸರ್ಕಾರದ ರೆಕಾರ್ಡ್‌ಗೆ ಬಾರದೇ ಈ ಖಾಯಿಲೆಗಳನ್ನೆಲ್ಲಾ ಅನುಭವಿಸಿ ಸತ್ತ ಮಕ್ಕಳು ಇದ್ದಾರೆ ಮತ್ತು ಖಾಯಿಲೆ ಬಂದವರೂ ಕೂಡ ಇದ್ದಾರೆ. ಇವತ್ತು ಕ್ಷಯ ರೋಗ ಆಗಿರಬಹುದು, ಪೋಲಿಯೋ ರೋಗ ಇರಬಹುದು ಇವುಗಳಿಗೆ ಕೆಲವೊಂದು ಔಷಧಿಗಳಿವೆ. ಅದರೂ ಕೂಡ ಲಸಿಕೆಯನ್ನು ಕೊಡುವಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಲಸಿಕೆಯನ್ನು ಕಡಿಮೆ ಮಾಡಲಿಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ? ಇದರ ಬಗ್ಗೆ ವಿಜ್ಞಾನಿಗಳು ಹೇಳುವಂತಹ ಮಾಹಿತಿ ಇದೆಯೇ?

ಮಾನ್ಯ ಸಭಾಪತಿಯವರೆ, ಈ ಖಾಯಿಲೆಗಳಿಂದ ಸಂಪೂರ್ಣವಾಗಿ ರಕ್ಷಣೆ ಮಾಡುವ ಸಲುವಾಗಿ ಮಾನ್ಯ ಸಚಿವರು ಕೆಲವೊಂದು ಸವಾಲುಗಳನ್ನು ತಮ್ಮ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ಆದರೆ, ಇವತ್ತು ರಾಜ್ಯದ ಎಲ್ಲಾ ಮಕ್ಕಳು ಶಾಲೆಗೆ ಬರುತ್ತಾರೆ. ಅವರುಗಳು ಅಲೆಮಾರಿ ಜನಾಂಗದವರು ಇರಬಹುದು, ಸ್ಲಮ್‌ಗಳಿಂದ ಬರತಕ್ಕವರು ಇರಬಹುದು, ಮಾನ್ಯ ಸಚಿವರು ಹೇಳಿದ ಹಾಗೆ ಶಾಲೆಗಳಲ್ಲಿ Mission *Indradhanush* ಹಾಗೂ ಶಾಲಾ ಲಸಿಕಾ ಅಭಿಯಾನಗಳಂತಹ ಹೆಚ್ಚುವರಿ ಲಸಿಕಾ ಅಭಿಯಾನಗಳನ್ನು ಹಮ್ಮಿಕೊಂಡಿದ್ದೇವೆ ಎಂದು ಹೇಳಲಾಗಿದೆ. ಅದರೆ ನನಗೆ ತಿಳಿದ ಮಟ್ಟಿಗೆ ಈ ಇಂದು ಕಾರ್ಯ ಎಲ್ಲಾ ಶಾಲೆಗಳಲ್ಲಿ ನಡೆಯುತ್ತಿಲ್ಲ. ನಾವುಗಳು ಸಣ್ಣವರಿದ್ದು ಓದುತ್ತಿದ್ದಾಗ ಎಲ್ಲರಿಗೂ ಗೊತ್ತಿರುವಂತೆ ಪ್ರತಿ ವರ್ಷ ಎರಡೆರಡು ಬಾರಿ ಶಾಲೆಗಳಿಗೆ ಬಂದು ಈ ಎಲ್ಲಾ ಲಸಿಕೆಗಳನ್ನು ಕೊಡುತ್ತಿದ್ದರು. ವೈದ್ಯಕೀಯ ತಪಾಸಣೆ ಮಾಡುವಂತಹದ್ದು ಕರ್ನಾಟಕ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಈ ಒಂದು ವ್ಯವಸ್ಥೆ ಇತ್ತು. ಈಗ ಆ ರೀತಿಯ ವ್ಯವಸ್ಥೆಗಳಿಲ್ಲ. ಆದ್ದರಿಂದ, ಸಂಪೂರ್ಣವಾಗಿ ಈ ಲಸಿಕೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಔಚಿತ್ಯವನ್ನು ಯಾವ ರೀತಿ ಮಾಡಿದ್ದೀರಿ, ವಿಷಯದಲ್ಲಿ ಗುರಿ ಮುಟ್ಟಲಿಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದು ಒಂದು ವಿಚಾರ.

ನಮ್ಮ ಆಯುಷ್ ಪದ್ಧತಿಯ ವಿಚಾರವಾಗಿ ಮಾನ್ಯ ಸಚಿವರು ಇವತ್ತು ನಮ್ಮ ಜೀವನ ಪದ್ಧತಿಯ ಬಗ್ಗೆ ಬಹಳ ಚೆನ್ನಾಗಿ ಉಲ್ಲೇಖ ಮಾಡಿದ್ದಾರೆ. ನಮ್ಮ ಜೀವನ ಪದ್ಧತಿಯಲ್ಲಿ ಪ್ರಾಣಾಯಾಮ, ಯೋಗ, ಇದನ್ನೆಲ್ಲಾ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ನನ್ನ ವಿನಂತಿ ಸರ್ಕಾರಕ್ಕೆ ಏನೆಂದರೆ, ಇವತ್ತು ಬಂದ ಮಾಹಿತಿಯ ಪ್ರಕಾರ ನಮ್ಮ ದೇಶದಲ್ಲಿ ಬಹಳಷ್ಟು ಜನರು ಕ್ಯಾನ್ಸರ್ ರೋಗದಿಂದ ಸಾಯುತ್ತಿದ್ದಾರೆ. ಅದರಲ್ಲಿಯೂ ಕೂಡ ಸ್ತನ ಕ್ಯಾನ್ಸರ್ ಮುಂಚೆ ಬರುತ್ತಿದ್ದು, ಈ ಹಿಂದೆ ತಪಾಸಣೆಯನ್ನು 40 ವರ್ಷಗಳ ಮೇಲೆ ಮಾಡುವುದು ಎಂದು ಹೇಳುತ್ತಿದ್ದರು. ಆದರೆ, ಇವತ್ತು ಮೊನ್ನೆ ಬಂದ ಅಂಕಿ-ಅಂಶಗಳ ಪ್ರಕಾರ 12-15 ವರ್ಷಗಳ ಬಾಲಕಿಯರಿಗೆ ಈಗ ಸ್ತನ ಕ್ಯಾನ್ಸರ್ ಬರುವುದಕ್ಕೆ ಪ್ರಾರಂಭವಾಗಿದೆ. ಬಹಳ ದೊಡ್ಡ ಪ್ರಮಾಣದಲ್ಲಿ 30 ಮತ್ತು 12 ವರ್ಷದವರಿಗೆ ಸ್ತನ ಕ್ಯಾನ್ಸರ್ ಬರುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಮೂಲ ಕಾರಣ ನಮ್ಮ ಜೀವನ ಪದ್ದತಿ ಮತ್ತು ನಮ್ಮ ಆಹಾರ ಪದ್ದತಿ ಎನ್ನುವುದನ್ನು ಅನೇಕ ಡಾಕ್ಟರ್‌ಗಳು ಉಲ್ಲೇಖ ಮಾಡಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ, ನಮ್ಮ ದೇಶ ಕೊರೊನಾ ವಿಷಯದಲ್ಲಿ ಬಹಳ ದೊಡ್ಡ ಪ್ರಮಾಣದ challenge ಅನ್ನು ಎದುರಿಸಿದೆ. ನಮ್ಮ ದೇಶ ಜನಸಂಖ್ಯೆ ವಿಷಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇದ್ದರೂ ಕೂಡ ಕೊರೊನಾದಿಂದ ಈ ದೇಶದಲ್ಲಿ ಸತ್ತವರ ಸಂಖ್ಯೆ ಬಹಳ ಕಡಿಮೆಯಿದೆ ಹಾಗೂ ನಾವು challenge ನಲ್ಲಿ ಗೆದ್ದಿದ್ದೇವೆ ಎಂದು ಎಲ್ಲರೂ ಹೇಳುವುದಕ್ಕೆ ಕಾರಣವೇ ನಮ್ಮ ಜೀವನ ಪದ್ದತಿ ಹಾಗೂ ನಮ್ಮ ಆಹಾರ ಪದ್ದತಿಯಾಗಿದೆ. ಆದರೂ ಸಹ ನಾನು ವಿನಂತಿ ಮಾಡುವುದು ಏನೆಂದರೆ, ಸರ್ಕಾರ ಇದಕ್ಕೆ ಪೂರಕವಾಗಿ ಕೃಷಿ ಇಲಾಖೆಯಲ್ಲಿ ಒಂದು ಹೊಸ ನೀತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಅಲೋಪತಿಯಲ್ಲಿ ಕೊಡುವಂತಹ ಆಹಾರ ಉತ್ಪತ್ತಿ ಮಾಡುವಂತಹದ್ದು ಆಗಬೇಕು.

**ಉಪ ಸಭಾಪತಿಯವರು:-** ಅದಕ್ಕೆ ಪ್ರಶ್ನೆ ಕೇಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ನಮ್ಮ ಆಹಾರ ಪದ್ದತಿಗೆ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತಿದೆ. ತಮ್ಮ ಇಲಾಖೆಯಿಂದ ಕೃಷಿ ಇಲಾಖೆಗೆ ಮಾರ್ಗಸೂಚಿ ಏನಾದರೂ ಕೊಟ್ಟಿದ್ದೀರಾ ಎನ್ನುವಂತಹದ್ದನ್ನು ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಕೆ. ಸುಧಾಕರ್:**–ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವ ಹಾಗೆ ಈಗಾಗಲೇ ಲಸಿಕೆಗಳ ಬಗ್ಗೆ ಅಂದರೆ 10+1=11 ಲಸಿಕೆಗಳನ್ನು ನಾವು ಎಲ್ಲಾ ಮಕ್ಕಳಿಗೆ 0-18 ವರ್ಷಗಳವರೆಗೆ ಕೊಡುತ್ತೇವೆ. ಅದು ಬಿ.ಸಿ.ಜಿ. ಇರಬಹುದು, OPV (*Oral Polio Vaccine)* ಇರಬಹುದು, IPV (Inactivated Poliovirus Vaccine) ಇರಬಹುದು, Pentavalent Vaccine ಇರಬಹುದು, Hepatitis–B Vaccine ಇರಬಹುದು, ಅದೇ ರೀತಿಯಲ್ಲಿ Rotavirus Vaccine, Vitamin-A Vaccine, ದಡಾರ, Rubella Vaccine, *DTP* (Diphtheria-Pertussis-Tetanus) *Vaccine and* Japanese Encephalitis Vaccine ಹೀಗೆ 11 ಲಸಿಕೆಗಳನ್ನು ಕೊಡುತ್ತೇವೆ, ಮಾನ್ಯ ಸದಸ್ಯರು ವಿಶೇಷವಾಗಿ ಮಕ್ಕಳ ಬಗ್ಗೆ ಕಾಳಜಿ ವ್ಯಕ್ತ ಮಾಡಿದ್ದಾರೆ. ಯಾವ ರೀತಿಯಲ್ಲಿ ಈ ಲಸಿಕೆಗಳು ಸಮಗ್ರವಾಗಿ ಎಲ್ಲರಿಗೂ ತಲುಪುವಂತಹ ರೀತಿಯಲ್ಲಿ ಆರೋಗ್ಯ ಇಲಾಖೆ ನೋಡಿಕೊಳ್ಳುತ್ತಿದೆ ಎನ್ನುವಂತಹ ಪ್ರಶ್ನೆ ಏನಿದೆ, ಅದು ಸಮಂಜಸವಾಗಿದೆ. urbanization ಆಗುವಂತಹ ಸಂದರ್ಭದಲ್ಲಿ ಮತ್ತು ಅನೇಕರು ಉದ್ಯೋಗಕ್ಕೆ ನಗರಗಳಿಗೆ ಬರುತ್ತಾರೆ, ಅವರ ಮಕ್ಕಳನ್ನು ನಗರ ಪ್ರದೇಶಗಳಲ್ಲಿ ನಮ್ಮ ಆರೋಗ್ಯ ಇಲಾಖೆಯ ಅಧಿಕಾರಿಗಳು ಅವರನ್ನು ಕಂಡುಹಿಡಿಯುವಲ್ಲಿ ಸಫಲವಾಗಿದೆ, ಅದರೂ ಕೂಡ 2018–2019ನೇ ಸಾಲಿನ ವರ್ಷವಾರು ಅಂಕಿ–ಅಂಶಗಳನ್ನು ನೋಡಿದಾಗ, ನಮ್ಮ surveillance ಹೆಚ್ಚಾದಾಗ ಹೆಚ್ಚು ಪ್ರಕರಣಗಳು ಕೂಡ ದಾಖಲಾಗಿವೆ. ಇದನ್ನು ನಾವು ರುಜುವಾತು ಮಾಡಬಹುದು. ಆದರೂ ಕೂಡ ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ಶಾಲೆಗಳಲ್ಲಿ, ಅಲೆಮಾರಿ ಜನಾಂಗದವರು ಇರಬಹುದು, ಗುಡ್ಡಗಾಡಿನ ಜನಾಂಗದವರು ಇರಬಹುದು, ಮತ್ತು ಸ್ಲಮ್‌ಗಳಲ್ಲಿ ವಾಸ ಮಾಡುವವರು ಇರಬಹುದು ಈ ಕಷ್ಟವಾದ ಸ್ಥಳಗಳಲ್ಲಿ ನಮ್ಮವರೇ ಭೇಟಿ ಕೊಟ್ಟು ಅವರುಗಳಿಗೆ ಅಲ್ಲಿಯೇ ಲಸಿಕೆ ಕೊಡುವಂತಹ ಕೆಲಸಗಳನ್ನು ಮಾಡುತ್ತಿದ್ದೇವೆ. ಇವತ್ತು ನಮ್ಮ ಪ್ರಧಾನ ಮಂತ್ರಿಗಳ Mission *Indradhanush* ಕಾರ್ಯಕ್ರಮದ ಮೂಲಕ ಯಾರಿಗೆಲ್ಲಾ ಲಸಿಕೆ ಸಿಕ್ಕಿರುವುದಿಲ್ಲ, ಅಂತಹವರನ್ನು ಗುರುತಿಸಿ, ಅವರಿಗೆ ಲಸಿಕೆ ಕೊಡುವಂತಹ ಕೆಲಸ ಮಾಡಲಾಗುತ್ತಿದೆ. ಕೆಲವರು ಏನು ಮಾಡುತ್ತಾರೆಂದರೆ ಕೆಲವೊಂದು ಬಾರಿ 2ನೇ dose ಇದ್ದುದನ್ನು ಅವರು miss ಮಾಡಿಕೊಂಡಿರುತ್ತಾರೆ. ಅಂತಹವರನ್ನೂ ಕೂಡ ಪತ್ತೆ ಮಾಡಿ ಅವರಿಗೂ ಸಹ ಲಸಿಕೆ ಹಾಕುವುದರ ಬಗ್ಗೆ ನಮ್ಮ ಇಲಾಖೆ ಗಮನಹರಿಸಿದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮತ್ತೆ ಕೊನೆಯದಾಗಿ ಮಾನ್ಯ ಸದಸ್ಯರು ಕೇಳಿರುವಂತಹದ್ದು ಅಲೋಪತಿ ಜೊತೆಗೆ ಆಯುಷ್ ಪದ್ಧತಿಯಲ್ಲಿ ಇವತ್ತು ಆಹಾರ ಪದ್ಧತಿ ಇರಬಹುದು, ನಮ್ಮ ಜನ-ಜೀವನದಲ್ಲಿ ಕೆಲವು ಪದ್ಧತಿಗಳನ್ನು ಮಾರ್ಪಾಡು ಮಾಡಿಕೊಂಡು ಯಾವ ರೀತಿ ಉತ್ತಮ ಆರೋಗ್ಯದ ಕಡೆ ಹೋಗಬೇಕು ಎನ್ನುವ ವಿಚಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಈಗಾಗಲೇ ಈ ದೇಶದಲ್ಲಿ Wellness Centres ಅನ್ನು Sub-Centres ನಿಂದಲೇ ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ಆ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಕೂಡ 5 ಸಾವಿರ Sub-Centres ಏನಿದೆ, ಅಂದರೆ ಒಟ್ಟು 9680 Sub-Centres ಇದ್ದು, ಅದರಲ್ಲಿ ಶೇಕಡ 50 ರಷ್ಟು ಅಂದರೆ 5 ಸಾವಿರ Sub-Centres ಅನ್ನು Wellness Centres ಗಳಾಗಿ ಇವತ್ತು ನಾವು ಅಭಿವೃದ್ಧಿಯನ್ನು ಮಾಡುತ್ತಿದ್ದೇವೆ. ಬಹುಶಃ ಮಾರ್ಚ್ ಒಳಗಡೆ ಈ 5 ಸಾವಿರ Health and Wellness Centres ನಮ್ಮಲ್ಲಿ ಪ್ರಾರಂಭವಾಗುತ್ತವೆ.

ಇನ್ನು ಆಹಾರ ಪದ್ಧತಿಗಳಿಗೆ ಯಾವ ರೀತಿ ಕೃಷಿ ಇಲಾಖೆಗೆ ನಾವು ಸಲಹೆಯನ್ನು ಕೊಡಬೇಕೆನ್ನುವುದರ ಕಡೆಗೆ ನಾವು ಇನ್ನೂ ಗಮನಹರಿಸಿಲ್ಲ. ಆದರೆ, ಖಂಡಿತವಾಗಿಯೂ ಸಹ ಇದು ಉತ್ತಮ ಸಲಹೆಯಾಗಿದೆ. ಈ ಬಗ್ಗೆ ನಾವು ಮತ್ತು ಕೃಷಿ ಇಲಾಖೆಯವರು ಮಾತನಾಡಿಕೊಂಡು ಯಾವ ರೀತಿ ಅದಕ್ಕೆ ರೂಪು-ರೇಷೆಗಳನ್ನು ಮಾಡಬೇಕೆನ್ನುವುದರ ಬಗ್ಗೆ ನಾವು ವಿಚಾರ ಮಾಡುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಮಕ್ಕಳಿಗೆ ಕರೋನಾ ಲಸಿಕೆ ಕೊಡುವ ವಿಚಾರವಾಗಿ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

**ಡಾ|| ಕೆ. ಸುಧಾಕರ್:-**ಮಾನ್ಯ ಸಭಾಪತಿಯವರೆ, 18ನೇ ವಯಸ್ಸಿನವರೆಗಿನ ಮಕ್ಕಳಿಗೆ ಈ ಲಸಿಕೆಯನ್ನು ಕೊಡಬಾರದು, ಇನ್ನು ಸಹ ಅದಕ್ಕೆ ಸ್ಪಷ್ಟವಾದ ಮಾರ್ಗಸೂಚಿ ಇಲ್ಲ. ಆದ್ದರಿಂದ ತಮ್ಮ ಮೂಲಕ ರಾಜ್ಯದ ಜನರಿಗೆ ತಿಳಿಸುವುದೇನೆಂದರೆ 18ನೇ ವಯಸ್ಸಿನವರೆಗಿನ ಮಕ್ಕಳಿಗೆ ಲಸಿಕೆ ನೀಡುವುದು ನಿಷೇಧ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(33) 01.02.2021 12.10 ಎಸ್‌ವಿ–ಎಂಡಿ**

**ಶ್ರೀ ಅರುಣ ಶಹಾಪುರ:–** ಮಾನ್ಯ ಮಂತ್ರಿಗಳು ಉತ್ತರವನ್ನು ಬೇಕಾದರೆ ನಂತರ ಕೊಟ್ಟು ಕಳುಹಿಸಲಿ. ಸರ್ಕಾರದ ಗಮನ ಸೆಳೆಯುವ ಅಗತ್ಯತೆ ಇದ್ದುದರಿಂದ ನಾನು ಪ್ರಶ್ನೆಯನ್ನು ಕೇಳಿದ್ದೆನು. 1995ರ ನಂತರ ಪ್ರಾರಂಭವಾದ ಶಾಲೆಗಳಿಗೆ ಅನುದಾನವನ್ನು ಕೊಡಬೇಕೆನ್ನುವುದು ಈ ಸದನದಲ್ಲಿ ಹಲವಾರು ಬಾರಿ ಪ್ರಸ್ತಾಪವಾಗಿದ್ದು, ಸದನದ ಅಭಿಪ್ರಾಯವೂ ಆಗಿದೆ. ಮಾನ್ಯ ಸಚಿವರು ಅದರ ಬಗ್ಗೆ ಪ್ರಯತ್ನಿಸುತ್ತಿದ್ದಾರೆ. ಮುಂಬರುವ ಆಯವ್ಯಯದಲ್ಲಿ ಅದನ್ನು ಕೊಡಿಸುವ ಕುರಿತು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಇದರ ವಿವರಗಳನ್ನು ಮಾನ್ಯ ಸದಸ್ಯರು ಕೇಳಿದ್ದು, ಅದಕ್ಕಾಗಿ ಸಮಯ ಬೇಕೆಂದು ಕೇಳಿದ್ದೇನೆ. ಎಲ್ಲರ ಉದ್ದೇಶವನ್ನು ಈಡೇರಿಸಲಿಕ್ಕೆ ಈಗಾಗಲೇ ನಾನು ಕ್ರಮವನ್ನು ಕೈಗೊಂಡಿದ್ದೇನೆ. ಈ ಬಾರಿಯೂ ಆಯವ್ಯಯದಲ್ಲಿಯೂ ಅದನ್ನು ಇಡಬೇಕೆನ್ನುವ ಉದ್ದೇಶದಿಂದ ಆರ್ಥಿಕ ಇಲಾಖೆಯವರೊಡನೆಯೂ ಸಹ ಚರ್ಚಿಸುತ್ತಿದ್ದೇವೆ. ಈ ವಿಷಯವು ತಾರ್ಕಿಕ ಅಂತ್ಯ ಮುಟ್ಟಲು ನಾನು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇನೆ.

**ಉಪ ಸಭಾಪತಿಯವರು:–** ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ. ಕಾಲಾವಕಾಶ ಕಡಿಮೆ ಇರುವುದರಿಂದ ತಾವು ಪ್ರಶ್ನೆಗಳನ್ನು ಕೇಳಿದರೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಚರ್ಚೆಯನ್ನು ಮಾಡಬೇಕಾದರೆ ಬೇರೆ ನಿಯಮದಡಿಯಲ್ಲಿ ಚರ್ಚೆ ಮಾಡೋಣ. ಅದಕ್ಕಾಗಿಯೇ ಕಾಲಹರಣ ಮಾಡದೆ ಒಂದು ಗಂಟೆ ಕಾಲದೊಳಗೆ ಪ್ರಶ್ನೋತ್ತರ ಅವಧಿಯನ್ನು ಮುಗಿಸಬೇಕಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ಮಾನ್ಯ ಸದಸ್ಯರು ಸಹಕಾರವನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 140**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಪ್ರೊ.ಎಲ್.ಆರ್.ವೈದ್ಯನಾಥನ್ ವರದಿಯ ಪ್ರಕಾರ ದೈಹಿಕ ಶಿಕ್ಷಕರು ತಮ್ಮನ್ನು ಸಹಶಿಕ್ಷಕರನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು, ಆ ಒಂದು ಬೇಡಿಕೆಯನ್ನು ಬಿಟ್ಟು ಉಳಿದ 13 ಬೇಡಿಕೆಗಳನ್ನು ಈಡೇರಿಸಲಾಗಿದೆ. 15-16 ವರ್ಷಗಳಿಂದಲೂ ಈ ಬೇಡಿಕೆಯು ಈಡೇರುತ್ತಲೇ ಇದೆ. ಇದಕ್ಕೆ ಇರುವ ತೊಂದರೆ ಏನೆಂಬುದನ್ನು ತಿಳಿಯಬಯಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ದೈಹಿಕ ಶಿಕ್ಷಕರ ಸಂಖ್ಯೆ ಸುಮಾರು 4000ದಷ್ಟಿದೆ. ಇವರ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಸಲುವಾಗಿ ಪ್ರೊ.ವೈದ್ಯನಾಥನ್ ಅವರ ಸಮಿತಿಯನ್ನು ರಚನೆ ಮಾಡಲಾಗಿದೆ. 2007ನೇ ಇಸವಿಯಲ್ಲಿ ಆ ಒಂದು ವರದಿಗೆ ಅನುಮೋದನೆಯೂ ದೊರೆತಿದೆ. ಆ ವರದಿಯಲ್ಲಿ 14 ಅಂಶಗಳಿತ್ತು. ಈಗಾಗಲೇ ಅದರಲ್ಲಿದ್ದಂತಹ 13 ಅಂಶಗಳನ್ನು ಜಾರಿಗೊಳಿಸಿದ್ದೇವೆ. ದೈಹಿಕ ಶಿಕ್ಷಕರನ್ನು ಕೂಡ ಸಹ ಶಿಕ್ಷಕರನ್ನಾಗಿ ಪರಿಗಣಿಸಬೇಕು ಮತ್ತು ಬರುವ ದಿನಗಳಲ್ಲಿ ದೈಹಿಕ ಶಿಕ್ಷಕರನ್ನೂ ಸಹ ಮುಖ್ಯೋಪಾಧ್ಯಾಯರ ಹುದ್ದೆಗೆ ಮುಂಬಡ್ತಿ ನೀಡಲು ಪರಿಗಣಿಸಬೇಕು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಆ ಒಂದು ವಿಷಯವನ್ನು ನಾವು ಕೈಗೆತ್ತಿಕೊಂಡು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸುತ್ತಿದ್ದೇವೆ. ಬಹುಶಃ ಬಾಕಿ ಇರುವ 14ನೇ ವಿಷಯವನ್ನೂ ಸಹ ಆದಷ್ಟು ಬೇಗನೆ ಬಗೆ ಹರಿಸುವುದಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳಿರುವ ಕಾರಣವೇನೆಂದರೆ ಇಂದು ಎಲ್ಲಾ ವಿಷಯಗಳಿಗೂ ಪಠ್ಯಪುಸ್ತಕವಿರುವಂತೆ ದೈಹಿಕ ಶಿಕ್ಷಣಕ್ಕೂ ಒಂದು ಪಠ್ಯಪುಸ್ತಕವನ್ನು ಕರ್ನಾಟಕ ಸರ್ಕಾರ ಮಾಡಿದೆ. ಹಾಗಾಗಿ ದೈಹಿಕ ಶಿಕ್ಷಕರು ಎಲ್ಲಾ ರೀತಿಯಲ್ಲಿಯೂ ಅರ್ಹರಾಗಿದ್ದಾರೆ. ಆದ್ದರಿಂದ ಅತಿಶೀಘ್ರವಾಗಿ ಅದನ್ನು ಮಾಡಿದರೆ 14-15 ವರ್ಷಗಳ ಬೇಡಿಕೆಯು ತಮ್ಮ ಕಾಲಾವಧಿಯಲ್ಲಿ ಈಡೇರಿದಂತಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 170**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೆನು. 2021ನೇ ಸಾಲಿನಲ್ಲಿ ಯಾವುದಾದರೂ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗುವುದೇ? ಖಾಸಗಿಯವರು ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಅರ್ಜಿಗಳನ್ನು ಹಾಕಿದ್ದಾರೆಯೇ ಎಂದು ಕೇಳಿದ್ದೆನು. ಇದಕ್ಕೆ ಮಾನ್ಯ ಸಚಿವರು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ನಾಲ್ಕು ಉಪ ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಎರಡೂ ಸೇರಿ 58 ವೈದ್ಯಕೀಯ ಕಾಲೇಜುಗಳಿವೆ ಎಂದು ಹೇಳಿದ್ದಾರೆ. ಹೊಸದಾಗಿ ನಾಲ್ಕು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುವುದಾಗಿ ಹೇಳಿದ್ದಾರೆ. ಇದಕ್ಕೆ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ನಮ್ಮ ರಾಜ್ಯದ ಜನಸಂಖ್ಯೆಗನುಗುಣವಾಗಿ ಇರಬೇಕಾದಂತಹ ವೈದ್ಯರ ಸಂಖ್ಯೆ, ಎಷ್ಟು ಕಾಲೇಜುಗಳು ಅವಶ್ಯಕತೆಯಿದೆ ಎನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ ಎನ್ನುವುದು ನನ್ನ ಪ್ರಶ್ನೆ. ಎರಡನೆಯದಾಗಿ 2021–22ನೇ ಸಾಲಿಗೆ ನಾಲ್ಕು ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸುವುದಾಗಿ ಹೇಳಿದ್ದಾರೆ. ಚಿಕ್ಕಬಳ್ಳಾಪುರ, ಹಾವೇರಿ, ಯಾದಗಿರಿ, ಚಿಕ್ಕಮಗಳೂರುಗಳಲ್ಲಿ ಪ್ರಾರಂಭಿಸಲಾಗುವ ವೈದ್ಯಕೀಯ ಕಾಲೇಜುಗಳಿಗೆ ಅನುದಾನವನ್ನು ಕೊಡಲಾಗಿದೆಯೇ ಎನ್ನುವುದಕ್ಕೆ ಉತ್ತರ ನೀಡಿದ್ದಾರೆ. ಆದರೆ ಈ ಉತ್ತರದಲ್ಲಿರುವ ಮಾಹಿತಿಯನ್ನು ಪರಿಶೀಲನೆ ಮಾಡಿದ ಮೇಲೆ ನಾಲ್ಕು ಹೊಸ ವೈದ್ಯಕೀಯ ಕಾಲೇಜುಗಳಲ್ಲಿ ಎರಡು ವೈದ್ಯಕೀಯ ಕಾಲೇಜುಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರುಗಳಲ್ಲಿ ಕಾಮಗಾರಿ ನಡೆಯುತ್ತಿದ್ದು, ಹಾವೇರಿ ಮತ್ತು ಯಾದಗಿರಿಗಳಲ್ಲಿ ಪ್ರಗತಿ ಶೂನ್ಯ ಎಂದು ಕೊಡಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ಶೇ.40ರಷ್ಟು ಪ್ರಗತಿಯಾಗಿದೆ, ಚಿಕ್ಕಮಗಳೂರಿನಲ್ಲಿ 5 ರಿಂದ 8% ಎಂದು ಹೇಳುತ್ತೀರಿ. ಆದರೆ ಹಾವೇರಿ ಮತ್ತು ಯಾದಗಿರಿಯಲ್ಲಿನ ಕಾಲೇಜುಗಳಿಗೆ ಹಣವನ್ನು ಕೊಟ್ಟರೂ ಸಹ ಏಕೆ ಪ್ರಾರಂಭವಾಗಿರುವುದಿಲ್ಲ. ನಾಲ್ಕು ಹೊಸ ವೈದ್ಯಕೀಯ ಕಾಲೇಜುಗಳಿಗೆ ಅತಿ ಹೆಚ್ಚು ಅನುದಾನವನ್ನು ಕೊಟ್ಟಿರುವುದು ಚಿಕ್ಕಬಳ್ಳಾಪುರಕ್ಕೆ, ಹಾವೇರಿ, ಯಾದಗಿರಿ ಮತ್ತು ಚಿಕ್ಕಮಗಳೂರಿಗೆ ಕಡಿಮೆ ಅನುದಾನ ನೀಡಲಾಗಿದೆ. ಏಕೆ ಈ ರೀತಿಯ ವ್ಯತ್ಯಾಸವನ್ನು ಮಾಡಲಾಗಿದೆ ಎಂಬುದಕ್ಕೆ ಸಚಿವರು ಉತ್ತರವನ್ನು ನೀಡಬೇಕೆಂದು ಕೋರುತ್ತೇನೆ. ಮೂರನೆಯದಾಗಿ ನಾಲ್ಕು ಹೊಸ ವೈದ್ಯಕೀಯ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ಉದ್ದೇಶಿಸಿದ್ದು, ಇದಕ್ಕೆ MCI (Medical Council of India) ಆಗಿದೆಯೇ? Inspection ಆಗಿದ್ದರೆ ವರದಿಯನ್ನೇನಾದರೂ ಕೊಟ್ಟಿರುತ್ತಾರೆಯೇ? ವರದಿಯಲ್ಲಿ ಏನಿದೆ? ಈ ಹೊಸ ವೈದ್ಯಕೀಯ ಕಾಲೇಜುಗಳನ್ನು 2021-22ರಲ್ಲಿ ಪ್ರಾರಂಭ ಮಾಡಲಾಗುವುದೇ? ಪ್ರಾರಂಭ ಮಾಡಿದರೆ ಎಷ್ಟು ದಾಖಲಾತಿಯನ್ನು ನೀಡಲಾಗುವುದು? ರಾಜ್ಯದಲ್ಲಿ ಪ್ರಾರಂಭಿಸುತ್ತಿರುವ ನಾಲ್ಕು ವೈದ್ಯಕೀಯ ಕಾಲೇಜುಗಳ ಜೊತೆಗೆ ಖಾಸಗಿಯವರು ಪ್ರಾರಂಭ ಮಾಡಲು ಅರ್ಜಿಯನ್ನು ಸಲ್ಲಿಸಿದ್ದಾರೆಯೇ ಎನ್ನುವುದಕ್ಕೆ ಸರ್ಕಾರ ಉತ್ತರವನ್ನು ಕೊಟ್ಟಿದೆ. ಹುಬ್ಬಳ್ಳಿಯ ಶ್ರೀ ಜಗದ್ಗುರು ಗಂಗಾಧರ ಮಹಾಸ್ವಾಮಿಗಳು, ಮೂರು ಸಾವಿರ ಮಠ ಇವರು ಅರ್ಜಿಯನ್ನು ಹಾಕಿರುತ್ತಾರೆ. ಇದಕ್ಕೂ ಸಹ MCI inspection ಆಗಿದೆಯೇ? ಇಲ್ಲಿ ಎಷ್ಟು ವಿದ್ಯಾರ್ಥಿಗಳ ಪ್ರವೇಶಕ್ಕೆ ಶಿಫಾರಸ್ಸು ಮಾಡಲಾಗಿದೆ?

**ಡಾ:ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ವೈದ್ಯಕೀಯ ಕಾಲೇಜುಗಳ ವಿಚಾರದಲ್ಲಿ 17 ಸರ್ಕಾರಿ ವೈದ್ಯಕೀಯ ಕಾಲೇಜು ಈಗಾಗಲೇ ಪ್ರಾರಂಭವಾಗಿದೆ. 39 ಖಾಸಗಿ ವೈದ್ಯಕೀಯ ಕಾಲೇಜುಗಳು ನಮ್ಮ ರಾಜ್ಯದಲ್ಲಿ ಈಗಾಗಲೇ ಇದೆ. ಇದರ ಜೊತೆಗೆ ಕೇಂದ್ರ ಸರ್ಕಾರದ ಎರಡು ಇ.ಎಸ್.ಐ. ಆಸ್ಪತ್ರೆಗಳಿವೆ. 2020-21ರಲ್ಲಿ ನಾಲ್ಕು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡಲಾಗಿದೆ. ಚಿಕ್ಕಬಳ್ಳಾಪುರದ ವೈದ್ಯಕೀಯ ಕಾಲೇಜು 2019ರಲ್ಲಿಯೇ ಪ್ರಾರಂಭವಾಯಿತು. ಆ ಕಾರಣದಿಂದ ಅದು ಶೇ.40ರಷ್ಟು ಪ್ರಗತಿ ಹೊಂದಿದೆ. ಚಿಕ್ಕಬಳ್ಳಾಪುರದಲ್ಲಿರುವ 700 ಹಾಸಿಗೆಗಳುಳ್ಳ ಸುಸಜ್ಜಿತ ಆಸ್ಪತ್ರೆಯೂ ಇದಕ್ಕೆ ಸೇರಿದ್ದು, ಹಾವೇರಿ, ಯಾದಗಿರಿ ಮತ್ತು ಚಿಕ್ಕಮಗಳೂರಿಗೆ ಹೋಲಿಕೆ ಮಾಡಿದಾಗ ಸುಮಾರು 200 ಕೋಟಿ ರೂಪಾಯಿಯಷ್ಟು ಹಣ ಅಲ್ಲಿಗೆ ಹೆಚ್ಚಾಗಿದೆ. ಅದೇ ರೀತಿಯಲ್ಲಿ ಹಾವೇರಿ, ಯಾದಗಿರಿ, ಚಿಕ್ಕಮಗಳೂರು ಮೂರೂ ಜಿಲ್ಲೆಗಳಲ್ಲಿ ಕೇಂದ್ರ ಸರ್ಕಾರದ ಪರವಾನಗಿ ಬಂದಿದ್ದು, ಕಳೆದ ಎರಡು ತಿಂಗಳುಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರ ಕೈಯಿಂದ ಶಂಕುಸ್ಥಾಪನೆ ಮಾಡಲಾಗಿದೆ. ಹಾಗಾಗಿ ಅದು ವಿವಿಧ ಹಂತಗಳಲ್ಲಿದೆ. ಹಾವೇರಿಯಲ್ಲಿ ಸ್ವಲ್ಪ ಜಾಗದ ಸಮಸ್ಯೆ ಇದ್ದು, ಈಗ ಅದು ಅಂತಿಮವಾಗಿದ್ದು, ಅಲ್ಲಿಯೂ ಕೂಡ ಪ್ರಾರಂಭವಾಗಿದೆ. ಯಾದಗಿರಿ ಮತ್ತು ಚಿಕ್ಕಮಗಳೂರುಗಳಲ್ಲಿ ಭರದಿಂದ ಕಾಮಗಾರಿಯು ಪ್ರಾರಂಭವಾಗುತ್ತಿದೆ. 2022ರ ಜೂನ್ ವೇಳೆಗೆ ಸದರಿ ಕಾಮಗಾರಿಯನ್ನು ಮುಕ್ತಾಯಗೊಳಿಸಬೇಕೆಂದು ನಾವು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ. ಪ್ರತಿ ಮೂರು ತಿಂಗಳಿಗೊಮ್ಮೆ ನಾವು ಸ್ಥಳೀಯ ಪ್ರತಿನಿಧಿಗಳನ್ನು ಸೇರಿಸಿಕೊಂಡು ಸಭೆಯನ್ನು ಮಾಡುತ್ತಿದ್ದು, ಹಂತಹಂತವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಒಪ್ಪಂದದ ಮೇಲೆ ಈ ಕಾಮಗಾರಿಯನ್ನು ನಡೆಯುತ್ತಿದೆ. ಶೇ.60 ರಷ್ಟು ಅನುಪಾತದಲ್ಲಿ ಕೇಂದ್ರ ಸರ್ಕಾರದವರು ಹಣವನ್ನು ಒದಗಿಸುತ್ತಾರೆ.

**(ಮುಂದು)**

**(34) 01.02.2021 12.20. KG.AK**

**ಡಾ॥ ಕೆ.ಸುಧಾಕರ್ (ಮುಂದು.,):-**

ನಾವು 40% ರಷ್ಟು ಕೊಡುತ್ತೇವೆ. ಆದರೆ, ಮುಂದೆ ಪ್ರತಿ ವರ್ಷ maintenance ಗೆ ಮತ್ತು ಇದೆಲ್ಲದಕ್ಕೂ ರಾಜ್ಯ ಸರ್ಕಾರವೇ ಹಣವನ್ನು ಭರಿಸುತ್ತದೆ. ಇದು capital investment ಮಾತ್ರ ಕೇಂದ್ರ ಸರ್ಕಾರದವರು 60% ರಷ್ಟು ಒದಗಿಸಿಕೊಡುತ್ತಾರೆ.

ಮಾನ್ಯ ಸಭಾಪತಿಯವರೇ, ಇನ್ನೂ ಮಾನ್ಯ ಸದಸ್ಯರು ವೈದ್ಯರ ಕೊರತೆ ಬಗ್ಗೆ ಹೇಳಿದ್ದಾರೆ. ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಇದು ಇಡೀ ನಮ್ಮ ದೇಶದಲ್ಲಿಯೇ ಇದೆ. ಆ ರೀತಿಯಲ್ಲಿ ನೋಡಿದಾಗ, ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ನಮ್ಮ ರಾಜ್ಯದಲ್ಲಿ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದೆ. ಆದರೂ ಸಹ, ವಿಶ್ವ ಆರೋಗ್ಯ ಸಂಸ್ಥೆಯ ಅನುಪಾತದಲ್ಲಿ ಖಂಡಿತವಾಗಿ ನಾವಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯವರು ಒಂದು ಸಾವಿರ ಜನಸಂಖ್ಯೆಗೆ ಒಬ್ಬ ವೈದ್ಯರು ಇರಬೇಕೆಂದು ಹೇಳುತ್ತಾರೆ. ಆದರೆ, ಇವತ್ತು ಹತ್ತು, ಹನ್ನೊಂದು ಸಾವಿರ ಜನಸಂಖ್ಯೆಗೆ ಒಬ್ಬ ವೈದ್ಯರು ಇದ್ದಾರೆ. ಹಾಗಾಗಿ, ಖಂಡಿತವಾಗಿಯೂ ಸಹ ವೈದ್ಯಕೀಯ ಕಾಲೇಜುಗಳು ಹೆಚ್ಚಾಗಿ ಬರಬೇಕಾಗಿದೆ. ಆ ಕಾರಣಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಕಳೆದ ಆರು ವರ್ಷಗಳಲ್ಲಿ ನಮ್ಮ ದೇಶದಲ್ಲಿ 158 ವೈದ್ಯಕೀಯ ಕಾಲೇಜುಗಳನ್ನು ಕೊಟ್ಟಿದ್ದಾರೆ. ಹಾಗಾಗಿ, ಮಾನ್ಯ ಪ್ರಧಾನ ಮಂತ್ರಿಯವರಿಗೆ ಸ್ಪಷ್ಟವಾಗಿ ದೂರದೃಷ್ಟಿ ಇರುವುದರಿಂದಲೇ ಆರೋಗ್ಯ ಕ್ಷೇತ್ರಕ್ಕೆ ಬಹಳ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯಕ್ಕೂ ಸಹ 4 ವೈದ್ಯಕೀಯ ಕಾಲೇಜುಗಳನ್ನು ಮಂಜೂರು ಮಾಡಿಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಇನ್ನೂ 9 ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಇಲ್ಲ. ಆದರೆ, ನಾವು ಇವತ್ತು PPP model ನಲ್ಲಿ ಸರ್ಕಾರಿ ಮತ್ತು ಖಾಸಗಿ ಒಪ್ಪಂದದಲ್ಲಿ ಈ 9 ಜಿಲ್ಲೆಗಳಲ್ಲಿ ಇದೇ ವರ್ಷ ಕೈಗೆತ್ತಿಕೊಳ್ಳಬೇಕೆಂದು ಕೆಲವು ರೂಪುರೇಶೆಗಳನ್ನು ಮತ್ತು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರ್ಗಸೂಚಿಗಳನ್ನು ಒಂದು external agency ಗೆ ಕೊಟ್ಟು study ಮಾಡುತ್ತಿದ್ದೇವೆ. ಈಗಾಗಲೇ ಗುಜರಾತಿನಲ್ಲಿ ಪ್ರಾರಂಭವಾಗಿದೆ. ಆ ರೀತಿಯ ಒಂದು ಪ್ರಯೋಗವನ್ನು ಸಹ ನಮ್ಮ ರಾಜ್ಯದಲ್ಲಿ ಮಾಡುವಂತಹ ನಿಟ್ಟಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ವಿಚಾರ ಮಾಡಿದ್ದೇವೆ. ಮುಂದಿನ ದಿವಸಗಳಲ್ಲಿ ಖಂಡಿತವಾಗಿಯೂ ಸಹ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಒಂದು ಸುಸಜ್ಜಿತವಾದ ಆಸ್ಪತ್ರೆ ಮಾಡಬೇಕು ಎನ್ನುವಂತಹ ಒಂದು ಬಲವಾದಂತಹ ಗುರಿಯನ್ನು ಇಟ್ಟುಕೊಂಡಿದ್ದೇವೆ.

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ತಾವೀಗ ಮಾತನಾಡಿ. ತಮಗೆ ಎರಡು ನಿಮಿಷಗಳ ಕಾಲವಾಶ ನೀಡಿದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಉತ್ತರ ಕೊಡಲಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಎಸ್.ವ್ಹಿ.ಸಂಕನೂರರವರೇ, ತಮ್ಮದು ಪ್ರಶ್ನೆ ಇದೆಯಾ? ಪ್ರಶ್ನೆ ಇದ್ದರೆ ಕೇಳಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮೊದಲೇ ಮೂರು ಪ್ರಶ್ನಗಳನ್ನು ಆಮೇಲೆ ಕೇಳುತ್ತೇನೆಂದು ಹೇಳಿದ್ದೆ. ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರು 4 ಹೊಸ ವೈದ್ಯಕೀಯ ಕಾಲೇಜುಗಳು ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಆದರೆ, ಆ ಕಾಲೇಜುಗಳಲ್ಲಿ admission ಪ್ರಕಿಯೆ ಪ್ರಾರಂಭವಾಗಿದೆಯೇ ಅಥವಾ ಇಲ್ಲವೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಡಾ||ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಎಲ್ಲಾ admissions 2021–22 ನೇ ಸಾಲಿನಲ್ಲಿ ಪ್ರಾರಂಭವಾಗುತ್ತದೆ. ಎಲ್ಲಾ college ಗಳಲ್ಲಿ 150 students ಗಳಿಗೆ admission ಗೆ ಅವಕಾಶ ಸಿಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಇದಕ್ಕೆ MCI clearance ಸಿಕ್ಕಿದೆಯಾ ಎಂಬುದನ್ನು ತಿಳಿಸಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಹೌದು. ಎಲ್ಲದಕ್ಕೂ ಸಿಕ್ಕಿದೆ. MCI clearance ಸಿಕ್ಕಿದ ಮೇಲೆಯೇ ನಾವು ಪ್ರಾರಂಭ ಮಾಡುವುದಕ್ಕೆ ಸಾಧ್ಯ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹುಬ್ಬಳಿ ವೈದ್ಯಕೀಯ ಕಾಲೇಜಿನ ಬಗ್ಗೆ ಹೇಳಿಲ್ಲ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಹುಬ್ಬಳಿ ಮೆಡಿಕಲ್ ಕಾಲೇಜು ಖಾಸಗಿ ಸಂಸ್ಥೆಯವರಿಗೆ ಪರವಾನಿಗೆ ಸಿಕ್ಕಿದೆ. ಹಾಗಾಗಿ, ನಾವು ಕೂಡ ಮೊದಲು ಅವರಿಗೆ EC and FC ಕೊಡಬೇಕು. KLE ಸಂಸ್ಥೆಯವರದ್ದು ಒಂದು autonomous institution. ಅವರದ್ದೆ ಒಂದು autonomous university ಇದೆ. ಆದರೆ, ಶ್ರೀ ಜಗತ್ತು ಗುರು ಗಂಗಾಧರ ಮಹಾಸ್ವಾಮಿಗಳು ಮೂರು ಸಾವಿರ ಮಠ ಅವರು ಏನು ಮಾಡಿದ್ದಾರೆ ಎಂದರೆ, ಅವರು ಅವರಿಗೆ ಉಚಿತವಾಗಿ ಬೆಲೆ ಬಾಳುವಂತಹ 100 ಎಕರೆ ಜಮೀನನ್ನು ಕೊಟ್ಟಿದ್ದರು. ಈ ವೈದ್ಯಕೀಯ ಕಾಲೇಜನ್ನು KLE ರವರು ಅಭಿವೃದ್ಧಿ ಪಡಿಸುವಂತಹದ್ದು. ಹಾಗಾಗಿ, ನಾವು ನಮ್ಮ ರಾಜ್ಯ ಸರ್ಕಾರದಿಂದ EC and FC ಅನ್ನು ಕೊಟ್ಟಿದ್ದೇವೆ. ಈಗ inspection ಅಗಬೇಕು ಮತ್ತು ನಮ್ಮ MCI ನಿಂದ inspection ಆಗಿ ಎಲ್ಲವೂ ಸರಿಯಾಗಿದ್ದರೆ ಅವರು ಅವರಿಗೆ ಪರವಾನಿಗೆಯನ್ನು ಕೊಡುತ್ತಾರೆ. ಈ ಹಂತದಲ್ಲಿ ಹುಬ್ಬಳ್ಳಿ ಕಾಲೇಜು ಇದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. Medical Council of India ಮೊದಲು ಇರತಕ್ಕಂತಹ ನಿಯಮಗಳನ್ನು ಸಡಿಲಗೊಳಿಸಿ ವೈದ್ಯಕೀಯ ಮಹಾ ವಿದ್ಯಾಲಯಗಳನ್ನು ಹೆಚ್ಚು ಮಾಡುವುದಕ್ಕೆ ಪರವಾನಿಗೆ ಕೊಡುತ್ತಿದೆ. ನಮ್ಮ ರಾಜ್ಯದಲ್ಲಿ ಬೆಳಗಾವಿ ಜಿಲ್ಲೆ ದೊಡ್ಡ ಜಿಲ್ಲೆ. ಈ ಜಿಲ್ಲೆ 18 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವಂತಹ ಜಿಲ್ಲೆ. ಈಗ ಬೆಳಗಾವಿಯಲ್ಲಿ ಒಂದು BIMS ಇದೆ. ಮತ್ತೊಂದು KLE ರವರ ಮೆಡಿಕಲ್ ಕಾಲೇಜು ಇದೆ. ಚಿಕ್ಕೋಡಿಯನ್ನು ಶೈಕ್ಷಣಿಕ ಜಿಲ್ಲೆಯೆಂದು ಪ್ರತ್ಯೇಕವಾಗಿ ಮಾಡಿದ್ದಾರೆ. ಚಿಕ್ಕೋಡಿಯಲ್ಲಿ ಹೊಸ ಮೆಡಿಕಲ್ ಕಾಲೇಜನ್ನು ಮಾಡುವಂತಹ ವಿಚಾರ ಸರ್ಕಾರದ ಮುಂದೆ ಇದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಏಕೆಂದರೆ, ಬೆಳಗಾವಿ ಜಿಲ್ಲೆ ಆಖಂಡ ಜಿಲ್ಲೆ. ಎರಡೂವರೆ parliament ಕ್ಷೇತ್ರವಿದೆ. ದಯವಿಟ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿಕ್ಕೋಡಿಯಲ್ಲಿಯೂ ಸಹ ಹೊಸ ವೈದ್ಯಕೀಯ ಕಾಲೇಜನ್ನು ಮಾಡಲು ಸರ್ಕಾರ ಮುಂದಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡುವುದಕ್ಕೆ ಬಯಸುತ್ತೇನೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹ ವಿಷಯ ನಿಜ. ಏಕೆಂದರೆ, ಬೆಳಗಾವಿ ಬಹಳ ದೊಡ್ಡ ಜಿಲ್ಲೆ. ಆ ಜಿಲ್ಲೆಯಲ್ಲಿ ಸುಮಾರು 18 ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಹಾಗಾಗಿ, ಎಲ್ಲಿ ಸ್ಥಳೀಯವಾಗಿ ಬೇಡಿಕೆ ಇದೆ ಮತ್ತು ಸ್ಥಳೀಯವಾಗಿ ಅದರ ಅವಶ್ಯಕತೆ ಇದೆ, ಅವಶ್ಯಕತೆಗೆ ಅನುಗುಣವಾಗಿ ಅಲ್ಲಿ ಮೂಲಭೂತ ಸೌಕರ್ಯಗಳನ್ನು ನೋಡಿಕೊಂಡು PPP model ನಲ್ಲಿ ಯಾರಾದರೂ ಪ್ರತಿಷ್ಠಿತವಾಗಿ ಇರುವಂತಹ ಖಾಸಗಿ ವ್ಯಕ್ತಿಗಳಾಗಲಿ ಅಥವಾ ಸಂಸ್ಥೆಗಳಾಗಲಿ ಮುಂದೆ ಬಂದರೆ, ನಾವು ಅದನ್ನು ಖಂಡಿತವಾಗಿ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ ತಾವೀಗ ಮಾತನಾಡಿ. ತಮಗೆ ಒಂದು ನಿಮಿಷ ಕಾಲಾವಕಾಶ ನೀಡಿದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದ್ದೇವೆಂದು ಹೇಳಿದ್ದಾರೆ. 2021-2022 ನೇ ಸಾಲಿಗೆ ನಾಲ್ಕು ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದ್ದೇವೆಂದು ಸಚಿವರು ಹೇಳಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ, ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಹೊಸ ವೈದ್ಯಕೀಯ ಕಾಲೇಜುಗಳನ್ನು ತೆರೆಯುವುದರ ಜೊತೆಗೆ ಈ ಹಿಂದೆ ರಾಜ್ಯ ಸರ್ಕಾರಗಳು ತೆರೆದಿರುವಂತಹ ಎಲ್ಲಾ ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೂ ಸಹ ಸಾಮಾನ್ಯವಾಗಿ ಮಾನ್ಯ ಸಚಿವರು Governing Council Chairman ಆಗಿದ್ದಾರೆ. ದಯಮಾಡಿ ಈ ಹಿಂದೆ ಪ್ರಾರಂಭವಾಗಿ ನಡೆಯುತ್ತಿರುವಂತಹ ಮೆಡಿಕಲ್ ಕಾಲೇಜುಗಳಲ್ಲಿ MCI ನಿಯಮಾವಳಿಗಳ ಪ್ರಕಾರ ಅಲ್ಲಿ ವೈದ್ಯರುಗಳಿಲ್ಲ. ಅರೆವೈದ್ಯಕೀಯ ಸಿಬ್ಬಂದಿಯ ಕೊರತೆ ಇದೆ ಮತ್ತು infrastructure ಸರಿಯಾಗಿಲ್ಲ. MCI ರವರು ಪ್ರತಿ ವರ್ಷ ಆ ಕಾಲೇಜುಗಳಿಗೆ ಬಂದು ಪರಿಶೀಲನೆ ಮಾಡುತ್ತಿರುತ್ತಾರೆ, ಕೆಲವು course ಗಳನ್ನು ಸಹ ರದ್ದು ಮಾಡುವಂತಹ ಸಂದರ್ಭಗಳು ಸಹ ಬರುತ್ತವೆ. ಆದ್ದರಿಂದ, ಎಲ್ಲಾ ಸರ್ಕಾರಿ ಮೆಡಿಕಲ್ ಕಾಲೇಜುಗಳ ಆಡಳಿತ ಮಂಡಳಿಯಲ್ಲಿ ಸಚಿವರು Chairman ಆಗಿದ್ದಾರೆ. ಆದರೆ, ಈಗ ಹೊಸದಾಗಿ ಪ್ರಾರಂಭ ಮಾಡಿರುವಂತಹ ಮೆಡಿಕಲ್ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ವೈದ್ಯಕೀಯ ಸಿಬ್ಬಂದಿ, ಅರೆ ವೈದ್ಯಕೀಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಬ್ಬಂದಿಗಳ ನೇಮಕಾತಿಗೆ ವಿಶೇಷವಾದಂತಹ ಗಮನವನ್ನು ಮಾನ್ಯ ಸಚಿವರು ಕೊಡಬೇಕು. ಅದಿಲ್ಲವೆಂದರೆ, ಸುಮ್ಮನೆ ಹೊಸ ಹೊಸ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿರುವುದು, ಅಲ್ಲಿ ಒಂದಷ್ಟು ವೈದ್ಯರನ್ನು ಇಡುವುದು ಮುಂದೆ ಹೋಗುತ್ತಿರುವಂತಹದ್ದು ಇದು ವೈದ್ಯಕೀಯ ಕಾಲೇಜುಗಳನ್ನು ನಡೆಸುವಂತಹ ಪದ್ಧತಿಯಲ್ಲ. ಇದರಿಂದ ಪರಿಪೂರ್ಣವಾದಂತಹ ಒಂದು ಉತ್ತಮವಾದಂತಹ ವ್ಯವಸ್ಥೆಯನ್ನು ನಾವು ನಾಗರಿಕರಿಗೆ ಮುಟ್ಟಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು Governing Council Chairman ಇದ್ದಾರೆ. ಆದ್ದರಿಂದ, ಈಗ ಪ್ರಾರಂಭ ಮಾಡಿರುವಂತಹ ಕಾಲೇಜುಗಳಲ್ಲಿ ಏನೇನು ಕೊರತೆ ಇದೆ, ಅದನ್ನು ಸಚಿವರು ಗಮನಿಸಿ ಕೊಡಲೇ ಆ ಸಂಸ್ಥೆಗಳಿಗೆ ಆ ಸವಲತ್ತನ್ನು ಒದಗಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರು ಇದೇ ವಿಷಯದ ಬಗ್ಗೆ ಒಂದು ನಿಮಿಷ ಮಾತನಾಡುತ್ತಾರೆ. ತಾವು ದಯವಿಟ್ಟು ಅವರ ಮಾತನಾಡಿದ ನಂತರ ಉತ್ತರ ಹೇಳಿ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ತಮಗೆ ಗೊತ್ತಿರುವಂತೆ ಗುಲ್ಬರ್ಗಾದಲ್ಲಿ ಇಡೀ Asia ದಲ್ಲಿಯೇ ದೊಡ್ಡದಾದ ESI ಆಸ್ಪತ್ರೆ ಇದೆ. ESI Medical College, hospital, hostel, Dental College, hospital, hostel ಮತ್ತು Paramedical College, hospital, hostel ಇದೆ. ಇದು ಬಹು ದೊಡ್ಡ ಒಂದು ಕೇಂದ್ರ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ ಏನಾಗಬೇಕು ಎಂಬುದನ್ನು ಸಂಕ್ಷೀಪವಾಗಿ ನೇರವಾಗಿ ಹೇಳಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅದು ಕೇಂದ್ರ ಸರ್ಕಾರದಿಂದ ಮಂಜೂರಾಗಿ ಬಂದಿರುವಂತಹ ಸಂಸ್ಥೆ. ಅಲ್ಲಿ ಬೇಕಾದಂತಹ ಒಳ್ಳೆಯ machinery ಗಳು ಇವೆ. ಆದರೆ, ಅದನ್ನು ಆಪರೇಟ್ ಮಾಡುವಂತಹ ಸಿಬ್ಬಂದಿಯೇ ಇಲ್ಲಿಯವರೆಗೂ ಬಂದಿಲ್ಲ. ನಾನು ಬಹಳ ಸಾರಿ ಈ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದೇನೆ. ಪ್ರತಿ ಬಾರಿಯೂ ಆಗುತ್ತಿದೆ ಎಂಬ ಉತ್ತರವನ್ನು ನೀಡಿದ್ದಾರೆ. ಇಷ್ಟೊಂದು investment ಮಾಡಿ, building ಕಟ್ಟಿ ಅಲ್ಲಿಗೆ machinery ಗಳನ್ನು ತಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿ ಅವುಗಳ ಉಪಯೋಗ ಸಾರ್ವಜನಿಕರಿಗೆ ಆಗಲಿಲ್ಲವೆಂದರೆ, ಏನು ಪ್ರಯೋಜನ? ಆದ್ದರಿಂದ, ಮಾನ್ಯ ಸಚಿವರು ಅಲ್ಲಿಗೆ ಬೇಕಾದಂತಹ ವೈದ್ಯರನ್ನು, ಅಧಿಕಾರಿಗಳನ್ನು ಕೊಟ್ಟು ಆ ಮೆಡಿಕಲ್ ಕಾಲೇಜು ಚೆನ್ನಾಗಿ ನಡೆಯುವಂತೆ ಮಾಡಬೇಕೆಂದು ನನ್ನ ಕೋರಿಕೆ.

**ಡಾ॥ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳು ಇದು tertiary care ಆಗಿರುವಂತಹ ಒಂದು ವ್ಯವಸ್ಥೆ. ನಮಗೆಲ್ಲ ಗೊತ್ತಿರುವಂತೆ ಮೂರು ಹಂತಗಳಲ್ಲಿ ಚಿಕಿತ್ಸೆಯ ಸೇವೆಗಳು ಸಿಗುತ್ತವೆ. ಅದು ಪ್ರಾಥಮಿಕ ಹಂತದಲ್ಲಿ, ದ್ವಿತೀಯ ಹಂತದಲ್ಲಿ, ತೃತೀಯ ಚಿಕಿತ್ಸೆಯ ವ್ಯವಸ್ಥೆ. ಈ ತೃತೀಯ ಚಿಕಿತ್ಸೆಯ ವ್ಯವಸ್ಥೆ ಬಹಳ ಸುಸಜ್ಜಿತವಾಗಿರಬೇಕು ಮತ್ತು ಸಮಗ್ರವಾಗಿರಬೇಕು ಎನ್ನುವಂತಹ ಮಾನ್ಯ ಸದಸ್ಯರ ಆಲೋಚನೆ ಸರಿಯಾಗಿದೆ, ಹಾಗಾಗಿ, ನಮ್ಮ ಜಿಲ್ಲಾ ಆಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜುಗಳಿಗೆ ಹಸ್ತಾಂತರಿಸಿ ಅಲ್ಲಿ ವೈದ್ಯಕೀಯ ಕಾಲೇಜುಗಳನ್ನು ಅಭಿವೃದ್ಧಿ ಪಡಿಸಿರುವುದು ತಮಗೆಲ್ಲರಿಗೂ ಗೊತ್ತಿದೆ. ಆದರೆ, ಮಾನ್ಯ ಸದಸ್ಯರು ಹೇಳಿರುವಂತೆ ಕೆಲವು ಕಡೆ ಸಿಬ್ಬಂದಿಗಳ ಕೊರತೆ ಇದೆ. ಇದರಲ್ಲಿ ಎರಡನೇ ಪ್ರಮುಖ ಕಾರಣ, Group 'D' ಇರಬಹುದು, ಸೇವೆಗಳಲ್ಲಿ security services ಎಂದು, paramedical, nursing staff, ಇದಕ್ಕೆ ಆರ್ಥಿಕ ಇಲಾಖೆಯು ಯಾವ ರೀತಿ ಅನೇಕ ಇಲಾಖೆಗಳಿಗೆ ಹೊರಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳಬೇಕೆಂದು ನಿರ್ದೇಶನ ಮಾಡಿದ್ದೆ, ಹಾಗಾಗಿ, ನಾವು ಖಾಯಂ ನೌಕರರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ತಾವು ಸಹ ಇದನ್ನು ಅನೇಕ ಇಲಾಖೆಗಳಲ್ಲಿ ಗಮನಿಸಿರುತ್ತೀರಿ.

**(ಮುಂದು)**

**(35)01-02-2021(12-30)ಎಂವಿ-ಎಕೆ**

**ಡಾ॥ ಕೆ.ಸುಧಾಕರ್(ಮುಂದು):-**

ನಮ್ಮ ಇಲಾಖೆಗಳಲ್ಲೂ ಕೂಡ ಇಂತಹ ಪರಿಸ್ಥಿತಿ ಇದೆ. ಆ ಕಾರಣಕ್ಕೆ ಪ್ರತಿ ವರ್ಷ ಟೆಂಡರ್ ಕರೆಯುತ್ತೇವೆ. ನಮ್ಮ ಪ್ರತಿ ವೈದ್ಯಕೀಯ ಕಾಲೇಜುಗಳು ಸ್ವಾಯತ್ತ ಸಂಸ್ಥೆಗಳಾಗಿರುವುದರಿಂದ ಆ ಸಂಸ್ಥೆಗಳ ನಿರ್ದೇಶಕರು ಸರ್ವ ಸ್ವತಂತ್ರರು. ಅಂದರೆ, ಆಡಳಿತದ ಹಿತದೃಷ್ಟಿಯಿಂದ ದಿನನಿತ್ಯದ ಕಾರ್ಯಚಟುವಟಿಕೆಗಳು ಯಾವ ರೀತಿ ನಡೆದುಕೊಂಡು ಹೋಗಬೇಕು, ಖರೀದಿ ಮಾಡುವುದಕ್ಕೆ ಮತ್ತು ಯಾವುದೇ ಕಾನೂನನ್ನು ಮಾಡುವುದಕ್ಕೆ ಎಲ್ಲದಕ್ಕೂ ಕೂಡ ಅವರಿಗೆ ಅಧಿಕಾರವನ್ನು ನೀಡಿದ್ದೇವೆ. ಆದರೆ, ಗವರ್ನಿಂಗ್ ಕೌನ್ಸಿಲ್ ಮೂರು ಅಥವಾ ಆರು ತಿಂಗಳಿಗೊಮ್ಮೆ ಸಭೆ ಸೇರಿ, ನಿರ್ದೇಶಕರು ಏನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಣಯಗಳನ್ನು ತೆಗೆದುಕೊಂಡಿರುತ್ತಾರೆ, ಅಂತಹ ನಿರ್ಣಯಗಳನ್ನು ದೃಢೀಕರಿಸುವುದು. ಅದು ಕೂಡ ಆರ್ಥಿಕ ಇಲಾಖೆಯ ಸಭೆ ಆದ ನಂತರ ನಮಗೆ ಬರುತ್ತದೆ. ಸಿಬ್ಬಂದಿ ಕೊರತೆ ಎಲ್ಲಿ ಕಂಡು ಬಂದಿದೆ ಎಂದರೆ, ಬಹಳ ಮುಖ್ಯವಾಗಿ ಅನೇಕ ಇಲಾಖೆಗಳಲ್ಲಿ ಮುಖ್ಯ ಆಡಳಿತಾಧಿಕಾರಿಗಳೇ ಇರುವುದಿಲ್ಲ. ಈ ಅಡ್ಮಿನಿಸ್ಟ್ರೇಷನ್ ಮಾಡುವುದಕ್ಕೆ ಬೇಕಾಗಿರುವಂತಹ ಬಹಳ ಮುಖ್ಯವಾಗಿರುವಂತಹ ಹುದ್ದೆ. ಹಾಗಾಗಿ, ಈಗಾಗಲೇ ನಾನು ಡಿ.ಪಿ.ಎ.ಆರ್.ನ ಪ್ರಧಾನ ಕಾರ್ಯದರ್ಶಿಗಳ ಜೊತೆ ಒಂದು ಸುತ್ತಿನ ಮಾತುಕತೆಯನ್ನು ಮಾಡಿದ್ದೇನೆ. ಇದಕ್ಕೆ ಪ್ರಾಶಸ್ಯ ನೀಡಿ ಇಲಾಖೆಗೆ ಕೆ.ಎ.ಎಸ್ ಅಧಿಕಾರಿಗಳನ್ನು ನಿಯೋಗ ಮಾಡಬೇಕೆಂದು ಸಭೆಯಲ್ಲಿ ಸೂಚನೆಯನ್ನು ನೀಡಿದ್ದೇನೆ. ಇನ್ನು ನಮ್ಮ ಸದಸ್ಯರು ಕಲಬುರಗಿಯ ಇ.ಎಸ್.ಐ. ಆಸ್ಪತ್ರೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಬಹಳ ಅದ್ಭುತವಾದಂತಹ ಆಸ್ಪತ್ರೆ. ಅಲ್ಲಿ ಮೂಲಭೂತ ಸೌಕರ್ಯಗಳು ಬಹಳ ಚೆನ್ನಾಗಿದೆ. ಇದು ಕೇಂದ್ರ ಸರ್ಕಾರದ ಅಧೀನದಲ್ಲಿರುವಂತಹ ಒಂದು ಸಂಸ್ಥೆಯಾಗಿದೆ. ಆದರೂ ಕೂಡ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯ ಜೊತೆ ಸಮಾಲೋಚನೆ ಮಾಡಿ, ಅಲ್ಲಿಯೂ ಕೂಡ ಉತ್ತಮವಾದ ಸೇವೆಗಳನ್ನು ಒದಗಿಸಬೇಕೆನ್ನುವುದಕ್ಕೂ ಕೂಡ ಗಮನಹರಿಸುತ್ತೇನೆ. ನಮ್ಮ ವೈದ್ಯಕೀಯ ಕಾಲೇಜು ಏನಿದೆ, ಅಲ್ಲಿ ಈಗಾಗಲೇ ಮೂಲಭೂತ ಸೌಕರ್ಯಗಳಿಗೆ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲಿಗೆ ಸಿಬ್ಬಂದಿಗಳನ್ನು ತುಂಬಲಾಗಿದೆ. ಮುಂದಿನ ದಿನಗಳಲ್ಲಿ ವಿಶೇಷವಾಗಿ ಹೈದರಾಬಾದ್-ಕರ್ನಾಟಕದ ಭಾಗದಲ್ಲಿ ವೈಶಿಷ್ಟ್ಯಪೂರ್ಣವಾಗಿ, ಸಮಗ್ರವಾದ ಆರೋಗ್ಯ ಸೇವೆಗಳನ್ನು ಒದಗಿಸುವ ಕಡೆಗೆ ನಮ್ಮ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯವಿದೆ. ಆದರೆ, ಅಲ್ಲಿಗೆ ಸಿಬ್ಬಂದಿಗಳು ಮಾತ್ರ ಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 90**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರ ಸ್ವೀಕಾರವಾಗಿದೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ. 2013ರಲ್ಲಿ ಪ್ರಾರಂಭಗೊಂಡಂತಹ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಈ ಆರೋಗ್ಯ ಅಭಿಯಾನ ಕಾರ್ಯಕ್ರಮ ಏನಿತ್ತು, ಇದನ್ನು ಒಟ್ಟುಗೂಡಿಸಿ, ನ್ಯಾಷನಲ್ ಹೆಲ್ತ್ ಮಿಷನ್ ಎಂದು ಮಾಡಿದ್ದಾರೆ. ಆದರೆ, ದುರಾದೃಷ್ಟಕರವೇನೆಂದರೆ, ಅದು 2017ರಲ್ಲಿ ಪ್ರಾರಂಭವಾಗಿ 2020ರಲ್ಲಿ ಮುಗಿದುಹೋಗಿದೆ. ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಈ ಅಭಿಯಾನದ ಅಡಿಯಲ್ಲಿ ಮೂಲಭೂತ ಸೌಕರ್ಯ ಮತ್ತು ಆರೋಗ್ಯ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಆದುದರಿಂದ ಸರ್ಕಾರ ಈ ಮಿಷನ್ ಅನ್ನು ಮುಂದುವರೆಸುವುದಕ್ಕೆ ಏನಾದರೂ ಕೇಂದ್ರ ಸರ್ಕಾರಕ್ಕೆ ಒತ್ತಾಯ ಹಾಕಿದೆಯೇ? ಹಾಗಿದ್ದರೆ ಅದು ಯಾವ ಹಂತದಲ್ಲಿದೆ. ಅಥವಾ ಒಂದು ವೇಳೆ ಏನಾದರೂ ಅದು ಅರೆಬರೆ ಕೆಲಸವಾಗಿ ನಿಂತುಹೋಗಿದ್ದರೆ, ಆ ಕೆಲಸಗಳನ್ನು ಮುಂದುವರೆಸುವುದಕ್ಕೆ ಈಶಾನ್ಯ ರಾಜ್ಯಗಳಲ್ಲಿ forward linkage ಅಂತ ಏನು ಕೊಟ್ಟಿದ್ದಾರೆ, ಅದೇ ರೀತಿ ನಮಗೇನಾದರೂ ಕೊಡುವುದಕ್ಕೆ ಪ್ರಸ್ತಾವನೆಯನ್ನು ಮಂಡನೆ ಮಾಡಿದ್ದಾರೆಯೇ ಎಂದು ಕೇಳುತ್ತಿದ್ದೇನೆ.

ನನ್ನ ಒಂದು ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ಏಕೆಂದರೆ, ನಾನು ಮತ್ತು ಸದಸ್ಯರಾದ ಮಾನ್ಯ ಚಿದಾನಂದ್ ಎಂ. ಗೌಡ ಇಬ್ಬರು ಕೂಡ ಶಿರಾ ತಾಲ್ಲೂಕಿನ ಒಂದು ಗ್ರಾಮದಿಂದ ಬಂದಿದ್ದೇವೆ. ನಾವು ಆಂಧ್ರಪ್ರದೇಶದ ಗಡಿ ಭಾಗದಲ್ಲಿ ಇರುವಂತಹವರು. ಇತ್ತೀಚೆಗೆ ಆಂಧ್ರಪ್ರದೇಶದ ಮಡಕಶಿರ ತಾಲ್ಲೂಕಿನಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯವಿದೆ. ಅಂದರೆ, ಕುಡಿಯುವ ನೀರು ಮತ್ತು ನೀರಾವರಿಗೆ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಆದುದರಿಂದ ಶಿರಾ ತಾಲ್ಲೂಕಿನ ಜನರು ಅಲ್ಲಿರುವಂತಹ ಮೂಲಭೂತ ಸೌಕರ್ಯಗಳಿಗೆ ಇದನ್ನು ಹೋಲಿಸಿಕೊಂಡು ಇಲ್ಲಿ ಯಾವುದೇ ರೀತಿ ಮೂಲಭೂತ ಸೌಕರ್ಯವಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ಜನರ ದೃಷ್ಟಿಯಿಂದ ಅಲ್ಲಿಗೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿ ಕೊಡುತ್ತೀರಾ ಎಂದು ಕೇಳಿದ್ದೆ. ಆದರೆ, ಆರ್ಥಿಕ ಕೊರತೆ ಇರುವುದರಿಂದ ಅದು ಆಗುವುದಿಲ್ಲವೆಂದು ಹೇಳಿದ್ದಾರೆ. ದಯಮಾಡಿ ಮಾನ್ಯ ಸಚಿವರು ಇದನ್ನು ಯಾವುದಾದರು ಒಂದು ಯೋಜನೆಯಡಿಯಲ್ಲಿ ಮಾಡಿಕೊಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದಿಂದ ಈ ಯೋಜನೆಗೆ

ನೂರಕ್ಕೆ ನೂರರಷ್ಟು ಅನುದಾನ ಬರುತ್ತದೆ. ನನಗೆ ನೀಡಿರುವ ಉತ್ತರದ ಅನುಬಂಧ-2ರಲ್ಲಿ 'ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ' ಎಂದು ಉತ್ತರ ನೀಡಿದ್ದಾರೆ. ಬಹುಶಃ ಇದಕ್ಕೆ ರಾಜ್ಯ ಸರ್ಕಾರದ ಅನುದಾನದ ಅವಶ್ಯಕತೆ ಇಲ್ಲ. ಎಲ್ಲವೂ ಕೂಡ ಕೇಂದ್ರ ಸರ್ಕಾರದಿಂದ ಮರುಪಾವತಿಯಾಗುತ್ತದೆ. ಅಂದರೆ, ತಾವು ಖರ್ಚು ಮಾಡಿ, ಅದನ್ನು ಮರುಪಾವತಿ ಪಡೆದುಕೊಳ್ಳಬಹುದು. ಆದುದರಿಂದ ಅದಕ್ಕೂ ಸಹ ಸ್ಪಷ್ಟೀಕರಣ ನೀಡಬೇಕೆಂದು ಮಾನ್ಯ ಸಚಿವರಲ್ಲಿ ಮತ್ತೊಮ್ಮೆ ಕೋರಿಕೊಳ್ಳುತ್ತೇನೆ. ಶಿರಾ ತಾಲ್ಲೂಕಿನ ಪಟ್ಟನಾಯಕನ ಹಳ್ಳಿಯಲ್ಲಿ ಇರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಯಾವುದಾದರೂ ಒಂದು ಯೋಜನೆಯಡಿಯಲ್ಲಿ ಮೇಲ್ದರ್ಜೆಗೇರಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಮ್ಮ ಆರೋಗ್ಯ ಇಲಾಖೆಯಲ್ಲಿ ರಾಷ್ಟ್ರೀಯ ಆರೋಗ್ಯ ಮಿಷನ್ ಎನ್ನುವುದು ಬಹಳ ಮುಖ್ಯವಾದ ಕಾರ್ಯಕ್ರಮ. ಪ್ರತಿ ವರ್ಷ ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ಕೊಡುತ್ತಾರೆ. ನಮ್ಮಲ್ಲಿ ಈ ಕಾರ್ಯಕ್ರಮ 2005ರಲ್ಲಿ ಪ್ರಾರಂಭವಾಗಿದೆ. ಇದಕ್ಕೆ 2011ರಲ್ಲಿ ನಗರ ಪ್ರದೇಶ ಬಿಟ್ಟು ಹೋಗಿತ್ತು. ಈಗ ಮತ್ತೆ ಅದು ನಮ್ಮ ವ್ಯಾಪ್ತಿಗೆ ಬಂದಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ, ಗುಣಮಟ್ಟದ ಮತ್ತು ಸಮಗ್ರವಾಗಿರತಕ್ಕಂತಹ ಆರೋಗ್ಯ ಸೇವೆಗಳನ್ನು ಒದಗಿಸುವಂಥದ್ದು ಮತ್ತು ಸೇವೆಗಳನ್ನು ಸಮಾನವಾಗಿ ಪಡೆಯುವಂಥದ್ದು, ಪ್ರಾಂತೀಯ ಅಸಮಾನತೆ ಏನಿತ್ತು ಅದನ್ನು ಹೋಗಲಾಡಿಸುವಂಥದ್ದು ಬಹಳ ಮುಖ್ಯವಾದಂತಹ ವಿಚಾರ. ಹಾಗಾಗಿ ಜನಸಂಖ್ಯೆ ಏರಿದಂತೆ ಅದನ್ನು ಸ್ಥಿರೀಕರಿಸಿ, ಆಯುಷ್ ಪದ್ಧತಿಗಳನ್ನು ಕೂಡ ಆರೋಗ್ಯ ಸೇವೆಯಲ್ಲಿ ಅವಿಭಾಜ್ಯ ಅಂಗವಾಗಿ ಮಾಡಿಕೊಂಡು, ಇವತ್ತು ಎಲ್ಲಾ ಆರೋಗ್ಯ ಚಟುವಟಿಕೆಗಳಲ್ಲಿ ಸೇವೆಗಳನ್ನು ಉತ್ತಮಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪಾಲು ಇದೆ. ಎಲ್ಲವನ್ನು ಸಹ ಸೊಸೈಟಿ ಮತ್ತು ಖಜಾನೆಯ ಮುಖಾಂತರ ಆಯಾಯ ಜಿಲ್ಲೆಗಳಿಗೆ ಕಳುಹಿಸಿಕೊಡುತ್ತೇವೆ. ಮಾನ್ಯ ಸದಸ್ಯರು ಕೇಳಿರುವಂತಹ ಜಿಲ್ಲಾವಾರು ಮಾಹಿತಿಗಳನ್ನು ನೀಡಿದ್ದೇವೆ. ತಾಲ್ಲೂಕುವಾರು ಮಾಹಿತಿಗಳನ್ನು ಸಹ ಕೇಳಿದ್ದಾರೆ. ಆ ತಾಲ್ಲೂಕುವಾರು ಮಾಹಿತಿಗಳನ್ನು ಸಹ ನೀಡಿದ್ದೇವೆ. ಈಗ ಶಿರಾದ ಪಟ್ಟನಾಯಕನ ಹಳ್ಳಿಯಲ್ಲಿರುವಂತಹ ಪ್ರಾಥಮಿಕ ಆರೋಗ್ಯ ಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಅದನ್ನು ಸಮುದಾಯ ಆರೋಗ್ಯ ಚಿಕಿತ್ಸಾ ಕೇಂದ್ರವನ್ನಾಗಿ ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ. ಅದರ ಅಗತ್ಯತೆಯ ಬಗ್ಗೆ ಆರ್ಥಿಕ ಇಲಾಖೆಯ ಜೊತೆ ಚರ್ಚೆ ಮಾಡಿ, ಅದಕ್ಕೆ ಅನುದಾನದ ಕೊರತೆ ಇಲ್ಲದೆ ಇದ್ದರೆ ಖಂಡಿತವಾಗಿ ಅದನ್ನು ಮಾಡುತ್ತೇವೆ. ಏಕೆಂದರೆ, ಇವತ್ತು ರಾಜ್ಯದಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮುದಾಯ ಚಿಕಿತ್ಸಾ ಕೇಂದ್ರ, ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆ ಈ ಎಲ್ಲದಕ್ಕೂ ಕೂಡ ಒಂದು ಹೊಸ ರೂಪ ಕೊಡುವುದಕ್ಕೆ ಸರ್ಕಾರ ಬಯಸಿದೆ. ಇದಕ್ಕೆ ಬೇಕಾದಂತಹ ಸಿದ್ಧತೆಗಳು ಮತ್ತು ಮಾರ್ಗಸೂಚಿಗಳನ್ನು ಈಗಾಗಲೇ ತಯಾರು ಮಾಡಿಕೊಂಡಿದ್ದೇವೆ. ಆರೋಗ್ಯ ನೀತಿ ಕೂಡ ಸ್ಪಷ್ಟವಾಗಿದೆ. ರಾಜ್ಯದಲ್ಲಿರುವಂತಹ ಅವರವರ ವಿಭಾಗಗಳಲ್ಲಿ ಯಾರು ಪರಿಣಿತರು ಇದ್ದಾರೆ, ಅಂತಹವರನ್ನು ಒಳಗೊಂಡಿರುವಂತಹ ಮೂವತ್ತು ಜನರ ಒಂದು ವಿಷನ್ ಗ್ರೂಪ್ ಅನ್ನು ಸರ್ಕಾರ ರಚನೆ ಮಾಡಿದೆ. ಅವರ ಮೂಲಕ ಈ ಎಲ್ಲಾ ವ್ಯವಸ್ಥೆಗಳನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅನುದಾನದ ಕೊರತೆ ಇದ್ದರೆ, ವಿಶ್ವ ಬ್ಯಾಂಕ್ ಮತ್ತು ಏಷಿಯನ್ ಅಭಿವೃದ್ಧಿ ಬ್ಯಾಂಕ್‌ಗಳನ್ನು ಸಂಪರ್ಕಿಸಿ, ಆದಷ್ಟು ಶೀಘ್ರದಲ್ಲಿ ಇಡೀ ರಾಜ್ಯದಲ್ಲಿನ ಅನೇಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವಂತಹ ಪ್ರಯತ್ನ ಮಾಡುತ್ತೇವೆ. ಇದನ್ನು ಕೂಡ ಪ್ರಾಶಸ್ತ್ಯದಲ್ಲಿ ಇಟ್ಟುಕೊಂಡಿದ್ದೇವೆ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುದಕ್ಕಾಗಿ ಧನ್ಯವಾದಗಳು. ಸದಸ್ಯರಾದ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಗಮನ ಸೆಳೆದ ರೀತಿ ಹಾಗೂ ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ಇವತ್ತು ಪಟ್ಟನಾಯಕನ ಹಳ್ಳಿಯಲ್ಲಿ ಆಸ್ಪತ್ರೆ ಇದೆ. ಅಲ್ಲಿಗೆ ಒಬ್ಬ ವೈದ್ಯರನ್ನು ಒದಗಿಸಿದ್ದಾರೆ. ಆದರೆ ಆ ವೈದ್ಯರು ಅರ್ಧ ದಿನ ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಲ್ಲಿಗೆ ಒಂದು 108 ಆಂಬ್ಯುಲೆನ್ಸ್ ಸೌಲಭ್ಯವನ್ನು ಕೊಡುವಂತಹ ಕೆಲಸ ಕೂಡ ಆಗಿಲ್ಲ. ಹಾಗಾಗಿ, ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಈ ಕೂಡಲೇ ಕನಿಷ್ಠಪಕ್ಷ ಅಲ್ಲಿಗೆ ಒಂದು ಆಂಬ್ಯುಲೆನ್ಸ್ ಒದಗಿಸಿಕೊಡುವಂತಹ ಕೆಲಸವನ್ನು ಮಾಡಿಕೊಡಬೇಕು. ಅತ್ಯಂತ ಅವಶ್ಯಕತೆಯ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲಿಗೆ ತುಂಬಾ ಅವಶ್ಯಕತೆ ಇದೆ. ಅಲ್ಲಿ ಸುತ್ತಮುತ್ತ ತುಂಬಾ ಹಳ್ಳಿಗಾಡಿನ ಜನರಿದ್ದಾರೆ. ಅಲ್ಲಿನ ಜನರು ಶಿರಾ ಆಸ್ಪತ್ರೆಗೆ ಬರಬೇಕಾದರೆ ಸುಮಾರು 20ರಿಂದ 25 ಕಿಲೋಮೀಟರ್ ಹೋಗಬೇಕು. ಅದು ಪಕ್ಕದ ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವುದರಿಂದ, ಅತ್ಯವಶ್ಯಕವಾಗಿ ಪಟ್ಟನಾಯಕನಹಳ್ಳಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕು ಮತ್ತು ಈ ಕೂಡಲೇ ಅಲ್ಲಿಗೆ ಒಂದು ಆಂಬ್ಯುಲೆನ್ಸ್‌ನ ವ್ಯವಸ್ಥೆ ಮಾಡಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಉತ್ತಮವಾದ ಪ್ರಶ್ನೆ. ಮಾನ್ಯ ಸದಸ್ಯರು emergency ambulance service ಬಗ್ಗೆ ಕೇಳಿದ್ದಾರೆ. ಈಗ ನಮ್ಮಲ್ಲಿ ಇರತಕ್ಕಂತಹ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

108 ಆಂಬ್ಯುಲೆನ್ಸ್ ಸರ್ವಿಸ್ ಏನಿದೆ, ಅದನ್ನು ಸರ್ಕಾರ ಕಳೆದ ಹತ್ತು ವರ್ಷಗಳಿಂದ ಅಂದರೆ 2008ರಿಂದ 2020ರವರೆಗೆ ಮಾಡಿಕೊಂಡು ಬಂದಿದೆ.

**(ಮುಂದು)**

**(36) 01.02.2021 12.40 LL-RN**

**ಡಾ: ಕೆ. ಸುಧಾಕರ್(ಮುಂದು):–**

ಈಗ ಹೊಸದಾಗಿ, ಆಂಬ್ಯುಲೆನ್ಸ್ ಸೇವೆಗಾಗಿ ಟೆಂಡರ್ ಕರೆದಿದ್ದೇವೆ. ಇದರಲ್ಲಿ ಸುಮಾರು 11 ಸೇವೆಗಳನ್ನು ಸಮಗ್ರವಾಗಿ ಸೇರಿಸಿಕೊಂಡು Cardiac Health Services ಇರಬಹುದು, Emergency Health Services, Telemedicine Tele ICU ಹೀಗೆ ಎಲ್ಲಾ 11 ಸೇವೆಗಳನ್ನು ಅದರಲ್ಲಿ ಅಳವಡಿಸಿ, ಪ್ರಾಥಮಿಕ ಚಿಕಿತ್ಸಾ ಕೇಂದ್ರದ ಹಂತದಲ್ಲಿಯೇ ಕಡ್ಡಾಯವಾಗಿ ಒಂದು ಆಂಬ್ಯುಲೆನ್ಸ್ ಒದಗಿಸಬೇಕೆಂದು ಆಲೋಚನೆ ಇದೆ. ಆದರೆ, ಪ್ರಸ್ತುತ ಒಂದು ಲಕ್ಷದಿಂದ ಒಂದೂವರೆ ಲಕ್ಷದ ಜನಸಂಖ್ಯೆಗೆ ಒಂದು ಆಂಬ್ಯುಲೆನ್ಸ್ ಇದೆ. ಈಗ ಬರುವಂತಹ ದಿನಮಾನಗಳಲ್ಲಿ ಪ್ರತಿ ಪ್ರಾಥಮಿಕ ಚಿಕಿತ್ಸಾ ಕೇಂದ್ರಕ್ಕೆ ಒಂದು ಆಂಬ್ಯುಲೆನ್ಸ್ ಅನ್ನು ಕೊಡಬೇಕೆಂದು ನಾವು ಉದ್ದೇಶ ಮಾಡಿದ್ದೇವೆ. ಹಾಗಾಗಿ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯಲ್ಲಿ ಅವರು ಕೇಳಿರುವಂತಹ ಚಿಕಿತ್ಸಾ ಕೇಂದ್ರಕ್ಕೂ ಕೂಡ ಮುಂದಿನ ದಿನಗಳಲ್ಲಿ ಆಂಬ್ಯುಲೆನ್ಸ್ ಲಭ್ಯವಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 191**

**(ಉತ್ತರವನ್ನು ಲತ್ತಿಸಲಾಗಿದೆ)**

**ಶ್ರೀ ಎಂ. ನಾರಾಯಣಸ್ವಾಮಿ(ವಿರೋದ ಪಕ್ಷದ ಮುಖ್ಯ ಸಚೇತಕರು)(ಶ್ರೀ ಬಿ.ಕೆ. ಹರಿಪ್ರಸಾದ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಗಂಭೀರವಾದ ವಿಷಯದ ಬಗ್ಗೆ ಕೇಳಿರುವಂತಹ ಪ್ರಶ್ನೆಯಾಗಿರುತ್ತದೆ. ಆದರೆ, ಸರ್ಕಾರ ಆ ಪ್ರಶ್ನೆಗೆ ಹಾರಿಕೆಯ ಉತ್ತರವನ್ನು ನೀಡಿರುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಏಕೆಂದರೆ, "2020-21ನೇ ಸಾಲಿನಲ್ಲಿ ಆಯವ್ಯಯದಲ್ಲಿ ಘೋಷಣೆ ಮಾಡಿರುವಂತೆ, ನಗರ ಪ್ರದೇಶಗಳಲ್ಲಿ ದುಡಿಯುತ್ತಿರುವ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬಸ್ಥರಿಗೆ ಆರೋಗ್ಯ ರಕ್ಷಣೆ ನೀಡುವ ದೃಷ್ಟಿಯಿಂದ ಎಷ್ಟು ಮೊಬೈಲ್ ಕ್ಲಿನಿಕ್‌ಗಳನ್ನು ಪ್ರಾರಂಭಿಸಲಾಗಿದೆ" ಎನ್ನುವುದು ಮೂಲ ಪ್ರಶ್ನೆಯಾಗಿದೆ. ಆದರೆ ಸರ್ಕಾರದವರು, 'ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎನ್ನುವ ಉತ್ತರ ನೀಡಿರುತ್ತಾರೆ. ತಮ್ಮ ಮೂಲಕ ನಾನು, ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಷ್ಟಪಡುವುದೇನೆಂದರೆ, 2020-21ನೇ ಆಯವ್ಯಯದಲ್ಲಿ ಸರ್ಕಾರ ಘೋಷಣೆ ಮಾಡಿರುವಂತೆ, ಅತೀ ಕಷ್ಟದಲ್ಲಿರುವಂತಹ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬ ವರ್ಗದವರಿಗೆ ಕೊರೊನಾ ಎಂಬ ಮಾರಕ ರೋಗ ಬಂದಿರುವಂತಹ ಸಂದರ್ಭದಲ್ಲಿ ಮೊಬೈಲ್ ಕ್ಲಿನಿಕ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಏನು ಕ್ರಮ ಕೈಗೊಂಡಿರುತ್ತದೆ? ಏಕೆಂದರೆ, ಈ ಆಯವ್ಯಯ ವರ್ಷ ಬರುವ ತಿಂಗಳಿಗೆ ಮುಗಿಯುತ್ತಿದ್ದು, ಪ್ರಸ್ತುತ ಆಯವ್ಯಯದಲ್ಲಿ ನಿರ್ದಿಷ್ಟವಾಗಿ ಈ ಯೋಜನೆಗೆ ಮೀಸಲಿಟ್ಟಿರುವ ಹಣ ಪೋಲಾಗುವುದಿಲ್ಲವೇ? ಅಲ್ಲದೇ, ಹೊಸ ಆಯವ್ಯಯ ಬರುವ ತಿಂಗಳಿನಿಂದ ಪ್ರಾರಂಭವಾಗುತ್ತಿರುತ್ತದೆ. ಕೊರೊನಾದಂತಹ ಮಾರಕ ರೋಗ ಬಂದಿರುವಂತಹ ಕಾಲದಲ್ಲಿ ಕಟ್ಟಡ ಕಾರ್ಮಿಕರಿಗೆ ಯಾವುದೇ ರೀತಿಯ ಸೌಕರ್ಯಗಳಿರುವುದಿಲ್ಲ. ಕಟ್ಟಡ ನಿರ್ಮಾಣ ಮಾಡುವಂತಹ ಸ್ಥಳದಲ್ಲಿ ಏನಾದರೂ ಅನಾಹುತಗಳಾದರೆ, ಅವರಿಗೆ ತಕ್ಷಣವೇ ಚಿಕಿತ್ಸೆ ನೀಡುವ ಸಲುವಾಗಿ ಮೊಬೈಲ್ ಕ್ಲಿನಿಕ್‌ಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರ ಒಂದು ಒಳ್ಳೆಯ ಕಾರ್ಯಕ್ರಮವನ್ನು ಘೋಷಣೆ ಮಾಡಿರುತ್ತದೆ. ಆದರೆ, ಮಾನ್ಯ ಸಚಿವರು ಒಂದು ಕಡೆ ಈ ಯೋಜನೆಗೆ ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆಯೆಂದು ಹೇಳುತ್ತಾರೆ. ಮತ್ತೊಂದು ಕಡೆ, ಈ ಯೋಜನೆ ಇನ್ನು ಪ್ರಾರಂಭಿಸದಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು, ವಿಳಂಬಕ್ಕೆ ಕಾರಣವೇನು ಎನ್ನುವ ಮತ್ತೊಂದು ಪ್ರಶ್ನೆಗೆ, ಕೋವಿಡ್-19 ಹಿನ್ನೆಲೆಯಲ್ಲಿ ಮೊಬೈಲ್ ಕ್ಲಿನಿಕ್‌ಗಳ ಸ್ಥಾಪನೆಯ ಬಗ್ಗೆ ಮಾರ್ಗಸೂಚಿಯನ್ನು ತಜ್ಞ ವೈದ್ಯರಿಂದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡೆಯಲು ತಡವಾದ್ದರಿಂದ ಸ್ಥಾಪನೆಗೆ ವಿಳಂಬವಾಗಿರುತ್ತದೆ" ಎಂದು ಉತ್ತರ ನೀಡಿರುತ್ತಾರೆ. ಒಂದು ಮೊಬೈಲ್ ಕ್ಲಿನಿಕ್ ಓಪನ್ ಮಾಡುವುದಕ್ಕೆ ಏತಕ್ಕೆ ಇಷ್ಟು ವಿಳಂಬ ಮಾಡಲಾಗುತ್ತಿದೆ ಅಥವಾ ಇದೇನು ಅಷ್ಟೊಂದು ದೊಡ್ಡ ಕೆಲಸವೇ ಹಾಗೂ ಇದನ್ನು ತಜ್ಞ ವೈದ್ಯರಿಂದ ಮಾರ್ಗಸೂಚಿ ಪಡೆಯಲು ತಡವಾಗಿದೆಯೆಂದು ಉತ್ತರ ನೀಡುತ್ತಾರೆಂದರೆ, ಕಟ್ಟಡ ಕಾರ್ಮಿಕರ ಬಗ್ಗೆ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಕಾಳಜಿ ಇದೆ ಮತ್ತು ಯಾವ ರೀತಿ ಅವರಿಗೆ ರಕ್ಷಣೆ ನೀಡುತ್ತಾರೆಂದು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಈ ಯೋಜನೆ ಏತಕ್ಕಾಗಿ ವಿಳಂಬವಾಗಿದೆ ಎಂಬ ಬಗ್ಗೆ ತಮ್ಮ ಪ್ರಶ್ನೆಯನ್ನು ಕೇಳಿ. ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಸ್ಪಷ್ಟೀಕರಣ ನೀಡುತ್ತಾರೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:–** ಮಾನ್ಯ ಸಭಾಪತಿಯವರೇ, ಸದರಿ ಪ್ರಶ್ನೆಯನ್ನು ಮಾನ್ಯ ಹರಿಪ್ರಸಾದ್‌ರವರೇ ಕೇಳಿದ್ದರೆ ಇಷ್ಟು ಉದ್ವೇಗಕ್ಕೆ ಒಳಗಾಗಿ ಕೇಳುತ್ತಿರಲಿಲ್ಲ. ಆದರೆ, ಮಾನ್ಯ ನಾರಾಯಣಸ್ವಾಮಿಯವರು ಯಾವ ಪ್ರಶ್ನೆಯಾದರೂ ಸಹ ಬಹಳ ಉದ್ವೇಗಕ್ಕೆ ಒಳಗಾಗುತ್ತಾರೆ. ಅದರಂತೆ, ಅವರು ಈಗಾಗಲೇ ಎರಡು ಪ್ರಶ್ನೆಗಳನ್ನು ಸರ್ಕಾರಕ್ಕೆ ಕೇಳಿರುತ್ತಾರೆ. ಅದರಲ್ಲಿ ಮೊದಲನೆಯದಾಗಿ, ಈ ಯೋಜನೆ ವಿಳಂಬ ಏತಕ್ಕೆ ಆಗಿದೆಯೆಂದು ಪ್ರಶ್ನೆ ಕೇಳಿದ್ದಾರೆ. ಇದರಲ್ಲಿ ಪ್ರಾಮಾಣಿಕವಾಗಿ ವಿಳಂಬವಾಗಿರುವುದೇನೆಂದರೆ, ನಮ್ಮ ಇಲಾಖೆಯಲ್ಲಿ ಇದೊಂದು ಹೊಸ ಕಾರ್ಯಕ್ರಮವಾಗಿರುತ್ತದೆ. ಇಂತಹ ಆಂಬ್ಯುಲೆನ್ಸ್ ಸೇವೆಯನ್ನು ಇದುವರೆವಿಗೂ ನಾವು ಮಾಡಿರುವುದಿಲ್ಲ. ಈ ಆಂಬ್ಯುಲೆನ್ಸ್ ಸೇವೆಯನ್ನು ಯಾವ ರೀತಿ ಮಾಡಬೇಕೆಂದು ತಿಳಿದುಕೊಳ್ಳುವ ಅವಶ್ಯಕತೆ ಇತ್ತು. ಅದರಂತೆ, ಆರೋಗ್ಯ ಇಲಾಖೆಯಲ್ಲಿ ಆಂಬ್ಯುಲೆನ್ಸ್ ಸೇವೆಯನ್ನು ಯಾವ ರೀತಿ ಪ್ರಾರಂಭ ಮಾಡಿದ್ದಾರೆ. ಆ ಆಂಬ್ಯುಲೆನ್ಸ್ ಸೇವೆಯ ರೀತಿ-ನೀತಿಗಳನ್ನು ನಮ್ಮ ಇಲಾಖೆಯಲ್ಲಿ ಯಾವ ರೀತಿ ಜಾರಿಗೆ ತಂದರೆ ನಮಗೆ ಅನುಕೂಲವಾಗುತ್ತದೆ ಎನ್ನುವುದು ಮೊದಲನೆಯ ಕಾರಣ.

ಎರಡನೆಯದಾಗಿ, ಕೋವಿಡ್–19 ಕಾರಣಕ್ಕಾಗಿ ಸುಮಾರು 5 ತಿಂಗಳು ಕಾಲ ನಾವು ಆಂಬ್ಯುಲೆನ್ಸ್ ಸೇವೆ ಪ್ರಾರಂಭ ಮಾಡುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ, ಒಂದು ಕಡೆ ನಮ್ಮ ರಾಜ್ಯದಲ್ಲಿರುವ ಕಾರ್ಮಿಕರನ್ನು ಅವರ ಊರುಗಳಿಗೆ ಕಳುಹಿಸುವಂತಹ ಪ್ರಕ್ರಿಯೆಯಲ್ಲಿದ್ದೆವು. ಮತ್ತೊಂದು ಕಡೆ ಕಾರ್ಖಾನೆಗಳು ಬಂದ್ ಆಗಿರುವಂತಹ ಸನ್ನಿವೇಶಗಳಾಗಿದ್ದವು. ಹಾಗಾಗಿ, ಈ ಯೋಜನೆ ವಿಳಂಬವಾಗಿರುತ್ತದೆ. ಆದರೆ, ಈಗಾಗಲೇ ಈ ಯೋಜನೆಗೆ ಟೆಂಡರ್‌ಗಳನ್ನು ಕಾಲ್ ಫಾರ್ ಮಾಡಿ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟೆಂಡರ್ ಅನ್ನು ಓಪನ್ ಮಾಡುವಂತಹ ಪ್ರಕ್ರಿಯೆ ಆರಂಭವಾಗಿರುತ್ತದೆ. ಈ ಯೋಜನೆಯನ್ನು 10 ಕಡೆ ಪ್ರಾರಂಭ ಮಾಡುತ್ತೇವೆಂದು ಘೋಷಣೆ ಮಾಡಿರುತ್ತವೆ. ಅದರಂತೆ, ಮೊದಲನೆಯ ಬಾರಿಗೆ ಬೆಳಗಾವಿ ಜಿಲ್ಲೆ, ಹುಬ್ಬಳಿ-ಧಾರವಾಢ ಜಿಲ್ಲೆ, ಕಾರವಾರ ಜಿಲ್ಲೆ, ಮಂಗಳೂರು ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಕಲಬುರಗಿ ಜಿಲ್ಲೆ, ಮೈಸೂರು ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಯಲ್ಲಿ 3 ಕಡೆ ಪ್ರಾರಂಭ ಮಾಡುತ್ತಿದ್ದೇವೆ. ಈ ಯೋಜನೆಗೆ ನಾವು ಸುಮಾರು 11 ಕೋಟಿ ರೂಪಾಯಿಯಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ಹಣಕಾಸು ಲಭ್ಯತೆ ಬಗ್ಗೆ ಹೇಳುವುದಾದರೆ, ಹಣಕಾಸು ಕ್ಯಾನ್ಸಲ್ ಆಗುವಂತಹ ಪ್ರಶ್ನೆ ಇರುವುದಿಲ್ಲ. ಇದೊಂದು ಕನ್‌ಸ್ಟ್ರಕ್ಷನ್ ಬೋರ್ಡ್ ಹಣವಾಗಿದ್ದು, ಸರ್ಕಾರದಿಂದ ಯಾವುದೇ ಅನುದಾದಡಿಯಲ್ಲಿ ಪಡೆದು ಮಾಡಿರುವ ಯೋಜನೆ ಆಗಿರುವುದಿಲ್ಲ. ಇದು ಕನ್‌ಸ್ಟ್ರಕ್ಷನ್ ಬೋರ್ಡ್ ಹಣ ಆಗಿರುವುದರಿಂದ, ಈ ಹಣ ಕ್ಯಾನ್ಸಲ್ ಆಗುವಂತಹ ಪ್ರಶ್ನೆ ಇರುವುದಿಲ್ಲ. ಈ ಯೋಜನೆಯಂತೆ ಅತೀ ಶೀಘ್ರದಲ್ಲಿಯೇ ಆಂಬ್ಯುಲೆನ್ಸ್ ಸೇವೆಯನ್ನು ವಿಧಾನಸೌಧದ ಮುಂದೆ ಮಾನ್ಯ ಮುಖ್ಯಮಂತ್ರಿಗಳಿಂದ ಚಾಲನೆ ಕೊಡಿಸುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಅಂದರೆ, ಈ ವರ್ಷದಲ್ಲಿಯೇ ಮಾಡುತ್ತಾರೆಯೇ ಅಥವಾ ಮುಂದಿನ ವರ್ಷದಲ್ಲಿ ಮಾಡುತ್ತಾರೆಯೇ?

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಈ ಆಯವ್ಯಯ ವರ್ಷದಲ್ಲಿಯೇ ಈ ಯೋಜನೆ ಪ್ರಾರಂಭ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 200**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅದರಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಎನ್.ಓ.ಸಿ. ಪಡೆಯಬೇಕು ಎನ್ನುವುದು,.. ಈಗಾಗಲೇ ಬಿ.ಬಿ.ಎಂ.ಪಿ. ಇರಬಹುದು ಅಥವಾ ಜಿಲ್ಲೆಗಳಲ್ಲಿ ನಗರಸಭೆ ಇರಬಹುದು ಅಲ್ಲಿಂದ ಎನ್.ಓ.ಸಿ. ಪಡೆಯುತ್ತಾರೆ. ಆದರೆ, ಸರ್ಕಾರದಿಂದ ಇತ್ತೀಚೆಗೆ ದಿನಾಂಕ:10.11.2020ರಲ್ಲಿ ಒಂದು ಆದೇಶ ಹೊರಡಿಸಿದ್ದು, ಅದರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಎನ್.ಓ.ಸಿ. ಪಡೆಯಬೇಕೆಂದು ಹೇಳಲಾಗಿರುತ್ತದೆ. ಈಗಾಗಲೇ ಕೋವಿಡ್–19 ರೋಗದ ಕಾರಣದಿಂದ ಶಿಕ್ಷಣ ಸಂಸ್ಥೆಗಳು ಬಹಳಷ್ಟು ತೊಂದರೆಯಲ್ಲಿದ್ದಾರೆ. ಎರಡನೆಯದಾಗಿ, ಇಂತಹ ಶಿಕ್ಷಣ ಸಂಸ್ಥೆಗಳು ಬಿ.ಬಿ.ಎಂ.ಪಿ. Structural Engineer ಯಿಂದ ಸರ್ಟಿಫಿಕೇಟ್ ತೆಗೆದುಕೊಂಡ ನಂತರ ಲೋಕೋಪಯೋಗಿ ಇಲಾಖೆಯಿಂದ ಏತಕ್ಕೆ ಎನ್.ಓ.ಸಿ. ಪಡೆಯಬೇಕು? ಆದಾಗ್ಯೂ, ಇದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆಯೆಂದು ಹೇಳುತ್ತಾರೆ. ಆದರೆ, ಈ ಆದೇಶ 2009ರಲ್ಲಿ ಆಗಿರುತ್ತದೆ. ಆದರೆ, ಲೋಕೋಪಯೋಗಿ ಇಲಾಖೆಯಿಂದ injunction. ಏನೆಂದರೆ, ಖಾಸಗಿ ಶಿಕ್ಷಣ ಸಂಸ್ಥೆಯವರು ಅವರ ಬಳಿ ಹೋಗಬೇಕು, ಅವರನ್ನು ಕಾಯಬೇಕು, ಅದಕ್ಕೆ ಅವರಿಗೆ ಹೆಚ್ಚುವರಿ ಶುಲ್ಕ ನೀಡಬೇಕು. ಅಷ್ಟೇ ಅಲ್ಲದೇ, ಲೋಕೋಪಯೋಗಿ ಇಲಾಖೆಯವರು ದುಡ್ಡು ಮಾಡುವುದಕ್ಕೆ ಇದೊಂದು ದಾರಿ ಅಷ್ಟೇ. ಆದಾದ ನಂತರ, ಅಗ್ನಿಶಾಮಕ ಇಲಾಖೆಯಿಂದ ಒಂದು ಬಾರಿ ಎನ್.ಓ.ಸಿ. ಪಡೆದ ನಂತರ ಪ್ರತಿ 2 ವರ್ಷಗಳಿಗೊಮ್ಮೆ ನವೀಕರಿಸಬೇಕೆಂದು ಹೇಳಿದ್ದಾರೆ. ಇದು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಸದರಿ ಎನ್.ಓ.ಸಿ. ಪಡೆಯುವುದು ಸರಿ ಇದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ, ಲೋಕೋಪಯೋಗಿ ಇಲಾಖೆಯಿಂದ ಎನ್.ಓ.ಸಿ. ಪಡೆಯುವುದು ಸರಿಯಿಲ್ಲವೆನ್ನುವುದು ನನ್ನ ಭಾವನೆಯಾಗಿದೆ. ಅಲ್ಲದೇ, ಸರ್ಕಾರವೇ ಒಪ್ಪಿಕೊಂಡಿರುವಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಕಟ್ಟಡ ಸ್ಥಿರತೆಯನ್ನು ಕಂಡುಹಿಡಿಯಲು ಅಗತ್ಯ ಉಪಕರಣ ಮತ್ತು ನುರಿತ Structural Engineer ಕೊರತೆ ಇದ್ದು, ಯಾವುದಾದರೂ ತಾಂತ್ರಿಕ ಸಂಸ್ಥೆಗೆ... ಅಂದರೆ, ಕೊರತೆ ಇದೆಯೆಂದು ಸರ್ಕಾರವೇ ಒಪ್ಪಿಕೊಂಡಿರುತ್ತದೆ. ಆದಾಗ್ಯೂ, ಈ ಕೆಲಸವನ್ನು ಬೇರೆ ಏಜೆನ್ಸಿಯವರಿಗೆ ಕೊಟ್ಟು ಎನ್.ಓ.ಸಿ ಪಡೆಯಬೇಕೆನ್ನುವುದು ಎಷ್ಟರಮಟ್ಟಿಗೆ ಸರಿ ಎಂದು ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಈ ಆದೇಶವನ್ನು ನಮ್ಮ ಸರ್ಕಾರ ಮಾಡಿರುವುದಿಲ್ಲ.

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಖಾಸಗಿ ವಿದ್ಯಾ ಸಂಸ್ಥೆಗಳು ಲೋಕೋಪಯೋಗಿ ಇಲಾಖೆಯಿಂದ ಎನ್.ಓ.ಸಿ. ಪಡೆಯಬೇಕೆಂದು ಮಾನ್ಯ ಸರ್ವೋಚ್ಛ ನ್ಯಾಯಾಲಯ ತನ್ನ ಆದೇಶದಲ್ಲಿ ಹೇಳಿರುತ್ತದೆಯೇ ಎಂಬ ಬಗ್ಗೆ ನನಗೆ ಸ್ಪಷ್ಟೀಕರಣ ನೀಡಿದರೆ ಸಾಕು.

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಗೋವಿಂದರಾಜುರವರೇ, ಒಂದು ನಿಮಿಷ ನಾನು ಉತ್ತರ ನೀಡುತ್ತೇನೆ. ತಮಗೆಲ್ಲಾ ಗೊತ್ತಿರುವಂತೆ, 2004ರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಒಂದು ರಿಟ್ ಪಿಟಿಷನ್ ಫೈಲ್ ಮಾಡಲಾಗಿರುತ್ತದೆ. ಅಂದರೆ, ದಿನಾಂಕ:16.07.2004ರಲ್ಲಿ ತಂಜಾವೂರು ಜಿಲ್ಲೆಯ ಕುಂಭಕೋಣಂ ಎಂಬಲ್ಲಿ ಒಂದು ಶಾಲೆ ಇತ್ತು. ಆ ಶಾಲೆಗೆ ನಾನು ಕೂಡ ಭೇಟಿ ನೀಡಿದ್ದೇನೆ. ಅದರ ಹೆಸರು ಕೃಷ್ಣ ಮಿಡಲ್ ಸ್ಕೂಲ್ ಎಂದು. ಅಲ್ಲಿ ಒಂದೇ ಕಟ್ಟಡದಲ್ಲಿ ಮೂರು ಶಾಲೆಗಳು ನಡೆಯುತ್ತಿದ್ದವು. ಮೊದಲನೆಯದಾಗಿ, Krishna Aided Private School, Saraswathi Nursery and Primary School and Krishna Girls High School. ಈ ಮೂರು ಶಾಲೆಗಳು ಸೇರಿ ಅಲ್ಲಿ ಸುಮಾರು 700 ಮಕ್ಕಳು ಓದುತ್ತಿದ್ದರು. ಆ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ತಯಾರು ಮಾಡುವಂತಹ ಚಟುವಟಿಕೆಯ ಸಂದರ್ಭದಲ್ಲಿ ಶಾಲೆಗೆ ಬೆಂಕಿ ಬಿತ್ತು. ಅದರಲ್ಲಿ 94 ಶಾಲಾ ಮಕ್ಕಳು ಆ ಬೆಂಕಿಯಲ್ಲಿ ಬೆಂದು ಸತ್ತು ಹೋಗಿರುತ್ತಾರೆ. ಆಗ, ಯಾರೋ ಒಬ್ಬರು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಫೈಲ್ ಮಾಡಿರುತ್ತಾರೆ. ಅದನ್ನು ನಾವು ಹಾಕಿರುವುದಿಲ್ಲ. ಆ ರಿಟ್ ಪಿಟಿಷನ್ ಬಹಳ ದೀರ್ಘವಾಗಿ ನಡೆದು, 2009ನೇ ಇಸವಿಯಲ್ಲಿ ಜಡ್ಜ್‌ಮೆಂಟ್ ಬಂದಿರುತ್ತದೆ. ಇವೊತ್ತಿನ ದಿವಸ ನಾವು ಏನೇ ಮಾಡಿದರೂ ಸಹ, ದೇಶದ ಎಲ್ಲಾ ರಾಜ್ಯಗಳು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಪ್ರಕಾರ ಈ ಎರಡು ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಇದರಲ್ಲಿ ನಮ್ಮ ಪಾತ್ರ ಏನು ಇರುವುದಿಲ್ಲ. ಮಾನ್ಯ ಸರ್ವೋಚ್ಛ ನ್ಯಾಯಾಲಯ ತನ್ನ ಆದೇಶದಲ್ಲಿ, ಸರ್ಕಾರದ ಏಜೆನ್ಸಿ ಅಂದರೆ, "ಲೋಕೋಪಯೋಗಿ ಇಲಾಖೆಯವರು ಎನ್.ಓ.ಸಿ. ನೀಡಬೇಕೆಂದು" ಹೇಳಿರುತ್ತದೆ. ಇದು ನಮ್ಮ ಆದೇಶ ಅಲ್ಲ. ಅಷ್ಟೇ ಅಲ್ಲದೇ, "ಅಗ್ನಿಶಾಮಕ ಇಲಾಖೆಯಿಂದಲೂ ಸಹ ಎನ್.ಓ.ಸಿ. ಪಡೆಯಬೇಕೆಂದು" ಹೇಳಲಾಗಿರುತ್ತದೆ. ಇದರಿಂದಾಗಿ, ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಕಷ್ಟ ಆಗುತ್ತಿರುವುದನ್ನು ನೋಡಿ, ನಮ್ಮ ಸರ್ಕಾರದಿಂದ ಎರಡು ವಿನಾಯಿತಿಗಳನ್ನು ನೀಡಿರುತ್ತೇವೆ. ಅದರಲ್ಲಿ ಮೊದಲನೆಯದಾಗಿ, ಲೋಕೋಪಯೋಗಿ ಇಲಾಖೆಯಿಂದ ಪ್ರತಿ ವರ್ಷ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್.ಓ.ಸಿ. ಪಡೆಯಬೇಕೆಂದು ಇರುವುದನ್ನು ನಾವು 5 ವರ್ಷಕ್ಕೊಮ್ಮೆ ಎಂದು ಮಿತಿಗೊಳಿಸಿರುತ್ತೇವೆ. ಎರಡನೆಯದಾಗಿ, ಅಗ್ನಿಶಾಮಕ ಇಲಾಖೆಯಿಂದ ಪ್ರತಿ ವರ್ಷ ಎನ್.ಓ.ಸಿ. ಪಡೆಯಬೇಕೆನ್ನುವುದನ್ನು, 02 ವರ್ಷಗಳಿಗೊಮ್ಮೆ ಎಂದು ಮಿತಿಗೊಳಿಸಿರುತ್ತೇವೆ. ಅಷ್ಟೇ ಅಲ್ಲದೇ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಈ ಎಲ್ಲಾ ಕೆಲಸವನ್ನೂ ನಾವು ಅಗ್ನಿಶಾಮಕ ಇಲಾಖೆಯಿಂದಲೇ ಮಾಡಿಸಿದರೆ,.. ಈಗ ಅನೇಕ ವರ್ಷಗಳಿಂದ ಕೆಲವು ಶಾಲೆಗಳು ನಡೆದುಕೊಂಡು ಬಂದಿರುತ್ತೇವೆ. ಅಲ್ಲಿ ಸೆಟ್‌ಬ್ಯಾಕ್‌ಗಳನ್ನು ಬಿಡುವುದಕ್ಕೆ ಆಗುವುದಿಲ್ಲ.

**(ಮುಂದು)**

**(37) 01.02.2021 12.50 ವೈಎಲ್-ಆರ್‌ಎನ್**

**ಶ್ರೀ ಎಸ್.ಸುರೇಶ್ ಕುಮಾರ್(ಮುಂದು):-**

ಅದಕ್ಕಾಗಿ ಎನ್.ಓ.ಸಿ ಬದಲು ಸಮಾಪನಾ ಪ್ರಮಾಣಪತ್ರವನ್ನು ಮಾಡಿಸುತ್ತಿದ್ದೇವೆ. ಅಗ್ನಿಶಾಮಕ ಬಂದರೆ ಏನೇನು measures ತೆಗೆದುಕೊಳ್ಳಬೇಕೆಂಬುದನ್ನು ಸಹ ಅವರು ಹೇಳುತ್ತಾರೆ. ಅದನ್ನು ಕಾರ್ಯರೂಪಕ್ಕೆ ತರಬೇಕು. ಇದಕ್ಕೂ ಶಿಕ್ಷಣ ಇಲಾಖೆಗೂ ನೇರವಾಗಿ ಯಾವುದೇ ಸಂಬಂಧ ಇರುವುದಿಲ್ಲ. We are only an implementing agency. ಸರ್ವೋಚ್ಚ ನ್ಯಾಯಾಲಯಕ್ಕೆ ವಿರುದ್ಧವಾಗಿ ನಾವು ಹೋಗಲು ಆಗುವುದಿಲ್ಲ. ಆದರೂ ಸಹ ನಾವು ಈ ಶಾಲೆಗಳು ಅನುಭವಿಸುತ್ತಿರುವ ಕೆಲವು ಅಡೆತಡೆಗಳು ಮತ್ತು ಕಷ್ಟಗಳಿವೆ, ಅದನ್ನು ನಿವಾರಿಸಲು ಕ್ರಮ ವಹಿಸುತ್ತೇವೆ.

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದಕ್ಕೆ ಇಚ್ಛಿಸುವುದೇನೆಂದರೆ, ಅವರು ಸರ್ವೋಚ್ಚ ನ್ಯಾಯಾಲಯ ಹೊರಡಿಸಿರುವ ಆದೇಶವನ್ನು ಪಾಲನೆ ಮಾಡುತ್ತಿರುವುದು ಸರಿಯಿದೆ. ಅದರ ಬಗ್ಗೆ ಎರಡನೇ ಮಾತಿಲ್ಲ. ಆದರೆ, ಕೇವಲ ಖಾಸಗಿ ಶಾಲಾ-ಕಾಲೇಜುಗಳಿಗೆ ಅನ್ವಯಿಸುವಂತೆ ಮಾಡಿದ್ದು, ಸರ್ಕಾರಿ ಶಾಲೆಗಳಿಗೆ ಏತಕ್ಕೆ ಇದು ಅನ್ವಯಿಸುವುದಿಲ್ಲ?

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಆರ್.ಟಿ.ಇ. ಕಾಯ್ದೆಯಲ್ಲಿಯೇ ಸರ್ಕಾರಿ ಕಟ್ಟಡಗಳನ್ನು ಹೊರತುಪಡಿಸಿ, ಮಾಡಬೇಕೆಂದು ಇದೆ. ಜೊತೆಗೆ ಸರ್ವೋಚ್ಚ ನ್ಯಾಯಾಲಯವು ಸಹ ಆದೇಶ ಹೊರಡಿಸಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಸರ್ಕಾರಿ ಮಕ್ಕಳಿಗೆ ಏನೇ ಸಮಸ್ಯೆಯಾದರೂ ಪರವಾಗಿಲ್ಲವೇ?

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ಒಂದು ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ಸರ್ಕಾರಿ ಶಾಲೆಗಳನ್ನು ಲೋಕೋಪಯೋಗಿ ಇಲಾಖೆಯವರೇ ನಿರ್ಮಾಣ ಮಾಡುವುದು. ಅವರು ಎನ್.ಬಿ.ಸಿ (ನ್ಯಾಷನಲ್ ಬಿಲ್ಡಿಂಗ್ ಕೋಡ್) ಏನಿದೆ, ಅದರ ಪ್ರಕಾರ ಸರ್ಕಾರಿ ಶಾಲೆಗಳನ್ನು ನಿರ್ಮಾಣ ಮಾಡುತ್ತಾರೆ. ಅದರ ಪ್ರಕಾರವೇ ಛಾವಣಿ ಹಾಕಬೇಕು. ಆದರೆ, ಖಾಸಗಿ ಶಾಲೆಗಳಲ್ಲಿ ಆ ರೀತಿ ಮಾಡದೇ ಇರುವುದರಿಂದ ಈ ಪರಿಸ್ಥಿತಿ ಆಗಿರುವುದು. ಹಾಗೆಯೇ ಸರ್ವೋಚ್ಚ ನ್ಯಾಯಾಲಯದಲ್ಲಿ ಸರ್ಕಾರೇತರ ಶಾಲೆಗಳಿಗೂ ಮಾಡಬೇಕೆಂದು ಆದೇಶ ಹೊರಡಿಸಿದ್ದು, ಅದನ್ನು ಸಹ ಕಾರ್ಯಗತ ಮಾಡುತ್ತಿದ್ದೇವೆ. ಮಾನ್ಯ ಗೋವಿಂದರಾಜ್‌ರವರು ನನಗೆ ಒಂದು ಸಹಾಯ ಮಾಡಬಹುದು. ಅದೇನೆಂದರೆ, ಸರ್ಕಾರಿ ಶಾಲೆಗಳನ್ನು ಸೇರಿಸಿ ಎಂದು ಆದೇಶವನ್ನೂ ಹೊರಡಿಸಿದರೆ ಅದರ ಪ್ರಕಾರವೇ ನಾವು ಮಾಡಿಸುತ್ತೇವೆ.

**ಶ್ರೀ ಕೆ.ಗೋವಿಂದರಾಜು:-** ಆಯಿತು. ನನ್ನ ಒಂದು ಸಲಹೆಯೇನೆಂದರೆ, ಸರ್ಕಾರದಿಂದಲೇ ಒಂದು ಪ್ರಾಧಿಕಾರವನ್ನು ನಿರ್ಮಾಣ ಮಾಡಿ, under one umbrella ಎಲ್ಲಾ ಏಜೆನ್ಸಿಗೂ ಲೈಸೆನ್ಸ್ ನೀಡಿದರೆ ಈ ಸಮಸ್ಯೆಯನ್ನು ತಪ್ಪಿಸಬಹುದು.

**ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರು ಸಾಕಷ್ಟು ಸಲ ಉತ್ತರವನ್ನು ನೀಡಿದ್ದಾರೆ. ಹಾಗೆಯೇ ನಾವು ಸಹ ಸಾಕಷ್ಟು ಸಲ ಮಾನ್ಯ ಸಚಿವರಿಗೆ ಈ ವಿಷಯವಾಗಿ ಮನವಿ ಮಾಡಿದ್ದೇವೆ. ಈಗಾಗಲೇ ಮಾನ್ಯ ಸಚಿವರು ರಿಟ್ ಪಿಟಿಷನ್ ಬಗ್ಗೆ ತಿಳಿಸಿದ್ದು, ನನ್ನ ಮನವಿ ಏನೆಂದರೆ, ಲೋಕೋಪಯೋಗಿ ಇಲಾಖೆಯ ಪ್ರಮಾಣ ಪತ್ರ ಅಥವಾ ಅಗ್ನಿಶಾಮಕ ಪ್ರಮಾಣ ಪತ್ರಕ್ಕೆ ಪಡೆದಿರುವುದಕ್ಕೆ ಸಂಬಂಧಿಸಿದಂತೆ ಒಂದು ವರ್ಷಕ್ಕೆ ಮಾಡಿರುವ ಪ್ರಮಾಣಪತ್ರವನ್ನು ಎರಡು ವರ್ಷಕ್ಕೆ ಹೊರಡಿಸಿದ್ದೇನೆ, ಎರಡು ವರ್ಷಕ್ಕೆ ಇರುವ ಪ್ರಮಾಣ ಪತ್ರವನ್ನು ಐದು ವರ್ಷಕ್ಕೆ ಮಾಡಿಸಿದ್ದೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಖಾಸಗಿ ಶಾಲೆಗಳು ಯಾವ ರೀತಿ ಪರಿತಪಿಸುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಯಾವುದಾದರೂ ಒಂದು ಕಟ್ಟಡ ನಿರ್ಮಾಣ ಮಾಡಲು ಒಂದು ಸಲ ಎನ್.ಓ.ಸಿ. ತೆಗೆದುಕೊಂಡ ನಂತರ ಮತ್ತೆ ಅದೇ ಕಟ್ಟಡದಲ್ಲಿ ಎಕ್ಸ್‌ಟ್ರಾ ಒಂದು ಫ್ಲೋರ್ ಕಟ್ಟಡ ನಿರ್ಮಿಸಿದರೆ ಅಥವಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆ ಏನಾದರೂ ಬದಲಾವಣೆ ಆದಲ್ಲಿ ಮಾತ್ರ ಎನ್.ಓ.ಸಿ. ಪಡೆದುಕೊಳ್ಳಲಿ. ಅದು ಬಿಟ್ಟು ಎರಡು ವರ್ಷಕ್ಕೊಮ್ಮೆ ಏತಕ್ಕೆ ಎನ್.ಓ.ಸಿ. ಪಡೆದುಕೊಳ್ಳಬೇಕು?

**ಉಪ ಸಭಾಪತಿಯವರು:–** ಇದು ಚರ್ಚೆ ಮಾಡುವ ಸಮಯವಲ್ಲ. ಇದು ಪ್ರಶ್ನೆಗಳನ್ನು ಕೇಳುವ ಸಮಯವಾಗಿದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಎಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸಲಾಗುತ್ತಿದೆ ಎಂಬುದು ಸದಸ್ಯರೆಲ್ಲರ ಪ್ರಶ್ನೆಯಾಗಿದ್ದು, ಇದಕ್ಕೆ ಮಾನ್ಯ ಸಚಿವರು ಕೂಲಂಕಷವಾಗಿ ಬೆಳಕನ್ನು ಚೆಲ್ಲಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಿ.ಎಂ.ಇಬ್ರಾಹಿಂರವರೇ, ಒಂದು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಸರ್ಕಾರಿ ಶಾಲೆಗಳನ್ನು ಮಾಡಬೇಕೆಂದರೆ ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಿ ಎಂದು ಹೇಳಿದರು. ಆದರೆ, ಸರ್ಕಾರಿ ಶಾಲೆಗಳನ್ನು ಸಹ ಒಳಪಡಿಸಬೇಕು. ಏಕೆಂದರೆ, ಲೋಕೋಪಯೋಗಿ ಇಲಾಖೆಯವರೇ ಕಟ್ಟಡವನ್ನು ನಿರ್ಮಾಣ ಮಾಡಿರಬಹುದು. ಆದರೆ, ಇವತ್ತಿಗೂ 60, 70, 80, 100 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಶಾಲೆಗಳಿದ್ದು, ಈ ರೀತಿಯ ಯಾವುದೇ ನಿಯಮ ಅಸ್ತಿತ್ವದಲ್ಲಿರಲಿಲ್ಲ. ಉದಾಹರಣೆಗೆ ನಾವು ವಿದ್ಯಾಭ್ಯಾಸ ಹೊಂದಿರುವ ಶಾಲೆಗಳಿದ್ದು, ಶಿವಮೊಗ್ಗ, ಭದ್ರಾವತಿ ಜಿಲ್ಲೆಗಳಲ್ಲಿ ಈ ರೀತಿಯ ಯಾವುದೇ ನಾರ್ಮ್ಸ್ ಮಾಡಲಿಲ್ಲ. ಮೊದಲನೆಯದಾಗಿ, ವಿವಿಧ ರೀತಿಯ ಏಜೆನ್ಸಿಗಳನ್ನು ತೆರೆಯುವುದಕ್ಕಿಂತ single window ಮಾಡಿ. ಎರಡನೆಯದಾಗಿ, 7 ದಿವಸಗಳಲ್ಲಿ ಅರ್ಜಿ ನೀಡಿದರೆ, ಎನ್.ಓ.ಸಿ.ಯನ್ನು 7 ದಿವಸಗಳೊಳಗೆ ನೀಡಬೇಕೆಂದು ಸಮಯವನ್ನು ನಿಗದಿ ಮಾಡಿ.

**ಶ್ರೀ ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಅವರು ಒಪ್ಪದೇ ಇದ್ದರೆ, deemed ಲೈಸೆನ್ಸ್ ಎಂದು ನೀಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಕೆಲವು ಸಲ ಏನಾಗುತ್ತದೆ ಎಂದರೆ; "Apply, apply, No reply" ಎನ್ನುವ ರೀತಿ ಆಗುತ್ತದೆ. ಆ ರೀತಿ ಆಗಬಾರದು. ಎಲ್ಲದಕ್ಕೂ ಒಂದು yardstick ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಲೋಕೋಪಯೋಗಿ ಇಲಾಖೆಯಾಗಲಿ, ಯಾವುದೇ ಇಲಾಖೆಯಾಗಲಿ ಲೂಟಿ ಮಾಡುವುದಕ್ಕಾಗಿ ಈ ಯೋಜನೆಯನ್ನು ತರಲಾಗಿದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದ್ದು, ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಬಗ್ಗೆ ವೈಯಕ್ತಿಕವಾಗಿ ನನಗೆ ಗೊತ್ತಿದೆ. ಒಳ್ಳೆಯ ಕೆಲಸ ಮಾಡಬೇಕೆಂದು ಮಾನ್ಯ ಸಚಿವರು ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದಾರೆ. ಅವರು ಯಾವ ಪಕ್ಷ, ಯಾವ ಪಂಗಡ ಎಂಬುದು ನನಗೆ ಅವಶ್ಯಕತೆ ಇಲ್ಲ. Of course, we have satisfied regarding how you are doing the work. ಇದಕ್ಕೆ 7 ದಿವಸಗಳು, 10 ದಿವಸಗಳು ಎಂದು ಸಮಯವನ್ನು ನಿಗದಿ ಮಾಡಿಕೊಳ್ಳಬೇಕು ಹಾಗೂ ಎಲ್ಲಾ ಮಕ್ಕಳಿಗೂ ಒಂದು yardstick fix ಮಾಡಿ. ಸುಮಾರು 50, 100, 700, 800 ಮೀಟರ್ ವಿಸ್ತೀರ್ಣವುಳ್ಳ ಆಟದ ಮೈದಾನವನ್ನು ತೆರೆಯಬೇಕು. ಏಕೆಂದರೆ, ಬೆಂಗಳೂರು ನಗರದಲ್ಲಿ ಎಲ್ಲಿಯೂ ಆಟದ ಮೈದಾನ ಇಲ್ಲದಂತಾಗಿದ್ದು, ಮಕ್ಕಳಿಗೂ ಉಸಿರು ಕಟ್ಟಿದಂತೆ ಆಗುತ್ತಿದ್ದು, ಇದಕ್ಕೆ ಏನಾದರೂ ಒಂದು ಪ್ರಾವಿಷನ್ ಮಾಡಬೇಕು. ಶಿಕ್ಷಣ ಇಲಾಖೆಯು oldest ಇಲಾಖೆಯಾಗಿದ್ದು, ದಯವಿಟ್ಟು ಮಾನ್ಯ ಸಚಿವರು ಎಷ್ಟು ದಿವಸ ಶಿಕ್ಷಣ ಇಲಾಖೆಯಲ್ಲಿಯೇ ಇರುತ್ತಾರೆಯೋ ಗೊತ್ತಿಲ್ಲ. ಇರುವಷ್ಟು ದಿವಸಗಳವರೆಗಾದರೂ ಒಳ್ಳೆಯ ಕೆಲಸ ಮಾಡಿ ಹೋಗಲಿ ಎಂದು ಅವರಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಅಗ್ನಿಶಾಮಕದವರಿಂದ ನೀಡುವ ಪ್ರಮಾಣ ಪತ್ರದ 2 ವರ್ಷಗಳಿಗೆ ಇರುವ ಅವಧಿಯನ್ನು 5 ವರ್ಷಗಳಿಗೆ ಮಾಡಲಿ. ಜೊತೆಗೆ ಪ್ರಾಧಿಕಾರ ರಚನೆ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರು one umbrella ಕೆಳಗೆ ಇದನ್ನೆಲ್ಲ ತರಬೇಕೆಂದು ಹೇಳಿದ್ದು, ಅದನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ರಮೇಶ್ ಗೌಡರವರೇ, ತಮಗೆ ಒಂದು ಮಾತು ಹೇಳುವುದೇನೆಂದರೆ, ಇದು ನನ್ನ ಕಾಲದಲ್ಲಿ ಆಗಿರುವುದಲ್ಲ, 2018ನೇ ಸಾಲಿನಲ್ಲಿ ಈ ಪಾಲಿಸಿ ಜಾರಿಗೆ ಬಂದಿತ್ತು. 2019ನೇ ಸಾಲಿನಲ್ಲಿ ಒಂದು ಸರ್ಕಾರಿ ಆದೇಶ ಜಾರಿಯಾಗಿತ್ತು. ನಾವು ಸಡಿಲಿಕೆ ಮಾಡಿ, 2020ನೇ ಸಾಲಿನಲ್ಲಿ ಜಾರಿ ಮಾಡಿದ್ದೇವೆ. ಆದರೂ ಮಾನ್ಯ ಗೋವಿಂದರಾಜುರವರು ಹೇಳಿರುವ ಬಗ್ಗೆ ನಾನು ಮತ್ತೊಮ್ಮೆ ಅವರ ಜೊತೆ ಚರ್ಚೆ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದು, ಅವರು ಮಾತನಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರದು ಮತ್ತು ನನ್ನದು ಒಂದೇ ಪ್ರಶ್ನೆ. ಹಾಗಾಗಿ ಎರಡೂ ಪ್ರಶ್ನೆ ಒಂದೇ ಆಗಿರುವಾಗ ಎರಡೂ ಪ್ರಶ್ನೆಯನ್ನು ಜಂಟಿ ಮಾಡಿ ಮಾನ್ಯ ಸಚಿವರು ಉತ್ತರ ನೀಡಬೇಕಾಗಿತ್ತು.

**ಶ್ರೀ ಎಸ್.ಸುರೇಶ ಕುಮಾರ್:-** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಮಾನ್ಯ ಸಭಾಪತಿಯವರು ತಮ್ಮ ಹೆಸರನ್ನು ಕರೆದರೆ ನಾನು ಏನು ಮಾಡುವುದಕ್ಕಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಹೌದು. ಪ್ರಶ್ನೆ ಒಂದೇ ಆಗಿರುವಾಗ ಎರಡೂ ಪ್ರಶ್ನೆಯನ್ನು ಒಟ್ಟುಗೂಡಿಸಿದರೆ ಸರಿಯಾಗುತ್ತಿತ್ತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಒಂದು ಪ್ರಶ್ನೆಯನ್ನು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಹಾಗಾಗಿ ಅದನ್ನು ಇದರೊಳಗೆ ಸೇರಿಸಬಹುದಾಗಿತ್ತು!

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಮ್ಮ ಪ್ರಶ್ನೆಗೆ ಉತ್ತರ ನೀಡಲಿ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಉತ್ತರ ನೀಡಿದ್ದೇನೆ. 1995 ರಿಂದ 2000ನೇ ಸಾಲಿನೊಳಗಿನ ಶಾಲೆಗಳನ್ನು ಅನುದಾನಿತ ಶಾಲೆಗಳ ಅಡಿ ತರಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ. ಈ ಸಂಬಂಧ ಈಗಾಗಲೇ ಆರ್ಥಿಕ ಇಲಾಖೆಯವರೊಂದಿಗೆ ಚರ್ಚೆ ಮಾಡಿದ್ದೇವೆ. ಈ ಸಾಲಿನ ಬಜೆಟ್‌ನಲ್ಲಿಯು ಸಹ ಏನು ಅಂಶವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿಸಲಾಗಿದೆ ಎಂಬುದನ್ನು ನೋಡಿ, ಮುಂದಿನ ಪ್ರಯತ್ನ ಮಾಡಲಾಗುತ್ತದೆ. ಬಹುತೇಕವಾಗಿ ತಾಂತ್ರಿಕ ಮಟ್ಟ ಮುಟ್ಟಲು ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 173**

**ಉಪ ಸಭಾಪತಿಯವರು:–** ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರ ಪ್ರಶ್ನೆ ಸಂಖ್ಯೆ 173ಕ್ಕೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೋರಿರುತ್ತಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಏತಕ್ಕೆ ಕಾಲಾವಕಾಶ ಕೇಳಿದ್ದಾರೆ ಗೊತ್ತಾಗುತ್ತಿಲ್ಲ. ಅಧಿವೇಶನ ಮುಗಿಯುವುದರೊಳಗೆ ಉತ್ತರ ನೀಡಿದರೆ ಒಳ್ಳೆಯದು.

**ಶ್ರೀ ಎಸ್.ಸುರೇಶ ಕುಮಾರ್:–** ಮಾನ್ಯ ಸಭಾಪತಿಯವರೇ, ಇನ್ನೂ ಸಹ ಚರ್ಚೆ ಹಂತದಲ್ಲಿದ್ದೇವೆ. ಮುಂದಿನ ಸಲ ಉತ್ತರ ನೀಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿಲ್ಲದ ಸಮೂಹ-1 ರ ಒಟ್ಟು 108 ಪ್ರಶ್ನೆಗಳ ಪೈಕಿ 53 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಉಪ ಸಭಾಪತಿಯವರು:** ಮಂಡಿಸಲಾಯಿತು.

ದಿನಾಂಕ 01ನೇ ಫೆಬ್ರವರಿ 2021 ರಂದು ಲಿಖಿತ ಮೂಲಕ ಉತ್ತರಿಸಬೇಕಾದ 108 ಪ್ರಶ್ನೆಗಳಲ್ಲಿ ಕೇವಲ 53 ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಆದಷ್ಟು ಶೀಘ್ರವಾಗಿ ಉತ್ತರಗಳನ್ನು ಸಲ್ಲಿಸುವಂಥ ಕೆಲಸವನ್ನು ಸಭಾನಾಯಕರು ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:- ಹಾವೇರಿ ಜಿಲ್ಲೆ, ಶಿಗ್ಗಾವಿ ತಾಲ್ಲೂಕಿನಲ್ಲಿ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯನ್ನು ಪ್ರತಿಷ್ಠಾಪನೆ ಮಾಡಲು ಸ್ಥಳ ಮಂಜೂರಾತಿ ಬಗ್ಗೆ.**

– – –

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) (ಶ್ರೀ ಶ್ರೀನಿವಾಸ ವಿ ಮಾನೆಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಸಂವಿಧಾನ ಶಿಲ್ಪಿ ಭಾರತರತ್ನ ಮಹಾನ್ ಮಾನವತಾವಾದಿ ಡಾ॥ ಬಾಬಾಸಾಹೇಬ ಬಿ.ಆರ್.ಅಂಬೇಡ್ಕರ್ ಪುತ್ಥಳಿ ಹೋರಾಟ ಸಮಿತಿ ಶಿಗ್ಗಾವಿ ತಾ: ಶಿಗ್ಗಾವಿ, ಜಿಲ್ಲೆ ಹಾವೇರಿ ಇವರು ಶಿಗ್ಗಾವಿ ನಗರದಲ್ಲಿ ಡಾ॥ ಬಾಬಾಸಾಹೇಬ ಆರ್.ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಸ್ಥಳವನ್ನು ಮಂಜೂರಾತಿಯನ್ನು ಮಾಡುವಂತೆ ಕೋರಿ ಕಳೆದ 20 ವರ್ಷಗಳಿಂದ ಹೋರಾಟವನ್ನು ಮಾಡುತ್ತಿದ್ದಾರೆ. ಆದರೆ, ಈವರೆಗೂ ಜಿಲ್ಲಾಡಳಿತವಾಗಲಿ ಮಾನ್ಯ ಸರಕಾರವಾಗಲಿ ಇವರ ಬೇಡಿಕೆಯನ್ನು ಆಲಿಸದೇ ನಿರ್ಲಕ್ಷ್ಯವನ್ನು ತೋರಿ ಸಂವಿಧಾನ ಶಿಲ್ಪಿ ಭಾರತರತ್ನ ಡಾ॥ ಬಾಬಾಸಾಹೇಬ ಬಿ.ಆರ್.ಅಂಬೇಡ್ಕರ್‌ರವರಿಗೆ ಅವಮಾನವನ್ನು ಮಾಡಿರುತ್ತಾರೆ. ಆದ್ದರಿಂದ ಸರಕಾರವು ಕೂಡಲೇ ಎಚ್ಚೆತ್ತುಕೊಂಡು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಶೀಘ್ರವೇ ಒಂದು ಸೂಕ್ತ ಸ್ಥಳವನ್ನು ಗುರುತಿಸಿ ಸಂವಿಧಾನ ಶಿಲ್ಪಿ ಭಾರತರತ್ನ ಮಹಾನ್ ಮಾನವತಾವಾದಿ ಡಾ॥ ಬಾಬಾಸಾಹೇಬ ಬಿ.ಆರ್.ಅಂಬೇಡ್ಕರ್ ಪುತ್ಥಳಿ ಪ್ರತಿಷ್ಠಾಪನೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಭಾರತರತ್ನ ಡಾ॥ ಬಾಬಾಸಾಹೇಬ್ ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ, ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರಿಂದ ಉತ್ತರ ತರಿಸಿ ಒದಗಿಸಲಾಗುವುದು.

**ಆ) ವಿಷಯ:- ಕಲ್ಯಾಣ ಕರ್ನಾಟಕದ ತೊಗರಿ ಬೆಳೆಗೆ ಬೆಂಬಲ ಬೆಲೆ ನಿಗದಿ ಮಾಡುವ ಬಗ್ಗೆ.**

– – –

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಶ್ರೀನಿವಾಸ ವಿ ಮಾನೆಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಸರ್ಕಾರದ ಬೆಂಬಲ ಬೆಲೆಯಡಿ ತೊಗರಿ ಖರೀದಿ ಪ್ರಕ್ರಿಯೆ ಪ್ರಾರಂಭವಾಗಿ 20 ದಿನಗಳು ಕಳೆದರೂ ಒಂದು ಕ್ವಿಂಟಾಲ್ ತೊಗರಿ ಮಾರಾಟವಾಗಿರುವುದಿಲ್ಲ. ಬೆಂಬಲ ಬೆಲೆಗಿಂತ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರುಕಟ್ಟೆಯಲ್ಲಿ ತೊಗರಿ ದರ ಹೆಚ್ಚಿಗೆ ಇರುವುದರಿಂದ ರೈತರು ಸರ್ಕಾರದ ಖರೀದಿ ಕೇಂದ್ರಗಳಿಗೆ ಬರುತ್ತಿಲ್ಲ. ಬೀದರ್ ಜಿಲ್ಲೆಯಲ್ಲಿ 126 ತೊಗರಿ ಖರೀದಿ ಕೇಂದ್ರಗಳನ್ನು ಆರಂಭಿಸಲಾಗಿದೆ. ಈವರೆಗೆ ತೊಗರಿ ಮಾರಾಟ ಮಾಡಲು 20 ಸಾವಿರಕ್ಕೂ ಅಧಿಕ ರೈತರು ನೋಂದಣಿ ಮಾಡಿಕೊಂಡರೂ ಒಬ್ಬ ರೈತನೂ ಖರೀದಿ ಕೇಂದ್ರಗಳಿಗೆ ಬರುತ್ತಿಲ್ಲ. ಆ ವರ್ಷ ಅತಿವೃಷ್ಟಿಯಿಂದ ತೊಗರಿ ಬೆಳೆ ನಾಶವಾಗಿ ಇಳುವರಿ ಕಡಿಮೆಯಾಗಿದೆ. ಸರ್ಕಾರವು ಪ್ರಸ್ತುತ ಬೆಂಬಲ ಬೆಲೆಯಡಿ ಪ್ರತಿ ಕ್ವಿಂಟಾಲ್‌ಗೆ ರೂ.6,000/-ಗಳನ್ನು ನೀಡುತ್ತಿದ್ದು, ಹಿಂದಿನಂತೆ ರೈತರಿಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನ ಘೋಷಣೆಯಾಗಿರುವುದಿಲ್ಲ. ಕೂಡಲೇ ನಿಗದಿಪಡಿಸಿದ ದರದ ಜೊತೆಗೆ ಸರ್ಕಾರವು ರೂ.8,000/- ಬೆಂಬಲ ಬೆಲೆ ನಿಗದಿ ಮಾಡಬೇಕು ಹಾಗೂ ತೊಗರಿ ಖರೀದಿ ಪ್ರಕ್ರಿಯೆಗೆ ಸಮಯ ನಿಗದಿ ಮಾಡಬಾರದು ಎಂದು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತೊಗರಿ ಬೆಳೆ ಖರೀದಿಗೆ ಸಂಬಂಧಿಸಿದಂತೆ, ಮಾನ್ಯ ಸಹಕಾರ ಸಚಿವರಿಂದ ಉತ್ತರ ತರಿಸಿ ಒದಗಿಸಲಾಗುವುದು.

**(ಮುಂದು)**

**(38)01.02.2021/1.00/ಎಸ್‌ಕೆ-ಬಿಎನ್‌ಎಸ್**

**ಇ)ವಿಷಯ:- ಸಿ.ಆರ್.ಪಿ.ಎಫ್. ಹುತಾತ್ಮ ಯೋಧಉದಯಕುಮಾರ್‌ನ ಪತ್ನಿ ರೇಖಿರವರಿಗೆ ಅವರ ಮನೆ ಬಾಡಿಗೆದಾರರು ವಂಚಿಸಿರುವ ಬಗ್ಗೆ.**

---

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್ (ಸಿ.ಆರ್.ಪಿ.ಎಫ್)ನಲ್ಲಿ ಸೇವೆ ಸಲ್ಲಿಸುತ್ತಿದ್ದ, ಹುತಾತ್ಮ ಯೋಧ ಉದಯಕುಮಾರ್ ಅವರ ಪತ್ನಿ ರೇಖಿ ಗುರು ಚಿಕಿತ್ಸೆ ನೆಪದಲ್ಲಿ ಬಾಡಿಗೆದಾರರಾದ ಶ್ರೀ ಸುನಿಲ್ ಕುಮಾರ್-ಮಮತಾ ದಂಪತಿ ಬಾಡಿಗೆ ಕರಾರು ಪತ್ರ ಮಾಡಿಸುವ ನೆಪದಲ್ಲಿ ಮೊದಲನೇ ಮಹಡಿಯ ಹಕ್ಕನ್ನು ತಮ್ಮ ಹೆಸರಿಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಣಿ ಮಾಡಿಸಿಕೊಂಡು ವಸಂತಿಯವರ (ಹುತಾತ್ಮ ಯೋಧನ ಪತ್ನಿ) ಅನಾರೋಗ್ಯವನ್ನು ಮುಂದಿಟ್ಟು ಅವರಿಂದ ಹಣ ಮತ್ತು ಚಿನ್ನವನ್ನು ದೋಚಿದ್ದು ಮಾತ್ರವಲ್ಲದೇ ಅಮಾಯಕ ಯೋಧನ ಪತ್ನಿಯನ್ನು ವಂಚಿಸಿರುತ್ತಾರೆ. ಈ ಕುರಿತು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಹತ್ತಿರ ದೂರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಾಖಲಾಗಿದ್ದು, ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ. ಈ ವಿಚಾರವು ಪತ್ರಿಕಾ ಮಾಧ್ಯಮದಲ್ಲಿ ಸುದ್ದಿಯಾಗಿದೆ. ಈ ಬಗ್ಗೆ ಗೃಹ ಸಚಿವರ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ ಮಾನ್ಯ ಸದಸ್ಯರಾದ ಶ್ರೀ ಕೆ. ಹರೀಶ್‌ಕುಮಾರ್‌ರವರು ಹುತಾತ್ಮ ಯೋಧ ಉದಯಕುಮಾರ್ ಅವರ ಪತ್ನಿ ರೇಖಿರವರಿಗೆ ಅವರ ಮನೆ ಬಾಡಿಗೆದಾರರು ವಂಚಿಸಿರುವ ಬಗ್ಗೆ ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮಾನ್ಯ ಗೃಹ ಸಚಿವರಿಂದ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು, ಅವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಈ) ವಿಷಯ:–ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಲೋಂಡಾ–ಗೋವಾ ರಾಷ್ಟ್ರೀಯ ಹೆದ್ದಾರಿಯನ್ನು ದುರಸ್ಥಿಪಡಿಸುವ ಕುರಿತು**

---

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಲೋಂಡಾ–ಗೋವಾ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ಪರಿಸರವಾದಿಗಳು "ಲೋಂಡಾ–ಗೋವಾ ರಾಷ್ಟ್ರೀಯ ಹೆದ್ದಾರಿ" ನಿರ್ಮಿಸಲು ತಕರಾರು ತೆಗೆದ ಹಿನ್ನಲೆಯಲ್ಲಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಆದರೆ ಕಾಮಗಾರಿ ಆರಂಭಿಸಿ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸಲು ಖಾನಾಪೂರದಿಂದ ಲೋಂಡಾವರೆಗಿನ ರಸ್ತೆಯನ್ನು ಹಾಳು ಮಾಡಲಾಗಿದೆ. ಈಗ ಪರಿಸ್ಥಿತಿ ಹೇಗಿದೆಯೆಂದರೆ ಈ ಕಡೆ ಕಾಮಗಾರಿಯೂ ನಡೆಯುತ್ತಿಲ್ಲ, ಇನ್ನೊಂದು ಕಡೆ ಸಾರ್ವಜನಿಕ ರಸ್ತೆಯೂ ತೀರಾ ಹದಗೆಟ್ಟಿದೆ. ಆದ್ದರಿಂದ ಖಾನಾಪುರಕ್ಕೆ ಬರುವ ಹಾಗೂ ಹೋಗುವ ಈ ಭಾಗದ ಪಶ್ಚಿಮ ಘಟ್ಟ ಪ್ರದೇಶದ ಹಳ್ಳಿಗಳ ಸಾರ್ವಜನಿಕರಿಗೆ ತಾಲೂಕಿನ ಸಂಪರ್ಕವೇ ಕಡಿದು ಹೋಗಿದೆ. ಹೀಗೆ ಸುಮಾರು 30ಕ್ಕೂ ಹೆಚ್ಚು ಹಳ್ಳಿಗಳಿಂದ ತಾಲೂಕು ಕೇಂದ್ರಕ್ಕೆ ಬರಲು ಸಾರ್ವಜನಿಕರು ಸುತ್ತಿ ಬಳಸಿ ಬರಲು ತಂಬಾ ಕಷ್ಟಪಡುತ್ತಿದ್ದಾರೆ.

ಆದ್ದರಿಂದ ಸದರಿ ರಸ್ತೆಯ ದುರ್ವ್ಯವಸ್ಥೆಯ ಬಗ್ಗೆ, ಈ ಭಾಗದ ಜನರ ಗೋಳಿನ ಸಾರ್ವಜನಿಕ ರಸ್ತೆಯ ಗಂಭೀರ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ ಮಾನ್ಯ ಸದಸ್ಯರಾದ ಶ್ರೀ ಮಹಾಂತೇಶ ಮ. ಕವಟಗಿಮಠರವರು ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಲೋಂಡಾ–ಗೋವಾ ರಾಷ್ಟ್ರೀಯ ಹೆದ್ದಾರಿಯನ್ನು ದುರಸ್ಥಿಪಡಿಸುವ ಬಗ್ಗೆ ಶೂನ್ಯ ವೇಳೆಯಲ್ಲಿ ಸರ್ಕಾರದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನಕ್ಕೆ ತಂದಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆಂದು ಹೇಳಬಯಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**ಸಭಾಪತಿಯವರು:– ಈಗ** ನಿಯಮ 68 ರ ಮೇಲೆ ಚರ್ಚೆ.

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಮಾನ್ಯ ಸಚಿವರು ಮತ್ತು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಇಲ್ಲ. ಈ ನಿಲುವಳಿ ಸೂಚನೆಯು ಮಹತ್ವದ ವಿಚಾರವಾಗಿದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಪ್ರಾರಂಭ ಮಾಡಲಿ. ತಕ್ಷಣವೇ ಮಾನ್ಯ ಮಂತ್ರಿಗಳು ಮತ್ತು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಕರೆಸುತ್ತೇನೆ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾನಾಯಕರೇ ನೋಡಿ, ಇದು ಇಡೀ ರಾಷ್ಟ್ರಕ್ಕೆ ಸಂಬಂಧಿಸಿದಂತಹ ವಿಷಯವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ, ಮಾನ್ಯ ಮಂತ್ರಿಗಳು ಮತ್ತು ಅಧಿಕಾರಿಗಳನ್ನು ಕರೆಸುತ್ತೇನೆ. ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಬೇಕೆಂಬುದು ನನ್ನ ವಿನಂತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 05. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ

**ವಿಷಯ:** ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ, ಅಕ್ರಮವಾಗಿ ಸಂಗ್ರಹಿಸಿದ್ದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಬಗ್ಗೆ.

---

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ಶಿವಮೊಗ್ಗ ಜಿಲ್ಲೆಯ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ ಅಕ್ರಮವಾಗಿ ಸಂಗ್ರಹಿಸಿದ್ದ ಡೈನಾಮೆಟ್, ಜಿಲೆಟಿನ್ ಮತ್ತಿತರ ಸ್ಫೋಟಕಗಳು, ಸ್ಫೋಟಗೊಂಡ ಕಾರಣ ಆರು ಜನರು ಮರಣ ಹೊಂದಿದ್ದಾರೆ. ಅನೇಕ ಮನೆಗಳು ಜಖಂ ಆಗಿವೆ. ಮನೆಗಳಲ್ಲಿದ್ದ ಜನಗಳಿಗೂ ಸಹ ಗಾಯಗಳಾಗಿವೆ. ಪಶ್ಚಿಮ ಘಟ್ಟಗಳ ಅತ್ಯಂತ ಸೂಕ್ಷ್ಮ ಪ್ರದೇಶದಲ್ಲಿ ಸಂಭವಿಸಿದ ಈ ದುರಂತದ ಕುರಿತು ಹಾಗೂ ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಳ ವಿಷಯವಾಗಿ ಸಾರ್ವಜನಿಕವಾಗಿ ಮಹತ್ವದ್ದಾಗಿರುವುದರಿಂದ ನಿಯಮ 59 ರಡಿಯಲ್ಲಿ ನಾನು ಹಾಗೂ ನನ್ನ ಸ್ನೇಹಿತರು ನಿಲುವಳಿ ಸೂಚನೆಯನ್ನು ಮಂಡಿಸಿದ್ದೆವು. ಈ ಸಂದರ್ಭದಲ್ಲಿ ತಾವು ನಿಯಮ 68 ಕ್ಕೆ ಪರಿವರ್ತನೆ ಮಾಡಿ, ನನಗೆ ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮತ್ತು ಅದರಲ್ಲಿ ವಿಶೇಷವಾಗಿ ನಿಯಮ 68 ರಡಿಯಲ್ಲಿ ಸದನದ ಎಲ್ಲಾ ಸದಸ್ಯರಿಗೂ ಕೂಡ ಚರ್ಚೆಯಲ್ಲಿ ಅವಕಾಶ ದೊರೆತ್ತಿದ್ದರಿಂದ, ತಮಗೆ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ದಿನಾಂಕ 21.01.2021 ರಂದು ರಾತ್ರಿ ಸುಮಾರು 10:20 ಗಂಟೆಯ ಸಮಯದಲ್ಲಿ ಶಿವಮೊಗ್ಗ ಜಿಲ್ಲೆಯ ಅಬ್ಬಲಗೆರೆ ಮತ್ತು ಹುಣಸೋಡು ಗ್ರಾಮದ ಮಧ್ಯೆದಲ್ಲಿ ಕಲ್ಲೋಳ್ ಎಂಬ ಗ್ರಾಮದಲ್ಲಿ ಸಂಭವಿಸಿದಂತಹ ಭೀಕರ ಸ್ಫೋಟದಲ್ಲಿ ಆರು ಜನರು ಮೃತರಾಗಿದ್ದು, ನೂರಾರು ಜನರಿಗೆ ಗಾಯಗಳಾಗಿವೆ. ಮೃತ ಪಟ್ಟವರ ದೇಹಗಳನ್ನು ನೋಡಿದರೆ, ಗುರುತಿಸುವುದಕ್ಕೆ ಸಾಧ್ಯವಿರದಷ್ಟು ಮಟ್ಟಿಗೆ ಛಿದ್ರ ಛಿದ್ರವಾಗಿ ಮತ್ತು ಚೆಲ್ಲಾಪಿಲ್ಲಿಯಾಗಿ ಬಹಳ ದೂರದವರೆಗೂ ಬಿದ್ದಿದೆ. ಇದರ ಜೊತೆಗೆ ಅಕ್ಕ-ಪಕ್ಕದಲ್ಲಿ ನೂರಾರು ಮನೆಗಳು ಜಖಂಗೊಂಡು, ಆಸ್ತಿ-ಪಾಸ್ತಿಗಳಿಗೂ ಹಾನಿಯನ್ನುಂಟು ಮಾಡಿದೆ. ಸ್ಫೋಟಕದಿಂದ ಭೂಮಿ ಅದುರಿದ್ದು, ಒಂದು ರೀತಿಯ ಕಂಪನ ಉಂಟಾಗಿದೆ. ದೊಡ್ಡ-ದೊಡ್ಡ ಕಟ್ಟಡಗಳೇ ಅಲುಗಾಡಿದ್ದು, ಈ ಭೀಕರ ಶಬ್ಧದಿಂದ ಕೆಲವು ಜನರ ಕಿವಿಗಳು ಕೇಳಲಾರದಂತಹ ಸ್ಥಿತಿ ಉದ್ಭವಿಸಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮೃತ ದೇಹಗಳು ಎಷ್ಟೊಂದು ಛಿದ್ರ ಛಿದ್ರವಾಗಿದೆ ಎಂದರೆ, 23 ನೇ ತಾರೀಖಿನಂದು ಸಂಜೆ ಸುಮಾರು 7.30 ಅಥವಾ 8 ಗಂಟೆಗೆ ಆ ಸ್ಥಳಕ್ಕೆ ನಾನು ಭೇಟಿ ಕೊಟ್ಟಿದ್ದೆ. ಆ ಸ್ಥಳಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಗೇಟಿನ ಎದುರಿಗೆ ಒಂದು ಮೂಳೆ ಬಿದ್ದಿತ್ತು. ನನ್ನ ಪಕ್ಷದ ನಾಯಕರಾದ ಡಾ. ಶ್ರೀನಿವಾಸ್‌ರವರು ನನ್ನ ಜೊತೆ ಅಲ್ಲಿಗೆ ಬಂದಿದ್ದರು. ಇಲ್ಲಿ ನೋಡಿರಿ, ಒಂದು ಮೂಳೆ ಬಿದ್ದಿದೆ ಎಂದು ನಾನು ಅವರಿಗೆ ಹೇಳಿದ್ದೆ. ಅದು ಮನುಷ್ಯನ ಮೊಣಕಾಲಿನ ಚಿಪ್ಪಿನ ಕೆಳಗೆ ಇರುವಂತಹ ಮೂಳೆ ಎಂದು ಹೇಳಿದರು. ಅದನ್ನು ನೋಡಿದರೆ ಮೂಳೆಗಳು ತುಣುಕು ತುಣುಕಾಗಿ ಎಲ್ಲೆಂದರಲ್ಲಿ ಬಿದ್ದಿದೆ. ಅದನ್ನು investigation ಮಾಡಿದವರು, ಆ ಮೂಳೆ ಅಲ್ಲಿಯೇ ಇದೆ. ಆ ಘಟನೆಯು 21ನೇ ತಾರೀಖಿನಂದು ನಡೆದಿದ್ದು, ನಾನು 23 ನೇ ತಾರೀಖು ರಾತ್ರಿಯಲ್ಲಿ ನೋಡಿದಾಗಲೂ ಕೂಡ ಗೇಟಿನ ಮುಂದೆಯೇ ಮೂಳೆ ಬಿದ್ದಿದೆ. ಇಷ್ಟೆಲ್ಲಾ ಭೀಕರವಾಗಿ ಏನು ಸ್ಫೋಟವಾಗಿದೆಯೋ, ಅಂದಿನ ರಾತ್ರಿಯಲ್ಲಿ ಬಹಳಷ್ಟು ಮಾಧ್ಯಮದವರು ಕೆಲವು ಜಿಲ್ಲೆಗಳಲ್ಲಿ ಭೂಕಂಪವಾಗಿದೆ ಎಂದು ಬಿತ್ತರ ಮಾಡಿದರು. ರಿಕ್ಟರ್ ಮಾಪಕದಲ್ಲಿ ಲಘು ಭೂಕಂಪವಾಗಿರಬಹುದು ಬಿಡು ಎಂದು ನಾನು ಭಾವಿಸಿದ್ದೆ. ಅಂದರೆ ಈ ಭೂಮಿ ಕಂಪನವಾಗಿ ವಿಚಿತ್ರವಾದಂತಹ ಶಬ್ದ ಹೊರ ಬಂದಿದ್ದರಿಂದ ಅಲ್ಲಿ ನೂರಾರು ಕಿಲೋ ಮೀಟರ್, radial distance ಒಂದು ನೂರು ಕಿಲೋ ಮೀಟರ್ ಅಂತರದಲ್ಲಿ ಅಷ್ಟು ದೂರದವರೆಗೂ ಭೂಮಿ ಕಂಪನವಾಗಿದೆ. ಅದಕ್ಕೆ ಸಾಮಾನ್ಯವಾಗಿ ಭೂಕಂಪ ಎಂದು, ಆದರೆ ಇದರ ಸಲುವಾಗಿ ಆಗಿದ್ದು. ಆದರೆ ಭೂಕಂಪವಾಗಿಲ್ಲ, ಇದೊಂದು ಮಾನವ ನಿರ್ಮಿತ ಭೂಕಂಪ. ಈ ಗಣಿಗಾರಿಕೆಯನ್ನು ನಡೆಸಲು ಸರ್ಕಾರದಿಂದ ಪರವಾನಗಿಯನ್ನು ಪಡೆದಿಲ್ಲ ಎಂಬುದು ನನ್ನ ಭಾವನೆ. ಮಾನ್ಯ ಸಚಿವರು ಸಹ ಇಲ್ಲಿಯೇ ಇದ್ದಾರೆ. ಆಮೇಲೆ ಒಂದು ವೇಳೆ ಪರವಾನಗಿಯನ್ನು ಪಡೆದಿದ್ದರೆ, ನನ್ನ ಪ್ರಕಾರ ಕ್ರಷರ್ ಘಟಕವನ್ನು ದಿನಾಂಕ 22.09.2020 ರಂದು ಮಂಜೂರಾದ ಮೂಲ ದಿನಾಂಕದಿಂದ ಇಪ್ಪತ್ತು ವರ್ಷದವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಹೇಳಿ ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಮಾಹಿತಿಯನ್ನು ಕೇಳಿದ್ದೆ.

ಮಾನ್ಯ ಸಭಾಪತಿಯವರೇ, ಅದರ ಮಾಲೀಕ ಕಲ್ಲುಗಂಗೂರ್ ಏನೊಂದು ಜಮೀನು ಇದೆ. ಶಿವಮೊಗ್ಗ ತಾಲ್ಲೂಕು ಕಲ್ಲುಗಂಗೂರ್ ಸರ್ವೆ ನಂಬರ್ 2 ರಲ್ಲಿ ಪಟ್ಟಾ ಜಮೀನಾಗಿದೆ. ಎಸ್.ಟಿ. ಕುಲಕರ್ಣಿಯವರು ಆ ಜಮೀನಿನ ಮಾಲೀಕರು. ಸದರಿ ಜಮೀನನ್ನು ಶ್ರೀ ಸುಧಾಕರ್ ಬಿ.ವಿ.ಎಂ ಎನ್ನುವವರು ಗುತ್ತಿಗೆ ಆಧಾರದ ಮೇಲೆ ಪಡೆದು, ಸದರಿ ಜಮೀನಿನಲ್ಲಿ ನಿಯಮಾನುಸಾರವಾಗಿ M/s.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

S.S. Stone Crusher, ಕಲ್ಲು ಪುಡಿ ಮಾಡುವ ಘಟಕ ಎನ್ನುತ್ತಾರೆ. ಸದರಿ ಪ್ರದೇಶದಲ್ಲಿ ಕ್ರಷರ್ ಘಟಕದ ಸ್ಥಾಪನೆಯ ಅನುಮತಿಗಾಗಿ ದಿನಾಂಕ 28.06.2016 ರಂದು ಅರ್ಜಿ ಸಲ್ಲಿಸಿದ್ದರು.

**(ಮುಂದು)**

**(39)01.02.2021, 1.10, ಟಿಸಿಹೆಚ್-ಬಿಎನ್ಎಸ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಅರ್ಜಿತ ಪ್ರದೇಶಕ್ಕೆ ಕರ್ನಾಟಕ ಕಲ್ಲುಪುಡಿ ಕ್ರಷರ್ ಘಟಕಕ್ಕೆ ಮಂಜೂರಾತಿಯಾಗಿದೆ. ಮೊದಲನೆಯದಾಗಿ ಈ ಜಮೀನಿನ ಮಾಲೀಕರನ್ನು ಕೇಳಬೇಕಾಗುತ್ತದೆ. ಸದರಿ ಜಮೀನಿನ ಪಟ್ಟಾದಾರರ ಮೇಲೂ ಕೂಡ ಕೆಲವು ಕೇಸ್‌ಗಳಿವೆ. ಸರ್ಕಾರದಿಂದ ಈ ರೀತಿಯಾಗಿ ಗುತ್ತಿಗೆ ಪಡೆದಿದ್ದರೂ ಕೂಡ ಅದರ capacity ಯನ್ನು increase ಮಾಡುತ್ತಾರೆ. ಮೊದಲು ಏನು ಸಾಮರ್ಥ್ಯವಿರುತ್ತದೆ ಆ ಸಾಮರ್ಥ್ಯವನ್ನು ಹೆಚ್ಚು ಮಾಡಬೇಕಾದರೂ ಅವರು ತಮ್ಮ ಪರವಾನಿಗೆಯನ್ನು ಪಡೆಯಬೇಕಾಗುತ್ತದೆ. ಒಂದು ಬಾರಿ ಅವರು ಪರವಾನಿಗೆ ತೆಗೆದುಕೊಂಡರೆ ಮುಗಿಯಿತು. ಅವರು ಬೇಕಾದಂತೆ ಬಾರಕೂನ್ ಮಾಪ್ ಬೇಕಾದಂತೆ ಹೊಡೆಯುತ್ತಾರೆ. ಅವರು ಎಷ್ಟು ಬೇಕಾದರೂ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡಬಹುದು. ಆ ರೀತಿಯಾಗಿ ಇಲ್ಲಿ ಅಕ್ರಮ ಗಣಿಗಾರಿಕೆ ನಡೆದಿದೆ. ಅಷ್ಟು ಹೆಚ್ಚಿನ ತೂಕವುಳ್ಳ ಸ್ಫೋಟಕವನ್ನು ಅಕ್ರಮವಾಗಿ ಬೇರೆ ಪ್ರದೇಶದಿಂದ ಸಾಗಿಸಲಾಗಿದೆ. ಆ ರೀತಿ ಅಕ್ರಮವಾಗಿ ಸಾಗಾಟ ಮಾಡಬೇಕಾದರೆ ಇದು ಬೇರೆ ಜಿಲ್ಲೆಯಿಂದ ಸರಬರಾಜು ಆಗಿರಬಹುದು. ಕೆಲವರು ತಮಿಳುನಾಡಿನಿಂದ ಅದನ್ನು ತರಲಾಗಿದೆಯೆಂದು ಹೇಳುತ್ತಾರೆ. ಇನ್ನೂ ಕೆಲವರು ಆಂಧ್ರಪ್ರದೇಶದ ರಾಯದುರ್ಗದಿಂದ ಬಂದಿದೆಯೆಂದು ಹೇಳುತ್ತಾರೆ. ಬಹುತರವಾಗಿ ಸಂಬಂಧಪಟ್ಟ ಮಾನ್ಯ ಸಚಿವರು ಈಗಾಗಲೇ ತನಿಖೆ ನಡೆಸಿರುವ ಕುರಿತು ಮುಂದೆ ಉತ್ತರ ಕೊಡಬಹುದು. ಬೇರೆ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಇಷ್ಟು heavy explosives ಹೇಗೆ ಬಂತು. ಅದು ರಾಜ್ಯದ ಗಡಿ ದಾಟಿ ಬರಬೇಕು. ಮಾನ್ಯ ಸಭಾನಾಯಕರೇ, ಅದು ಮತ್ತೊಂದು ರಾಜ್ಯದಿಂದ ನಮ್ಮ ರಾಜ್ಯಕ್ಕೆ ಎಂಟ್ರಿಯಾಗಿದೆ. ಅಲ್ಲಿಯೂ ರಾಜ್ಯ ಮಟ್ಟದ ಗುಪ್ತದಳ ಇರುತ್ತದೆ. ಆಮೇಲೆ ನಮ್ಮ ರಾಜ್ಯದ ಗಡಿಯೊಳಗೆ ಬಂದ ನಂತರ, ಜಿಲ್ಲಾ ಮಟ್ಟದ ಗುಪ್ತದಳ ಇರುತ್ತದೆ. ತಾಲ್ಲೂಕ್ ಮಟ್ಟದ ಗುಪ್ತದಳ ಇರುತ್ತದೆ. ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗುಪ್ತದಳ ಇರುತ್ತದೆ. ಅದುಅಲ್ಲದೇ ಭದ್ರತೆಗೆ ಸಂಬಂಧಿಸಿದಂತೆ ಒಂದು ಇಲಾಖೆ ಇದೆ. ಮಾನ್ಯ ಸಭಾಪತಿಯವರೇ, ಇವರೆಲ್ಲರೂ ಏನು ಮಾಡುತ್ತಿದ್ದರು? ಬಹುತೇಕವಾಗಿ ನನಗೆ ಅನಿಸಿದ ಮಟ್ಟಿಗೆ ಇದರಲ್ಲಿ ಅಧಿಕಾರಿಗಳು ಕೂಡ collude

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆಗಿದ್ದಾರೆ ಎನ್ನುವುದು ನನ್ನ ಭಾವನೆ. ಇಲ್ಲವೆಂದರೆ ಇದು ಆಗುವುದಕ್ಕೆ ಸಾಧ್ಯವಿಲ್ಲ. ಆ ಸ್ಫೋಟಗೊಂಡ ವಸ್ತುಗಳು ಸುಮಾರು 50 ಕೆ.ಜಿ. ತೂಕದ 27 ಬಾಕ್ಸ್‌ಗಳು ಎಂದು ತಿಳಿದು ಬಂದಿದೆ. Detonator ಇರಬಹುದು, ಜಿಲೆಟಿನ್ ಇರಬಹುದು ಅಥವಾ ಅಮೋನಿಯಂ ನೈಟ್ರೇಟ್ ಹರಳುಗಳು ಇರುತ್ತವೆ. ಇವು ಒಟ್ಟು 1350 ಕೆ.ಜಿ.ಯಷ್ಟು ಇತ್ತು. ಈಗ ಹೋಗಿ ನೋಡಿದರೆ ಅದರ ತೂಕವನ್ನು ಯಾರು ಮಾಡಿದ್ದರು ಎಂದು ಕೇಳಿದರೆ ಹೇಳುವುದು ಕಷ್ಟ. ಅಲ್ಲಿ ಆ ವಾಹನ ಛಿದ್ರ-ಛಿದ್ರವಾಗಿದೆ. ಮನುಷ್ಯರ ದೇಹ ಕೂಡ ಛಿದ್ರವಾಗಿದೆ. ಅವರೇನು ಲಾರಿಯಲ್ಲಿ ತಂದಿದ್ದರು ಆ ಲಾರಿ ಎಂದು ಗುರುತಿಸಲು ಸಾಧ್ಯವಾಗದಷ್ಟು ಛಿದ್ರ-ಛಿದ್ರವಾಗಿದೆ.

ಮಾನ್ಯ ಸಭಾಪತಿಯವರೇ, ಇಡೀ ವಿಶ್ವದ ಗಮನ ಸೆಳೆದಂಥ ಪುಲ್ವಾಮಾ ದಾಳಿಯಲ್ಲಿ 250 ಕೆ.ಜಿ.ಸ್ಫೋಟಕ ವಸ್ತುವನ್ನು ಉಪಯೋಗಿಸಿದ್ದರಂತೆ. ಆದರೆ, ಇದು 1350 ಕೆ.ಜಿ. ಸ್ಫೋಟಕ. ನೀವೆ ನೋಡಿ, ಇದು ಅದಕ್ಕಿಂತ ಹೆಚ್ಚಿಗೆ ಆಯಿತು. ಇದನ್ನು ಉಪಯೋಗ ಮಾಡಿದರೆ ಏನು ಬೇಕಾದರೂ ಮಾಡಬಹುದಲ್ಲವೇ? ನಮ್ಮ ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಸ್ಫೋಟಕ ಬರುತ್ತದೆಂದರೆ, ಇದರ ಮೇಲೆ ಏನೂ ಹದ್ದುಬಸ್ತು ಇಲ್ಲ. ಇದಕ್ಕೆ ಏನೂ ನಿಯಮಗಳಿಲ್ಲ. ಅಮೋನಿಯಂ ನೈಟ್ರೇಟ್‌ನ ಬಿಳಿ ಹರಳು ಏನು ಇರತ್ತದೆ, ಇದು ನೀರಿನಲ್ಲಿ ಕರಗುವಂಥ ಒಂದು ರಾಸಾಯನಿಕ. ಇದನ್ನು ಗಣಿ ಮತ್ತು ನಿರ್ಮಾಣ ಚಟುವಟಿಕೆಯಲ್ಲಿ ಇತರೆ ಸ್ಫೋಟಕದ ಜೊತೆ ಬಳಸುತ್ತಾರೆ. ಸಾಮಾನ್ಯವಾಗಿ ಅಮೋನಿಯಂ ನೈಟ್ರೇಟ್ ತನ್ನಿಂದ ತಾನೇ ಸ್ಫೋಟಗೊಳ್ಳುವುದಿಲ್ಲ. ಇತರೆ ಸ್ಫೋಟಕ ವಸ್ತುಗಳು ಸಂಪರ್ಕಕ್ಕೆ ಬಂದಾಗ ಇದು ಸ್ಫೋಟವಾಗುತ್ತದೆ. ಮತ್ತೆ ಈ ಅಮೋನಿಯಂ ನೈಟ್ರೇಟ್‌ನ ಉತ್ಪಾದನೆಗಾಗಲೀ, ಪರಿವರ್ತನೆ ಮಾಡತಕ್ಕಂಥದ್ದಾಗಲೀ, ಪ್ಯಾಕಿಂಗ್‌ನಲ್ಲಿ, ಆಮದು ಮತ್ತು ರಫ್ತು ವ್ಯವಹಾರದಲ್ಲಿ, ಸಾಗಾಣಿಕೆಯಲ್ಲಿ, ದಾಸ್ತಾನು ಮಾಡುವುದು ಹಾಗೂ ಮಾರಾಟ ಮಾಡುವುದು ಇವೆಲ್ಲದಕ್ಕೂ ಕಠಿಣವಾದಂಥ ನಿಯಮಗಳಿವೆ. ಮಾರ್ಗಸೂಚಿಗಳಿವೆ. ಕಟ್ಟುನಿಟ್ಟಿನ ಕಾನೂನುಗಳಿವೆ. ಈ ಅಮೋನಿಯಂ ನೈಟ್ರೇಟ್‌ನ್ನು ಜನದಟ್ಟಣೆ ಪ್ರದೇಶದಲ್ಲಿ ಸಂಗ್ರಹಣೆ ಕೂಡ ಮಾಡುವಂತಿಲ್ಲ. ಈಗಾಗಲೇ ಅಲ್ಲಿ 6 ದೇಹಗಳು ಛಿದ್ರಗೊಂಡಿವೆಯೆಂದು ಹೇಳಿದರು. ಅಲ್ಲಿನ ಸ್ಥಳೀಯರು, ಈ ಲಾರಿ ಬಂದಿತ್ತು ಎಂದು ನನಗೆ ಹೇಳಿದರು. ಶಿವಮೊಗ್ಗದ ಹೃದಯ ಭಾಗದಲ್ಲಿ ಇರತಕ್ಕಂಥ ಒಂದು ಹೋಟೆಲ್. ಆ ಹೋಟೆಲ್ ಯಾವುದು ಎಂದು ಮಾನ್ಯ ಆಯನೂರು ಮಂಜುನಾಥ್‌ರವರಿಗೆ ಗೊತ್ತು. ಅದು ಯಾವುದು ಹೋಟೆಲ್? ನನಗೆ ಗೊತ್ತಿಲ್ಲ. ಅದು ನರ್ಸಿಂಗ್ ಹೋಂ ಪಕ್ಕದಲ್ಲೇ ಇದೆ. ನಾನು ಅಲ್ಲಿಯವರೆಗೂ ಹೋಗಿದ್ದೆನು. ಒಂದು ವೇಳೆ, ಆ ಹೋಟೆಲ್ ಮುಂದೆ ಆ ಲಾರಿ ನಿಂತಿದ್ದಾಗ ಸ್ಫೋಟಗೊಂಡಿದ್ದರೆ ನಿಮ್ಮ ಶಿವಮೊಗ್ಗ ಉಳಿಯುತ್ತಿತ್ತೆ. ಈ ಪ್ರದೇಶ, it is in the outskirts of Shimoga City. ಕಲ್ಲುಗಂಗೂರು ಸರ್ವೇ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂ.2ರಲ್ಲಿ ಇವತ್ತು ಏನು ಅಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ, ಅದು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನ ಒಂದು ಜನನಿಬಿಡವಾದಂಥ ಬಯಲು ಪ್ರದೇಶವಿದೆ. ಆ ಬಯಲು ಪ್ರದೇಶದಲ್ಲಿ ಸ್ಫೋಟಕಗೊಂಡಿರುವುದು ಒಳ್ಳೆಯದು. ಶಿವಮೊಗ್ಗದ ಆ ಹೋಟೆಲ್‌ನಲ್ಲಿ ಆ ಲಾರಿಯ ಚಾಲಕರು ಮತ್ತು ಲೇಬರರ್ಸ್ ಎಲ್ಲರೂ ಕುಳಿತುಕೊಂಡು ಕಾಫಿ ಕುಡಿದಿದ್ದಾರೆ. ಅಲ್ಲಿನ ಸ್ಥಳೀಯರು ಇದೇ ಹೋಟೆಲ್ ನೋಡಿ ಎಂದು ನನಗೆ ತೋರಿಸಿದರು. ಶಿವಮೊಗ್ಗ ಉಳಿದಿದ್ದು ಪುಣ್ಯ. ಒಂದುವೇಳೆ, ಆ ಹೋಟೆಲ್ ಮುಂಭಾಗದಲ್ಲಿ ಏನಾದರೂ ಸ್ಫೋಟಕಗೊಂಡಿದ್ದರೆ ಏನಾಗುತ್ತಿತ್ತೆಂದರೆ ಕಥೆಯೇ ಮುಗಿದುಹೋಗುತ್ತಿತ್ತು. ಇಷ್ಟು ಭಯಾನಕವಾದಂಥ ಸ್ಫೋಟ. ಇದು ಹೇಗೆ ಇಷ್ಟು heavy explosives ಇತ್ತು. ರಾಜ್ಯದಿಂದ ರಾಜ್ಯಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ, ಜಿಲ್ಲೆಯಿಂದ ತಾಲ್ಲೂಕಿಗೆ, ತಾಲ್ಲೂಕಿನಿಂದ ಗ್ರಾಮದವರೆಗೂ ಬಂದಿದೆ. ಈ ಮಧ್ಯೆ ಗುಪ್ತದಳದವರಿಗೆ ಮಾಹಿತಿ ಇರುತ್ತದೆ. ಭದ್ರತಾ ಸಿಬ್ಬಂದಿಯವರು ಇರುತ್ತಾರೆ. ಇದೆಲ್ಲಕ್ಕಿಂತ ಮಿಗಿಲಾಗಿ ಪೊಲೀಸ್ ಚೆಕ್‌ಪೋಸ್ಟ್‌ಗಳಿರುತ್ತವೆ. ಆ ಪೊಲೀಸ್ ಚೆಕ್‌ಪೋಸ್ಟ್‌ನವರು ಏನು ಮಾಡುತ್ತಿದ್ದಾರೆ? ನನಗೆ ಅನಿಸುವುದೇನೆಂದರೆ, ಈ ಪೊಲೀಸ್ ಚೆಕ್‌ಪೋಸ್ಟ್‌ನವರು ಅಲ್ಲಿ ದುಡ್ಡು ಕಲೆಕ್ಟ್ ಮಾಡುವುದಕ್ಕೆ ಇರುತ್ತಾರೆಂದು ನನ್ನ ಭಾವನೆ. ಈ ಚೆಕ್‌ಪೋಸ್ಟ್ ಗಣಿ ಮತ್ತು ಭೂವಿಜ್ಞಾನ ಸಚಿವರ ವ್ಯಾಪ್ತಿಗೆ ಬರುವುದಿಲ್ಲ. ನಾನು ಮಾನ್ಯ ಸಚಿವರನ್ನು ಬ್ಲೇಮ್ ಮಾಡುತ್ತಿಲ್ಲ. ಅದು ಅವರ ಇಲಾಖೆಯದ್ದು ಅಲ್ಲ. ಆ ಚೆಕ್‌ಪೋಸ್ಟ್‌ನಲ್ಲಿ ಇರತಕ್ಕಂಥ ಪೊಲೀಸ್ ಇಲಾಖೆಯವರು ಸೂಕ್ತ ತಪಾಸಣೆ ಮಾಡಬೇಕಾಗುತ್ತದೆ. ಈಗ ನಮ್ಮ ಕಡೆ ಬಿಜಾಪುರ–ಮಹಾರಾಷ್ಟ್ರದ ಮಧ್ಯೆ ಝುಳಕಿ ಚೆಕ್‌ಪೋಸ್ಟ್ ಇದೆ. ಮಾನ್ಯ ಸಭಾಪತಿಯವರೇ, ಈ ಝುಳಕಿ ಚೆಕ್‌ಪೋಸ್ಟ್‌ಗೆ ಪೋಸ್ಟಿಂಗ್ ಹಾಕಬೇಕಾದರೆ ಆಕ್ಷನ್‌ನಲ್ಲಿ ಸವಾಲ್ ಮಾಡುತ್ತಾರಂತೆ. ಈ ಚೆಕ್‌ಪೋಸ್ಟ್‌ಗಳಲ್ಲಿ ಇಂತಹ ಪೊಲೀಸ್ ಅಧಿಕಾರಿಗಳು ಇದ್ದು, ಈ ರೀತಿ ಸ್ಫೋಟಕ ವಸ್ತುಗಳು ಹೋದರೆ ಹೆಚ್ಚು ಅನಾಹುತ ಸಂಭವಿಸುತ್ತದೆ. ಕಾನೂನು ಬಾಹಿರವಾದಂತಹ ಇತರೆ materials ಹೋದರೆ ಅನಾಹುತ ಸಂಭವಿಸುವುದು ಕಡಿಮೆ. ಇಂತಹ explosives ನ್ನು ಸಾಗಿಸುವಾಗ ಪೊಲೀಸರು ದುಡ್ಡು ಹೊಡೆದು ಬಿಟ್ಟರೆ, ಮುಂದೆ ಅನಾಹುತ ಸಂಭವಿಸಿದರೆ ಹೇಗೆ? ಈ ಪೊಲೀಸ್ ಚೆಕ್‌ಪೋಸ್ಟ್‌ಗಳು ಇಂತಹ ಅವ್ಯವಹಾರಗಳನ್ನು ನಿಲ್ಲಿಸದೇ ದುಡ್ಡು ಮಾಡಿಕೊಳ್ಳತಕ್ಕಂಥ ಚೆಕ್‌ಪೋಸ್ಟ್‌ಗಳಾಗಿವೆ. ಗೃಹ ಇಲಾಖೆ ಸಚಿವರಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ನನ್ನ ಗೆಳೆಯರು. ನಾನೇನು ಈಗ ಈ ರೀತಿ ಇದೆಯೆಂದು ಹೇಳುವುದಿಲ್ಲ. ನಾನು ಕೇವಲ ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೇನೆಂದು ಹೇಳಬೇಡಿ. ಇದು ಹಾಗೆಯೇ ನಡೆದು ಬಂದ ದಾರಿಯಾಗಿದೆ. ಪೊಲೀಸ್ ಚೆಕ್‌ಪೋಸ್ಟ್ ಎಂದರೆ ಮುಗಿದುಹೋಯಿತು. ಅಲ್ಲಿ ಭಾರಿ ಪೋಸ್ಟಿಂಗ್ ಇದೆ. ಬಹುಶಃ ಆ ಚೆಕ್‌ಪೋಸ್ಟ್‌ಗೆ ಪೋಸ್ಟಿಂಗ್ ಮಾಡಬೇಕಾದರೆ ಸ್ಥಳೀಯರ ಕೈವಾಡ ಹಾಗೂ ರಾಜಕಾರಣಿಗಳ ದೊಡ್ಡ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಮಾಣದ ಕೈವಾಡವಿದೆ. ಏನ್ರೀ ಇದು ಸಣ್ಣಪುಟ್ಟ ವ್ಯವಹಾರ ಅಲ್ಲ. ಇದು ದೊಡ್ಡ ವ್ಯವಹಾರ. ಇಂತಹ ಚೆಕ್‌ಪೋಸ್ಟ್ ಇದ್ದು 1350 ಕೆ.ಜಿ. ತೂಕದ ವಸ್ತು ಸ್ಫೋಟಕವಾಗಿದೆ. ಅದು ಜಿಲೆಟಿನ್ ಇರಬಹುದು, detonator ಇರಬಹುದು, ಅಮೋನಿಯಂ ನೈಟ್ರೇಟ್ ಇರಬಹುದು. ಮತ್ತೆ ಇನ್ನೇನು ಇದೆಯೋ ಅದೆಲ್ಲವೂ ಬಂದಿವೆ. ಅವೆಲ್ಲಾ ರಾಜಾರೋಷವಾಗಿ ಬಂದಿವೆ. ಮಾನ್ಯ ಸಭಾಪತಿಯವರೇ, ಒಂದು ಚೆಕ್‌ಪೋಸ್ಟ್‌ಗೆ ಲಾರಿ ಬರುವಾಗ ಆ ಲಾರಿ ಮುಂದೆ ಒಂದೆರಡು ಜೀಪ್ ಇಟ್ಟಿರುತ್ತಾರೆ. ಅವರು ಮುಂದೆ ಹೋಗಿ ಆ ಚೆಕ್‌ಪೋಸ್ಟ್ ಹಾಗೂ ಪೊಲೀಸ್ ಸ್ಟೇಷನ್‌ನಲ್ಲಿ ಸರಿ ಮಾಡುವುದು. ಮಾನ್ಯ ಸಭಾಪತಿಯವರೇ, ಎಲ್ಲಾ ಸರಿ ಇದ್ದಲ್ಲಿ, yes, proceed ಎಂದು ಹೇಳುತ್ತಾರೆ. ಆಗ ಆ ಲಾರಿಯನ್ನು ತೆಗೆದುಕೊಂಡು ಬರುತ್ತಾರೆ. ಮಾನ್ಯ ಸಭಾಪತಿಯವರೇ, ಕಳೆದ ಐದು ವರ್ಷದಲ್ಲಿ ಬರೋಬ್ಬರಿ 2452 ಅಕ್ರಮ ಕಲ್ಲು ಗಣಿಗಾರಿಕೆ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 1126 ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲಾಗಿದೆ. ಹೌದು ಅಕ್ರಮವಾಗಿದೆಯೆಂದು cognizance ಗೆ ತೆಗೆದುಕೊಂಡಿದ್ದಾರೆ. ಉಳಿದ 1326 ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲಿಸಿಲ್ಲ.

**(ಮುಂದು)**

**(40)01.02.2021/1.20/ಎಂ.ಎಂ-ಜಿ.ಆರ್**

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಟಾಸ್ಕ್‌ಫೋರ್ಸ್‌ನವರು ಕಳೆದ ಐದು ವರ್ಷದಲ್ಲಿ ಅಕ್ರಮವಾಗಿ ಕಲ್ಲು ಸಾಗಿಸಿದ 7938 ವಾಹನಗಳನ್ನು ಜಪ್ತಿ ಮಾಡಿದ್ದಾರೆ. ಅದರಲ್ಲಿ 09 ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ ಎಂದು ಹೇಳುತ್ತಾರೆ. ಇದರಲ್ಲಿ ಎಷ್ಟು ವಾಹನಗಳನ್ನು ವಸೂಲಿ ಮಾಡದೇ ಹಾಗೇ ಬಿಟ್ಟಿರುತ್ತಾರೋ ಅದಂತೂ ಪ್ರಶ್ನಿಸುವಂತೆಯೇ ಇಲ್ಲ. ಇವೆಲ್ಲಾ ರಾಜಾರೋಷವಾಗಿ ನಡೆಯುವ ವ್ಯವಹಾರವೆನಿಸುತ್ತದೆ. ವಾಹನಗಳನ್ನು ಜಪ್ತಿ ಮಾಡಿ ಅವರನ್ನು ತೀವ್ರವಾದಂತಹ ಕಾನೂನಿನ ವ್ಯಾಪ್ತಿಯೊಳಗೆ ತಂದು ಸರಿಯಾದಂತಹ ಶಿಕ್ಷೆಯಾದರೆ ಅಕ್ರಮವಾಗಿ ನಡೆಯುವ ಕಲ್ಲು ಗಣಿಗಾರಿಕೆಗೆ ಕಡಿವಾಣ ಹಾಕಿದಂತಾಗುತ್ತದೆ. ಅದರಲ್ಲಿ ಅರಣ್ಯ ಸಂರಕ್ಷಣೆ ಕಾಯಿದೆಯನ್ನು ಉಲ್ಲಂಘಿಸಿ ಕಲ್ಲು ಗಣಿಗಾರಿಕೆ ಮಾಡುವವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ಇದೆ ಮತ್ತು ಐದು ಲಕ್ಷ ರೂಪಾಯಿಗಳ ದಂಡ ಇದೆ. ಆದರೆ ಈ ರಾಜ್ಯದಲ್ಲಿ ಒಬ್ಬರಿಗೂ ಜೈಲು ಶಿಕ್ಷೆಯಾಗಿಲ್ಲ. ಮಾನ್ಯ ಸಭಾನಾಯಕರೇ, ಅದನ್ನು ಎಲ್ಲಾದರೂ ಕೇಳಿದ್ದೀರಾ? ಪ್ರಜ್ಞಾವಂತರ ಜಿಲ್ಲೆ ನಿಮ್ಮದು. ಎಲ್ಲಿಯೂ ಯಾರಿಗೂ ಶಿಕ್ಷೆಯಾಗಿಲ್ಲ. ವ್ಯವಹಾರ ಏನೇನಿದೆ ಅದನ್ನು ಕುದುರಿಸಿಕೊಳ್ಳುತ್ತಾರೆ, ಏನು ಕೊಡಬೇಕೋ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನು ಕೊಡುತ್ತಾರೆ 'yes' ಅಂದು ಮುಂದೆ ನಡೆಯಿರಿ ಎನ್ನುತ್ತಾರೆ. ತಪ್ಪಿತಸ್ಥರ ಕಡೆಯಿಂದ ಏನೋ ಪಾಪ! ಅಬಲೆಯರಿದ್ದರು ಎಂದರೆ ಅವರಿಂದ ದಂಡ ವಸೂಲಿ ಮಾಡುತ್ತಾರೆ ಮತ್ತು ಇದರಲ್ಲಿ ಪ್ರಬಲರೂ ಇರುತ್ತಾರೆ. ಜೈಲು ಶಿಕ್ಷೆ ಬಿಡಿ ಅವರು ದಂಡವನ್ನೂ ಕೊಡುವುದಿಲ್ಲ. ಇಷ್ಟು ಎಂದು ಹೇಳುತ್ತಾರೆ ವಸೂಲಿ ಮಾಡುವಷ್ಟರಲ್ಲಿ ಫೋನ್ ಬರುತ್ತದೆ ಆಗ 'ನೀವು ದೊಡ್ಡ ಮನುಷ್ಯರಿದ್ದೀರಿ ಹೋಗಿ' ಎಂದು ಹೇಳಿ ಕಳುಹಿಸಿಬಿಡುತ್ತಾರೆ. Officials and non-officials - all put together, ಎರಡು ಕೈಗಳು ಜೋಡಣೆಯಾದರೆ ಇಂಥಹವುಗಳು ಆಗುವುದಕ್ಕೆ ಸಾಧ್ಯವಿದೆ. ದಂಡ ಕಟ್ಟಿದ ಮಾಲೀಕರು ಮತ್ತೆ ಕಲ್ಲು ಗಣಿಗಾರಿಕೆಯನ್ನು ಪ್ರಾರಂಭ ಮಾಡುತ್ತಾರೆ. ಕೊಡುವುದೇನಿದೆ ಅದನ್ನು ಕೊಡುತ್ತಾರೆ ಮತ್ತೆ ಪ್ರಾರಂಭ ಮಾಡುತ್ತಾರೆ. ಅವರಿಗೆ ಅದೇ ಉದ್ಯೋಗ. Illegal mining activity will start. ಲೀಗಲ್ ಅಲ್ಲ. ಮತ್ತೆ ಮೊದಲು ಹೇಗೆ ಮಾಡುತ್ತಿದ್ದರೋ ಹಾಗೆ. 'ಆಯಿತು ಬಿಡಪ್ಪಾ, ಸ್ವಲ್ಪ ದಂಡ ಕೊಟ್ಟೇವು', ಮತ್ತೊಮ್ಮೆ ಸಿಕ್ಕಿ ಹಾಕಿಕೊಂಡರೆ ಮತ್ತೆ ದಂಡ ಕೊಡೋಣ, ಈಗ ಚಾಲೂ ಮಾಡೋಣ' ಎಂದು ಮಾಡುತ್ತಾರೆ. ಏಕೆಂದರೆ ಅದರಲ್ಲಿ ಸಾಕಷ್ಟು ಲಾಭವಿದೆ. ಗಣಿಗಾರಿಕೆ ಅರಣ್ಯ ಸಂರಕ್ಷಣಾ ಕಾಯಿದೆ 1980, ಸೆಕ್ಷನ್ 2(1) ಮತ್ತು ಸೆಕ್ಷನ್ 2(3) ಹಾಗೂ ಅರಣ್ಯ ಸಂರಕ್ಷಣಾ ಕಾನೂನು 2003 ಸಬ್-ಸೆಕ್ಷನ್ 6 ಹಾಗೂ ಕೇಂದ್ರ ಮತ್ತು ಪರಿಸರ ಇಲಾಖೆಯಿಂದ ಅನುಮತಿ ಬಳಿಕ ಇದನ್ನು ಗುತ್ತಿಗೆ ಕೊಡುವಂಥಹ ವ್ಯವಸ್ಥೆ ಇದೆ. 20 ವರ್ಷಗಳ ಅಥವಾ 30 ವರ್ಷಗಳ ಗುತ್ತಿಗೆ ಕೊಡಬಹುದು. ಒಂದು ನಿರ್ದಿಷ್ಟ ಅವಧಿಗೆ ಗುತ್ತಿಗೆ ಕೊಡುತ್ತಾರೆ. ಈ ರಾಜ್ಯದಲ್ಲಿ ಅಂದಾಜು 10,000 ದಿಂದ 13,000 ಎಕರೆ ಪ್ರದೇಶದಲ್ಲಿ ಗುತ್ತಿಗೆ ಆಧಾರದ ಮೇಲೆ ಕಲ್ಲು ಗಣಿಗಾರಿಕೆ ಕಾರ್ಯನಿರ್ವಹಿಸುತ್ತಿವೆ. ನಮ್ಮ ರಾಜ್ಯದಲ್ಲಿ ಒಟ್ಟು 31 ಜಿಲ್ಲೆಗಳಲ್ಲಿ 27 ಜಿಲ್ಲೆಗಳಲ್ಲಿ 5350ಕ್ಕೂ ಹೆಚ್ಚು ಕಲ್ಲು ಕ್ವಾರಿಗಳಿವೆ. ಈ ಕಲ್ಲು ಕ್ವಾರಿಗಳು ಜಲ್ಲಿ ಮತ್ತು M-sand ಅನ್ನು ಉತ್ಪಾದನೆ ಮಾಡುತ್ತವೆ. ಎಂ.ಸ್ಯಾಂಡ್‌ಗೆ ಈಗ ಬಹಳ ಬೇಡಿಕೆ ಇದೆ. ಈ ಪೈಕಿ ಸುಮಾರು 2850ರಷ್ಟು ಕ್ವಾರಿಗಳು ಅಧಿಕೃತವಾಗಿವೆ. ಶೇ.50ರಷ್ಟು ಕಲ್ಲು ಕ್ವಾರಿಗಳು ಅನಧಿಕೃತವಾಗಿವೆ. ನಾನು ಕೇಳಿದ ಪ್ರಕಾರ 2500 ಇವೆಲ್ಲಾ ಅನಧಿಕೃತವಾಗಿ ರಾಜಾರೋಷವಾಗಿ ಏನೂ ಎಗ್ಗಿಲ್ಲದೇ ಎಲ್ಲೆಲ್ಲಿ ಏನು ಕೊಡುವುದಿದೆ ಅದನ್ನು ಕೊಡುವುದು, ಪ್ರಾರಂಭ ಮಾಡುವುದು. ಯಾರೂ ಹೇಳುವವರು, ಕೇಳುವವರು ಇಲ್ಲ. ಇನ್ನೊಂದು ಬಹಳ ಸೂಕ್ಷ್ಮವಾದ ವಿಚಾರವೇನೆಂದರೆ, ಭದ್ರಾ ತುಂಗಾ ಜಲಾಶಯ; ಪಶ್ಚಿಮ ಘಟ್ಟದ ಸೂಕ್ಷ್ಮ ವಲಯದ ತಪ್ಪಲಿನಲ್ಲಿ ಮೂರು ದೊಡ್ಡದಾದ ಅಣೆಕಟ್ಟುಗಳಿವೆ. ಒಂದು ವೇಳೆ ಏನಾದರೂ ಹೆಚ್ಚು ಕಡಿಮೆಯಾದರೆ ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ ಇಡೀ ದಕ್ಷಿಣ ಭಾರತವೇ ಭೀಕರ ದುರಂತಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣವಾಗುವಂತಹ ಪ್ರಸಂಗ ಬರುತ್ತದೆ. ಮಾನ್ಯ ಸಚಿವರೇ, ಇಲ್ಲಿ 100 ಕಿ.ಮೀ ವ್ಯಾಪ್ತಿಯಲ್ಲಿ ಕಂಪನವಾಗಿದೆಯೆಂದು ಹೇಳಲಾಗಿದೆ. ಆ ವ್ಯಾಪ್ತಿಯಲ್ಲಿ ಜಲಾಶಯಗಳು ಬರುತ್ತವೆ. ಜಲಾಶಯಗಳ ಭದ್ರತೆ ಏನಾಗಿದೆಯೋ, ಎಲ್ಲಿ ಬಿರುಕು ಬಿಟ್ಟಿದೆಯೋ, ಏನಾಗಿದೆಯೋ, ಕಟ್ಟಡಗಳು ಶಿಥಿಲವಾಗುವ ಸಾಧ್ಯತೆಯಿದೆ. 100 ಕಿ.ಮೀ ವ್ಯಾಪ್ತಿ ಎಂದರೆ ಬಹಳ ವಿಸ್ತಾರವಾಯಿತು. ಈ ಮೂರು ಜಲಾಶಯಗಳಿಗೇನಾದರೂ ಹೊಡೆತ ಬಿದ್ದರೆ ಇಡೀ ದಕ್ಷಿಣ ಭಾರತದಲ್ಲಿ ಹಿಂದೆಂದೂ ಕೇಳರಿಯದ, ಮುಂದೂ ಕೇಳಲಾರದಂತಹ ದೊಡ್ಡ ಅನಾಹುತವಾಗುವುದಕ್ಕೆ ಸಾಧ್ಯವಿದೆ. ಇದರ ಕನಿಷ್ಠ ಜ್ಞಾನವಾದರೂ ಇರಬೇಕಲ್ಲವೇ? ಇವನ್ನೆಲ್ಲಾ far reaching consequences ಏನೇನು ಹಾನಿಯಾಗುತ್ತದೆ ಮತ್ತು ಲಕ್ಷಾಂತರ ಕೋಟಿ ಹಣ ವೆಚ್ಚ ಮಾಡಿ ಸರ್ಕಾರಗಳು ಜಲಾಶಯಗಳನ್ನು ನಿರ್ಮಾಣ ಮಾಡುತ್ತವೆ. ಲಕ್ಷಾಂತರ ಎಕರೆ ಭೂಮಿ command area ದಲ್ಲಿ ಬಂದಿರುತ್ತದೆ. ರೈತರು ಅದರಿಂದ ಉದ್ಧಾರವಾಗುತ್ತಾರೆ, ರಾಜ್ಯದ ವರಮಾನವಷ್ಟೇ ಅಲ್ಲ ರಾಷ್ಟ್ರದ ವರಮಾನ ಹೆಚ್ಚಾಗುತ್ತದೆ. ಪಂಡಿತ್ ಜವಾಹರಲಾಲ್ ನೆಹರೂ ಅವರು ಜಲಾಶಯಗಳನ್ನು ಆಧುನಿಕ ದೇವಾಲಯಗಳು ಎಂದು ಹೇಳುತ್ತಿದ್ದರು. ಇದರಿಂದ ಅಂತಹ ಜಲಾಶಯಗಳಿಗೆ ಏನಾಗುತ್ತದೆ ಎನ್ನುವುದರ ಬಗ್ಗೆ ಕಲ್ಪನೆಯೇ ಇಲ್ಲವಲ್ಲ. ಇದರ ವ್ಯಾಪ್ತಿ ಎಷ್ಟಾಗಿದೆಯೆಂದರೆ ಇದು ಕೇವಲ ಶಿವಮೊಗ್ಗ ಜಿಲ್ಲೆಗಾಗಿಲ್ಲ, ಶಿವಮೊಗ್ಗ ಜಿಲ್ಲೆಯ ಸುತ್ತಲಿರುವ ಐದು ಜಿಲ್ಲೆಗಳಲ್ಲಿ ಇದರ ಕಂಪನವಾಗಿದೆ. ಮಧ್ಯ-ಕರ್ನಾಟಕದ ಹಾವೇರಿಯಲ್ಲಿ, ಉತ್ತರ ಕನ್ನಡದಲ್ಲಿ, ದಾವಣಗೆರೆ ಮತ್ತು ಚಿಕ್ಕಮಗಳೂರು ಸೇರಿ ಶಿವಮೊಗ್ಗ ಸುತ್ತಲಿನ ಐದು ಜಿಲ್ಲೆಗಳಲ್ಲಿ ಇದರ ಕಂಪನವಾಗಿದೆ. ಅಲ್ಲಿ ಎಷ್ಟು ಸ್ಫೋಟಕವಿತ್ತೋ ಏನೋ, 100 ಕಿ.ಮೀವರೆಗೆ ಕಟ್ಟಡಗಳು ಶಿಥಿಲವಾಗುವುದು, ಭೂಮಿ ಕಂಪನವಾಗುವುದು. ನಾನು ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ, ಅಲ್ಲಿನ ಎಸ್.ಪಿ., ಯವರು ಬಂದು ನನ್ನನ್ನು ಭೇಟಿಯಾಗಿ ಭೂಕಂಪವಾಗಿದೆಯೆಂದು ಹೇಳಿದರು. ಇವರಿಗೇನು ಗೊತ್ತಿರುತ್ತದೆ, ಇವರು experts ಅಲ್ಲ. ಮಾನ್ಯ ಸಚಿವರು ಅದರ ಬಗ್ಗೆ ಉತ್ತರದಲ್ಲಿ ಹೇಳಬಹುದು. ಕಾಕತಾಳೀಯವೋ ಏನೋ, ಇಷ್ಟು ದೂರದವರೆಗೆ ಭೂಮಿ ಹೇಗೆ ನಡುಗುತ್ತದೆ? ನನಗಂತೂ ಅರ್ಥವಾಗುತ್ತಿಲ್ಲ. I am a lay man, I am not expert in that matter. ಈ ರೀತಿಯಾದಂತಹ ಅಕ್ರಮ ಗಣಿಗಾರಿಕೆಯಿಂದ ಪರಿಸರ ಮಾಲಿನ್ಯ, ಶಬ್ಧ ಮಾಲಿನ್ಯವಾಗುತ್ತದೆ, ರೈತರ ಬೆಳೆ ಹಾನಿಯಾಗುತ್ತದೆ, ಕಾಡು ನಾಶವಾಗುತ್ತದೆ ಹಾಗೂ ಆಹಾರದ ಉತ್ಪಾದನೆ ಕೂಡ ಕುಂಠಿತಗೊಳ್ಳುವ ಸಾಧ್ಯತೆಯಿದೆ. ಪ್ರಾಣಿ-ಪಕ್ಷಿಗಳಿಗೆ ತೊಂದರೆಯಾಗುತ್ತದೆ. ಶುದ್ಧ ಗಾಳಿಯ ಕೊರತೆ ಕೂಡ ಆಗುವಂತಹ ಸಾಧ್ಯತೆಯಿದೆ. ನದಿಗಳು ಬತ್ತಿಹೋಗುವುದರ ಜೊತೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿಯ ಫಲವತ್ತತೆ ಕೂಡ ಕಡಿಮೆಯಾಗುವ ಸಾಧ್ಯತೆಯಿದೆ. ಅಷ್ಟೇ ಅಲ್ಲ human life ಆದರೂ ಸೇಫ್ ಇದೆಯೇ? ಈ ಹಾನಿಯ ಜೊತೆಗೆ ಶ್ವಾಸಕೋಶದ ತೊಂದರೆಯುಂಟಾಗುತ್ತದೆ. ಆ ಧೂಳಿನಿಂದ silicosis ನಂತಹ respiratory disease ಕೂಡ ಬರುವಂತಹ ಸಾಧ್ಯತೆಯಿದೆ. ಇತ್ತೀಚೆಗೆ ವಿಜ್ಞಾನ ಸಾಕಷ್ಟು ಮುಂದುವರೆದಿದೆ. ಇವೆಲ್ಲವನ್ನೂ ತಪ್ಪಿಸಬೇಕಾಗಿದೆ. ರಸ್ತೆಗಳ, ಸೇತುವೆಗಳ, ಜಲಾಶಯಗಳ ನಿರ್ಮಾಣವಾಗಬೇಕು, ಮನೆಗಳು, ಕಟ್ಟಡಗಳು ಎಲ್ಲವೂ ಆಗಬೇಕು ಅದಕ್ಕೆ ಜಲ್ಲಿ ಮತ್ತು M-sand ಬೇಕು. ಇವು ಬೇಡವೆಂದು ನಾನು ಹೇಳುವುದಕ್ಕಾಗುವುದಿಲ್ಲ. ಆದರೆ ಇಂತಹ ಅನಾಹುತಗಳನ್ನು ತಪ್ಪಿಸುವಂತಹ 21ನೇ ಶತಮಾನದ ಹೊಸ್ತಿಲಿನಲ್ಲಿರುವ ಸಂದರ್ಭದಲ್ಲಿ ಇದಕ್ಕೆ ಸಾಧ್ಯತೆಗಳಿರಬಹುದಲ್ಲವೇ? Human life ಸಹಿತ ಸೇಫ್ ಇಲ್ಲ, ಉಸಿರಾಟದ ತೊಂದರೆಯಾಗುತ್ತದೆ. ರಾಜ್ಯದ ಉದ್ದಗಲಕ್ಕೂ ರಾಜಾರೋಷವಾಗಿ ಈ ರೀತಿಯಾದಂತಹ ಲೂಟಿ ನಡೆಯುತ್ತಿದೆ. ಈ ಘಟನೆ 21ನೇ ತಾರೀಖಿನಂದು ಆಗಿದೆ, ಮಾನ್ಯ ಸಚಿವರು ಅಲ್ಲಿಗೆ ದಿನಾಂಕ 22-01-2021ಕ್ಕೆ ಭೇಟಿ ಕೊಟ್ಟಿರಬಹುದು. ತಾವು ತಕ್ಷಣವೇ ಸ್ಪಂದನೆ ಮಾಡಿದಿರಿ ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಏಕೆಂದರೆ, ನೀವು ಕೂಡ ನಮ್ಮ ತಾಲ್ಲೂಕಿನವರು. ಆ ದೃಷ್ಟಿಯಿಂದಲ್ಲ, anyhow, you have responded very quickly and you have visited the spot. ಅಲ್ಲಿ ನೋಡಿದ್ದು ಇಲ್ಲಿ ನನ್ನ ಎದುರಿಗೆ ಇದೆ. ಅಲ್ಲಿ ನೀವು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗುವುದು ಎಂದು ಹೇಳಿದಿರಿ. ನೀವು ಉನ್ನತ ಮಟ್ಟದ ಸಮಿತಿಯನ್ನು ರಚಿಸಬೇಕಲ್ಲ? ಪ್ರಕರಣ ಇಷ್ಟು ಗಂಭೀರವಾಗಿದೆ; ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಏತಕ್ಕೆ ನಗುತ್ತಿದ್ದಾರೆ?

(ಮುಂದು)

**(41) 01-02-2021/ 01-30/ ಕೆಹೆಚ್-ಜಿಆರ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ನೋಡಿ, ಅವರು ಅವರ ಕರ್ತವ್ಯ ಮಾಡುತ್ತಾರೆ. ನಾನು ನನ್ನ ಕರ್ತವ್ಯವನ್ನು ಮಾಡುತ್ತೇನೆ. ಮಾನ್ಯ ಸದಸ್ಯರಾದ ಪುಟ್ಟಣ್ಣನವರೇ, ತಾವು ನಮ್ಮ ಸ್ನೇಹಿತರಲ್ಲ. ನಾನು ತಮಗೆ ಏನೋ ಹೇಳಬೇಕಾಗಿತ್ತು. ಏಕೆಂದರೆ, this is a very very serious matter. ಈ ವಿಷಯವನ್ನು ಹಗುರವಾಗಿ ತಿಳಿದುಕೊಳ್ಳುವ ಆಗಿಲ್ಲ. ನಾನು ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಅಕ್ರಮ ಗಣಿಗಾರಿಕೆಯಲ್ಲಿ ನೇರವಾಗಿ ಜಿಲ್ಲೆಯ ಅಧಿಕಾರಿಗಳು ಹಾಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜಕಾರಣಿಗಳು ಕಾರಣರಾಗಿದ್ದಾರೆ. ಕಾರ್ಮಿಕರ ಸಾವು ಅತ್ಯಂತ ಅಮಾನವೀಯವಾಗಿದೆ ಎಂದು ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇವರಿಗೆ ಕಾರ್ಮಿಕರ ಬಗ್ಗೆ ಇರುವ ಕಾಳಜಿ, ಕಕ್ಕಲಾತಿ, ವಾತ್ಸಲ್ಯ ಹೊಂದಿರುವಂತಹ ಒಬ್ಬ ಜನ ನಾಯಕ. ಆವತ್ತಿನ ದಿವಸ ಇವರು ಆ ಸ್ಥಳಕ್ಕೆ ಭೇಟಿ ಕೊಟ್ಟು ಕಾರ್ಮಿಕರ ದೇಹಗಳನ್ನು ನೋಡಿದ್ದಾರೆ. ಇದನ್ನು ನೋಡಿ ಬಹಳ ನೋವಿನಿಂದ ಈ ಮಾತನ್ನು ಹೇಳಿದ್ದಾರೆ. ನಾನು ಈಗಾಗಲೇ ಚರ್ಚೆ ಮಾಡಿದ ಹಾಗೆ ಅಧಿಕಾರಿಗಳು ಮತ್ತು ರಾಜಕಾರಣಿಗಳು ಇಬ್ಬರು hand in hand, gloves in gloves ಎಂದು ಹೇಳುತ್ತಾರೆ. ಇವರಿಬ್ಬರು ಜೊತೆಯಲ್ಲಿ ಇರುವುದಕ್ಕೆ ಇಂತಹದ್ದು ಆಗುವುದಕ್ಕೆ ಸಾಧ್ಯತೆ ಇದೆ ಎಂದು ಆಳುವ ಪಕ್ಷದ ಶಾಸಕರು ಹೇಳಿದ್ದಾರೆ. ಇವರು ಬಹಳಷ್ಟು ಒಳ್ಳೆಯ ಸಂಸದೀಯ ಪಟುಗಳು, ಬಹಳಷ್ಟು ಅನುಭವ ಇರುವವರು, ಕಾರ್ಮಿಕರ ಬಗ್ಗೆ ಬಹಳಷ್ಟು ಚಿಂತನೆ ಮಾಡುವಂತಹವರು ಹೇಳಿದ ಹಾಗೆ ಇದು ಹಾಗೆಯೇ ಆಗುವುದಕ್ಕೆ ಸಾಧ್ಯ ಇಲ್ಲ. ಇದು ತನ್ನಷ್ಟಕ್ಕೆ ತಾನೇ ಆಗುತ್ತದೆಯೇ, ಇದಕ್ಕೆ ಯಾವ ಅಧಿಕಾರಿಗಳು ಬೆಂಬಲ ಕೊಟ್ಟಿಲ್ಲ. ಯಾವ ರಾಜಕಾರಣಿಗಳು ಬೆಂಬಲ ಕೊಟ್ಟಿಲ್ಲ ಎನ್ನುವುದಕ್ಕೆ ಸಾಧ್ಯವಿದೆಯೇ. Is it possible? It is humanly impossible, unless and until both have joined their hands. ಈ ರೀತಿಯಾಗಿ illegal activities ಆಗುವುದಕ್ಕೆ ಏನೇನು ಇರುತ್ತವೋ, ಅದನ್ನು ನಾನು ನನ್ನ ಬಾಯಿಂದ ಹೇಳುವುದಕ್ಕೆ ಆಗುವುದಿಲ್ಲ. ಅವೆಲ್ಲಾ comply ಮಾಡಿದರೆ ಮುಗಿದು ಹೋಯಿತು. ತಾವು ಬೇಕಾಗಿರುವುದನ್ನು ನೋಡಿ. 23ನೇ ತಾರೀಖು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಭಾರಿ ಭದ್ರತಾ ವೈಫಲ್ಯ ಎಂದು ಬಂದಿದೆ. ಶಿವಮೊಗ್ಗ ಆಂತರಿಕ ಭದ್ರತಾ ವಿಭಾಗ ಹೇಗಿದೆ ಎಂದರೆ, ಶ್ರೀ ಭಾಸ್ಕರ್ ರಾವ್, ಎ.ಡಿ.ಜಿ.ಪಿ., ರವರು ಶಿವಮೊಗ್ಗಕ್ಕೆ ಭೇಟಿ ಕೊಟ್ಟಾಗ ಭದ್ರತಾ ವಿಭಾಗದ ಕಛೇರಿಗೆ ಕೀಲಿ ಹಾಕಿ, ಆ ಭದ್ರತಾ ವಿಭಾಗದ ಅಧಿಕಾರಿಗಳನ್ನು ಹೊರಗೆ ಕಳುಹಿಸಿಬಿಟ್ಟಿದ್ದಾರೆ. ಆ ಅಧಿಕಾರಿಗಳಿಗೆ ತಾವು ಅಯೋಗ್ಯರಿದ್ದೀರಿ, ನಾಲಾಯಕ್‌ರಿದ್ದೀರಿ. ನೀವು ಕೆಲಸ ಮಾಡುವುದಕ್ಕೆ ಯೋಗ್ಯರಲ್ಲ. ಈ ಇಲಾಖೆಗೆ ಇರಲು ತಾವು unfit ಎಂದು ಹಿರಿಯ ಅಧಿಕಾರಿಯಾದ ಶ್ರೀ ಭಾಸ್ಕರ್ ರಾವ್, ಎ.ಡಿ.ಜಿ.ಪಿ.,ರವರು ಶಿವಮೊಗ್ಗಕ್ಕೆ ಭೇಟಿ ಕೊಟ್ಟಾಗ ಭದ್ರತಾ ವಿಭಾಗದ ಅಧಿಕಾರಿಗಳನ್ನು ಹೊರಗೆ ಹಾಕಿ, ಆ ಕಛೇರಿಗೆ ಕೀಲಿ ಹಾಕಿದ್ದಾರೆ. ಇದು ಇತ್ತೀಚೆಗಷ್ಟೇ ನಡೆದಿರುವ ವಿಚಾರ. ಈ ಘಟನೆ ಸಂಭವಿಸುವುದಕ್ಕಿಂತ ಮೊದಲು ನಡೆದಿದೆ. ಇಂತಹ ಅಧಿಕಾರಿಗಳು ಇರುವುದಕ್ಕೆ ಈ ರೀತಿ ಆಗಿದೆ. ಈ ಘಟನೆ ಎಲ್ಲಿ ಆಗಿದೆ. ಈ ರಾಜ್ಯದ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಈ ಘಟನೆಯಾಗಿದೆ. ಅವರಿಗೆ ಅನಿಸುತ್ತಿತ್ತು. ಪ್ರಾರಂಭದಲ್ಲಿ ರಾಜಕಾರಣ ಬಂದಾಗ complaint ಮಾಡುತ್ತಿದ್ದರು. ಈ ಮಂತ್ರಿ ಈ ಜಿಲ್ಲೆಗೆ ಮಾತ್ರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಸೀಮಿತನಿದ್ದಾನೆ. ಈ ರಾಜ್ಯಕ್ಕೆ ಮಾತ್ರ ಮಂತ್ರಿ ಹೌದೋ ಅಥವಾ ಅಲ್ಲವೋ ಎನ್ನುವ ಬಗ್ಗೆ complaint ಬರುತ್ತಿತ್ತು. ಏಕೆಂದರೆ, ಆ ಜಿಲ್ಲೆಯ ಅಭಿವೃದ್ಧಿಗೆ ಬಹಳ ಚಿಂತನೆ ಮಾಡುತ್ತಿದ್ದರು. ಆ ಜಿಲ್ಲೆಗೆ ಅನುದಾನ ಕೊಡುವಾಗ ಸ್ವಲ್ಪ ಹೆಚ್ಚಿಗೆ ಅನುದಾನವನ್ನು ಕೊಡುವುದು. ಇನ್ನು ಹೆಚ್ಚು ಕಾರ್ಯಕ್ರಮಗಳನ್ನು ತರುವುದು. ಅದರಲ್ಲೂ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಯವರ ಜಿಲ್ಲೆ ಎಂದರೆ, it is my home district ಎಂದು ಬಜೆಟಿನಲ್ಲಿ ಹೇಳುತ್ತಿದ್ದರು. ಅವರು ಅವರೇ ಬಜೆಟ್ ಮಾಡುವಂತವರು ಇರುತ್ತಾರೆ. ಅವರು ಆ ಜಿಲ್ಲೆಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿ ಆ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಹೆಣಗಾಡುತ್ತಿದ್ದರು. ಆಗ ಉಳಿದ ಜಿಲ್ಲೆಯವರು ಏನಪ್ಪಾ, ಮುಖ್ಯಮಂತ್ರಿಗಳು ತಮ್ಮ ಜಿಲ್ಲೆಗೆ ಇಷ್ಟೆಲ್ಲಾ ಹಣ ತೆಗೆದುಕೊಂಡು ಹೋಗುತ್ತಾರೆ. ನಾವೆಲ್ಲಾ ಕನ್ನಡ ಮಾತೆಯ ಮಕ್ಕಳಲ್ಲವೇ, ಮಲತಾಯಿ ಮಕ್ಕಳೇ ಎಂದು ಆಗ ದೂರು ಬರುತ್ತಿತ್ತು. ಈಗ ಮಂತ್ರಿಗಳು ಇರುವ ಜಿಲ್ಲೆ, ಮಾನ್ಯ ಮುಖ್ಯಮಂತ್ರಿಗಳು ಇದ್ದ ಜಿಲ್ಲೆಯಲ್ಲಿ . . . ಬಾರಾ ಖೂನ್ ಮಾಫ್ ಏನೇನು ಇದೆ, ನಮ್ಮ ಮುಖ್ಯಮಂತ್ರಿಗಳು ಇದ್ದಾರೆ. ಅದಕ್ಕೆ ಏನು ವಿಚಾರ ಮಾಡಬೇಡಿ. ಕೇಳಿ ಬಿಚ್ಚಿ ಹೊಡಿ ಎಂದು ಹೇಳಿದರು. ಆಗ ಆ ರೀತಿ ಇತ್ತು. ಈಗ ಹೇಗಾಗಿದೆ ಎಂದರೆ, ನನಗೆ ತದೇಕಾಶ್ಚರ್ಯ ಎನಿಸುತ್ತದೆ. ಆಗ ಅಭಿವೃದ್ಧಿಯಾಗುತ್ತದೆ. "ಜನನೀ ಜನ್ಮ ಭೂಮಿಶ್ಚ, ಸ್ವರ್ಗಾದಪಿ ಗರೀಯಸೀ" 'ಹಡೆದ ತಾಯಿ, ಜನ್ಮ ಕೊಟ್ಟ ಭೂಮಿ ಸ್ವರ್ಗಕ್ಕಿಂತ ಹೆಚ್ಚು' ಎಂದು ಸಹಜವಾಗಿ ಆ ನಂಬಿಕೆಯಲ್ಲಿ ಇದ್ದೇವೆ. ನಮ್ಮ ಜಿಲ್ಲೆ ಎಂದು ಆಗ ಹೆಚ್ಚು ಹಣ ಹಾಕುವುದಾಗಲಿ, ಕಾರ್ಯಕ್ರಮಗಳನ್ನು ಕೊಡುವುದಾಗಲಿ, ಆ ಭಾಗದ ಅಭಿವೃದ್ಧಿಗಾಗಿ ಚಿಂತನೆ ಮಾಡಿ ಟೀಕೆ-ಟಿಪ್ಪಣಿಗಳಿಗೆ ಒಳಗಾಗುತ್ತಿದ್ದರು. ಈಗ ಎಂತಹ ಟೀಕೆ-ಟಿಪ್ಪಣಿ ಇದೆ ಎಂದು ಮಾನ್ಯ ಸಭಾನಾಯಕರೇ ತಮ್ಮ ಬಾಯಿಯಲ್ಲಿ ತಾವೇ ಹೇಳಿ. ಈಗಿನ ಟೀಕೆ-ಟಿಪ್ಪಣಿಗಳೇ ಹಾಗೆ. ಯಾರ್ಯಾರು ಪ್ರಬಲ ನಾಯಕರು ಇದ್ದಾರೋ, ಅವರ ಜಿಲ್ಲೆಯಲ್ಲಿ ಬೇಕಾಬಿಟ್ಟಿಯಾಗಿ illegal activities ನಡೆಯತ್ತದೆ ಎನ್ನುವಂತಾಯಿತಲ್ಲವೇ, ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆ ಎಂದು ಆ ಜಿಲ್ಲೆಯಲ್ಲಿರುವ ಅಧಿಕಾರಿಗಳಾಗಲಿ, ಅಲ್ಲಿನ ಜನ ಆಗಲಿ, ಇದು ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆ ನಾವು ಏನಾದರೂ ತಪ್ಪು ಮಾಡಿದರೆ ನಮ್ಮನ್ನು ಬಿಡುವುದಿಲ್ಲ. ನಾವು ಮುಖ್ಯಮಂತ್ರಿಗಳ ಕೈಗೆ ಸಿಗುತ್ತೇವೆ ಎಂದು ಯಾರು ತಪ್ಪು ಮಾಡದೇ ಇರುವಂತಹ ವ್ಯವಸ್ಥೆ ಮೊದಲು ಇತ್ತು. ಹೇ, ನಮ್ಮವರು ಮುಖ್ಯಮಂತ್ರಿಗಳು ಇದ್ದಾರೆ ರೀ. ಅದೇಕೆ ನಮ್ಮ ಜಿಲ್ಲೆಯೊಳಗೆ ನಮ್ಮ ಮಂತ್ರಿ ಇದ್ದಾರೆ. ಏನೊ ಬೇಕೋ ಅದನ್ನು ಮಾಡುವುದು. ನಮ್ಮ ಪರಿಸ್ಥಿತಿ ಎಲ್ಲಿಗೆ ಬಂದಿತು? ನಾನು ಈಗ ಇರುವ ವ್ಯವಸ್ಥೆ ಬಗ್ಗೆ ಹೇಳುತ್ತೇನೆ. ಇವತ್ತು ಮುಖ್ಯಮಂತ್ರಿಗಳ ಜಿಲ್ಲೆ ಎಂದರೆ ಅಲ್ಲಿರುವಂತಹ ಜಿಲ್ಲಾಧಿಕಾರಿಗಳಾಗಲಿ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾಗಲಿ ಮತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲ್ಲಾ ಜಿಲ್ಲೆಯ ಮುಖ್ಯಸ್ಥರಾಗಲಿ, ಆ ಜಿಲ್ಲಾ ಮಟ್ಟದ ಅಧಿಕಾರಿಗಳು – they must be very vigilant. ಆಮೇಲೆ ಅವರು ಪ್ರಾಮಾಣಿಕತೆಯಿಂದ, ಬದ್ಧತೆಯಿಂದ, ನಿಷ್ಠೆಯಿಂದ, ಸೇವಾ ಮನೋಭಾವನೆಯಿಂದ, ಕರ್ತವ್ಯ ಪ್ರಜ್ಞೆಯಿಂದ, ಕರ್ತವ್ಯವೇ ದೇವರು ಎನ್ನುವಂತಹ ಭಾವನೆಯಿಂದ, ವಿಶೇಷವಾಗಿ ಮುಖ್ಯಮಂತ್ರಿಗಳ ಜಿಲ್ಲೆ ಇದನ್ನು ಅಭಿವೃದ್ಧಿ ಮಾಡಬೇಕು. ಮುಖ್ಯಮಂತ್ರಿಗಳಿಗೆ ಹೆಸರು ತಂದುಕೊಡಬೇಕು. ಜನತೆಗೆ ಪ್ರಾಮಾಣಿಕವಾದಂತಹ ಆಡಳಿತ ನೀಡಬೇಕು. ಪಾರದರ್ಶಕವಾದಂತಹ ಆಡಳಿತ ನೀಡಬೇಕು. ಕಾನೂನು ಬಾಹಿರವಾದಂತಹ ಚಟುವಟಿಕೆಗಳು ಯಾವುವು ನಡೆಯಬಾರದು ಎಂದು ಮುತವರ್ಜಿ ವಹಿಸಿ ಅಲ್ಲಿ ಕೆಲಸ ಮಾಡಬೇಕು. ಇದು ತದ್ವಿರುದ್ಧವಾಗಿದೆ. Reverse ಆಗಿದೆ. People have taken it for granted. ಏನು ಬೇಕಾದ್ದು ಮಾಡು. ಮಾನ್ಯ ಸಭಾನಾಯಕರೇ, ಈ ರೀತಿಯಾದರೆ ಹೇಗೆ? ಈ ರೀತಿ ನಡೆಯಲಿ ಎಂದು ತಾವು ಹೇಳುತ್ತೀರಿಯೇ, ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಾನು ಒಂದು ಸ್ಥಾನದ ಬಲದಿಂದ ಅಧಿಕಾರದಲ್ಲಿದ್ದಾಗ, ನಾನು Minister for Planning and Statistics ಆಗಿದ್ದಾಗ ಬಜೆಟ್ ಮಾಡುವ ಮೊದಲು ಕುಳಿತಾಗ, ಆ ಜಿಲ್ಲೆಯ ಉಸ್ತುವಾರಿ ಇನ್‌ಚಾರ್ಜ್ ಮಿನಿಸ್ಟರ್ ಇದ್ದಾಗ ನಮಗೆ ಯಾವುದಾದರೂ ಪ್ರಾಜೆಕ್ಟ್ ಹಾಕಿ, ಬೇರೆ ಬೇರೆ ಪ್ರಾಜೆಕ್ಟ್‌ಗಳನ್ನು ಹಾಕುವ ಮುನ್ನ ಹೇಳುತ್ತಿದ್ದೆವು. ನಾನು ಏನು ಮುಚ್ಚಿ ಇಟ್ಟುಕೊಳ್ಳುವುದಿಲ್ಲ. ಏನಪ್ಪಾ, ಮಾರಾಯ ನೀವು Planning Minister ಆಗಿ ಜಿಲ್ಲೆಯೊಳಗೆ ಎಲ್ಲಾ ಒಂದೊಂದು ಇರಲಿ ಎಂದು ಹೇಳುತ್ತೀರಾ ಎಂದು ಹೇಳುತ್ತಿದ್ದರು. ಹಾಗೆ ಹೀಗೆ ಹೇಳುತ್ತಿದ್ದರು. ಈಗ ಇದು ಎಂತಹ ಕೆಲಸವಾಗುತ್ತಿದೆ. ಈಗ ನನಗೆ illegal mining ಗೆ explosives use ಆಗಿದೆಯೋ ಎಂಬುದನ್ನು ಹೇಗೆ ನಿಖರವಾಗಿ ಹೇಳುವುದಕ್ಕೆ ಆಗುತ್ತದೆ. ಈ explosive ಮತ್ತೆ ಯಾವುದಕ್ಕಾದರೂ ಉಪಯೋಗವಾಗಬಹುದು. Pulwama ಘಟನೆ ಆಯಿತಲ್ಲವೇ, ಇದು ದೇಶದಲ್ಲಿ ಹೇಗೆ ಬಂದಿತು ಎಂದು ನಾವು ಹೇಳುತ್ತಿದ್ದೆವು. ಭಾರತ ದೇಶದ ಗಡಿಯೊಳಗೆ ಇಂತಹ high explosive ಹೇಗೆ enter ಆಯಿತು ಎಂದು ನಾವೆಲ್ಲಾ ತದೇಕಾಶ್ಚರ್ಯದಿಂದ ಇದ್ದೆವು. ಈಗ ನಮ್ಮ ರಾಜ್ಯದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಅಲ್ಲಿ 250 ಕೆ.ಜಿ., ಇದ್ದರೆ, ಇಲ್ಲಿ 1300 ಕೆ.ಜಿ., high explosives. ಇದು ಬೇರೆ ಕಾರಣಕ್ಕಾಗಿ ಉಪಯೋಗವಾದರೆ ಈ ರಾಜ್ಯ ಉಳಿಯುತ್ತದೆಯೇ, ಈ ದೇಶ ಉಳಿಯುತ್ತದೆಯೇ, ಈ ದೇಶದ ಏಕತೆ ಪ್ರಶ್ನೆ ಬರುತ್ತದೆ. ಒಂದು ವೇಳೆ ಇಂತಹ high explosive ಈ ಟೆರರಿಸ್ಟ್ ಕೈಯಲ್ಲಿ, ದೇಶದ್ರೋಹಿಗಳ ಕೈಯಲ್ಲಿ, ಇಂತಹ material ಏನಾದರೂ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಕ್ಕರೆ ಅವರು ಈ ದೇಶದ ಏಕತೆ, ಈ ದೇಶದ ಭದ್ರತೆ, ಈ ದೇಶದ ಅಖಂಡತೆ, ಈ ದೇಶದ ಸಾರ್ವಭೌಮತ್ವಕ್ಕೆ ಸವಾಲಾಗುವಂತಹ ಪ್ರಶ್ನೆಗಳು ಆಗುತ್ತದೆ. ಇದರ ಬಗ್ಗೆ ಮಂತ್ರಿಗಳು ಉನ್ನತ ಮಟ್ಟದ ತನಿಖೆ ಮಾಡುತ್ತೇವೆ ಎಂದು ಹೇಳಿದ್ದಾರೆಯಲ್ಲವೇ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ನನಗೆ ಏನು ಅನಿಸುತ್ತದೆ ಎಂದರೆ, ಕೆಲವು explosives ಮೇಲೆ ದೊಡ್ಡ ಪ್ರಮಾಣದ ಲಾಭವಾಗುತ್ತದೆ ಎಂದು ಅನಿಸುತ್ತದೆ. 100 ರೂಪಾಯಿ ವಸ್ತುವನ್ನು 10 ಸಾವಿರ ರೂಪಾಯಿಗೆ ಮಾರಾಟ ಮಾಡುತ್ತಾರೆ. ಇದನ್ನು ಸುರಕ್ಷಿತವಾಗಿ ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿಯೇ ಒಯ್ದು dump ಮಾಡಿ, ಅಲ್ಲಿಂದ ಕಲ್ಲು ಗಣಿಗಾರಿಕೆ ಮಾಡುವವರೇ ಒಯ್ದುದಿದ್ದರೆ ಅದು ಸರಿಯಾಗುತ್ತಿತ್ತು. ಅದನ್ನು ಬಿಟ್ಟು ಬೇರೆ ವಿಧ್ವಂಸಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರು, ಇಂತಹವರ ಕೈಯಲ್ಲಿ ಬಿದ್ದರೆ ಹೇಗೆ? ಇದರ ಬಗ್ಗೆ ತನಿಖೆ ಏಕೆ ಗಂಭೀರವಾಗಿ ಆಗಬೇಕೆಂದರೆ ಇದರ ಮೂಲ ಕಂಡು ಹಿಡಿಯಬೇಕಲ್ಲವೇ, ಇದು ರಾಜರೋಷವಾಗಿ ಇದೆಯೋ, ಇಲ್ಲವೋ ಎಂಬುದರ ಬಗ್ಗೆ ಮಾತನಾಡಿದ್ದೇನೆ. ಇದು ಈ ರೀತಿ ಬರಬಾರದಿತ್ತು. ಎಲ್ಲಾ ರೀತಿಯ ಭದ್ರತಾ ವೈಫಲ್ಯವಾಗಿದೆ. ಆರಕ್ಷಕ ಇಲಾಖೆಯವರ ವೈಫಲ್ಯ, ಗುಪ್ತ ಇಲಾಖೆಯವರ ವೈಫಲ್ಯ, ವೈಫಲ್ಯ ಎನ್ನುವುದನ್ನು ವೈಫಲ್ಯ ಎಂದು ಹೇಳಬಾರದು. ಅವರೆಲ್ಲಾ ಇದರಲ್ಲಿ ಶಾಮೀಲಾಗಿದ್ದಾರೆ ಎಂದು ನಾನು ಹೇಳುತ್ತೇನೆ. ಇಲ್ಲಿಯವರೆಗೂ ನಾನು ವೈಫಲ್ಯ ಎಂದು ಹೇಳಿದೆ. ಔಪಚಾರಿಕವಾಗಿ ವೈಫಲ್ಯ ಏನು ಇಲ್ಲವೇ ಇಲ್ಲ. They have joined hands. ಇದಕ್ಕೆ ಎಲ್ಲಾ ರೀತಿಯ ಸಹಕಾರ ಮಾಡಿದ್ದಾರೆ. ಇದಕ್ಕೆ ನೇರವಾಗಿ ಆ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಲಿ, ಆ ಜಿಲ್ಲೆಯ Superintendent of Police ಆಗಲಿ, ಇವರು ಏನು ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಈ ರೀತಿಯಾದರೆ ಹೇಗೆ, ಆ ಜಿಲ್ಲೆಯಲ್ಲಿರುವಂತಹವರ ಗತಿ ಹೀಗೆ, ಇನ್ನು what about others? ಉಳಿದ ಜಿಲ್ಲೆಯ ಜಿಲ್ಲಾಧಿಕಾರಿಗಳು, ಎಸ್.ಪಿ., ಅವರ ಗತಿ ಏನು?

**(ಮುಂದು)**

**(42) 01/02/2021/1:40/ಎಸ್‌ಪಿಆರ್/ಎಂಡಿ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

ಅಲ್ಲಿ ಏನೋ ನಡೆಯುತ್ತದೆ. They are working right under the nose of the Hon'ble Chief Minister. ಆದರೆ ನೇರವಾಗಿ ರಾಜ್ಯದ ಮುಖ್ಯಮಂತ್ರಿಗಳ ಮುಗಿನ ಕೆಳಗೆ ಕರ್ತವ್ಯ ನಿರ್ವಹಿಸುತ್ತಿರುವವರು ಇಂತಹ ಬೇಜವಾಬ್ದಾರಿತನ ಹಾಗೂ ಭೇವಕೂಫತನ ತೋರಿಸಿದರೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಗೆ? ಕಾನೂನುಬಾಹಿರವಾದ ಚಟುವಟಿಕೆಗಳಿಗೆ ಅವಶ್ಯಕವಾಗಿರುವ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರ ಮಾಡುತ್ತಾರೆ. ಅವ್ಯಾಹೃತವಾಗಿ ಮತ್ತು ರಾಜಾರೋಷವಾಗಿ ಇಂತಹ ಚಟುವಟಿಕೆಗಳು ನಡೆಯಲು ಅವಕಾಶ ಮಾಡಿಕೊಡುತ್ತಾರೆಂದರೆ ರಾಜ್ಯದ ಮತ್ತು ಇನ್ನುಳಿದ ಜಿಲ್ಲೆಗಳ ಗತಿ ಏನು? ರಾಜ್ಯದಲ್ಲಿನ ಕಾನೂನು ಮತ್ತು ಸುವ್ಯವಸ್ಥೆಗಳ ಸಮಸ್ಯೆಗಳ ಪರಿಸ್ಥಿತಿ ಹೇಗೆ? ಒಂದು ವೇಳೆ ಇಂತಹ ಸ್ಫೋಟಕಗಳು ಅಪ್ಪಿತಪ್ಪಿಯಾಗಿಯೂ ಸಹ ದೇಶದ್ರೋಹಿ, ಉಗ್ರಗಾಮಿಗಳು ಮತ್ತು ಈ ದೇಶದ ಐಕ್ಯತೆ, ಭದ್ರತೆ, ಅಖಂಡತೆ ಮತ್ತು ಸಾರ್ವಭೌಮತ್ವಗಳಿಗೆ ಪ್ರಶ್ನೆ ಮಾಡುವವರ ಕೈಗಳಿಗೆ ದೊರೆತರೆ ಹೇಗೆ? ಈ ವಿಷಯದ ಬಗ್ಗೆ ಯೋಚನೆ ಮಾಡಿದರೆ ನಿದ್ದೆ ಬರುವುದಿಲ್ಲ. On the same day night, I halted at Shivamogga. ಆಗ ನಾನು ಅಲ್ಲಿನ ಪೋಲೀಸ್ ಅಧೀಕ್ಷಕರನ್ನು ಕರೆಸಿ, ಇದರ ಬಗ್ಗೆ ಚರ್ಚೆಯನ್ನೂ ಸಹ ಮಾಡಿದ್ದೇನೆ. ಮುಂದುವರೆದು ಸದರಿ ಸ್ಫೋಟಕಗಳು ಕಲ್ಲುಗಣಿಗಾರಿಕೆಗೆ ಉಪಯೋಗವಾಗುತ್ತದೆಯೋ ಅಥವಾ ಬೇರೆಯವರ ಕೈಗೆ ದೊರಕುತ್ತದೆಯೋ ಎಂಬುದಾಗಿ ಪ್ರಶ್ನೆ ಮಾಡಿದೆ. ಆಗ ಸದರಿ ಅಧಿಕಾರಿಯು ಕ್ವಾರಿಗಳಿಗೆ ಮಾತ್ರವೇ ಸ್ಫೋಟಕಗಳು ಉಪಯೋಗವಾಗುತ್ತದೆ ಎಂಬುದಾಗಿ ತಿಳಿಸಿದರು. To be on safer side, ಸ್ಫೋಟಕಗಳನ್ನು ಸಂಗ್ರಹಿಸಿಡಲು parking place ಬೇಕು. ಕಲ್ಲುಗಣಿಗಾರಿಕೆಗೆ ಸ್ಫೋಟಕಗಳನ್ನು ತರಿಸಿದ್ದಾರೆ ಎಂದರೆ ಇರಬಹುದು ಎಂದು ನಾನು ಮತ್ತು ನೀವೂ ಸಹ ಹೇಳಬಹುದು. ಆದರೆ, ಈ ರೀತಿಯಾದ ವ್ಯವಸ್ಥೆಗಳಿದ್ದರೆ ಹೇಗೆ? ಹೀಗಾಗಿ ಈ ವಿಚಾರದಲ್ಲಿ ಬಹಳ ಆಳವಾದ ತನಿಖೆಯನ್ನು ಮಾಡಬೇಕಾಗುತ್ತದೆ. ಈ ದೇಶದ ಐಕ್ಯತೆ, ಭದ್ರತೆ, ಸಮಗ್ರತೆಗಳಿಗಾಗಿ ಮಹಾನ್ ನಾಯಕರುಗಳು ತಮ್ಮ ಜೀವಗಳನ್ನು ಕಳೆದುಕೊಂಡಿದ್ದಾರೆ. ಆ ಪೈಕಿ ರಾಷ್ಟ್ರಪಿತ ಮಹಾತ್ಮಾಗಾಂಧಿಯವರೂ ಸಹ ಇದ್ದಾರೆ. ಈ ದೇಶದ ಮಾಜಿ ಪ್ರಧಾನಿ ನೆಚ್ಚಿನ ಶ್ರೀಮತಿ ಇಂದಿರಾಗಾಂಧಿಯವರೂ ಸಹ ಈ ದೇಶದ ಐಕ್ಯತೆ, ಭದ್ರತೆ ಮತ್ತು ಸಾರ್ವಭೌಮತ್ವಗಳನ್ನು ಕಾಪಾಡುವುದಕ್ಕೋಸ್ಕರ ಅವರ ಜೀವವನ್ನು ಕಳೆದುಕೊಂಡಿದ್ದಾರೆ. ಅವರು ಖಲಿಸ್ಥಾನವನ್ನು ಮಟ್ಟ ಹಾಕಿ, ಅದನ್ನು ಒಂದು ರಾಷ್ಟ್ರವನ್ನಾಗಿ ನಿರ್ಮಾಣ ಮಾಡುವುದಕ್ಕೆ ತೊಂದರೆ ಮಾಡಿದರು. 'Operation Blue Star' ಮುಖಾಂತರ Jarnail Singh Bhindranwale and his groupನ್ನು ನಿಲ್ಲಿಸಿ, ಪಂಜಾಬ್ ರಾಜ್ಯವು ದೇಶದ ಅವಿಭಾಜ್ಯ ಅಂಗವನ್ನಾಗಿ ಘೋಷಣೆ ಮಾಡಿದರ ಪ್ರಯುಕ್ತವಾಗಿ ಅವರು ತಮ್ಮ ಜೀವವನ್ನು ಕಳೆದುಕೊಂಡರು. ಈ ದೇಶದ ಐಕ್ಯತೆ ಸಲುವಾಗಿ, she chopped out one wing of Pakistan. ಅವರು ಪೂರ್ವ ಪಾಕಿಸ್ಥಾನವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಿದಾಗ, ಪಾಕಿಸ್ಥಾನ ಖಲಿಸ್ಥಾನ ಪ್ರದೇಶಗಳವರನ್ನು ಬೆನ್ನುಹತ್ತಿ arms and

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ammunitions, ಹಣವನ್ನು ನೀಡಿ ಪಂಜಾಬ್ ಪ್ರದೇಶವನ್ನು ಸ್ವತಂತ್ರ ದೇಶವನ್ನಾಗಿ ಮಾಡಲು ಶ್ರಮ ವಹಿಸಿದರು. If Punjab disintegrates India disintegrates ಎಂಬುದಾಗಿ ಅಂದಿನ ದಿನದಲ್ಲಿ ಈ ಬಗ್ಗೆ ಲೇಖನವೊಂದನ್ನು ಸಹ ಬರೆಯಲಾಗಿತ್ತು. ಆ ಸಂದರ್ಭದಲ್ಲಿ ನಾವು ಇನ್ನೂ ರಾಜಕಾರಣಕ್ಕೆ ಬಂದಿರಲಿಲ್ಲ. ಇಂತಹ ಪ್ರಕ್ರಿಯೆಯನ್ನು 'Operation Blue Star' ಮುಖಾಂತರ ನಿಲ್ಲಿಸಿ, ಇವತ್ತಿನ ಪಂಜಾಬ್ ರಾಜ್ಯವು ಈ ದೇಶದ ಅವಿಭಾಜ್ಯ ಅಂಗವಾಗಿ ಇರುವುದಕ್ಕಾಗಿ ಶ್ರೀಮತಿ ಇಂದಿರಾಗಾಂಧಿರವರು ಕೆಲಸ ಮಾಡಿದ್ದರ ಕಾರಣಕ್ಕಾಗಿ ತಮ್ಮ ಜೀವವನ್ನು ಕಳೆದುಕೊಂಡರು. ಇದೇ ರೀತಿಯಾಗಿ ಮಾಜಿ ಪ್ರಧಾನಿ ರಾಜೀವ್‌ಗಾಂಧಿರವರೂ ಸಹ ದೇಶದ ಐಕ್ಯತೆ ಮತ್ತು ಸಾರ್ವಭೌಮತ್ವಗಳ ವಿಚಾರಕ್ಕಾಗಿಯೇ ತಮ್ಮ ಜೀವವನ್ನು ಕಳೆದುಕೊಂಡರು. ನಾನು ಯಾವ ಕಾರಣಕ್ಕಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ ಎಂದರೆ ನಾವುಗಳೆಲ್ಲರೂ ಸಹ ಇದರ ಬಗ್ಗೆ ಬಹಳಷ್ಟು ಚಿಂತನೆಯನ್ನು ಮಾಡಬೇಕು. ವಿಧ್ವಂಸಕ ಕೃತ್ಯಗಳನ್ನು ಎಸಗುವ ದುಷ್ಟರ ಮತ್ತು ದೇಶದ ಸಾರ್ವಭೌಮತ್ವವನ್ನು ಪ್ರಶ್ನಿಸುವವರ ಕೈಗೆ ಈ ರೀತಿಯ ಸ್ಫೋಟಕಗಳು ಅಪ್ಪಿತಪ್ಪಿಯೂ ಸಹ ದೊರೆತರೆ ಪರಿಸ್ಥಿತಿ ಹೇಗೆ? ಮಾನ್ಯ ಸಚಿವರಿಗೆ ಈಗಷ್ಟೇ ಮದುವೆ ಮಾಡಿಕೊಂಡಿರುವ ಹಾಗೂ honeymoon ಪ್ರಾರಂಭಿಸದೇ ಇರುವಂತಹ ಪರಿಸ್ಥಿತಿಯಂತಾಗಿದೆ. ನಮ್ಮ ಭಾಗದಲ್ಲಿ ಅರಿಶಿಣ ಹಚ್ಚುವ ಶಾಸ್ತ್ರವನ್ನು ಮಾಡುತ್ತಾರೆ. ಆದರೆ ಅದನ್ನೂ ಸಹ ಇನ್ನೂ ಅವರಿಗೆ ಹಚ್ಚಿಲ್ಲದೇ ಇರುವಂತಹ ಪರಿಸ್ಥಿತಿ ಅವರದ್ದಾಗಿದೆ. ಹೀಗಾಗಿ ಎಲ್ಲಾ ವಿಚಾರದಲ್ಲಿ ನಾನು ಸಚಿವರನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡುವುದಿಲ್ಲ. Mines and Geology Minister has just recently taken charge. ಸಚಿವರು ಅಧಿಕಾರ ವಹಿಸಿಕೊಂಡ ತಕ್ಷಣವೇ ಮೊದಲನೇ ತುತ್ತು ಹರಳು ಎಂಬಂತಾಗಿದೆ. ಅಂದರೆ 'ಪ್ರಥಮ ಚುಂಬನ ದಂತ ಭಗ್ನ' ಎನ್ನುವ ಉಕ್ತಿಯಂತಾಗಿದೆ ಅವರ ಪರಿಸ್ಥಿತಿ. ಈ ರೀತಿಯ ದುರ್ಘಟನೆಗಳು ಸಂಭವಿಸಬಾರದಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಇದರಲ್ಲಿ ಬಹಳಷ್ಟು ಇಲಾಖೆಗಳ ವೈಫಲ್ಯವುಂಟಾಗಿದೆ. ಕೆಲವು ಮೂಲಗಳಿಂದ ಬಂದ ಮಾಹಿತಿ ಪ್ರಕಾರ ಇಂತಹ ಸ್ಫೋಟಕಗಳು ನೆರೆಯ ರಾಜ್ಯದ ರಾಯದುರ್ಗ ಪ್ರದೇಶದಿಂದ ಬಂದಿರುವುದು ತಿಳಿಯುತ್ತದೆ. ಇಂತಹ ಸ್ಫೋಟಕಗಳನ್ನು ತುಂಬಿದ ಲಾರಿಯು ರಾಯದುರ್ಗದಿಂದ ಹೊರಟು ರಾಜ್ಯದ ಮೊಳಕಾಲ್ಮೂರು, ಚಳ್ಳಕೆರೆ, ಚಿತ್ರದುರ್ಗ, ಹೊಳಲ್ಕೆರೆ, ಚನ್ನಗಿರಿ ಮತ್ತು ಹೊಳೆಹೊನ್ನೂರು ಮಾರ್ಗವಾಗಿ ರಾತ್ರಿ 9:00 ಗಂಟೆಗೆ ಶಿವಮೊಗ್ಗ ಜಿಲ್ಲೆಯನ್ನು ತಲುಪಿದೆ. ಈ ಮಾರ್ಗ ಮಧ್ಯದಲ್ಲಿ ಬರುವ ಸಂಬಂಧಪಟ್ಟ ಇಲಾಖೆಗಳು ಮತ್ತು ಅಧಿಕಾರಿಗಳ ವಿರುದ್ಧವೂ ತನಿಖೆಯನ್ನು ನಡೆಸಬೇಕು. ಸ್ಫೋಟಕಗಳನ್ನು ಹೊತ್ತ ಲಾರಿಯನ್ನು ಅವರುಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಗೆ ಅನುಮತಿಸಿದರು? How the police allowed that vehicle? ಆಯಾ ಜಿಲ್ಲೆಗಳಲ್ಲಿ ಗುಪ್ತಚರ ಇಲಾಖೆಯು ಕಾರ್ಯನಿರ್ವಹಿಸುತ್ತದೆ. ಎಲ್ಲಾ ಇಲಾಖೆಗಳ ಒಳ ವ್ಯವಸ್ಥೆಯೊಂದಿಗೆ ಸ್ಫೋಟಕಗಳನ್ನು ಹೊತ್ತ ಲಾರಿಯು ರಾಜ್ಯವನ್ನು ಪ್ರವೇಶಿಸಿದೆ. ಸ್ಫೋಟಕಗಳನ್ನು ಹೊತ್ತ ಲಾರಿಯ ಮುಂದೆ ಎರಡು ಜೀಪುಗಳು ಬರುತ್ತಿರುತ್ತವೆ. ಅವರುಗಳು ಪ್ರತಿಯೊಂದು ಪೊಲೀಸ್ ಠಾಣೆ ಮತ್ತು ತಪಾಸಣಾ ಕೇಂದ್ರಗಳಿಗೆ ಹಣದ ವ್ಯವಸ್ಥೆಯನ್ನು ಮಾಡಿ, ಅವರ ಅನುಮತಿ ಪಡೆದು ಲಾರಿಯ ಚಾಲಕರಿಗೆ ತಿಳಿಸಿದ ನಂತರದಲ್ಲಿ ಲಾರಿಯು ಹೊರಡುತ್ತದೆ. ಈ ವಿಚಾರದಲ್ಲಿ ಬಹಳ ಆಳವಾದ ತನಿಖೆಯನ್ನು ನಡೆಸಬೇಕು. ಇಷ್ಟು ಪ್ರಮಾಣದ ಸ್ಫೋಟಕಗಳು ಹೇಗೆ ಬಂದವು ಎನ್ನುವ ವಿಚಾರವು ಬಹಳ ಮಹತ್ವದ್ದಾಗಿದೆ. ಇದರಲ್ಲಿ ಯಾರು-ಯಾರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಾಯ, ಸಹಕಾರ ನೀಡಿ ತಮ್ಮ ಕೈ ಜೋಡಿಸಿ ಕಾರಣೀಭೂತರಾಗಿದ್ದಾರೆ ಅಂತಹ ಎಲ್ಲಾ ತಪ್ಪಿತಸ್ಥರನ್ನು ಹಿಡಿದು ಅವರಿಗೆ ಸರಿಯಾದ ಶಿಕ್ಷೆಯನ್ನು ನೀಡಬೇಕು. ಇದು ಮೊದಲನೇ ಬಾರಿಯಲ್ಲ, ಈ ರೀತಿಯಾದ ಸ್ಫೋಟಕಗಳು ಪ್ರತಿ 15-20 ದಿನಗಳಿಗೊಮ್ಮೆ ಬರುತ್ತವೆ, ಆದರೆ ಅವುಗಳು ಸ್ಫೋಟಿಸಿದ್ದಿಲ್ಲ; ಆದರೆ ದುರ್ದೈವದಿಂದಾಗಿ ಈ ಬಾರಿ ಸ್ಫೋಟಿಸಿದೆ ಎಂಬುದಾಗಿ ನಾನು ಅಲ್ಲಿಗೆ ಹೋದಾಗ ತಿಳಿಸುತ್ತಾರೆ. ಮುಂದುವರೆದು ಇಂತಹ ಸ್ಫೋಟಕಗಳು ಬಹಳಷ್ಟು ಬಾರಿ ಬಂದಿವೆ ಆದರೆ ಯಾವುದೇ ರೀತಿಯಾದ ಪ್ರಥಮ ವರ್ತಮಾನ ವರದಿಯನ್ನೂ ಸಹ ದಾಖಲಿಸುವುದಿಲ್ಲ ಎಂಬುದಾಗಿಯೂ ಸಹ ನನಗೆ ತಿಳಿಸಿದರು. ಈ ರೀತಿಯ ಸ್ಫೋಟಕಗಳನ್ನು ಸಾಗಿಸುವ ಘಟನೆಗಳು ಪುನರಾವರ್ತನೆಯಾಗಿದ್ದರೂ ಸಹ ಯಾವುದೇ ರೀತಿಯ ಪ್ರಕರಣಗಳನ್ನು ದಾಖಲಿಸಿರುವುದಿಲ್ಲ. ಅವರುಗಳಿಗೆ ಕೊಡಬೇಕಾದ್ದದ್ದು ಎಷ್ಟು ಎಂದು ತಿಳಿದುಕೊಂಡು ಅಷ್ಟನ್ನು ನೀಡಿದರೆ ಆಯಿತು; ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ. ಅವರುಗಳು ಕೂಡಿಕೊಂಡು ಮಾತನಾಡಿ ಹೆಚ್ಚು-ಕಡಿಮೆ ವ್ಯವಹಾರ ಮಾಡಿ ಮುಗಿಸುತ್ತಾರೆ. ಈ ಬಗ್ಗೆ ಯಾವುದೇ ಪ್ರಥಮ ವರ್ತಮಾನ ವರದಿ ದಾಖಲಾಗುವುದಿಲ್ಲ. ಇದರಲ್ಲಿ ಭಾಗಿಯಾದವರ ಪೈಕಿ ಯಾರಿಗಾದರೂ ಒಬ್ಬರಿಗೂ ಕಠಿಣ ಶಿಕ್ಷೆಯಾಗಿಲ್ಲ. ಅಲ್ಲಿ ಬಹಳಷ್ಟು ಪ್ರಮಾಣದಲ್ಲಿ ಕಾನೂನುಬಾಹಿರವಾಗಿ ಕಲ್ಲುಗಣಿಗಾರಿಕೆ ನಡೆಯುತ್ತಿದೆ. ಕಿರಾಣಿ ಅಂಗಡಿಯಲ್ಲಿ ಮಾರಾಟವಾಗುವ ಸಕ್ಕರೆ, ಬೆಲ್ಲ, ಎಣ್ಣೆ, ಮೆಣಸಿನಕಾಯಿಯಂತಹ ದಿನಸಿ ವಸ್ತುಗಳಂತೆ ಸ್ಫೋಟಕಗಳು ರಾಜಾರೋಷವಾಗಿ ಓಡಾಡುತ್ತವೆ. ಇದಕ್ಕೆ ಯಾವುದೇ ರೀತಿಯ ನಿರ್ಬಂಧವಿಲ್ಲ. ಹೀಗಾಗಿ ಈ ವಿಚಾರದಲ್ಲಿ ಸಮಗ್ರ ಹಾಗೂ ಆಳವಾದ ತನಿಖೆಗೆ ನಾನು ಒತ್ತಾಯಿಸುತ್ತೇನೆ. ಸಚಿವರು ಈ ಘಟನೆಯನ್ನು ಹಗುರವಾಗಿ ಪರಿಗಣಿಸಬಾರದೆಂದು ನಾನು ಹೇಳುತ್ತೇನೆ. You take this incident very seriously. ಇದರಿಂದಾಗಿ ಮುಂದಾಗುವ ದೊಡ್ಡ ಅನಾಹುತವನ್ನು ನಾವು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಬಾರಿಯ ದುರ್ಘಟನೆಯಲ್ಲಿ ಸ್ಫೋಟಕಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಫೋಟಿಸಿ, ಆರು ಜನರು ಮೃತರಾಗಿದ್ದಾರೆ. ಅವರುಗಳಿಗೆ ಮುಖ್ಯಮಂತ್ರಿಗಳು ಘೋಷಿಸಿರುವ ಪರಿಹಾರ ಧನದ ವಿಚಾರವು ನನ್ನ ಗಮನಕ್ಕೂ ಸಹ ಬಂದಿದೆ. ಆದರೆ ಅದು ಇನ್ನೂ ಸಹ ವಿತರಣೆಯಾಗಿಲ್ಲ. They themselves are accused, ಎಂಬುದಾಗಿ ನಾನು ಎಲ್ಲಿಯೋ ನೋಡಿದ್ದೇನೆ. ಈ ವಿಚಾರದಲ್ಲಿ ಸಮಗ್ರ ತನಿಖೆಯನ್ನು ನಡೆಸಿ, ತಪ್ಪಿತಸ್ಥರನ್ನು ಕಂಡು ಹಿಡಿದು, ಅವರನ್ನು ಕಠಿಣ ಶಿಕ್ಷೆಗೆ ಒಳಪಡಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಈ ರೀತಿಯಾಗಿ ಎಷ್ಟೋ ಬಾರಿ ನಡೆದಿದೆ. ನಾನು ಈ ರಾಜ್ಯದ ಮೇಲ್ಮನೆಯ ಪ್ರತಿಪ್ರಕ್ಷದ ನಾಯಕನಾಗಿದ್ದು, ರಾಜ್ಯದ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಈ ರೀತಿಯ ದುರ್ಘಟನೆ ನಡೆದಿದೆ ಎನ್ನುವುದೇ ನನಗೆ ನೋವುಂಟಾಗಿರುವ ಸಂಗತಿಯಾಗಿದೆ. ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿಯೇ ಈ ರೀತಿಯಾದ ಕಾನೂನುಬಾಹಿರವಾದ ಚಟುವಟಿಕೆಗಳು ರಾಜಾರೋಷವಾಗಿ ನಡೆಯುತ್ತಿದ್ದರೆ, ದೇಶಕ್ಕೆ ಆತಂಕಕಾರಿಯಾಗುವ ಚಟುವಟಿಕೆ ಮತ್ತು ಕ್ರಿಯೆಗಳು ಅಲ್ಲಿ ನಡೆಯುತಿದ್ದರೆ ಯಾರು ಯಾರಿಗೆ ರಕ್ಷಣೆಯನ್ನು ನೀಡಬೇಕು? 'ಬೇಲಿಯೇ ಎದ್ದು ಹೊಲವನ್ನು ಮೇಯ್ದಂತೆ' ಎನ್ನುವ ಉಕ್ತಿಯಂತಾಗಿದೆ ಇಲ್ಲಿನ ಪರಿಸ್ಥಿತಿ. Who will protect the interest of the state?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ರಾಜ್ಯದ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಘಟಿಸಬಾರದಂತಹ ಈ ದುರ್ಘಟನೆಯು ನಡೆದಿದೆ. ಇದು ಕಲ್ಲುಗಣಿಗಾರಿಕೆಗೆ ಸ್ಫೋಟಕ ವಸ್ತುಗಳನ್ನು ಸಾಗಿಸುವ ವಿಚಾರದಲ್ಲಿ ಆಗಿರುವ ಅನಾಹುತವಾಗಿದೆ. ಅಭಿವೃದ್ಧಿ ಮತ್ತು ಕಾನೂನು ಸುವ್ಯವಸ್ಥೆಗಳ ವಿಚಾರಗಳಲ್ಲಿ ರಾಜ್ಯದ ಮುಖ್ಯಮಂತ್ರಿಗಳ ಜಿಲ್ಲೆಗೆ ವಿಶೇಷವಾದ ಗೌರವವಿದೆ. ರಾಜ್ಯದಲ್ಲಿರುವ ಅನೇಕ ಕಲ್ಲು ಗಣಿಗಾರಿಕೆಗಳಲ್ಲಿ ಇಂತಹ ಸ್ಫೋಟಕಗಳನ್ನೇ ಬಳಸುತ್ತಾರೆ. ಇಂತಹ ದುರಂತಗಳು ನಡೆದಾಗ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತೇವೆ ಎನ್ನುವುದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಇದರ ಬಗ್ಗೆ ತನಿಖೆಗೆ ಆದೇಶಿಸಿರುವುದನ್ನೂ ಸಹ ಗಮನಿಸಲಾಗಿದೆ. ಗಣಿ ಇಲಾಖೆಯ ಮಂತ್ರಿಗಳು ಘಟನೆ ಸಂಭವಿಸಿದ ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ವಿರೋಧ ಪಕ್ಷದ ನಾಯಕರು ಸ್ಥಳಕ್ಕೆ ಭೇಟಿ ನೀಡಿ, ತನಿಖೆ ನಡೆಸಿ, ಅಲ್ಲಾಗಿರುವ ಲೋಪಗಳ ಬಗ್ಗೆ ಸದನದಲ್ಲಿ ಹೇಳುತ್ತಿದ್ದಾರೆ. ಈ ಸಂಗತಿಗಳು ಅವರ ಮನಸ್ಸಿನಲ್ಲಿರಲಿ. ಇದರಲ್ಲಿ ವೈಫಲ್ಯ ಎನ್ನುವುದಕ್ಕಿಂತ ಹೆಚ್ಚಾಗಿ ನಡೆದಿರುವ ಘಟನೆಗೆ ತಕ್ಷಣವೇ ಕ್ರಮಕೈಗೊಳ್ಳುವುದಕ್ಕೆ ಸರ್ಕಾರವು ಬದ್ಧವಾಗಿದೆ. ವಿರೋಧ ಪಕ್ಷದ ನಾಯಕರು ತಮ್ಮ ಅಭಿಪ್ರಾಯಗಳನ್ನೆಲ್ಲಾ ನೀಡಲಿ. ಇದು ಪೂರ್ವ ನಿಯೋಜಿತ ಘಟನೆಯಲ್ಲ. ಅಲ್ಲಿ ನಡೆದಿರುವ ದುರಂತಕ್ಕೆ ಸರ್ಕಾರವು ತಕ್ಷಣವೇ ಕ್ರಮಕೈಗೊಳ್ಳಲು ಸಿದ್ಧವಿದೆ. ವಿರೋಧ ಪಕ್ಷದ ನಾಯಕರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿರಿಯರಾಗಿದ್ದು, ಸ್ಥಳ ತನಿಖೆ ಮಾಡಿರುವುದರಿಂದ ಅವರಿಗಿರುವ ಅನುಭವಗಳನ್ನೆಲ್ಲಾ ಅವರು ಹೇಳಲಿ. ಅವರ ಭಾವನೆಗೆ ಸರ್ಕಾರವು ಸ್ಪಂದಿಸಿ, ನಿರ್ದಾಕ್ಷಿಣ್ಯವಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಈ ವಿಚಾರದಲ್ಲಿ ಆಂತಕ ಬೇಡ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ರಾಜ್ಯದ ಮುಖ್ಯಮಂತ್ರಿಗಳ ಮೇಲೆ ನಾನು ಆಪಾದನೆ ಮಾಡಿಲ್ಲ. ನನಗೂ ಸಹ ಅವರ ಬಗ್ಗೆ ಗೌರವವಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರ ವಿಚಾರ ಮಂಡನೆ ಬಹಳ ಅದ್ಭುತವಾದುದು. ಅವರ ಅನುಭವ ಮತ್ತು ಶ್ರದ್ಧೆಯ ಬಗ್ಗೆ ನಮಗೆ ಯಾರಿಗೂ ಸಹ ಗೊಂದಲವಿಲ್ಲ. ಹಿರಿಯರಾಗಿ ಅವರು ಹೇಳುವುದನ್ನು ಹಾಗೂ ಅಲ್ಲಿ ನಡೆದಿರುವ ತಪ್ಪುಗಳನ್ನು ಸರಿಪಡಿಸಲು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರವು ಸಿದ್ಧವಿದೆ. ಹೀಗಾಗಿ ಅವರು ವಿಷಯವನ್ನು ಮಂಡಿಸಲಿ.

**(ಮುಂದು)**

(43) 1–2–2021/ 1–50 /ಎಲ್ಎಂ/ಎಂಡಿ

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೇ, ನನ್ನ ಮನಸ್ಸಿನಲ್ಲಿರುವ ನೋವು, ಆತಂಕ ಏನು ಎಂದರೆ ಗೌರವಾನ್ವಿತ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಈ ರೀತಿ ಆಗಿರುವುದರಿಂದ ನಿಜವಾಗಿಯು ನನಗೆ ಬಹಳಷ್ಟು ನೋವಾಗಿದೆ. ವೈಫಲ್ಯ ಇದ್ದೇ ಇರುತ್ತದೆ. It is part of an administration. ಆಡಳಿತದಲ್ಲಿ ವೈಫಲ್ಯಗಳೇ ಇರುವುದಿಲ್ಲವೆಂದು ನಾನು ಹೇಳುವುದಿಲ್ಲ. Man is bound to commit a mistake. "To err is human". ಅದರ ಬಗ್ಗೆ ನನಗೇನು ಇಲ್ಲ. ಆದರೂ ಈ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಜಿಲ್ಲೆಯ ಬಗ್ಗೆ ಅಂತಹ ಒಂದು filtered stop ತೆಗೆದುಕೊಳ್ಳುತ್ತಾರೆಂದರೆ, ಇದರ ಬಗ್ಗೆ ನೂರು ಬಾರಿ ಯೋಚನೆ ಮಾಡಿ. ಒಳ್ಳೆಯ ಜಿಲ್ಲಾಧಿಕಾರಿಗಳನ್ನು, ಒಳ್ಳೆಯ Superintendent of Police and district level Heads of all the Departments, they will bring the name to the Chief Minister and also to the Government. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಈ ರೀತಿ ಆದಾಗ ರಾಜ್ಯದ ಜನರು ಏನು ಯೋಚನೆ ಮಾಡುತ್ತಾರೆ ಎಂದರೆ, ಮೊನ್ನೆ ಶಿವಮೊಗ್ಗದಲ್ಲಿಯೇ 1350 ಕೆ.ಜಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಫೋಟವಾಗಿ 6 ಜನರು ಛಿದ್ರವಾಗಿ ಹೋದರು, ಅಲ್ಲಿ ಏನು ಮಾಡಲಿಲ್ಲ, ನಮ್ಮದು ಸಣ್ಣ ಕೇಸ್ ಇದಕ್ಕೆ ಕೇಸ್ ಹಾಕುತ್ತೀರಲಾ ಎಂದು ಕೇಳುತ್ತಾರೆ. ಇದಕ್ಕಾಗಿ ನನಗೆ ಆಂತಕವಾಗಿದೆ. ಅಲ್ಲಿಯೇ ಆಡಳಿತ ಇಷ್ಟು ಸಡಿಲವಾಗಿದೆ ಎಂದರೆ, ಇಡೀ ರಾಜ್ಯದಲ್ಲಿ ಆಡಳಿತ ಎಷ್ಟು ಸಡಿಲವಿರಬಹುದು ಎಂದು, it is my feeling. I don't want to accuse anybody. ಏಕೆ ಆಡಳಿತ ಬಿಗಿಯಾಗುತ್ತಿಲ್ಲ? Administration should be very tight. ಪಾರದರ್ಶಕವಾದ ಆಡಳಿತವನ್ನು ಕೊಡಬೇಕು. ಆರುವರೆ ಕೋಟಿ ಜನರು ಮೆಚ್ಚುಗೆ ಸೂಚಿಸಬೇಕು. ಆ ಮಟ್ಟದಲ್ಲಿ ತಾವು ಬರಬೇಕು. ಆ ರೀತಿ ಆಡಳಿತ ಕೊಡಲು ಆಗುವುದಿಲ್ಲ ಎಂದು ಸಭಾನಾಯಕರೆ ನಗುತ್ತಿದ್ದಾರೆ. I am also part of the Government. ನಾವು ನೀವು ಎಂದರೆ, ಇಂಡಿಯಾ ಪಾಕಿಸ್ತಾನವಲ್ಲ. We are also part of the Government. ಒಳ್ಳೆಯ ಆಡಳಿತವನ್ನು ಕೊಟ್ಟರೆ ನಾವು ನಿಮಗೆ ಶಹಬ್ಬಾಸಗಿರಿ ಕೊಡುತ್ತೇವೆ, ಅಭಿನಂದಿಸುತ್ತೇವೆ. ಪ್ರತಿಪಕ್ಷದಲ್ಲಿ ಇರುವ ನಾವು ಎಲ್ಲದಕ್ಕೂ ಟೀಕೆ ಮಾಡುವುದಿಲ್ಲ. My criticism will always be a constructive criticism, not a destructive criticism. If you do good things, I will be the first man to appreciate and congratulate you. ವಿರೋಧ ಪಕ್ಷದವರು ಎಂದರೆ, ಬರಿ ವಿರೋಧವನ್ನೇ ಮಾಡಲು ಇರುವುದಿಲ್ಲ ಇಲ್ಲಿ ನಾವು. ನೀವು ತಪ್ಪಿದಾಗ ಅದರ ಬಗ್ಗೆ ನಾವು ಹೇಳಬೇಕಾಗುತ್ತದೆ. It is our duty. ಲೋಪ-ದೋಷಗಳನ್ನು ತಿಳಿಸಿ ಹೇಳಿದಾಗ ಅದನ್ನು ನೀವು ಸರಿ ಮಾಡಿಕೊಳ್ಳುತ್ತೀರಿ, ನಿಮಗೇ ಅನುಕೂಲವಾಗುತ್ತದೆ. ನಿಜ ಹೇಳಬೇಕು ಎಂದರೆ, ನಾವು ನಿಮಗೆ ಮಾರ್ಗದರ್ಶನ ಮಾಡಿದ ಹಾಗೆ. You take it in a good spirit. ನಾವೇನು destructive criticism ಮಾಡಬೇಕೆಂದು ಇಲ್ಲ. ಮನೆ ಯಜಮಾನ ಸರಿ ಇದ್ದರೆ ಕುಟುಂಬದ ಎಲ್ಲಾ ಸದಸ್ಯರು ಸರಿ ಇರುತ್ತಾರೆ. ಮನೆ ಯಜಮಾನ ದಾರಿ ತಪ್ಪಿದರೆ, ಮನೆ ಯಜಮಾನ ದಾರಿ ತಪ್ಪಿದರೆ, ಕೆಲಸದಲ್ಲಿ ವಿಫಲನಾದರೆ ಉಳಿದ ಸದಸ್ಯರಿಗೂ ಸಡಿಲ ಸಿಗುತ್ತದೆ. ಆ ರೀತಿಯಾಗಬಾರದು ಎನ್ನುವ ದೃಷ್ಟಿಯಿಂದ ಸಮಜಾಯಿಷಿ ಹೇಳುತ್ತಿದ್ದೇನೆ. ಆ ಸ್ಫೋಟಕ ಹೇಗೆ ಆಗಿದೆ ಎನ್ನುವ ಬಗ್ಗೆ ನಾನು ಪದೇ-ಪದೇ ಹೇಳಲು ಹೋಗುವುದಿಲ್ಲ. ಅದು ಇನ್ನಾವುದಕ್ಕೆ ಉಪಯೋಗವಾಗಿದೆ, ಇದರ ಆಳ ಏನು, ಅಂತ್ಯ ಏನು, ಇದರಲ್ಲಿ ಯಾರ್ಯಾರು ಭಾಗಿಗಳಾಗಿದ್ದಾರೆ, ಈ ಮಧ್ಯೆದಲ್ಲಿ ಎಷ್ಟು ಇಲಾಖೆಗಳು ಬರುತ್ತವೆ ಆ ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಅಧಿಕಾರಿಗಳ ತಲೆದಂಡವಾಗಬೇಕು. ಇಷ್ಟು ರಾಜಾರೋಷವಾಗಿ heavy explosives ತಂದಿದ್ದಾರೆ. There are no restrictions at all. Only on payment of money they are getting it and moving very easily. ಉನ್ನತ ಮಟ್ಟದ ತನಿಖೆ ಮಾಡಿಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಕೊನೆಯದಾಗಿ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ, ದುಷ್ಟರಿಗೆ ಶಿಕ್ಷೆಯಾಗಬೇಕು, ಶಿಷ್ಟರ ರಕ್ಷಣೆಯಾಗಬೇಕು. ಆದರೆ ಈಗ ದುಷ್ಟರ ರಕ್ಷಣೆಯಾಗುತ್ತಿದೆ, ಶಿಷ್ಟರಿಗೆ ಶಿಕ್ಷೆಯಾಗುತ್ತಿದೆ. ಇದನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ, ನಮ್ಮ ಹಿರಿಯರ ಕಾಲದಿಂದ, 5000 ವರ್ಷಗಳ ಇತಿಹಾಸವಿರುವಂತಹ ಈ ದೇಶದ ಪರಂಪರೆ, ಸಂಸ್ಕೃತಿಯಲ್ಲಿ ದುಷ್ಟರಿಗೆ ಶಿಕ್ಷೆಯಾಗಬೇಕು, ಶಿಷ್ಟರ ರಕ್ಷಣೆಯಾಗಬೇಕು ಎಂದು ಹೇಳಿಕೊಂಡು ಬಂದಿದೆ. ಇದು ಸರ್ಕಾರದ ಆದ್ಯ ಕರ್ತವ್ಯ. ಆದರೆ ಈ ಸರ್ಕಾರ ದುಷ್ಟರ ರಕ್ಷಣೆ ಮಾಡಲು ಹೊರಟರೆ ಏನು ಹೇಳುವುದು. ಹೀಗಾದರೆ ಒಳ್ಳೆಯವರು, ಶಿಷ್ಟರು, ಸಂಭಾವಿತರು ನಾವು ಒಳ್ಳೆಯವರಾಗಿ ಇರುವುದು ಸರಿಯಲ್ಲ, ನಾವು ಅವರಂತೆ ಮಾಡೋಣ ಎಂದು ಹೇಳುತ್ತಾರೆ. ನಾವು ಅವರಂತೆ ಮಾಡೋಣ, ನಿಷ್ಠೆ, ಪ್ರಾಮಾಣಿಕತೆ, ದಕ್ಷತೆಯಿಂದ ಸೇವೆ ಮಾಡುವ ನಮಗೆ ಬೆಲೆಯೇ ಇಲ್ಲ ಎಂದು ಹೇಳುತ್ತಾರೆ. ಒಳ್ಳೆಯ ಪ್ರಮಾಣಿಕ ಅಧಿಕಾರಿಗಳು, bureaucrats who are known for honesty and integrity, ಅವರೇನು ಚಿಂತನೆ ಮಾಡುತ್ತಾರೆಂದರೆ, ಎಲ್ಲರೂ ದುಡ್ಡು ಹೊಡೆಯುತ್ತಿದ್ದಾರೆ. ನಾವು ಪ್ರಾಮಾಣಿಕತೆಯಿಂದ ಕೆಲಸ ಮಾಡಿ ನಮ್ಮ ಕುಟುಂಬದವರಿಂದಲೂ ಬೈಯಿಸಿಕೊಳ್ಳುತ್ತಿದ್ದೇವೆ, ಇನ್ನು ನಾವು ದಾರಿ ಬಿಡೋಣ ಅನ್ನುತ್ತಾರೆ. ಅದಕ್ಕೆ ದುಷ್ಟರಿಗೆ ಶಿಕ್ಷೆ ಕೊಡಬೇಕು, ಶಿಷ್ಟರ ರಕ್ಷಣೆಯಾಗಬೇಕು. ಇದು ಈ ಸರ್ಕಾರದ ಧ್ಯೇಯ ಆಗಬೇಕು. ಸಭಾನಾಯಕರೇ, ದಯಮಾಡಿ ದುಷ್ಟರ ರಕ್ಷಣೆ ಮಾಡಲು ಹೋಗಬೇಡಿ. ದುಷ್ಟರ ಯಾವ ಮರ್ಜಿ, ಮುಲಾಜಿಗೆ, ಬಿಡೆಗೆ ಒಳಗಾಗದೆ, you book them and punish them. Then you will give a good lesson to others. ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಭಯ ಬರಬೇಕು. ನಮ್ಮಲ್ಲಿ Judicial Jurisprudence ನಲ್ಲಿ ಶಿಕ್ಷೆ ಎನ್ನುವುದು ಬರುತ್ತದೆ. It is called as a deterrent theory. ಒಬ್ಬ ಮನುಷ್ಯ ತಪ್ಪು ಮಾಡಿ ಜೈಲು ವಾಸ ಅನುಭವಿಸಿದರೆ life imprisonment DUÀ°, death sentence ಆಗಲಿ ಮಾಡುವ ಉದ್ದೇಶವೇನು, ಅವನ ಜೀವ ತೆಗೆದರೆ ಮುಗಿಯಲಿಲ್ಲ. ಅದು deterrent theory. ಅದರಿಂದ ಉಳಿದವರು ಸರಿ ದಾರಿಗೆ ಬರಲಿ ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಕಾನೂನು ಇರುತ್ತದೆ. ಸರ್ಕಾರ ಆ ರೀತಿಯಾದ ಕಾನೂನನ್ನು ಜಾರಿಗೆ ತರಬೇಕು. ಒಳ್ಳೆಯವರಿಗೆ scope ಕೊಡಿ, ಒಳ್ಳೆಯ ಜಾಗಗಳಿಗೆ ಹಾಕಿ, honest and upright ಮಂದಿಯನ್ನು ಅಂದರೆ ಒಳ್ಳೆಯ ಜಿಲ್ಲಾಧಿಕಾರಿಗಳನ್ನು, ಒಳ್ಳೆಯ Superintendent of Police ನ್ನು ಅಂತಹ ಜಾಗಗಳಿಗೆ ಹಾಕಿ. ಅವರನ್ನು ನೀವು non-executive posts ಗೆ ಹಾಕುತ್ತೀರಿ. ಯಾರು ಪ್ರಮಾಣಿಕರಾಗಿದ್ದಾರೆ, ನಿಷ್ಠಾವಂತರಾಗಿದ್ದಾರೆ ಅವರಿಗೆ ನಿಮ್ಮನ್ನು ಸ್ಪಂದಿಸಲು ಆಗುವುದಿಲ್ಲ. ಅವರು 'I can't act according to your whims and fancies' ಎಂದು ಹೇಳುತ್ತಾರೆ. ಅದಕ್ಕಾಗಿ ಅವರನ್ನು ಟಿಂಟಿ-ಜಥಜಭಿಣಣುತಜ ಜಾಗಕ್ಕೆ ಹಾಕಿಬಿಡುತ್ತೀರಿ. ಈ ರೀತಿಯಾಗಬಾರದು. ಒಳ್ಳೆಯ ಕೆಲಸ ಮಾಡಿ, ಈ ಸರ್ಕಾರ ತನ್ನ ಪೂರ್ಣ ಅವಧಿಯನ್ನು ಮುಗಿಸಬೇಕು. ಈ ಸರ್ಕಾರ ನಂಬರ್ ಒನ್ ರಾಜ್ಯವಾಗುವಂತಹ ಕೆಲಸ ಮಾಡುತ್ತದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಿ. ನಂಬರ್ ಒನ್ ಆಗಬೇಕಾದರೆ ಪ್ರಾಮಾಣಿಕರಿಗೆ, ಒಳ್ಳೆಯವರಿಗೆ, ನಿಷ್ಠಾವಂತರಿಗೆ, ಜನಪರ ನಿಲುವು ಇರುವಂತಹವರಿಗೆ scope ಕೊಡಿ. ಅದನ್ನು ಬಿಟ್ಟು ಅದರ ವಿರುದ್ಧ ಮಾಡಿದರೆ, you Government days are numbered ಎಚ್ಚರಿಕೆಯಾಗುತ್ತದೆ. I am not intending it. ಕೊನೆಯದಾಗಿ ಒಂದು ವಿಚಾರವನ್ನು ಹೇಳುತ್ತೇನೆ. ಇದನ್ನು judicial enquiry ಮಾಡಿಸಿ, you come out with the truth. ಉಚ್ಚನ್ಯಾಯಾಲಯದ ಒಳ್ಳೆಯ ಹಾಲಿ ನ್ಯಾಯಾಧೀಶರಿಂದ ಇದರ ತನಿಖೆ ಮಾಡಿಸಿದರೆ ಸತ್ಯದ ವಿಚಾರದ ಮೇಲೆ ಬೆಳಕು ಚೆಲ್ಲುವಂತಹ ಕೆಲಸವಾಗುತ್ತದೆ. ಈ ಸರ್ಕಾರಕ್ಕೆ ತಮ್ಮ ಮುಖಾಂತರ ನಾನು ಮನವಿ ಮಾಡಿಕೊಳ್ಳುವುದು, ನಡೆದಿರುವ ಘಟನೆ ಬರಿ ಕಲ್ಲು ಗಣಿಗಾರಿಕೆಗೆ ಈ explosive ಉಪಯೋಗವಾಗಿದೆಯೆ ಇಲ್ಲವೇ ಎನ್ನುವುದರ ಬಗ್ಗೆಯು ನನಗೆ ಜಿಜ್ಞಾಸೆ ಇದೆ. ಬೇರೆ-ಬೇರೆ ಕಾರಣಗಳು ಇರಬಹುದು. ಎಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಹಲವಾರು ನನ್ನ ಸ್ನೇಹಿತರು ಮಾತನಾಡುವವರು ಇದ್ದಾರೆ. ಇದನ್ನು ನಾನು ಲಂಬಿಸಲಿಕ್ಕೆ ಹೋಗುವುದಿಲ್ಲ. You take this incident very seriously. ಇದು ಬಹಳ ಗಂಭೀರವಾದ ವಿಚಾರ. ಇದರ ಸತ್ಯ ಹೊರಗೆ ಬರಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಹಾಗೆ ಆಗಬೇಕಾದರೆ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರ ಮುಖಾಂತರ ಇದರ ತನಿಖೆಯಾಗಬೇಕು ಎಂದು ತಮ್ಮ ಮುಖಾಂತರ ಈ ಸರ್ಕಾರವನ್ನು ಕೇಳಿಕೊಂಡು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಮಸ್ಕಾರಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಗುತ್ತಿದೆ.

**(44) 1.2.2021 : 3.20 ಪಿಕೆ:ಆರ್‌ಎನ್**

**(ಮಧ್ಯಾಹ್ನ 1 ಗಂಟೆ 58 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.)**

**(ಸಭಾಪತಿಗಳಾದ ಕೆ.ಪ್ರತಾಪ್‌ಚಂದ್ರ ಶೆಟ್ಟಿಯವರು ಪೀಠಾಸೀನರಾದರು)**

**<u>ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ</u>**
**ವಿಷಯ: ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ ಅಕ್ರಮವಾಗಿ ಸಂಗ್ರಹಿಸಿದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಕುರಿತು**

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಪ್ರಸ್ತಾಪ ಮಾಡಿದಂತಹ ಕಲ್ಲು ಗಣಿ ಇತ್ಯಾದಿ ವಿಷಯಗಳು ಬಹಳ ಗಂಭೀರವಾದವುಗಳು. ಎಲ್ಲರೂ ಪಕ್ಷಾತೀತವಾಗಿ ಯೋಚನೆ ಮಾಡಬೇಕಾದ ವಿಷಯ ಇದಾಗಿದೆ. ಹಿಂದೆ, ಲಿಕ್ಕರ್ ಮಾಫಿಯಾ ಇತ್ಯಾದಿ ಮಾಫಿಯಗಳ ಕೇಳುತ್ತಿದ್ದೆವು. ಈಗ ರಾಜ್ಯದಲ್ಲಿ ಪ್ರಬಲವಾಗಿರುವಂಥದ್ದು ಮರಳು ಲಾಬಿ, ಮತ್ತು ಕಲ್ಲಿನ ಲಾಬಿ. ಮರಳು ಲಾಬಿ ಸರ್ವತ್ರ ಇದೆ. ಈ ಲಾಬಿಗಳ ಪರಿಣಾಮವಾಗಿ ಸಾಮಾನ್ಯ ಬಡಬಗ್ಗರು ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಮರಳಿನ ಕ್ವಾರಿಗಳ ಮೇಲಿನ ಹಿಡಿತ ಯಾವಾಗ ಹೆಚ್ಚಾಯಿತೋ ಆಗ ಮರಳಿನ ಜಾಗದಲ್ಲಿ ಬಳಸುವ ಕಲ್ಲಿನ ಕ್ವಾರಿಗಳಿಗೂ ಬಹಳ ದೊಡ್ಡ ಬೇಡಿಕೆ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಂತೂ ಮರಳು ಮತ್ತು ಕಲ್ಲು ಕ್ವಾರಿ ಎರಡೂ ಲಾಬಿಗಳಿವೆ. ಉತ್ತರ ಕನ್ನಡದಲ್ಲಿ ಮರಳಿನ ಲಾಬಿ ಇದೆ, ಅಲ್ಲಿ ಹೊಯಿಗೆ ಇದೆ. ಮೊನ್ನೆ ನಡೆದಂತಹ ಘಟನೆ ಸ್ಫೋಟಗೊಂಡ ಕಾರಣ ಅದು ಇವತ್ತು ನಮ್ಮ ಗಮನಕ್ಕೆ ಬಂದಿದೆ ಅಷ್ಟೆ. ಇದು ಬೆಂಗಳೂರಿನ ಮಾದಕ ಪ್ರಕರಣ ಇದ್ದ ಹಾಗೆ ಎಂದು ಹೇಳಿದರೆ ತಪ್ಪಾಗಲಾರದು. ಈ ಪ್ರಕರಣಗಳಲ್ಲಿ ಸಿಕ್ಕಿಹಾಕಿಕೊಂಡವರ ಮುಖ ಕಾಣಿಸಿತು ಆದರೆ, ಅದರ ವ್ಯಾಪ್ತಿ ಬಹಳ ದೊಡ್ಡದಿತ್ತು. ಒಮ್ಮೆ ಅಧಿಕಾರಿಗಳಿಗೆ ಫ್ರೀ ಬಿಟ್ಟ ಕೂಡಲೇ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ, ಅಲ್ಲಿ ಅಷ್ಟು ಕೆ.ಜಿ. ಸಿಕ್ಕಿತು, ಇಲ್ಲಿ ಎಷ್ಟು ಕೆ.ಜಿ ಸಿಕ್ಕಿತು ಎಂದು ಮಾದಕ ಪ್ರಕರಣಗಳನ್ನು ಹಿಡಿದು ಹಾಕಿದರು. ಅಂದರೆ, ಪೊಲೀಸ್ ಇಲಾಖೆಗೆ ಇಂತಹ ಮಾಫಿಯಾಗಳ ಕೆಲಸವೆಲ್ಲವೂ ಗೊತ್ತಿರುತ್ತದೆ. ಆದರೆ, ನಾನಾ ಕಾರಣಗಳಿಂದ ಅಂಥದ್ದನ್ನು ಹಾಗೆಯೇ ಬಿಟ್ಟಿರುತ್ತಾರೆ. ಅದು ಸ್ವಂತ ಕಾರಣಕ್ಕಾಗಿ ಇರಬಹುದು ಅಥವಾ ರಾಜಕೀಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಡಗಳಿರಬಹುದು ಅಥವಾ ಬೇರೆ ಯಾವುದೋ compulsion ಇರಬಹುದು. ಇಲ್ಲೂ ಕೂಡ ಹಾಗೆಯೇ ಆಗಿದೆ. ಶಿವಮೊಗ್ಗದ ಗಣಿ ಪ್ರಕರಣ ರಾಜ್ಯದ ಕಣ್ಣನ್ನು ತೆರೆಸಿದೆ; ತೆರೆಸಬೇಕು ಕೂಡ. ಶಿವಮೊಗ್ಗದ ಪ್ರಕರಣದ ಕೆಲವೇ ದಿನಗಳ ನಂತರ, ಚಿತ್ರದುರ್ಗ ಜಿಲ್ಲೆಯ ಜಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ, ಬಹಳ ದೊಡ್ಡ ಪ್ರಮಾಣದಲ್ಲಿ ಲೋಡ್‌ಗಟ್ಟಲೆ ಸ್ಫೋಟಕ ವಸ್ತುಗಳು stockyard ನಲ್ಲಿ ಸಿಕ್ಕಿದವು. ಅದೇನಾದರೂ ಶಿವಮೊಗ್ಗದ ಹತ್ತಿರ ಸ್ಫೋಟಗೊಂಡಿದ್ದರೆ ಸುತ್ತಮುತ್ತಲ 4-5 ಜಿಲ್ಲೆಗಳು ಸರ್ವನಾಶವಾಗುತ್ತಿತ್ತು. ಬೆಂಗಳೂರಿನ ಸುತ್ತಮುತ್ತ ಮತ್ತು ಎಲ್ಲೆಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆಯೋ ಅಲ್ಲೆಲ್ಲವೂ ಇದೆ. ಆದರೆ 21ನೇ ತಾರೀಖಿನಂದು ಶಿವಮೊಗ್ಗದಲ್ಲಿ ಎಚ್ಚರಿಕೆ ಗಂಟೆ ಬಾರಿಸಿದೆ. 23 ಮತ್ತು 24ನೇ ತಾರೀಖಿನಂದು ನನ್ನ ಮಗನ ಮದುವೆ ಇತ್ತು. ಸನ್ಮಾನ್ಯ ಪಾಟೀಲ್‌ರವರು ಆ ಗಣಿ ಭೇಟಿ ಮಾಡಬೇಕೆಂದು ಬಂದಿದ್ದಾಗ ನಮ್ಮ ಮನೆಯ ಶುಭ ಕಾರ್ಯದಲ್ಲೂ ಪಾಲ್ಗೊಂಡು ವಾಪಸ್ಸು ಹೋದರು.

ಮಾನ್ಯ ಸಭಾಪತಿಯವರೇ, ನಮ್ಮ ಆಯನೂರು ಗ್ರಾಮ ಸ್ಫೋಟನೆ ನಡೆದ ಜಾಗದಿಂದ ಸುಮಾರು 26 ಕಿಲೋ ಮೀಟರ್ ದೂರದಲ್ಲಿದೆ. ಸ್ಫೋಟ ಆದಾಗ ನನ್ನ ಮನೆಯ ಮೇಲೆ ಏನೋ ಬಿದ್ದಿರಬೇಕು ಎನ್ನುವ ಅನುಭವವಾಯಿತು. ಮೊದಲು ಒಂದು ಸಣ್ಣ ಸ್ಫೋಟ ಕೇಳಿಸಿತು. ಆನಂತರ ಅಗಾಧವಾದ ಶಬ್ದ ಬಂತು. ಅದು ಏನು ಎಂದು ನಮಗೆ ಅರ್ಥವಾಗಲಿಲ್ಲ. ಭೂಕಂಪವಾಗುತ್ತಿದೆ ಎಂದು ಮನೆಯಲ್ಲಿದ್ದವರೆಲ್ಲರೂ ಹೊರಗಡೆ ಓಡಿ ಬಂದೆವು. ಮೊದಲು ಸಣ್ಣ ಶಬ್ದ ಮತ್ತು ನಂತರ ದೊಡ್ಡ ಶಬ್ದ ಬಂತು. ನಮ್ಮ ತೋಟದ ಮನೆಯ Transformers explode ಆಗಿದೆಯೇ ಎನ್ನುವ ಅನುಮಾನ ಬಂದು ಪರಿಶೀಲಿಸಿದೆವು; ಅಲ್ಲೇನು ಆಗಿರಲಿಲ್ಲ. ಆಯನೂರಿನ ಕುಮ್ಸಿ ಠಾಣೆಯ ನಮ್ಮ ಸಬ್‌ಇನ್ಸ್‌ಪೆಕ್ಟರ್‌ರವರಿಗೆ ದೂರವಾಣಿ ಮಾಡಿ, ಇಷ್ಟು ದೊಡ್ಡ ಶಬ್ದ ಬಂದಿದುದರ ಬಗ್ಗೆ ಕೇಳಿದಾಗ, ಶಿವಮೊಗ್ಗ ನಗರದಲ್ಲಿ ವಾಸ ಮಾಡುವ ಅವರು, ನಾನು ಈಗತಾನೇ ಮನೆಗೆ ಹೋಗುತ್ತಿದ್ದೇನೆ, ನಮ್ಮ ಮನೆಯ ಹತ್ತಿರವು ಅದೇ ಶಬ್ದವಾಯಿತಂತೆ ಎಂದು ಹೇಳಿದರು. ಸ್ವಲ್ಪ ಹೊತ್ತಿನಲ್ಲಿ, ಬೇರೆ ಬೇರೆ ಊರುಗಳಿಂದ, ನಮ್ಮ ಸುತ್ತಲ ಹಳ್ಳಿಗಳಿಂದ, ನಮ್ಮೂರಿನಲ್ಲಿ ಏನೋ ಆದ ಹಾಗೆ ಆಯಿತು ಎಂದು ಹೇಳುವುದಕ್ಕೆ ಶುರು ಮಾಡಿದರು. ಶಿರಸಿ, ಸಿದ್ಧಾಪುರ, ಉತ್ತರ ಕನ್ನಡ ಜಿಲ್ಲೆಯ ಭಾಗದಲ್ಲಿದ್ದ ಗೆಳೆಯವರ ದೂರವಾಣಿ ಬಂದವು. ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳು ನನ್ನ ಕ್ಷೇತ್ರಕ್ಕೆ ಬರುತ್ತವೆ. ಚೆನ್ನಗಿರಿ, ಹೊನ್ನಾಳಿ ಪ್ರದೇಶದಿಂದ ದೂರವಾಣಿ ಬಂದವು. ಚಿಕ್ಕಮಗಳೂರು ಕೂಡ ನನ್ನ ಕ್ಷೇತ್ರವಾಗಿದೆ. ಸುತ್ತಮುತ್ತಲಿನ ಜಿಲ್ಲೆಗಳಿಂದ ದೂರವಾಣಿ ಬರುವುದಕ್ಕೆ ಪ್ರಾರಂಭವಾಗಿದ್ದರಿಂದ ಎಲ್ಲೋ ಒಂದು ಕಡೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹು ದೊಡ್ಡ ಭೂಕಂಪ ಆಗಿದೆ; ಎಲ್ಲಾಗಿರಬಹುದು ಎಂದು ಯೋಚನೆ ಮಾಡಿದೆವು. ಕೊನೆಗೆ ಯಾರೋ ಒಬ್ಬರು, ಒಂದು ಗಂಟೆಯ ಮುಂಚೆ ಲಕ್ಷದ್ವೀಪದಲ್ಲಿ ಭೂಕಂಪ ಆಗಿದೆ, ಇದು ಅದರ ಪರಿಣಾಮವಾಗಿರಬಹುದು ಎಂದು ಹೇಳಿದರು. ಅರ್ಧಗಂಟೆಯಲ್ಲಿ ನಮ್ಮ ವ್ಯಾಟ್ಸ್‌ಅಪ್‌ಗಳಲ್ಲಿ ಫೋಟೋಗಳು ಬಂತು. ಅಲ್ಲಿಗೆ ಇನ್ನೂ ಪೊಲೀಸರು ರೀಚ್ ಆಗಿರಲಿಲ್ಲ. ಹುಣಸೋಡಿನ ಗ್ರಾಮಸ್ಥರು ಧೈರ್ಯ ಮಾಡಿ ಅಲ್ಲಿನ ಫೋಟೋಗಳನ್ನು ಏನು ತೆಗೆದರೋ ಅದೇ ಫೋಟೋಗಳು ಹೊರಗಡೆ ಸಿಕ್ಕಿತು. ಪೊಲೀಸರು ಆ ಸ್ಥಳಕ್ಕೆ ಬಂದನಂತರ, ಸ್ಫೋಟಕ ತಜ್ಞರು ಬರುವ ತನಕ ಯಾರನ್ನೂ ಅಲ್ಲಿ ಬಿಡಬಾರದು ಎಂದು ಎಲ್ಲರಿಗೂ ತಡೆ ಹಾಕಿದ್ದರು. ರುಂಡ-ಮುಂಡಗಳು ಬೇರೆಯಾಗಿರುವಂಥದ್ದು, ಕೈ-ಕಾಲುಗಳು ಛಿದ್ರವಾಗಿರುವಂಥದ್ದು ಅಲ್ಲಿತ್ತು. ಅಲ್ಲಿಗೆ ಹೋದಂತಹ ವಾಹನ ಏನಿತ್ತೋ ಅದನ್ನು ವಾಹನ ಎಂದು ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ವಾಹನ ಸುಟ್ಟು ಹೋಗಿ ಸಣ್ಣ ಗುಜರಿ ಸಾಮಾನಿನಂತಾಗಿತ್ತು. ಅಲ್ಲೇನಾಯಿತು ಎಂದು ಊಹೆ ಮಾಡುವುದಕ್ಕೆ ಆಗುತ್ತಿರಲಿಲ್ಲ. ಅಗಾಧ ಪ್ರಮಾಣದ ಸ್ಫೋಟಕ, ಸುತ್ತ ನಾಲ್ಕು ಜಿಲ್ಲೆಗಳಿಗೆ ಹರಡಿದೆ. ಆ ದಿನ ರಾತ್ರಿ ಯಾರೂ ಕೂಡ ತಮ್ಮ ಮನೆಗಳಲ್ಲಿ ಮಲಗಿಲ್ಲ. ಶಿವಮೊಗ್ಗದಲ್ಲಿ ಜ್ಯೂವಲ್ ರಾಕ್ ಎನ್ನುವ ಒಂದು ಹೋಟೆಲ್ ಏನಿತ್ತು, ಅದರ ಸೀಲಿಂಗ್ ಕೆಳಗೆ ಬಿದ್ದಿದೆ. ಹೋಟೆಲ್‌ನ ಒಳಗಿದ್ದವರು ಹೊರಗೆ ಬಂದಿದ್ದಾರೆ. ಮೆಗ್ಗಾನ್ ಹಾಸ್ಪಿಟಲ್‌ನಲ್ಲೂ ಇಂತಹ ಅನಾಹುತವಾದಾಗ ರೋಗಿಗಳು ಹೊರಗೆ ಬಂದಿದ್ದಾರೆ. ಮಧ್ಯರಾತ್ರಿಯಾಗಿದ್ದರೂ ಜನ ರಸ್ತೆಯ ಮೇಲೆ ನಿಂತಿದ್ದಾರೆ. ಒಬ್ಬೊಬ್ಬರೂ ಒಂದೊಂದು ಊಹೆ-ಕಲ್ಪನೆಗಳನ್ನು ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಸ್ಪಷ್ಟತೆ ಎನ್ನುವುದು ಯಾರಿಗೂ ಇರಲಿಲ್ಲ. ಅಂತಹ ಒಂದು ಶಬ್ದವನ್ನು ನಮ್ಮ ಜೀವನದಲ್ಲಿ ಕೇಳಿರಲಿಲ್ಲ. ಆನಂತರ ವಿಷಯ ಗೊತ್ತಾಗಿ, ನಮ್ಮ ಮನೆಯಲ್ಲಿ ಮದುವೆ ಕಾರ್ಯವಿದ್ದರೂ ನಾನು ಅಲ್ಲಿಗೆ ಸ್ವತಃ ಹೋದೆ. ಅಲ್ಲಿನ ದೃಶ್ಯವನ್ನು ನೋಡಿದಾಗ ಎದೆ ಝಲ್ ಎಂದಿತ್ತು. ವಾಹನದ ಒಂದೊಂದು ಭಾಗಗಳು ಫರ್ಲಾಂಗ್ ದೂರದಲ್ಲಿ ಸಿಡಿದು ಬಿದ್ದಿತ್ತು. ಟೈರ್‌ಗಳು ಪೀಸ್-ಪೀಸ್ ಆಗಿ ಎಲ್ಲಾ ಕಡೆ ಹರಡಿತ್ತು. ವಾಹನವೇ ಈ ರೀತಿ ಸಿಡಿದಿರಬೇಕಾದರೆ ಮನುಷ್ಯ ದೇಹಗಳು ಎಷ್ಟರಮಟ್ಟಿಗೆ ತಡೆದುಕೊಳ್ಳಬಹುದು? ಛಿದ್ರ-ಛಿದ್ರ ಗೊಂಡಿರುತ್ತವೆ. ಇದು ಕ್ವಾರಿಗಳ ಸಮಸ್ಯೆ ಮಾತ್ರವಲ್ಲ, ಸ್ಫೋಟಕಗಳ ಬಗ್ಗೆ ವಿಷಯ ಬಹಳ ಮಹತ್ವದ್ದು. ಕ್ವಾರಿಗಳು ಸುರಕ್ಷಿತ ಮಾನದಂಡಗಳನ್ನು ಉಪಯೋಗಿಸಿಕೊಂಡು ಮಾಡುತ್ತಿದ್ದರೆ ಈ ರೀತಿ ಅನಾಹುತ ಆಗುತ್ತಿರಲಿಲ್ಲ. ಕ್ವಾರಿಗಳಲ್ಲಿ ಕೆಲಸ ಮಾಡುವಾಗ ಯಾವರೀತಿ ಸಿಡಿಮದ್ದುಗಳು ಇಡಬೇಕು ಎನ್ನುವುದಕ್ಕೆ ನಿಯಮಗಳಿವೆ. ಆದರೆ ಅಲ್ಲಿ ಅಂತಹ ಯಾವುದೇ ನಿಯಮ ಪಾಲನೆ ಆಗಿರಲಿಲ್ಲ. ಬಹಳ ದೊಡ್ಡ ಪ್ರಮಾಣದ ಸ್ಫೋಟಕಗಳು ಬಂತು. ಊರಿನ ಮಧ್ಯದಲ್ಲಿ ಉಷಾ ನರ್ಸಿಂಗ್ ಎನ್ನುವ ಒಂದು ಹಾಸ್ಪಿಟಲ್ ಇದೆ. ರಾತ್ರಿ ಸುಮಾರು 10 ಗಂಟೆಗೆ ಆ ಹಾಸ್ಪಿಟಲ್‌ನ ಪಕ್ಕ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹ ಒಂದು ಹೋಟೆಲ್‌ನಲ್ಲಿ ಊಟ ಮಾಡಿ ಅಲ್ಲಿಂದ ಮುಂದೆ ಹೋಗಿದ್ದಾರೆ. ಅದೃಷ್ಟವಶಾತ್ ಆಗ ಅನಾಹುತ ನಡೆದಿಲ್ಲ. ಒಂದು ವೇಳೆ ನಡೆದಿದ್ದರೆ ನಮ್ಮ ಶಾಸಕರಾದ ಮಾನ್ಯ ರುದ್ರೇಗೌಡರಿಗೂ ತೊಂದರೆ ಆಗುತ್ತಿತ್ತು. ಮಾನ್ಯ ಸಭಾಪತಿಯವರೇ, ಆ ಜಾಗದಲ್ಲೇನಾದರೂ ಅನಾಹುತವಾಗಿದ್ದರೆ ಬಹುಶಃ ಅರ್ಧ ಶಿವಮೊಗ್ಗ ಜಿಲ್ಲೆ ಬ್ಲಾಸ್ಟ್ ಆಗುತ್ತಿತ್ತು. ಯಾರ ತಪ್ಪಿಗಾಗಿ ಸಾವಿರಾರು ಜನರ ಸಾವಾಗಬೇಕಾಗಿತ್ತು? ಮಲಗಿದವರ ಹೆಣಗಳ ಮೆರವಣಿಗೆ ಏಕಾಗಬೇಕಾಗಿತ್ತು? ಅಂತಹ ಒಂದು ವಿಧ್ವಂಸಕ ಕೃತ್ಯ ನಡೆದು ಹೋಯಿತು. ಆ ಸ್ಫೋಟಕಗಳು ಸಮಾಜ ದ್ರೋಹಿಗಳಿಗೆ ಸಿಕ್ಕಿದ್ದರೆ ಏನಾಗುತ್ತಿತ್ತು ಎನ್ನುವುದನ್ನು ಊಹಿಸಿಕೊಳ್ಳುವುದಕ್ಕೂ ಆಗುವುದಿಲ್ಲ.

(ಮುಂದು)

(45) 01-02-2021/3.30/ಡಿಎಸ್-ಆರ್‌ಎನ್

**ಶ್ರೀ ಆಯನೂರು ಮಂಜುನಾಥ್(ಮುಂದು):-**

ವಾಹನ ನಿಂತ ಜಾಗದಲ್ಲಿ ಸಿಡಿದಿದ್ದಕ್ಕೆ ಇಂತಹ ದೊಡ್ಡ ಪರಿಣಾಮವಾಗಿದೆ. ನನಗೆ ಗೊತ್ತಿರುವ ಹಾಗೆ ಅದು ಸಿಡಿಮದ್ದುಗಳನ್ನು ಸ್ಟಾಕ್ ಮಾಡುವಂತಹ ಒಂದು ಕಳ್ಳತನದ ಜಾಗ. ಊರಿನ ಹೊರಗಡೆ stockyard ಅಲ್ಲಿಂದ ಹಂಚಿಕೆಯಾಗುತ್ತದೆ. ಅದೇನಾದರೂ ಕ್ವಾರಿಯ 50 ಅಡಿ ಕೆಳಗೆ ಇಟ್ಟಿದ್ದರೆ, ಮೇಲ್ಪದರದಲ್ಲಿದ್ದೇ ಇಷ್ಟೊಂದು ಶಬ್ಧ ಬಂದು ನಾಲ್ಕೈದು ಜಿಲ್ಲೆಗಳು ಅಲ್ಲಾಡಿ ಹೋಗಿವೆ. ಕೆಳಗೆ ಇಟ್ಟಿದ್ದರೆ ರಾಜ್ಯದಲ್ಲಿ ದುರಂತದ ಅಧ್ಯಾಯ ಪ್ರಾರಂಭವಾಗುತ್ತಿತ್ತು. ನೆಲದ ಅಡಿಯಲ್ಲಿ ಸ್ಫೋಟವಾಗಿದ್ದರೆ ಖಂಡಿತವಾಗಿಯೂ ಭೂಕಂಪದ ಪರಿಣಾಮ ಆಗುತ್ತಿತ್ತು. ಸಾವಿರಾರು ಕಟ್ಟಡಗಳು ಉರುಳುತ್ತಿತ್ತು, ಸಾವಿರಾರು ಜನರು ಸಾಯುತ್ತಿದ್ದರು. ಅಷ್ಟು ಮಾತ್ರವಲ್ಲ, ಉತ್ತರ ಕರ್ನಾಟಕದವರು ಬಹಳ ಚಿಂತೆ ಮಾಡಬೇಕಾಗುತ್ತಿತ್ತು. ನಮ್ಮ ತುಂಗಾ ಡ್ಯಾಮ್ ಅಲ್ಲೇ ಇದೆ, ಭದ್ರ ಡ್ಯಾಮ್ ಅಲ್ಲೇ ಇದೆ. ತುಂಗಾಭದ್ರಾ, ಶರಾವತಿ ಇಲ್ಲದಿದ್ದರೆ ಅರ್ಧ ರಾಜ್ಯಕ್ಕೆ ವಿದ್ಯುತ್ ಇರುತ್ತಿರಲಿಲ್ಲ. ಅದು ಹೈಡ್ರೋ ಪ್ರಾಜೆಕ್ಟ್. ಡ್ಯಾಮ್‌ಗಳು ಹೊಡೆದು ಹೋಗಿದ್ದರೆ ಏನಾಗುತ್ತಿತ್ತು, ಆ ನೀರು ಹರಿದು ಬಂದಿದ್ದರೆ ಎಷ್ಟು ಹಳ್ಳಿಗಳು ಕೊಚ್ಚಿ ಹೋಗುತ್ತಿತ್ತು. ಜಾನುವಾರುಗಳ ಸಾವು, ಜನರ ಸಾವು ಎಷ್ಟಾಗುತ್ತಿತ್ತು, ಹಳ್ಳಿಗಳ ಸರ್ವನಾಶ ಆಗುತ್ತಿತ್ತು. ಅಷ್ಟೊಂದು ಭಯಾನಕವಾಗಿರುವಂತಹ ಚಿಂತೆ ಶಿವಮೊಗ್ಗದಲ್ಲಿದ್ದವರಿಗೆ ಕಾಡಿದೆ. ಶಿವಮೊಗ್ಗ ಒಂದು ಸೂಕ್ಷ್ಮವಾದ ನಗರ. ಇತ್ತೀಚಿನ ವರ್ಷಗಳಲ್ಲಿ ಸ್ವಲ್ಪ ನೆಮ್ಮದಿಯಿಂದ ಇದ್ದೇವೆ. ಸಣ್ಣಸಣ್ಣ ಘಟನೆಗಳಿಗೂ ಕೂಡ ಕೋಮು ಸಂಘರ್ಷದ ಅಲೆಗಳೆದ್ದಂತಹ ನಗರ. ಅಕಸ್ಮಾತ್ ಇದು ಊರಿನೊಳಗೆ ಆಗಿದ್ದರೆ ಶಿವಮೊಗ್ಗ ನಾಶವಾಗುತ್ತಿತ್ತು ಮಾತ್ರವಲ್ಲ, ಬಹುಶಃ ನಮ್ಮಂಥವರು, ರುದ್ರೇಗೌಡರು, ಬಹಳ ಶಾಸಕರ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸಂತಾಪ ಸೂಚಕ ಸಭೆ ಇಲ್ಲಿ ಮತ್ತು ಅಲ್ಲಿ ನಡೆಯಬೇಕಾಗಿತ್ತು. ಊರೊಳಗೆ ಆಗಿದ್ದರೆ ಯಾವುದೇ ಕಾರಣಕ್ಕೂ ಉಳಿಯುವುದಕ್ಕೆ ಸಾಧ್ಯವಿರಲಿಲ್ಲ. ಅಂತಹ ಅಗಾಧವಾಗಿರುವಂತಹ ಸ್ಫೋಟ. ಅದನ್ನು ವಿವರಿಸುವುದಕ್ಕೆ ಕವಿ ಹೃದಯದವರಾಗಿರಬೇಕು, ಕವಿ ಭಾಷೆ ಗೊತ್ತಿರುವವರಾಗಿರಬೇಕೇ ಹೊರತು ನನ್ನಂಥವನಿಗೆ ಗೊತ್ತಾಗುವುದಿಲ್ಲ. ಇದಕ್ಕೆ ಯಾರು ಕಾರಣ? ಈ ಸ್ಫೋಟಕ ಎಲ್ಲಿಂದ ಬರುತ್ತದೆ. ಈ ಘಟನೆಯ ಹಿಂದೆ ಅವತ್ತು ಪ್ರಸ್ತಾಪ ಮಾಡಿದ್ದೇನೆ, ಇವತ್ತು ಪ್ರಸ್ತಾಪ ಮಾಡುತ್ತೇನೆ, ಇದಕ್ಕೆ ಐದು ಇಲಾಖೆಗಳು ಕಾರಣವಾಗಿದೆ. ನಮಗೆ ಮೇಲ್ನೋಟಕ್ಕೆ ಗಣಿ ಇಲಾಖೆ ಕಾಣಿಸುತ್ತದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪೊಲೀಸ್ ಇಲಾಖೆ ಇದೆ. ಈ ಸ್ಫೋಟಕಗಳೆಲ್ಲಾ ಗಡಿಯನ್ನು ದಾಟಿ ಎಲ್ಲಿಂದ ಬರುತ್ತಿದೆ? ಕಂದಾಯ ಇಲಾಖೆ, ಪರಿಸರ ಇಲಾಖೆ, ಅರಣ್ಯ ಇಲಾಖೆ ಇದೆ. ಇದರಲ್ಲಿ ಐದು ಇಲಾಖೆಗಳದ್ದು ಬಹಳ ದೊಡ್ಡ ಪಾತ್ರವೇ ಇದೆ. ಈ ಐದು ಇಲಾಖೆಗಳು ವಿಫಲರಾಗಿದ್ದಾರೆ. ಆಗಸ್ಟ್ ತಿಂಗಳಿನಲ್ಲಿ ಸುಮಾರು 12–13ನೇ ತಾರೀಖು ಇರಬಹುದು. ಸುಮಾರು 29 ಸ್ಫೋಟಕ ಬಾಕ್ಸ್‌ಗಳನ್ನು ಪೊಲೀಸ್ ಇಲಾಖೆಯವರು ವಶಪಡಿಸಿಕೊಂಡರು. ಅಪರಾಧಿಯನ್ನು ಬಂಧಿಸಿದರು. ನನಗಿರುವ ಮಾಹಿತಿ ಪ್ರಕಾರ ಅಪರಾಧಿಯನ್ನು ಬಂದಿಸಿರುವವರು ದಾವಣಗೆರೆಯ ಐ.ಜಿ.ಪಿ. ಕಚೇರಿಯ flying squad ಎಂಬ ಅಧಿಕೃತ ಮಾಹಿತಿ ನನಗಿದೆ. ಅವರು squad ನವರು nearest Police Station, ತುಂಗಾ ಪೊಲೀಸ್ ಠಾಣೆ ಎಂದು ಇದೆ. ಅಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ತಿರುಮಲೇಶ್ ಎನ್ನುವವರು ಇತ್ತೀಚೆಗೆ ಮೊದಲ ಬಾರಿಗೆ ಪೊಲೀಸ್ ಠಾಣೆಯನ್ನು ವಹಿಸಿಕೊಂಡಿರಬಹುದು. ಅತ್ಯಂತ ಸಣ್ಣ ವಯಸ್ಸಿನ ಸಬ್‌ಇನ್ಸ್‌ಪೆಕ್ಟರ್‌ರವರಿಗೆ ಪೊಲೀಸ್ ಠಾಣೆಯನ್ನು ಹ್ಯಾಂಡ್‌ಓವರ್ ಮಾಡಿದ್ದಾರೆ. ಆತ ಏತಕ್ಕಾಗಿ ಅಪರಾಧಿಯನ್ನು ಬಿಟ್ಟರು ಎನ್ನುವುದು ಇವತ್ತಿನವರೆಗೂ ಗೊತ್ತಾಗಿಲ್ಲ. ಅವರೇ ಅಪರಾಧಿಯನ್ನು ಬಿಟ್ಟರೋ ಅಥವಾ ಅವರ ಮೇಲಾಧಿಕಾರಿಯವರು ಬಿಡಿಸಿದರೋ ಅಥವಾ ರಾಜಕಾರಣಿಗಳು ನಮ್ಮಂಥವರು ಯಾರಾದರೂ ಹೇಳಿದ್ದಾರೆಯೋ ಅಥವಾ ಹಣದ ವ್ಯವಹಾರ ಆಗಿದೆಯೋ ಗೊತ್ತಾಗಲಿಲ್ಲ. ಅಪರಾಧಿಯನ್ನು ಬಿಟ್ಟರು, ಆತ ಅತ್ಯಂತ ಬುದ್ಧಿವಂತ. ತನ್ನ ಠಾಣೆಯಲ್ಲೇ ಆ ಬಾಕ್ಸ್‌ಗಳನ್ನು ಪುಣ್ಯಾತ್ಮ ತಂದಿಟ್ಟುಕೊಂಡಿದ್ದ. ನನ್ನ ಹತ್ತಿರ ಆ ಫೋಟೋಗಳಿವೆ. ಆತ ಎಷ್ಟು ಬುದ್ಧಿವಂತ ಇರಬಹುದು? ತುಂಗಾ ಪೊಲೀಸ್ ಠಾಣೆಯಲ್ಲಿ ಒಂದರ ಮೇಲೊಂದು ಜೋಡಿಸಿಕೊಂಡಿದ್ದಾರೆ. ಸ್ವಲ್ಪ ಝೂಮ್ ಮಾಡಿದರೆ explosive ಎಂದು ನಮಗೆ ಕಾಣುತ್ತದೆ. ಆ ಫೋಟೋಗಳು ನನಗೆ ಬಂದಿವೆ. ನಾನು ತಕ್ಷಣವೇ ತಿರುಮಲೇಶ್ ಎನ್ನುವ ಸಬ್‌ಇನ್ಸ್‌ಪೆಕ್ಟರ್‌ಗೆ ಫೋನ್ ಮಾಡಿ ಏನಿದು ಪ್ರಕರಣ ಎಂದು ಕೇಳಿದೆ. ಬಹಳ arrogant. ಅವರು ಹಾರಿಕೆಯ ಉತ್ತರ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟರು. ನೀನು ಯಾರ ಹತ್ತಿರ ಮಾತನಾಡುತ್ತಿದ್ದೀಯಾ, ನಾನು ಶಾಸಕ ಎಂದು ಹೇಳಿದೆ. ಅದು ನನಗೆ ಗೊತ್ತಿದೆ ಸರ್, ಗೊತ್ತಿದ್ದೂ ಈ ರೀತಿ ನೀನು ಮಾತನಾಡುತ್ತೀಯಾ ಎಂದರೆ, you should dance according to my tunes. ನೀನು ನನ್ನ ಬಗ್ಗೆ ಎಲ್ಲರ ಹತ್ತಿರ ತಿಳಿದುಕೊಳ್ಳುವುದು ಬೇಡ, ನಾನು ಹಾಕುವ ಮ್ಯೂಸಿಕ್‌ಗೆ ನೀನು ಡ್ಯಾನ್ಸ್ ಮಾಡಬೇಕಾಗುತ್ತದೆ, ನೀನು ಸಬ್‌ಇನ್ಸ್‌ಪೆಕ್ಟರ್ ಆದರೂ ಆಗಿರಲಿ, ಯಾರು ಬೇಕಾದರೂ ಆಗಿರಲಿ ಎಂದು ನಾನು ಜೋರು ಮಾಡಿದೆ. ಆಮೇಲೆ ಧ್ವನಿ ಬದಲಾಯಿತು, ನಾನು ತಕ್ಷಣ ಎಸ್‌ಪಿ ಅವರಿಗೆ ನಿಮ್ಮ ಸಬ್‌ಇನ್ಸ್‌ಪೆಕ್ಟರ್‌ಗೆ ಭಾಷೆ ಕಲಿಸಿಕೊಡಿ ಎಂದು ಹೇಳಿದೆ. ಆ ಸಬ್‌ಇನ್ಸ್‌ಪೆಕ್ಟರ್ ಬಾಕ್ಸ್ ಎಲ್ಲಿಂದ ಬಂದಿದೆ ಎಂದು ನನಗೆ ವಿವರಣೆ ಕೊಡುತ್ತಾರೆ. ಆಗಲೇ ಎಫ್.ಐ.ಆರ್. ಹಾಕಿದ್ದಾರೆ. ಇವರು ನಾಲಾ ಹತ್ತಿರ ರೌಂಡ್ಸ್ ಹೋಗುತ್ತಿದ್ದರಂತೆ, ಅಲ್ಲಿ ಗಿಡಗಳ ಪೊದೆಗಳು, ಆ ಪೊದೆಗಳೇನು ದೊಡ್ಡ ದೊಡ್ಡ ಮರಗಳಲ್ಲ. ಆ ಪೊದೆಗಳ ಸಂದಿಯಲ್ಲಿ ಯಾರೋ ಬಾಕ್ಸ್ ಜೋಡಿಸಿದ್ದರಂತೆ, ಅದನ್ನು ಎತ್ತಿಕೊಂಡು ಬಂದರಂತೆ. This is the FIR. ಕಾನೂನು ಬಾಹಿರವಾಗಿ ಸ್ಫೋಟಕ ಕೈಗೆ ಸಿಕ್ಕಿದರೆ ಸೀಜ್ ಮಾಡಿಕೊಂಡು ಅಪರಾಧಿಯನ್ನು ಬಿಟ್ಟರು. ಇವತ್ತಿನವರೆಗೂ ಕೂಡ ಅಪರಾಧಿಗಳನ್ನು ಯಾರು ಎಂದು ಹಿಡಿಯಲಿಲ್ಲ. ಐ.ಜಿ.ಪಿ. ಯವರು squad ಆಗಿದ್ದರೆ ಐ.ಜಿ.ಪಿ. ಏಕೆ ಸುಮ್ಮನಿದ್ದಾರೆ? ಸ್ಫೋಟಕ ವಸ್ತುಗಳಲ್ಲಿ ಪೊಲೀಸ್ ಇಲಾಖೆ ಭಾಗಿಯಾಗಿದೆ, ಐ.ಜಿ.ಪಿ. ಕಛೇರಿಯ flying squad ಹೇಳಿದರೂ ಕೇಸ್ ಬುಕ್ ಆಗಿಲ್ಲವೆಂದರೆ ಅರ್ಥ ನಾವು ಐ.ಜಿ.ಪಿ. ಕಚೇರಿಯನ್ನು ಕೂಡ ಸಂಶಯದಿಂದ ನೋಡಬೇಕಲ್ಲವೇ? ಅವತ್ತಿನ ದಿವಸ ಒಬ್ಬ ಅಪರಾಧಿಯನ್ನು ಹಿಡಿದು ಒಳಗಿಟ್ಟಿದ್ದರೆ ಶಿವಮೊಗ್ಗದಲ್ಲಿ ನಾವು ಭಯ ಬೀಳುವಂತಹ ಈ ಘಟನೆ ನಡೆಯುತ್ತಿತ್ತೇ? ಜಗಳೂರಿನಂತಹ ಜಾಗದಲ್ಲಿ ಲೋಡ್‌ಗಟ್ಟಲೆ ಸಿಗುತ್ತಿತ್ತೇ? ಮಾನ್ಯ ವಿರೋಧ ಪಕ್ಷದ ನಾಯಕರೇ, ಬೆಂಗಳೂರಿನಲ್ಲಿ ಗಾಂಜಾ ಅಲ್ಲಿ ಇಲ್ಲಿ ಸಿಗುತ್ತದೆಂದು ಸುದ್ದಿ ಬಂತಲ್ಲಾ ಈ ಸ್ಫೋಟಕ ವಸ್ತು ಜಿಲೆಟಿನ್‌ಗಳು ಹಾಗೆಯೇ ಸುಲಭವಾಗಿ ಸಿಗುತ್ತದೆ. ಅಲ್ಲಿ ಬಡಾವಣೆಯನ್ನು ಮಾಡುತ್ತಾರೆ. ಆ ಬಡಾವಣೆಗಳ ಮಧ್ಯೆ ಬಂಡೆಗಳಿದ್ದರೆ ಅದನ್ನು ಸಿಡಿಸುವುದಕ್ಕೆ ಇದರ ಉಪಯೋಗ ಮಾಡುತ್ತಾರೆ. ಯಾರು ಅನುಮತಿಯನ್ನು ಕೊಡುತ್ತಾರೆ? ನಮ್ಮೂರಿನ ಆ ಪ್ರದೇಶದಲ್ಲಿ ಪೊಲೀಸ್ ಠಾಣೆ ಇಲ್ಲವೇ, ನಮ್ಮ ಊರಿನಲ್ಲಿ ತಹಸೀಲ್ದಾರರುಗಳಿಲ್ಲವೇ, ನಮ್ಮ ಊರಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಇಲ್ಲವೇ, ಡಿಸಿ, ಎಸ್‌ಪಿ ಗಳು ಇಲ್ಲವೇ? ಊರಿನೊಳಗೆ ರಾತ್ರಿ ಹೊತ್ತು ಸದ್ದು ಕೇಳುತ್ತದೆ. ಇಲ್ಲಿ ಎಲ್ಲೋ ಬಡಾವಣೆಯಲ್ಲಿ ಬ್ಲಾಸ್ಟ್ ಆಗುತ್ತಿದೆ ಎಂದು ಜನರು ಮಲಗಿಕೊಳ್ಳಬೇಕು. ಇದು ಶಿವಮೊಗ್ಗದ ಘಟನೆ ಮಾತ್ರವಲ್ಲ, ಬೆಂಗಳೂರಿನಲ್ಲೂ ಬಡಾವಣೆ ನಿರ್ಮಾಣ ಮಾಡುವಾಗ ಕಲ್ಲು ಬಂಡೆಗಳನ್ನು ಸ್ಫೋಟಿಸುತ್ತಾರೆ. ರಾಜ್ಯದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇಷ್ಟು ಸುಲಭವಾಗಿ ಸ್ಫೋಟಕ ವಸ್ತುಗಳು ಸಿಗುವುದಾದರೆ, ದೇಶದಾದ್ಯಂತ ವಿಧ್ವಂಸಕ ಕೃತ್ಯಗಳ ಬಗ್ಗೆ ಭಯವಾಗಿ ಚರ್ಚೆಯಾಗುತ್ತದೆ. ಭಯೋತ್ಪಾದಕರು ಎಲ್ಲಾ ಕಡೆ ಇದ್ದಾರೆ ಎನ್ನುವ ಸಂಶಯ, ಆತಂಕಗಳು ದೇಶದಲ್ಲಿ ಮನೆ ಮಾಡಿವೆ. ಹಾಗಾದರೆ ಅದನ್ನು ಯಾರಾದರೂ ಬಳಕೆ ಮಾಡಿಬಿಟ್ಟರೆ ಏನಾಗಬಹುದು? ಶಿವಮೊಗ್ಗದಲ್ಲಿ ಊರಿನ ಮಧ್ಯೆ ಇದು ಆಗಿದ್ದರೆ ಒಬ್ಬರ ಮೇಲೆ ಒಬ್ಬರು ಅನುಮಾನ ಪಟ್ಟಿಕೊಂಡು ಕೋಮುಗಲಭೆಯಾಗುವಂತಹ ಸಾಧ್ಯತೆ ಇತ್ತು. ಅವತ್ತಿನ ದಿವಸ ಆ ಸಬ್‌ಇನ್ಸ್‌ಪೆಕ್ಟರ್ ಏಕೆ ಬಿಟ್ಟರು, ಏಕೆ ಪೊಲೀಸ್ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ ಎನ್ನುವುದನ್ನು ಈ ಸದನಕ್ಕೆ ಸರ್ಕಾರ ಉತ್ತರಿಸಬೇಕಲ್ಲವೇ? ಆ ಬಾಕ್ಸ್‌ಗಳು ಎಲ್ಲಿಂದ ಬಂದಿದೆ ಎನ್ನುವುದಕ್ಕೆ ಸರ್ಕಾರ ಉತ್ತರಿಸಬೇಕಲ್ಲವೇ? ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಹೇಳಿದ್ದು partial ಸತ್ಯ. ಇದು ಈ ಸರ್ಕಾರದಲ್ಲಿ ಮಾತ್ರ ಆಗಿಲ್ಲ. ತಾವು ಅಲ್ಲಿಗೆ ಪೂರ್ತಿಯಾಗಿ ಹೋಗುವುದಕ್ಕೆ ಬಿಟ್ಟಿರುವುದಿಲ್ಲ, ಸಂಜೆ ಬಂದಿದ್ದೀರಿ. ಗಣಿಗಳು ಎಂದರೆ ಕಲ್ಲುಗಣಿಗಳು ಎಷ್ಟು ಅಡಿ ಇರಬೇಕೆನ್ನುವುದಕ್ಕೆ ಇತಿಮಿತಿಗಳು ಇಲ್ಲ. ನೂರಾರು ಅಡಿ ಇವೆ. ಅಲ್ಲಿ ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ಮಾಫಿಯಾಕ್ಕೆ ಯಾವ ಸರ್ಕಾರವೂ ಲೆಕ್ಕ ಇಲ್ಲ. ಈ ಬಿಜೆಪಿ ಸರ್ಕಾರವೂ ಲೆಕ್ಕ ಇಲ್ಲ. ಜೆಡಿಎಸ್ ಸರ್ಕಾರ ಇದ್ದರೂ ಲೆಕ್ಕ ಇಲ್ಲ. ಇವರದ್ದು ಮಾಫಿಯಾ. ಎಲ್ಲಾ ಸರ್ಕಾರಗಳಲ್ಲೂ ಅಧಿಕಾರಿಗಳ ಜೊತೆಗೆ ತಮ್ಮ ಆಟವನ್ನು ಆಡಿಕೊಂಡು ಮಾಡಿಕೊಂಡು ಬರುತ್ತಿರುತ್ತಾರೆ. ಆ land, ಇದು ಯಾರಿಗೆ ಸಂಬಂಧಪಟ್ಟಿರುವುದು, ಅರಣ್ಯ ಇಲಾಖೆಗೆ ಗಣಿ ಇಲಾಖೆಯವರು ಪತ್ರ ಬರೆಯುತ್ತಾರೆ. ನೋಡಿ, ಲೋಕಾಯುಕ್ತಕ್ಕೆ ಜನ ದೂರು ಕೊಟ್ಟಿದ್ದಾರೆ. ಜನರಿಗೆ ತೊಂದರೆಯಾಗುತ್ತಿದೆ, ಆ ಸ್ಥಳವನ್ನು ತನಿಖೆ ಮಾಡಬೇಕೆಂದು. ಗಣಿ ಇಲಾಖೆಯವರು ಅರಣ್ಯ ಇಲಾಖೆಗೆ ಪತ್ರ ಬರೆಯುತ್ತಾರೆ. ಮಾನವ ಹಕ್ಕುಗಳ ಸಮಿತಿಗೆ ಜನರ ದೂರು ಹೋಗಿದೆ. ಅದಕ್ಕೋಸ್ಕರ ತನಿಖೆ ಮಾಡುತ್ತಿದ್ದಾರೆ. ಆಗ ಎಲ್ಲರೂ ಹೋಗಿ ಅರಣ್ಯ ಇಲಾಖೆಯವರು, ಕಂದಾಯ ಇಲಾಖೆಯವರು, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಎಲ್ಲರೂ ಹೋಗಿ ತನಿಖೆ ಮಾಡಿ ಇದು ಕಾನೂನು ಬಾಹಿರವಾಗಿ ಅಕ್ರಮ ಗಣಿಗಾರಿಕೆಗಳು ನಡೆಯುತ್ತಿವೆ. ಅರಣ್ಯ ಇಲಾಖೆಯ ಜಾಗದಲ್ಲಿದೆ, ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಅದು ಅಕ್ರಮ ಗಣಿಗಾರಿಕೆ ಎಂದು ಇಷ್ಟು ಜನರಿಗೆ ಗೊತ್ತಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಮುಂದು)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(46) 01-02-2021/3-40/ಬಿಕೆಪಿ-ಬಿಎನ್ಎಸ್

**ಶ್ರೀ ಆಯನೂರು ಮಂಜುನಾಥ್(ಮುಂದು):-**

ಅಧಿಕಾರಿಗಳ ಹಂತದಲ್ಲಿ ಸಮಿತಿ ರಚನೆ ಮಾಡುತ್ತಾರೆ. ಆದರೆ, ಯಾರು ಸಹ ಕ್ರಮ ತೆಗೆದುಕೊಳ್ಳುವುದಿಲ್ಲ. ಈ ವಿಚಾರವಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಿರಿಯ ಭೂ ವಿಜ್ಞಾನಿಗಳು ಈ ಸ್ಥಳ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆಂದು ದಿನಾಂಕ 27.09.2018, 10-4-2019, 7-2-2020 ಮತ್ತು 22-9-2020 ರಲ್ಲಿ ಪತ್ರ 3-4 ಪತ್ರಗಳನ್ನು ಬರೆಯುತ್ತಾರೆ. ಆದರೆ ಅರಣ್ಯ ಇಲಾಖೆಯವರು ಕ್ರಮ ತೆಗೆದುಕೊಳ್ಳುವುದಿಲ್ಲ. ಈ ವಿಚಾರವಾಗಿ ಅರಣ್ಯಾಧಿಕಾರಿಗಳು ಏನು ಮಾಡುತ್ತಿರುತ್ತಾರೆ, ಆ ಜಾಗಕ್ಕೆ ಹೋಗಿ ಏಕೆ ನಿಲ್ಲುಸುವುದಿಲ್ಲ? ನಮ್ಮ ಊರಿನ ಒಬ್ಬ ಬಡವ ಬಗರ್ ಹುಕುಂಗೆ ಅರ್ಜಿ ಹಾಕಿದರೆ ಬೋರ್ ಹೊಡೆಯಲಿಕ್ಕೆ ಬಿಡುವುದಿಲ್ಲ. ಒಂದೆರಡು ಎಕರೆ ಜಮೀನಿನಲ್ಲಿ ರೈತ ತನ್ನ ಹೊಟ್ಟೆಪಾಡಿಗೆ ಉಳುಮೆ ಮಾಡಲಿಕ್ಕೆ ಬೋರ್ ಹೊಡೆದಿದ್ದಾನೆ ಎಂದು ಹೇಳಿ ಅಪರಾಧದ ಮೇಲೆ ಅವನನ್ನು ಹಿಡಿದುಕೊಂಡು ಹೋಗಿ ಅರಣ್ಯ ಇಲಾಖೆಯ ಕಚೇರಿಯಲ್ಲಿ ಕೂರಿಸುತ್ತಾರೆ, ಅವನ ಮೇಲೆ ಕೇಸ್ ಹಾಕುತ್ತಾರೆ. ಬೋರ್ ಹೊಡೆದುದಕ್ಕೆ ಈ ಕೆಲಸ ಮಾಡುತ್ತಾರೆ. ಇಲ್ಲಿ ಏನು ಮಾಡಿದರು ಅಂದರೆ, dynamite ಇಟ್ಟು ಹೊಡೆದರು. ಈ ಸದ್ದು ಕೇಳಲಿಲ್ಲವೇ? D.C.F. ಏನು ಮಾಡುತ್ತಿದ್ದರು? ಇದು 'Shankar' Range ಗೆ ಬರುತ್ತದೆ. ಅಲ್ಲಿ D.C.F. ಗಳು ಏನು ಮಾಡುತ್ತಾರೆ? ಈಗಾಗಲೇ ಇಲ್ಲಿ ಡಿ.ಸಿ.ಎಫ್. ಇದ್ದಾರೆ. ಹಿಂದೆ ಒಬ್ಬ ಡಿ.ಸಿ.ಎಫ್.ರವರು ಇದ್ದರು. ಈಗ ಅವರು ಸಾಗರದಲ್ಲಿ D.C.F. ಆಗಿದ್ದಾರೆ. ಅವರ ಕಾಲದಲ್ಲಿ ಗಣಿ ಮತ್ತು ಅರಣ್ಯ ಒತ್ತುವರಿಗೆ ಬಹಳ ಮುಕ್ತ ಅವಕಾಶ ನೀಡಿದ್ದರು. ಅದಕ್ಕಿಂತ ಮುಂಚೆ ಇದ್ದವರು ಬಡವರು ಯಾರಾದರೂ ಒಂದು ಸಣ್ಣ ಸಣ್ಣ ಕಡ್ಡಿಪುಳ್ಳೆಯನ್ನು ಅರಣ್ಯದಿಂದ ತೆಗೆದುಕೊಂಡು ಹೋಗುತ್ತಿದ್ದರೆ ಸೌದೆ ಹಿಡಿದುಕೊಂಡು ಗಲಾಟೆ ಮಾಡುತ್ತಿದ್ದರು. ಇವರೆಲ್ಲರೂ ತಮ್ಮ ವಲಯದಲ್ಲಿ ಬಂದರೆ, ಬಂದವರೆಲ್ಲರೂ ಒಂದು ಬಾರಿ ವಿಸಿಟ್ ಮಾಡಿಬಿಡುತ್ತಾರೆ.

**(ಈ ಹಂತದಲ್ಲಿ ಶ್ರೀ ಆಯನೂರು ಮಂಜುನಾಥ್‌ರವರು ಚರ್ಚೆಗೆ ಸಂಬಂಧಪಟ್ಟ ಹಾಗೆ ಮಾಹಿತಿ ಪಡೆಯಲು ಮೊಬೈಲ್ ಫೋನ್ ಆನ್ ಮಾಡಿ ನೋಡಿದರು)**

**ಸಭಾಪತಿಯವರು:-** ಸದನದಲ್ಲಿ ಮೊಬೈಲ್ ಫೋನ್ ಉಪಯೋಗ ಮಾಡಬಾರದು ಎಂದು ಹೇಳಿ ನಾವು ಒಂದು ಲಘು ಪ್ರಕಟಣೆ ಮಾಡುತ್ತಿದ್ದೇವೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೆ, Sorry sir. ನಾನು ಗಮನಿಸಿದ್ದೆ. ಅದರಲ್ಲಿ ಕೆಲವೊಂದು ನೋಟ್ಸ್ ಇತ್ತು ಎಂದು ತೆಗೆದುಕೊಂಡೆ, ಅದಕ್ಕೋಸ್ಕರ ನಾನು ಮೊಬೈಲ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫೋನ್ ಉಪಯೋಗ ಮಾಡಿದೆ ಅಷ್ಟೆ. ಆಯಿತು ತೆಗೆದುಕೊಂಡು ಬಿಟ್ಟಿದ್ದೇನೆ. ಈಗ ಎರಡು ಹೆಸರನ್ನು ನೋಡಿಕೊಂಡು ಇಟ್ಟು ಬಿಡುತ್ತೇನೆ. ಶ್ರೀ ಮೋಹನ್ ಕುಮಾರ್ ಎಂಬುವವರು ಒಬ್ಬರು ಇರುತ್ತಾರೆ, ಶ್ರೀ ಆಂಥೋನಿ ಮರಿಯಪ್ಪ ಎಂಬುವವರು ಒಬ್ಬರು ಇರುತ್ತಾರೆ. ಈಗ ಶ್ರೀ ಶಂಕರ್ ಎಂಬುವವರು ಇದ್ದಾರೆ.

ಇವರೆಲ್ಲಾ D.C.F. ಗಳು. ಉನ್ನತಾಧಿಕಾರಿಗಳು ಇವರ ಬಳಿ ಯಾರೂ ಸಹ ಬಡವರು ಕಾಲು ಇಡುವುದಕ್ಕೆ ಆಗುವುದಿಲ್ಲ. R.F.O. ಗಳು ನಿಲ್ಲುವುದಕ್ಕಾಗುವುದಿಲ್ಲ, A.C.F.ಗಳು ನಿಲ್ಲುವುದಕ್ಕಾಗುವುದಿಲ್ಲ. ಇವರೆಲ್ಲಾ ಅಷ್ಟೊಂದು powerful. ಇವರ ಕಾಲದಲ್ಲಿ ಹೋಗಿ ಎಲ್ಲಾ visit ಮಾಡಿ ಬಂದು ಬಿಡುತ್ತಾರೆ. ಸುಮಾರು 40 ಜನ permission ಗೆ ಕೋರಿಕೆ ಸಲ್ಲಿಸುತ್ತಾರೆ.

**ಸಭಾಪತಿಯವರು:–** ನೀವು ಹೇಳಿದ್ದಕ್ಕೆಲ್ಲಾ ಸಚಿವರು ಉತ್ತರ ಕೊಡುತ್ತಾರೆಯೇ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಕೊಡಬೇಕಾಗುತ್ತದೆ. ಅದು ನನ್ನ expectation. ಸಭಾಪತಿಗಳಿದ್ದೀರಿ.

**ಸಭಾಪತಿಯವರು:–** ನಾನು ಕೇಳಿದ್ದು ಏನೆಂದರೆ, ಇವರೇ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದರೆ, ಉತ್ತರ ಕೊಡುವವರನ್ನು ಕರೆಸಬೇಕು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ದಾಖಲೆಯಲ್ಲಿರುತ್ತದೆ. ಸರ್ಕಾರ ಆಮೇಲೆ ಏನು ಉತ್ತರ ಕೊಡುತ್ತದೆ ಅದನ್ನು ಕೊಡಲಿ. ಸದನದ ಮುಂದೆ ಇದು ಪಕ್ಷಾತೀತವಾದಂತಹ ಸಮಸ್ಯೆ ಏನೂ ಅಲ್ಲ. ಸಭಾನಾಯಕರೆ, ಸುಮಾರು 44 ಜನರು ಇಂತಹ ಏರಿಯಾಗಳಲ್ಲಿ ಕ್ವಾರಿ ನಡೆಸಬೇಕೆಂದು ಅರ್ಜಿ ಹಾಕುತ್ತಾರೆ. Forest Department ನವರು ಬರೆಯುತ್ತಾರೆ, ನೋಡಿ ಇದು eco-sensitive zone ನಲ್ಲಿದೆ. 0–10 ಕಿ.ಮೀ. ಅರಣ್ಯ ಭೂಮಿಯ ವ್ಯಾಪ್ತಿಯೊಳಗಿದೆ. ಆ ಕಾರಣಕ್ಕೆ ನಾವು ಕೊಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದಿಂದ ಅನುಮತಿ ತೆಗೆದುಕೊಳ್ಳಿ ಎಂದು ಬರೆಯುತ್ತಾರೆ. ಇವೆರಡೂ ಸಹ ನಾಟಕ. ಇವರು ಅಲ್ಲಿಗೆ ಕಳುಹಿಸುವುದು ನಂತರ ಅವರು ಹೀಗೆ ಬರೆಯುವುದು ಆಗಿದೆ. ಇದು ಆದಮೇಲೆ ಇಷ್ಟೊಂದು quarry ಗಳು ನಡೆಯುತ್ತಿವೆ. ಇವರು ಅರ್ಜಿಗಳನ್ನು ಹಾಕುವುದು ನಂತರ ಕೊಡುವುದಕ್ಕೆ ಬರುವುದಿಲ್ಲವೆಂದು ದಾಖಲೆ ಮಾಡಿಬಿಡುವುದು. ಇವರು safe. ನಾನು ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೇನೆ ಎನ್ನುವುದು. ಕೊಡುವುದಕ್ಕೆ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬರುವುದಿಲ್ಲ ಎಂದಮೇಲೆ ಅಲ್ಲಿ ಅದು ನಡೆಯುತ್ತಿದೆಯಲ್ಲಾ, ಅದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದಾರೆ? ಕೇವಲ ಕಾಗದದಲ್ಲಿ ಬರೆದು ದಾಖಲೆ ಮಾಡಿ ಕೈಬಿಟ್ಟುಬಿಟ್ಟಿರಲ್ಲಾ, ಇದು ಸರಿಯೇ? ಈ ರೀತಿ ನಡೆಯುತ್ತಿದೆ. ಇವತ್ತು ನಿನ್ನೆಯಿಂದ ನಡೆಯುತ್ತಿರುವುದಲ್ಲ, ವರ್ಷಾನುಗಟ್ಟಲೆಯಿಂದ ನಡೆಯುತ್ತಿದೆ. ಹತ್ತಾರು ವರ್ಷಗಳಿಂದ ನಡೆಯುತ್ತಿದೆ. ಅಧಿಕಾರಿಗಳು ಬಂದವರು ಒಂದು spot visit ಮಾಡಿ ತಮ್ಮ attendance ಹಾಕಿ ಬಂದಿರುವುದರ ಅರ್ಥವೇನಾಗಬೇಕು ಅದು ಅವರಿಗೆ ಆಗುತ್ತದೆ. ಪೊಲೀಸ್ ಇಲಾಖೆಯ ಕೆಲಸವಿದೆ. Forest land ನೊಳಗೆ ಕಂದಾಯ ಇಲಾಖೆಯವರು ಮಂಜೂರು ಮಾಡಿದ್ದಾರೆ. ಅರಣ್ಯ ಇಲಾಖೆಯವರಿಗೆ ಅದನ್ನು ರದ್ದು ಮಾಡಿ ಎಂದು ಕೇಳುವುದಿಲ್ಲ. ಪಟ್ಟಾ ಲ್ಯಾಂಡ್ ಅನ್ನು ಯಾರೋ ಬಂದು ತೆಗೆದುಕೊಳ್ಳುತ್ತಾರೆ. ಸರ್ಕಾರದಲ್ಲಿ ನೋಡಿ ಏನಾಗಿದೆ, ಮಾನ್ಯ ಸಚಿವರೆ, ಮೊನ್ನೆ ನಡೆದಂತಹ ಪ್ರಕರಣದಲ್ಲಿ ಈ ಘಟನೆ ನಡೆದಿದೆ, ಅವರಿಗೆ ದಿನಾಂಕ: 25-03-2019ರಿಂದ ಅನ್ವಯವಾಗುವಂತೆ 5 ವರ್ಷಗಳ ಕಾಲಕ್ಕೆ ಲೈಸೆನ್ಸ್ ಕೊಡಲಾಗಿದೆ. ದಿನಾಂಕ: 22-09-2020ರಂದು ಮೂಲ ಮಂಜೂರಾದ ದಿನದಿಂದ 20 ವರ್ಷಗಳಿಗೆ extend ಮಾಡಿದ್ದಾರೆ. ಯಾರಿಗೆ ಮಾಡಿದ್ದಾರೆ? Same. ಆದರೆ, ಮಜಾ ಏನು ಎಂದರೆ ನೀವು ಗಮನಿಸಬೇಕಾದ್ದು ಏನೆಂದರೆ, ಅಧಿಕಾರಿಗಳ ವರ್ತನೆಯನ್ನು ಗಮನಿಸಬೇಕಾದರೆ ಇದೇ ಜಾಗವನ್ನು ದಿನಾಂಕವನ್ನು mention ಮಾಡದೇ ದಿನಾಂಕ: 22-09-2020ರಂದು extension ಸಿಗುತ್ತದೆ. ಇವರು ಈ ಹಿಂದೆ ಸದರಿ ಜಮೀನಿನ ಪಟ್ಟಾದಾರರ ವಿರುದ್ಧವಾಗಿ ದಿನಾಂಕ: 22-04-2018 ಅಂದರೆ 2 ವರ್ಷಗಳ ಕೆಳಗೆ ದಿನಾಂಕ: 05-03-2019, 27-10-2020ರಂದು ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ಹಾಗೂ ಗಣಿಗಾರಿಕೆ ಮಾಡಲು ಸ್ಫೋಟಕಗಳ ಸಿಡಿಮದ್ದುಗಳನ್ನು ಬಳಸಿ blasting ಮಾಡಿ ಕಲ್ಲು ಸಿಡಿಸಿರುವುದರಿಂದ ಹಾಗೂ ಪರಿಸರಕ್ಕೆ ಹಾನಿ ಉಂಟು ಮಾಡಿರುವುದರಿಂದ ಮಾನ್ಯ ಮೂರನೇ J.M.F.C. ನ್ಯಾಯಾಲಯದಲ್ಲಿ ಕೇಸ್ ಇದೆ. ಅಲ್ಲಿ ಕೇಸ್ ಇರುವ ಸಮಯದಲ್ಲಿ ಸರ್ಕಾರ extension ಕೊಡುವುದಕ್ಕೆ ಬರುತ್ತದೆಯೇ? ಕೇಸ್ ಇದೆ ಅಲ್ಲಿ. ಅದು ಆಗಿ ನಾಲ್ಕು ದಿನಗಳಿಗೇ ಸರ್ಕಾರ extension ಕೊಡುತ್ತದೆ. ಹಾಗಾದರೆ ನೀವು ಈ ಇಲಾಖೆಯಲ್ಲಿ ಏನು ವ್ಯವಹಾರ ನಡೆಸಿದ್ದೀರಿ? ಅಧಿಕಾರಿ ಏನು ನಡೆಸಿದ್ದಾರೆ? Illegal blasting ಮಾಡಿದ್ದಾರೆ ಎಂದು ಕೇಸ್ ಆಗಿದೆ, JMFC Court ನಲ್ಲಿ ಕೇಸ್ ಹಾಕಿದ್ದೀರಿ. ಅದೇ ದಿನಾಂಕಗಳಲ್ಲಿ ಸರ್ಕಾರ extension ಕೊಟ್ಟಿದೆ ಎಂದ ಮೇಲೆ ಎಲ್ಲಿಗೆ ಏನು ತಲುಪಬೇಕೋ ಅದು ತಲುಪಿದೆ ಎಂದು ತಾನೇ ಅರ್ಥ. ಇಂತಹ ಭ್ರಷ್ಟ

ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇವರ ಭ್ರಷ್ಟತೆಯಿಂದ, ಇವರು ತಿನ್ನಬಹುದಾದಂತಹ ಎಂಜಲು ಕಾಸುಗಳಿಂದ ಊರಿನೊಳಗಾಗಿದ್ದರೆ ನಮ್ಮಂತಹ ಶಿವಮೊಗ್ಗದ ನಾಗರೀಕರ ಜೀವ ಹಾರಿ ಹೋಗುತ್ತಿತ್ತು. ನಾವು ಯಾವ ತಪ್ಪಿಗಾಗಿ ಸಾಯಬೇಕಾಗಿತ್ತು? ಇವರು ಯಾರೋ ಭ್ರಷ್ಟರು ಎಂಜಲಿಗಾಗಿ ಇಂತಹ ಕೆಲಸ ಮಾಡಿದ್ದಾರೆ ಎನ್ನುವ ಕಾರಣದಿಂದ ನಮ್ಮ ಜೀವದ ಬಲಿದಾನ ಕೊಡಬೇಕಾಗಿತ್ತಾ? ಅದೃಷ್ಟ ಚೆನ್ನಾಗಿದೆ. ಮಾನ್ಯ ರುದ್ರೇಗೌಡರು ಇಲ್ಲಿ ಕುಳಿತಿದ್ದಾರೆ, ಗಾಡಿ ಅವರ ಮನೆಯ ಬಳಿ ನಿಂತಿತ್ತು. ಯಾರೋ ಪುಡಿ ರಾಜಕಾರಣಿಗಳ ಪ್ರಭಾವಕ್ಕೋಸ್ಕರ ನಮ್ಮ ಜೀವ ಬಲಿ ಕೊಡಬೇಕಾ? ನೆಮ್ಮದಿಯಿಂದ ಊಟ ಮಾಡಿ ಮಲಗಿದ್ದಂತಹ ಸಾವಿರಾರು ಜನರು ಅರಣ್ಯರೋಧನದ ರೀತಿ ಕೂಗಿದರೂ ಸಹಿತ ಕೇಳಿಸದೇ ಇರುವ ರೀತಿ ಅವರ ಮನೆಗಳಲ್ಲಿ ರೋಧನದ ಸದ್ದು ಕೇಳಬೇಕಾಗಿತ್ತಾ? ಇಲಾಖೆಗಳು ಏನು ಮಾಡುತ್ತಿವೆ? ಇದರಲ್ಲಿ ನಾನು ಹೆಸರಿಸಿದ 5 ಇಲಾಖೆಗಳೇನಿದೆ, ನೀವು ಹೇಳಿದಂತಹ ಇಲಾಖೆಗಳ ಮೇಲೆಯೂ ಕೂಡ ಸಂಪೂರ್ಣ ತನಿಖೆಯಾಗಬೇಕು. ಇದು ಭ್ರಷ್ಟರ ಕೂಟವಾಗಿದೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ. Let us not limit to any party. ಇದನ್ನು ಪಕ್ಷಗಳಿಗೆ ಲಿಮಿಟ್ ಮಾಡುವುದು ಬೇಡ. ಘಟನೆ ಈಗ ನಡೆದಿದೆ. ಆದರೆ, ಇದರ ಹಿನ್ನೆಲೆ ಬಹಳ ಉದ್ದವಾಗಿದೆ. ನಾವು ನಿಮ್ಮ ಮೇಲೆ, ನೀವು ನಮ್ಮ ಮೇಲೆ ಹೊರೆ ಹಾಕುವುದಕ್ಕಿಂತ ಸಮಾಜದ ಸ್ವಾಸ್ಥ್ಯ, ಈ ರಾಜ್ಯದ ಕಾನೂನಿನ ಸ್ವಾಸ್ಥ್ಯ, ಭಯೋತ್ಪಾದಕ ಚಟುವಟಿಕೆಗಳು ಆಗಿಬಿಟ್ಟರೆ ಎನ್ನುವಂತಹ ಮುನ್ನೆಚ್ಚರಿಕೆಯ ದೃಷ್ಟಿಕೋನದಿಂದ ಇದನ್ನು ನೋಡಬೇಕಾಗುತ್ತದೆ. ಇದರಲ್ಲಿ ಮೊನ್ನೆ ಆದಂತಹ ಘಟನೆಯಿಂದ ಬಹಳ ನೋವಾಗಿ ನಾನು ದಿಗ್ಭ್ರಮೆಗೊಂಡು ಅಲ್ಲಿಗೆ ಹೋದೆ. ಕಾರ್ಮಿಕರು ಸಿಡಿದು ಹೋಗಿದ್ದಾರೆ ಎಂದು ಅಲ್ಲಿಗೆ ಹೋದೆ. ಆ ಫೋಟೋಗಳನ್ನು ನೋಡಿದೆ, ಕಾರ್ಮಿಕರು ಒಂದು ಹೊತ್ತಿನ ಊಟಕ್ಕೆ ಕಷ್ಟಪಡುವಂತಹವರ ದೇಹ ಹೀಗೆ ಛಿದ್ರವಾಗಬೇಕಾ? ಸಾವು ಬರುವುದು ಎಲ್ಲರಿಗೂ ಖಚಿತ. ಆದರೆ, ಸಾವಿನಲ್ಲಿ ಇಂತಹ ಒಂದು ಕ್ರೌರ್ಯತೆ ಇರಬೇಕಾ? ನಾನು ಅಲ್ಲಿಗೆ ಹೋಗಿ ಎರಡು ದಿನಗಳ ನಂತರ ನನಗೆ ಗೊತ್ತಾಯಿತು., ಇವರೂ ಸಹ ವ್ಯವಹಾರದ ಭಾಗಿಗಳು, transport ಮಾಡುವಂತಹವರು. Retail distribution ಮಾಡತಕ್ಕಂತಹವರು. ಮಾನ್ಯ ಡಿ.ಸಿ.ಯವರಿಗೆ ಫೋನ್ ಮಾಡಿ ಹೇಳಿದೆ, ನಾನು ಅವರಿಗೆ ಬಹಿರಂಗವಾಗಿ ಪರಿಹಾರ ಕೇಳಿದ್ದೆ. ನೀವು ಕೊಡುವುದಾದರೆ ಕೊಟ್ಟುಬಿಡಿ. ಆದರೆ, ದಯಮಾಡಿ ಕಾರ್ಮಿಕರಿಗೆ ಪರಿಹಾರ ಎಂದು ಮಾತ್ರ ಕೊಡಬೇಡಿ ಎಂದು ಹೇಳಿದೆ, ಇವರು ಸ್ಫೋಟಕ ವ್ಯವಹಾರಗಳಲ್ಲಿ ತೊಡಗಿದಂತಹವರು, ಇವರಿಗೆ ಸರ್ಕಾರ ಯಾವುದೇ ಕಾರಣಕ್ಕೂ ಪರಿಹಾರ ಕೊಡಬಾರದು, ಇವರು ಸಮಾಜದ್ರೋಹಿಗಳು ಎನ್ನುವಂತಹ ಮಾತನ್ನು ಡಿ.ಸಿ.ಯವರಿಗೆ ಫೋನ್ ಮಾಡಿ ಹೇಳಿದೆ. ಆ ಕಾರಣಕ್ಕೋಸ್ಕರ ಮಾನ್ಯ ಸಚಿವರಿಗೆ ವಿನಂತಿ ಮಾಡಿ ಕೇಳುತ್ತೇನೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಫೋಟಕ ಮಾಡಿದಂತಹ ಈ ಸಮಾಜದ್ರೋಹಿಗಳನ್ನು ತಮ್ಮ ನಾಲ್ಕು ಕಾಸಿನ ದುಡಿಮೆಗೋಸ್ಕರ ನಮ್ಮ ಸಮಾಜವನ್ನೇ ಛಿದ್ರ ಛಿದ್ರ ಮಾಡುವುದಕ್ಕೆ ಹೊರಟಂತಹ ಈ ಸ್ಫೋಟಕ ರೂವಾರಿಗಳಿಗೆ ಪರಿಹಾರವನ್ನು ದಯಮಾಡಿ ಕೊಡಬೇಡಿ. ನಾಳೆ ಇನ್ನೊಬ್ಬ ಸತ್ತಂತಹ ಸಮಾಜದ್ರೋಹಿಗಳಿಗೂ ಪರಿಹಾರ ಕೊಡಬೇಕಾಗುತ್ತದೆ. ಆ ಕಾರಣಕ್ಕೆ ಅವರಿಗೆ ಪರಿಹಾರ ಕೊಡಬಾರದು. ಶ್ರೀಮತಿ ವನಿತಾ ಶಿವಶಂಕರ್ ಎಂಬುವವರು ಒಬ್ಬರು lady D.C.F. ಇದ್ದರು. ಅವರ ಯಜಮಾನರ ಹೆಸರು ಶಿವಶಂಕರ್ ಎಂಬು ಇತ್ತು. ಬಹಳ ಚೆನ್ನಾಗಿ ಗಣಿಗಳನ್ನು control ಮಾಡುತ್ತಿದ್ದರು. ಅರಣ್ಯ ಒತ್ತುವರಿ ಕಂಟ್ರೋಲ್ ಮಾಡುತ್ತಿದ್ದರು. 4-5 ವರ್ಷಗಳ ಹಿಂದೆ ಅವರು ತುಂಬಾ ಚೆನ್ನಾಗಿ ಕೆಲಸ ಮಾಡಿದ್ದರು. ಲಾಬಿ ಮಾಡುವವರು ಎಷ್ಟು ಪ್ರಭಾವಿಗಳಿರುತ್ತಾರೆಂದರೆ, ಗಂಡ, ಹೆಂಡತಿ ಇಬ್ಬರನ್ನೂ ರಾಯಚೂರು-ಕಲಬುರಗಿ ಕಡೆ ವರ್ಗಾವಣೆ ಮಾಡಿಸಿದರು. **(ಮುಂದು)**

**(47) 01.02.2021 03.50 ಎಸ್‌ವಿ-ಬಿಎನ್‌ಎಸ್**

**ಶ್ರೀ ಆಯನೂರು ಮಂಜುನಾಥ್(ಮುಂದು):-**

ಗಂಡ ಹೆಂಡತಿ ಇಬ್ಬರೂ ವರ್ಗಾವಣೆಯಾಗಿ ಹೋದರು. ಅಂದರೆ ಈ ದುಷ್ಟ ಶಕ್ತಿಗಳು ಸದಾ ಕಾಲ active ಇರುತ್ತಾರೆ. ಇಂತಹವರನ್ನೇ ಹಿಡಿದು ಹಾಕಬೇಕಾಗಿದೆ. ಆ ಇಲಾಖೆಯ ಒಬ್ಬ ಅಧಿಕಾರಿಯ ಫೋಟೊ ಅನ್ನು ನಾನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಮಾನ್ಯ ಸಚಿವರಿಗೂ WhatsApp ನಲ್ಲಿ ಕಳಿಸಿಕೊಟ್ಟಿದ್ದೇನೆ. ಅವನೇ ಒಳಗಡೆ ಇರುವ ಕಿಂಗ್‌ಪಿನ್. ಸಂಗ್ರಹ ಮಾಡುವಂತಹ ಏಜೆಂಟ್. ಹೆಸರನ್ನು ನಾನು ಉಲ್ಲೇಖ ಮಾಡುವುದಿಲ್ಲ. ಏಕೆಂದರೆ ಆತ defend ಮಾಡಿಕೊಳ್ಳುವುದಕ್ಕೆ ಇರುವುದಿಲ್ಲ. ಆದರೆ ಅಲ್ಲಿರತಕ್ಕಂತಹ ಒಬ್ಬ ನೌಕರ, ಇವರು ಯಾರು ನರಸಿಂಹ ಎನ್ನುವ ಒಬ್ಬ ಅಪರಾಧಿಯನ್ನು ಬಂಧಿಸಿದರೋ ಅವನ ಜೊತೆಯಲ್ಲಿ ವ್ಯವಹರಿಸುತ್ತಾನೆ. ಸ್ಫೋಟಕ ಪ್ರಕರಣದಲ್ಲಿ ಬಂಧಿಸಿರುವವರ ಜೊತೆಯಲ್ಲಿ ಇವರು ಪಾರ್ಟಿಗಳು. ಅವರ ಜೊತೆಯಲ್ಲಿ ಇವರು ಹಾರ ತುರಾಯಿಗಳನ್ನು ಹಾಕಿಸಿಕೊಳ್ಳುವುದು. ಇಲಾಖೆಯನ್ನು ಕೂಡ reshuffle ಮಾಡಬೇಕು. ಅಲ್ಲಿರುವವರನ್ನೆಲ್ಲಾ ಒಮ್ಮೆ ಬದಲಾಯಿಸಬೇಕು. ನಾನು ಹೆಚ್ಚು ದೀರ್ಘವಾಗಿ ಮಾತನಾಡಲಿಕ್ಕೆ ಹೋಗುವುದಿಲ್ಲ. ತಾವು ಉತ್ತರ ಕೊಡುವ ಸಂದರ್ಭದಲ್ಲಿ ಎಲ್ಲದಕ್ಕೂ ಸ್ಪಷ್ಟ ಉತ್ತರವನ್ನು ಕೊಡುವಿರೆಂಬ ಭರವಸೆ ನನಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಆಯನೂರು ಮಂಜುನಾಥ್ ಅವರೇ, ತಾವು ಸುಧಾಕರ್ ಬಗ್ಗೆಯೂ ಸ್ವಲ್ಪ ಹೇಳಿ. ಏಕೆಂದರೆ ಕುಲಕರ್ಣಿ ಎನ್ನುವವನು patta land owner. ಸುಧಾಕರ್ ಎನ್ನುವವನು ಗುತ್ತಿಗೆಯನ್ನು ಪಡೆದಿದ್ದಾನೆ. No F.I.R. or Charge Sheet has been filed against Mr.Sudhakar. But, I want to know . . . ನೀವು ಅದೇ ಜಿಲ್ಲೆಯವರಾಗಿರುವುದರಿಂದ, ಸರ್ಕಾರ ತಮಗೆ ಉತ್ತರಿಸಬಹುದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು 1994ರಲ್ಲಿ ಈ ಭಾಗದ ಎಂ.ಎಲ್.ಎ. ಆಗಿದ್ದೆನು. ಲೋಕಸಭಾ ಸದಸ್ಯನಾಗಿಯೂ ಆ ಭಾಗದಲ್ಲಿ ಕೆಲಸ ಮಾಡಿದ್ದೇನೆ. ಅದೇ ತಾಲ್ಲೂಕಿನಲ್ಲಿ ಹುಟ್ಟಿ ಬೆಳೆದಿದ್ದೇನೆ. ಎಲ್ಲವನ್ನೂ ತಿಳಿದಿದ್ದೇನೆ. 10 ಕಿ.ಮೀ. ವ್ಯಾಪ್ತಿಯಲ್ಲಿ ಯಾರಿಗೂ ಪರ್ಮಿಷನ್ ಕೊಟ್ಟಿರುವುದಿಲ್ಲ ಎಂದು ಸರ್ಕಾರ ಹೇಳಿದೆ. ಆದರೂ ಇನ್ನೂ ಗಣಿಗಾರಿಕೆ ನಡೆಯುತ್ತಿದ್ದು, ಅವರು ಏಕೆ ಇನ್ನೂ ಬಂಧನಕ್ಕೊಳಗಾಗಿರುವುದಿಲ್ಲ? ಇಲಾಖೆಯು ಕಾನೂನುಬದ್ಧವಾಗಿ ಕ್ರಷರ್‌ಗಳನ್ನು ಕೊಡುತ್ತದೆ. ಆದರೆ ಕಾನೂನಿನ ದೌರ್ಬಲ್ಯವೆಂದರೆ ಕ್ರಷರ್ ಕೊಡುವವನಿಗೆ ಕ್ವಾರಿ ಇರಬೇಕೆಂದು ಇಲ್ಲ. ಆದರೆ ಆ ಕ್ವಾರಿಗಳಿಗೆ ಎಲ್ಲಿಂದ ಕಲ್ಲು ಬರುತ್ತಿದೆ ಎಂಬುದೇ ಪ್ರಶ್ನೆ. ರಾತ್ರಿ ಹಗಲು ಕ್ರಷ್ ಮಾಡುತ್ತಿದ್ದು, ಎಲ್ಲಿಂದ ಕಲ್ಲು ಬರುತ್ತಿದೆ? ಪಕ್ಕದಲ್ಲಿಯೇ ಅನಧಿಕೃತ ಗಣಿಗಳಿವೆ. ಕ್ರಷರ್ ಅನ್ನು ಕೊಟ್ಟ ಮೇಲೆ ಅವನು ದುಡಿಮೆ ಮಾಡುತ್ತಾನೆ. ಎಲ್ಲಿಂದ ಕಲ್ಲು ತಂದನು, ಅದಕ್ಕೆ ಟ್ಯಾಕ್ಸ್ ಕಟ್ಟಲಾಗಿದೆಯೇ, ರಾಯಲ್ಟಿ ಕಟ್ಟಲಾಗಿದೆಯೇ ಎನ್ನುವ ಲೆಕ್ಕವನ್ನು ನೋಡಬೇಕು. 65 ಕ್ರಷರ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಮತಿಸಲಾಗಿದೆ, ಆದರೆ ಕಲ್ಲುಗಣಿಗಳಿಗೆ ನೀಡಿರುವುದಿಲ್ಲ ಎಂದು ಸರ್ಕಾರ ಉತ್ತರದಲ್ಲಿ ಹೇಳಿದೆ. ಅಂದ ಮೇಲೆ patta land owner ನನ್ನು Geology Officers, ರೆವಿನ್ಯೂ ಅಧಿಕಾರಿಗಳು, Forest and Environment Department ಅಧಿಕಾರಿಗಳು ಏನು ಮಾಡಬೇಕು? ಅಧಿಕಾರಿಗಳು ಕ್ರಮ ಕೈಗೊಳ್ಳಲೇಬೇಕು. ಈ ಅಧಿಕಾರಿಗಳಿಂದಾಗಿ ಯಾವ ರಾಜಕೀಯ ನಾಯಕರಿಗೂ ಒಳ್ಳೆಯ ಹೆಸರು ಬರುವುದಿಲ್ಲ. ಯಾವ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಐದು ಇಲಾಖೆಯ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಬೇಕು. ನಿಮ್ಮ ಕರ್ತವ್ಯ ಲೋಪವಾಗಿದೆಯೆಂದು ಅವರನ್ನು ವಿಚಾರಣೆಗೆ ಒಳಪಡಿಸಬೇಕು. ಏಕೆ ವಿಫಲರಾಗಿದ್ದಾರೆ? ಪ್ರತಿ ವರ್ಷ ಕೇಸ್‌ಗಳನ್ನು ದಾಖಲಿಸಿರುವ ವಿವರಗಳು ನನ್ನ ಬಳಿಯೂ ಇತ್ತು, ಸರ್ಕಾರವೂ ತನ್ನ ಉತ್ತರದಲ್ಲಿ ನೀಡಿದೆ. ಕೇಸ್ ಹಾಕಬೇಕಾದರೆ ಅನಧಿಕೃತ ಗಣಿಗಾರಿಕೆಯೆಂದು ಕೇಸ್ ಹಾಕಲಾಗುತ್ತದೆ. ಪ್ರತಿ ವರ್ಷ ಹಿಡಿಯುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಸ್ ಹಾಕುತ್ತಾರೆ, ನಂತರ ಬಿಟ್ಟುಬಿಡುತ್ತಾರೆ. ನಾನು ಇಂದು ಮಧ್ಯಾಹ್ನ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಕಾನೂನು ಬಹಳ ದುರ್ಬಲವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಆಯನೂರು ಮಂಜುನಾಥ್ ಅವರೇ, ಕೇಸ್ ಹಾಕಿದರೂ ನಂತರ ಕಪ್ಪಕಾಣಿಕೆಯನ್ನು ಸ್ವೀಕರಿಸಿ ಬಿಟ್ಟುಬಿಡುತ್ತಾರೆ.

**ಶ್ರೀ ಆಯನೂರು ಮಂಜುನಾಥ್:-** ಇರಬಹುದು ಮಾನ್ಯ ವಿರೋಧ ಪಕ್ಷದ ನಾಯಕರೆ, ಏಕೆಂದರೆ ತಾವು ಸಚಿವರಾಗಿದ್ದವರು. ಅದು ತಮ್ಮ ಗಮನಕ್ಕೆ ಬಂದಿರುತ್ತದೆ. ನಾನು ಕೇವಲ ಶಾಸಕನಷ್ಟೇ ಆಗಿರುವುದರಿಂದ ನನಗೆ ಇವೆಲ್ಲಾ ತಿಳಿಯುವುದಿಲ್ಲ. ಪ್ರತಿ ವರ್ಷ ಕೇಸ್ ಹಾಕಿದಾಗಲೂ ಅದೇ ವ್ಯಕ್ತಿಗಳೇ ಸಿಕ್ಕಿಬೀಳುತ್ತಾರೆ. ಅಧಿಕಾರಿಗಳು ಅದನ್ನು permanent ಆಗಿ ನಿಲ್ಲಿಸುವುದಕ್ಕೆ ಏನು ಮಾಡಿದ್ದಾರೆ? ಹಿಡಿದದ್ದು, ಬಿಟ್ಟದ್ದು ಲೆಕ್ಕ ಕೊಡುವರೇ? ಅದೇನು ಆಟಿಕೆ ವಸ್ತುವೇ? ಕಳೆದ ವರ್ಷ ಹಿಡಿದಿದ್ದಿಷ್ಟು, ಈ ವರ್ಷ ಹಿಡಿದಿದ್ದಿಷ್ಟು ಎಂದು ಹೇಳುವುದಾದರೆ, ಇದು ಹೇಗೆ ಪುನರಾವರ್ತನೆಯಾಯಿತು? ಅಧಿಕಾರಿಗಳ ಕಾರ್ಯವೈಖರಿ ಏನು? ಆಡಳಿತದ ಅರ್ಥವೇನು? ಪದೇ ಪದೇ ಆಗುತ್ತದೆ, ಪದೇ ಪದೇ ಹಿಡಿಯುತ್ತಾರೆ. ಅಧಿಕಾರಿಗಳು ಸುಖವಾಗಿದ್ದಾರೆ. ಅದರ ನೆರಳಿನಲ್ಲಿ ಕೆಲವು ಪುಡಿ ರಾಜಕಾರಣಿಗಳಿದ್ದಾರೆ, ಸಮಾಜದ್ರೋಹಿಗಳಿದ್ದಾರೆ, ಎಲ್ಲರೂ ಇದ್ದಾರೆ. Irrespective of parties, ಎಲ್ಲರೂ ಶಾಮೀಲಾಗಿದ್ದಾರೆ. ಮಾನ್ಯ ಪ್ರಸನ್ನಕುಮಾರ್ ಅವರು ನನ್ನ ಸ್ನೇಹಿತರು. ಕೆಲವು ನಾವು ಹೇಳಬಾರದು. ಎಲ್ಲರೂ ಇದ್ದಾರೆ. ಅವರೆಲ್ಲರ ಮೇಲೆಯೂ ಕ್ರಮ ಕೈಗೊಳ್ಳುವುದಕ್ಕೆ ನಾವು ರಾಜಕಾರಣಿಗಳು ಬಿಡಬೇಕು. ಅಧಿಕಾರಿಗಳು ತಮ್ಮ ಬ್ಯಾಟರಿಯನ್ನು ಚಾರ್ಜ್ ಮಾಡಿಕೊಳ್ಳಬೇಕು.

ಬಡವರು ಬಗರ್‌ಹುಕುಂ ಮಾಡಿದರೆ ಅವರ ಮೇಲೆ ಹಾರಾಡುತ್ತಾರೆ. ಇವರ ಮೇಲೆ ಏಕೆ ಇಲ್ಲ? ಬಗರ್‌ಹುಕುಂ ಸಕ್ರಮಕ್ಕೆ ಅರ್ಜಿಯನ್ನು ಹಾಕಿದ್ದರೂ ಸಹ ಅವರನ್ನು ಅರೆಸ್ಟ್ ಮಾಡಿ ಅವರ ಗಿಡಗಳನ್ನು ಕಡಿದು ಟ್ರಾಕ್ಟರ್ ಹೊಡೆಸುತ್ತಾರೆ. ಇಲ್ಲಿ ಏಕೆ ಹೊಡೆಯುವುದಿಲ್ಲ? ಕೈಲಾಗದಿದ್ದವರ ಮೇಲೆ ಎಲ್ಲರೂ ಅಸ್ತ್ರ ಪ್ರಯೋಗಿಸುತ್ತಾರೆ. ದುರ್ಬಲರಿಗೆ ದೇವರು ಕೂಡ ಘಾತಕ ಎಂದು ಒಂದು ಶ್ಲೋಕವಿದೆ.

**ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವ ಚ ನೈವ ಚ।**
**ಅಜಪುತ್ರಂ ಬಲಿಂ ದದ್ಯಾತ್ ದೈವೋ ದುರ್ಬಲ ಘಾತುಕಃ॥**

ಅಶ್ವವನ್ನು ಯಾರೂ ಬಲಿ ಕೊಡುವುದಿಲ್ಲ. ಏಕೆಂದರೆ ಅಶ್ವಮೇಧ ಯಾಗ ಮಾಡಬೇಕಾಗುತ್ತದೆ. ಅದು ಬಹಳ ದೊಡ್ಡ ಯಾಗವಾಗಿದ್ದು, ಬಹಳ ಪ್ರಯಾಸ ಪಡಬೇಕು. ಅದಕ್ಕಾಗಿ ನಭೋಮಂಡಲವನ್ನು ಗೆದ್ದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬೇಕು. ಅದಕ್ಕಾಗಿ ಅಶ್ವವನ್ನು ಯಾರೂ ಬಲಿ ಕೊಡುವುದಿಲ್ಲ. ಆನೆಯನ್ನು ಕಡಿಯುವುದು ಎಲ್ಲಿಯಾದರೂ ಉಂಟೇ? ತುಳಿದು ಹಾಕಿ ಬಿಡುತ್ತದೆ. ಅದಕ್ಕಾಗಿ ಆನೆಯನ್ನು ಬಲಿ ಕೊಡುವುದಿಲ್ಲ. ಹುಲಿ ಸಹವಾಸ ಬೇಡವೇ ಬೇಡ. ಹಾಗಾದರೆ ಯಾರನ್ನು ಬಲಿ ಕೊಡಬೇಕು? ಕುರಿಮರಿಯು ಹಾಯುವುದಿಲ್ಲ, ಒದೆಯುವುದಿಲ್ಲ, ಕಚ್ಚುವುದಿಲ್ಲ. ಇದನ್ನೇ ಬಲಿ ಕೊಡಬೇಕು. ಕೊನೆಯ ವಾಕ್ಯದಲ್ಲಿ ದುರ್ಬಲರಿಗೆ ದೇವರು ಘಾತಕ ಎಂದು ಹೇಳಿದೆ. ಅಂತೆಯೇ ಇಲ್ಲಿ ಅಧಿಕಾರಿಗಳು ದುರ್ಬಲರ ಮೇಲೆ ದಾಳಿ ಮಾಡುತ್ತಿದ್ದಾರೆ. ಯಾರಾದರೂ ರಾಜಕೀಯವಾಗಿ ಬಲಿಷ್ಠರಾಗಿರುವವರ ಮೇಲೆ, ಹಣಕಾಸಿನಿಂದ ಬಲಿಷ್ಠರಾಗಿರುವವರ ಮೇಲೆ ದಾಳಿ ಮಾಡಲು ಅಧಿಕಾರಿಗಳಿಗೆ ಧೈರ್ಯವಿಲ್ಲ. ಕಾನೂನು ಇರುವುದು ಬಡವರಿಗಾಗಿ, ಶ್ರೀಮಂತರಿಗೆ ಮತ್ತು ರಾಜಕಾರಣಿಗಳಿಗಲ್ಲ. ಈ ರೀತಿಯಾಗಿ ಸರ್ಕಾರದ ಉತ್ತರದಿಂದ ಹಲವಾರು ಅಂಶಗಳು ಹೊರಬಂದಿವೆ. ಇದರಲ್ಲಿ contradictory statements ಇವೆ. ಕಲ್ಲುಕ್ವಾರಿ ಇಲ್ಲದಿರುವ ಜಾಗದಲ್ಲಿ ಗಣಿಗೆ ಅವಕಾಶವನ್ನು ಕೊಟ್ಟರೆ ಈ ರೀತಿ ನಡೆಯುತ್ತದೆ. ಸುಮಾರು 150 ಗಣಿಗಳು ಇಲ್ಲಿದ್ದು ಅವುಗಳಲ್ಲಿ 76 ಮಾತ್ರ ಅಧಿಕೃತವಿರಬಹುದು. Even 50% ಅಧಿಕೃತವಲ್ಲ. ಅನಧಿಕೃತ ಗಣಿಗಳಿವೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ನಾನು ಪ್ರಾರಂಭದಲ್ಲಿಯೇ ವಿನಂತಿ ಮಾಡಿದ್ದೇನೆ. ಇದು ಒಂದು ಪಕ್ಷದ ಕಾಲದಲ್ಲಿ ನಡೆದಿರುವುದಲ್ಲ. ಎಲ್ಲರ ಕಾಲದಲ್ಲಿಯೂ ನಡೆದಿದೆ. ಅಂತಹ ದುಷ್ಟಕೂಟಗಳನ್ನು ನಾವು ಸದೆಬಡಿಯಬೇಕೆ ಹೊರತು ನಾವು ಪಕ್ಷದ angle ನಲ್ಲಿ ಸರ್ಕಾರದ angle ನಲ್ಲಿ ನೋಡುವುದು ಬೇಡ. ನಾವೆಲ್ಲರೂ ಕೂಡ ಇದಕ್ಕೆ ಬೆಂಬಲವಾಗಿ ನಿಲ್ಲೋಣ. ಹೇಳುವಂತಹ ಅಂಶಗಳು ಬಹಳಷ್ಟು ಮಾಹಿತಿಗಳು ಅಧಿಕೃತವಾಗಿವೆ. ಶಾಸಕರಾದ ನಾವು ಇದನ್ನು ತಡೆಯುವಲ್ಲಿ ವಿಫಲರಾಗುತ್ತಿದ್ದೇವೆಂದು ನಮಗೆ ಸಂಕೋಚವಿದೆ. ಸರಿಯಾಗಿ ತನಿಖೆಯನ್ನು ಮಾಡಿಸಿ, ಯಾರು ಯಾರಿಗೆ ಈ ಸ್ಫೋಟಕದವರು ಆರು-ಏಳು ಲಕ್ಷ payment ಮಾಡುತ್ತಿದ್ದಾರೆ. ಪ್ರತಿಯೊಂದು ಕ್ವಾರಿಯವರು ಎಷ್ಟು payment ಮಾಡುತ್ತಿದ್ದಾರೆ ಮರಳೊಳಗೆ ಎಷ್ಟು payment ಆಗುತ್ತಿದೆ. ಅದರಲ್ಲಿ ರಾಜಕಾರಣಿಗಳು, ಅಧಿಕಾರಿಗಳು ಇರುವುದರಲ್ಲಿ ಸಂಶಯವೇ ಬೇಡ. ಸದನದಲ್ಲಿ ಅವರ ಹೆಸರು ಪ್ರಸ್ತಾಪ ಮಾಡುವುದು ಬೇಡ. ಏಕೆಂದರೆ ಸಮರ್ಥನೆ ಮಾಡಿಕೊಳ್ಳಲು ಅವರು ಇಲ್ಲಿ ಇಲ್ಲ. Irrespective of parties, ಅದರಲ್ಲಿ ಅನುಮಾನವೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಮರಳಿನ ಹವಾ ಅಂತೂ ಬೇಡವೇ ಬೇಡ. ಇಲ್ಲಿಂದ ಎಲ್ಲೆಲ್ಲಿಗೆ ಮರಳು ಹೋಗುತ್ತದೆ ಎನ್ನುವುದು ಗೊತ್ತಿಲ್ಲ. ನಮ್ಮೂರಿನಲ್ಲಿ ಮರಳು ಸಿಗುವುದಿಲ್ಲ. ನಾನು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ. ಶಿವಮೊಗ್ಗ ನಗರದಲ್ಲಿ 18,000 ಜನ ಕಟ್ಟಡ ಕಾರ್ಮಿಕರಿದ್ದಾರೆ. ಕೊರೊನಾ ಮತ್ತು ಮರಳಿನ ಅಭಾವದಿಂದಾಗಿ ಅವರಿಗೆ ಕೆಲಸವಿಲ್ಲ. ಏಕೆಂದರೆ ಮರಳಿನ ಬೆಲೆ ಜಾಸ್ತಿ. 50,000–60,000 ಒಂದು ಲೋಡ್‌ನ ಬೆಲೆ. ಮಧ್ಯಮವರ್ಗದವರು ಮನೆ ಕಟ್ಟುತ್ತಿಲ್ಲ. ಮನೆ ಕಟ್ಟುತ್ತಿಲ್ಲ ಎನ್ನುವ ಕಾರಣಕ್ಕಾಗಿ ಕಲ್ಲು ಹೊಡೆಯುವವನಿಗೆ ಕೆಲಸವಿಲ್ಲ. ಇಟ್ಟಿಗೆ ಸುಡುವವನಿಗೆ ಕೆಲಸವಿಲ್ಲ. ಗಾರೆಯವನಿಗೆ ಕೆಲಸವಿಲ್ಲ. ಬಣ್ಣ ಹೊಡೆಯುವವನಿಗೆ ಕೆಲಸವಿಲ್ಲ. ಕಾರ್ಪೆಂಟರಿಗೆ ಕೆಲಸವಿಲ್ಲ. Bar bender ಗೆ ಕೆಲಸವಿಲ್ಲ. ಹೆಂಚು ಹೊದಿಸುವವನಿಗೆ ಕೆಲಸವಿಲ್ಲ. ಕೇವಲ ಶಿವಮೊಗ್ಗ ನಗರ ಒಂದರಲ್ಲಿ 18,000 ಕುಟುಂಬಗಳು ಈ ಭ್ರಷ್ಟಾಚಾರದಿಂದಾಗಿ ಉದ್ಯೋಗವನ್ನು ಕಳೆದುಕೊಂಡಿವೆ. ಈ ರೀತಿಯಾಗಿ ಬಡವರ ಬಾಯಿಗೆ ಮಣ್ಣು ಹಾಕಿ ಯಾರೋ ಒಂದು ನಾಲ್ಕು ಜನ ಅಧಿಕಾರಿಗಳು, ರಾಜಕಾರಣಿಗಳು, ಸಮಾಜದ್ರೋಹಿಗಳಿಗಾಗಿ ನಮ್ಮ ರಾಜ್ಯವನ್ನು, ದೇಶವನ್ನು, ಸಮಾಜವನ್ನು ಬಲಿ ಕೊಡಲಿಕ್ಕೆ ಸಾಧ್ಯವಿಲ್ಲ. ಗಣಿ ವಿಷಯದಲ್ಲಿ ಮಾನ್ಯ ನಿರಾಣಿಯವರು ತೀರ್ಮಾನವನ್ನು ತೆಗೆದುಕೊಳ್ಳಲಿ. ಗೃಹ ಮಂತ್ರಿಯವರು ಪೊಲೀಸ್ ಇಲಾಖೆಯ ವಿಫಲತೆಯ ಬಗ್ಗೆ ಪರಿಶೀಲಿಸಲಿ. ಆ ಸಬ್ ಇನ್ಸ್‌ಪೆಕ್ಟರ್ ಹೇಗೆ ಬಿಟ್ಟ? ಅವನು ಇನ್ನೂ ಹೇಗೆ ಉಳಿದಿದ್ದಾನೆ? ಎಫ್.ಐ.ಆರ್. ಹಾಕಿದ ಮೇಲೂ ಅಪರಾಧಿಯನ್ನು ಏಕೆ ಹುಡುಕಲಿಲ್ಲ? I.G.P. ಕಛೇರಿಯಿಂದ ಬಂದುದಾದರೆ, ಅಲ್ಲಿರತಕ್ಕಂತಹ I.G.P. ಯವರು ಏಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ?

**(ಮುಂದು)**

**(48) 01.02.2021, 4.00. KG.GR**

**ಶ್ರೀ ಆಯನೂರು ಮಂಜುನಾಥ್ (ಮುಂದು):–**

ಮಧ್ಯೆ ಬರುವಂತಹ ಎಸ್.ಪಿ.,ಯವರು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಇಲ್ಲಿ ಹಲವಾರು cadre ಗಳಿವೆ. ಇವರು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. Environment and Ecology Department ರವರು ಕ್ರಮ ತೆಗೆದುಕೊಳ್ಳಬೇಕು. Forest Department ನವರು ಕ್ರಮ ತೆಗೆದುಕೊಳ್ಳಬೇಕು. ನಾನು ಮಾನ್ಯ ಸಚಿವರಾದ ಅರವಿಂದ ಲಿಂಬಾವಳಿಯವರಿಗೆ ನಮ್ಮ ಜಿಲ್ಲೆಗೆ ಬನ್ನಿ ಸ್ವಲ್ಪ ಮಾಹಿತಿ ಇದೆ ಎಂದು ಹೇಳಿದ್ದೆ. ನಮ್ಮ Review Meeting ಗಳಿಗೆ ಅರಣ್ಯ ಇಲಾಖೆಯವರು ಸಿಗುವುದಿಲ್ಲ. ಇವರು ಯಾವ ಎಂ.ಎಲ್.ಎ., ಮತ್ತು ಎಂ.ಪಿ.,ಯವರ ಕೈಗೂ ಸಿಗುವುದಿಲ್ಲ. ಇವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಡಿನ ರಾಜರು. ನಮ್ಮ K.D.P., ನಲ್ಲಿ ಸಿಕ್ಕಿ ಹಾಕಿಕೊಳ್ಳುವುದಿಲ್ಲ. Review Meeting ನಲ್ಲಿ ಸಿಕ್ಕಿ ಹಾಕಿಕೊಳ್ಳುವುದಿಲ್ಲ. ಏನಾಗಿದೆ ಎಂದು ಕೇಳುವುದಕ್ಕೂ ಸಹ ಅವರು ಸಿಗುವುದಿಲ್ಲ. ಇವರನ್ನು ಯಾರು ಮುಟ್ಟುವುದಕ್ಕೆ ಆಗುವುದಿಲ್ಲ. ಇವರು ಒಂದು ತರಹ ಕಾಡಿನ ರಾಜರು ಬೆಳೆದಂತೆ ಬೆಳೆದಿದ್ದಾರೆ. ನಮ್ಮ ಅಧಿಕಾರಿಗಳು ಏನೇನು ಮಾಡುತ್ತಾರೆಂದು ಒಂದಿಷ್ಟು ಮಾಹಿತಿಗಳನ್ನು ಕೊಡುತ್ತೇವೆ ಬನ್ನಿ, ಇದೇರೀತಿ ರಾಜ್ಯದಲ್ಲಿ ಬೇರೆ ಬೇರೆ ಕಡೆ ಆಗುತ್ತಿರುತ್ತದೆ ಎಂದು ಮಾನ್ಯ ಸಚಿವರಾದ ಅರವಿಂದ ಲಿಂಬಾವಳಿಯವರಿಗೆ ಮನವಿ ಮಾಡಿಕೊಂಡಿದ್ದೇನೆ. ಈ ರೀತಿ ನಾಲ್ಕೈದು ಇಲಾಖೆಗಳ ಸಚಿವರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಲಿ. ಮುಂದೆ ಒಂದು ದಿವಸ ನಮ್ಮ ರಾಜ್ಯ ಸ್ಫೋಟಗೊಂಡು ಛಿದ್ರ ಛಿದ್ರ ಆಗುವುದಕ್ಕೆ ಮುಂಚೆ ಅದರ ರಕ್ಷಣೆಗೆ ಸರ್ಕಾರ ಧಾವಿಸಬೇಕು. ನಾವೆಲ್ಲರೂ ಸಹ ಅದಕ್ಕೆ ಸಹಕಾರಿಯಾಗಿ ನಿಲ್ಲಬೇಕೆಂದು ವಿನಂತಿ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿಯವರೇ, ತಾವೀಗ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಅಧಿಕಾರಿಗಳು ಅಸಹಾಯಕರಾಗಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, misinterpretation ಮಾಡಿದ್ದಾರೆ. ಅವರು...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. Suomoto ಅವರು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲವೋ ಅಥವಾ ಅವರು ಕೆಲಸ ಮಾಡಲಾರದಂತೆ ಏನಾದರೂ ವ್ಯವಸ್ಥೆ ಇದೆಯೋ ಅದರ ಬಗ್ಗೆ ನಾವು ಚಿಂತನೆ ಮಾಡಬೇಕು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ತನಿಖೆ ಮಾಡಿಸಲಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ವಿಚಾರ. ಇಲ್ಲಿ ನಾಲ್ಕೈದು ಇಲಾಖೆಗಳ ಪ್ರಮುಖರು ಕೈಚೆಲ್ಲಿ ಕುಳಿತ್ತಿದ್ದಾರೆ. They would have taken action against the illegal mining. ಮರಳು ಮಾಫಿಯಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು, ಕಲ್ಲು ಮಾಫಿಯಾ ಇರಬಹುದು, ಅಧಿಕಾರಿಗಳು ಕೈಚೆಲ್ಲಿ ಕುಳಿತ್ತಿದ್ದಾರೆ. ಆ ರೀತಿ ಕೈಚೆಲ್ಲಿ ಕುಳಿತುಕೊಳ್ಳಬೇಕಾದರೆ, ಇದರ ಹಿನ್ನೆಲೆ ಇರಬೇಕಲ್ಲವೇ, ಅವರನ್ನು ಕೈಚೆಲ್ಲಿ ಕುಳಿತುಕೊಳ್ಳುವಂತೆ ನಾವು ಯಾರಾದರೂ ಮಾಡಿರಬೇಕಲ್ಲವೇ; ನಾನು IT-BT Minister ಆಗಿದಂತಹ ಸಂದರ್ಭದಲ್ಲಿ ನಾನು ಬಾಗಲಕೋಟೆ incharge Minister ಆಗಿದ್ದೆ. ಆ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ sand mafia ದೊಡ್ಡ ಪ್ರಮಾಣದಲ್ಲಿ ನಡೆದಿತ್ತು. ಅಧಿಕಾರಿಗಳು ಬಂದು ನನ್ನ ಬಳಿ ಆ ರೀತಿ ನಡೆಯುತ್ತಿಲ್ಲವೆಂದು ಹೇಳುತ್ತಿದ್ದರು. ಆದರೆ, ಪತ್ರಿಕೆಯವರು ಬಂದು ಹಾಡುಹಗಲೇ ಮರಳನ್ನು ಲೂಟಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದರು. ಆಗ ನಾನು ಯಾರಿಗೂ ಸಹ ಹೇಳದೆ ರಾತ್ರಿ 1.30 ಗಂಟೆಗೆ ಅಲ್ಲಿಗೆ ಹೋಗಬೇಕೆಂದು ತಯಾರಿಗಿದ್ದೆ. ಆದರೆ, ಮಾಹಿತಿ ಯಾವ ರೀತಿ ಸೋರಿಕೆ ಆಗಿತ್ತು ಎನ್ನುವುದು ಗೊತ್ತಿಲ್ಲ. ನಮ್ಮ ಜಿಲ್ಲಾಧಿಕಾರಿಯವರಿಗೆ ಮಾಹಿತಿ ಸಿಕ್ಕಿ ತಕ್ಷಣ ಬಂದು ನನ್ನ ಕಾರು ಹತ್ತಿಬಿಟ್ಟರು. ಈ ವಿಷಯವನ್ನು ನಾನು ಎಸ್.ಪಿ.,ಯವರಿಗೂ ಸಹ ಹೇಳಿರಲಿಲ್ಲ. ನಾನು ಯಾರ ಸಹಾಯವನ್ನು ತೆಗೆದುಕೊಳ್ಳದೇ ಮಧ್ಯರಾತ್ರಿ 1.30 ಗಂಟೆಗೆ ಆ ಸ್ಥಳಕ್ಕೆ ಹೋದೆ. ನಾನು ಮರಳು ಮಾಫಿಯಾವನ್ನು ಸ್ವತಃ ನೋಡಬೇಕೆಂದು ಹೋಗಿದ್ದೆ. ನನಗೂ ಸಹ ಬಹಳ ಬೆದರಿಕೆ ಹಾಕಿದ್ದರು. ಅಲ್ಲಿಗೆ ಹೋದ ತಕ್ಷಣ ಎಸ್.ಪಿ., ಯವರು ಬಂದರು. ಅಲ್ಲಿ ಏನು ನಡೆಯುತ್ತಿತ್ತು ಎಂದು ಈಗ ಹೇಳಿದರೆ ತಮಗೆಲ್ಲರಿಗೂ ಬಹಳ ಆಶ್ಚರ್ಯವಾಗುತ್ತದೆ. ನಾವು non-officials ಇರುತ್ತೇವೆ. ಅಧಿಕಾರರೇತರರು ಮಂತ್ರಿಗಳು ಇರಬಹುದು, ಶಾಸಕರು ಇರಬಹುದು, ನಾವು ಕೂಡ ಅಷ್ಟೇ ಬದ್ಧತೆಯಿಂದ ಪ್ರಾಮಾಣಿಕತೆಯಿಂದ ಕ್ರಮ ತೆಗೆದುಕೊಳ್ಳಿ ಎಂದು ಅಧಿಕಾರಿಗಳಿಗೆ ಹೇಳಬೇಕಾಗುತ್ತದೆ. ಅವರು ಕ್ರಮ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಅದು ಬೇಡಪ್ಪಾ ಅದರ ಕಡೆಗೆ ಹೋಗಬೇಡ. ಅವರಿಗೆ ಇದಿದೆ, ಅದಿದೆ ಎಂದು ಹೇಳಿದ ತಕ್ಷಣ ಅದು ಭ್ರಷ್ಟಾಚಾರಕ್ಕೆ ಮೂಲವಾಗುತ್ತದೆ. ಆಗ ಅವರಿವರು ಸೇರಿ ಹಣ ಹೊಡೆಯುವುದಕ್ಕೆ ಹೋಗಿ ಇಂತಹ ಘಟನೆಗಳು ಸಂಭವಿಸುತ್ತವೆ. ಇದರಲ್ಲಿ ಕೇವಲ ಅಧಿಕಾರಿಗಳ ಮೇಲೆ ದೋಷರೋಪಣೆ ಮಾಡುವುದು ಅಲ್ಲ. ಇದರಲ್ಲಿ ನೇರವಾಗಿ ಅಧಿಕಾರರೇತರರು ಹೊಣೆಗಾರರು ಇದ್ದಾರೆಂದು ನನ್ನ ಅಭಿಪ್ರಾಯ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಾವು ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರುವಂತಹ ಘಟನೆಯ ಬಗ್ಗೆ ಸುಧೀರ್ಘವಾಗಿ ಚರ್ಚೆಯನ್ನು ಮಾಡುತ್ತಿದ್ದೇವೆ. ನಾನು ಇದೊಂದು ಕರುಣಾಜನಕವಾದಂತಹ ಘಟನೆ ಎಂದು ವರ್ಣನೆ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಚ್ಚೇಪಡುತ್ತೇನೆ. ಶಿವಮೊಗ್ಗ ಜಿಲ್ಲೆಯಿಂದ ಸುಮಾರು ಐದಾರು ಕೀಲೋಮೀಟರ್ ದೂರದಲ್ಲಿರುವ ಹುಣಸೋಡು, ಕಲ್ಲಗಂಗೂರು, ಬಸವನಗಂಗೂರು, ಗೆಜ್ಜೆನಹಳ್ಳಿ, ಮೋಜಪ್ಪನ ಹೊಸೂರು, ಕೋಟೆ ಗಂಗೂರು, ದೇವಕಾಶಿಕೊಪ್ಪ,. ಜಕಾಶಿಕೊಪ್ಪ ಇನ್ನೂ ಹಲವಾರು ಗ್ರಾಮಗಳ ಆಸುಪಾಸಿನಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ. ಈ ಗಣಿಗಾರಿಕೆ ಇವತ್ತು ನಿನ್ನೆಯದಲ್ಲ. ಈ ಗಣಿಗಾರಿಕೆ ಸುಮಾರು ವರ್ಷಗಳಿಂದ ನಡೆಯುತ್ತಿದೆ. ಶಿವಮೊಗ್ಗ ಜಿಲ್ಲೆ ರಾಜಕೀಯದಲ್ಲಿ ಬಹಳಷ್ಟು ಹೆಸರು ವಾಸಿಯಾಗಿರುವಂತಹ ಜಿಲ್ಲೆ. ಆ ಜಿಲ್ಲೆಯಿಂದ ಹಲವಾರು ಮಹಾನ್ ನಾಯಕರನ್ನು ಈ ನಾಡಿಗೆ ಕೊಡುಗೆಯಾಗಿ ಕೊಟ್ಟಂತಹ ಜಿಲ್ಲೆ. ಇವತ್ತಿನ ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಆ ಜಿಲ್ಲೆಯಿಂದ ಬಂದಂತಹವರು. ಈ ಘಟನೆಗೆ ಏನು ಕಾರಣವೆಂದು ನಾವೆಲ್ಲರೂ ಆತ್ಮವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಅದೇ ಜಿಲ್ಲೆಯಿಂದ ಬಂದಿರುವಂತಹ ಹಿರಿಯ ಸದಸ್ಯರಾದಂತಹ ಶ್ರೀ ಆಯನೂರು ಮಂಜುನಾಥ್‌ರವರು ಎಲ್ಲಾ ವಿಷಯಗಳನ್ನು ವಿವರವಾಗಿ ಮಾತನಾಡುತ್ತಿದ್ದರು.

ಮಾನ್ಯ ಸಭಾಪತಿಯವರೇ, ಅಲ್ಲಿ ಸುಮಾರು 97 ಕ್ರಷರ್‌ಗಳು ಇವೆ. ಸುಮಾರು 60 ಕ್ಕೂ ಹೆಚ್ಚು ಕ್ವಾರಿಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಈ 97 ಕ್ರಷರ್‌ಗಳಲ್ಲಿ ಸುಮಾರು 50% ರಷ್ಟು ಪರವಾನಿಗೆ ಇಲ್ಲ. ಇನ್ನೂ ಸುಮಾರು 50% ರಷ್ಟು ಅನಧಿಕೃತವಾಗಿ ಕ್ರಷರ್‌ಗಳು ಹಾಗೂ ಗಣಿಗಾರಿಕೆ ನಡೆಯುತ್ತಿದೆ. ಇದರಲ್ಲಿ ಯಾರ್‍ಯಾರ involvement ಇದೆ ಎಂದು ಪತ್ರಿಕೆಗಳಲ್ಲಿ ಸವಿಸ್ತಾರವಾಗಿ ಬರೆದಿರುವಂತಹ ವಿಷಯವನ್ನು ನಾವು ನೋಡಿದ್ದೇವೆ. ಯಾರು ಜನ ಪ್ರತಿನಿಧಿಗಳು ಇದ್ದಾರೋ, ಅವರು ನೇರವಾಗಿ ಮತ್ತು ಬೇನಾಮಿ ಹೆಸರಿನಲ್ಲಿ ಶಿವಮೊಗ್ಗ ನಗರ ಪಾಲಿಕೆಯ ಸದಸ್ಯರಿಂದ ಹಿಡಿದು ಶಾಸಕರು, ಸಂಸತ್ತು ಸದಸ್ಯರು ಇದರಲ್ಲಿ ಭಾಗಿಯಾಗಿದ್ದಾರೆಂದು ಎಷ್ಟೋ ಪತ್ರಿಕೆಗಳಲ್ಲಿ ಬರೆದಿರುವುದನ್ನು ನಾವು ನೋಡಿದ್ದೇವೆ. ಅವರು ಯಾರೇ ಇರಲಿ, ಅಲ್ಲಿ ನಡೆದಿರುವಂತಹ ಘಟನೆಯನ್ನು ಊಹೆ ಮಾಡುವುದಕ್ಕೂ ಸಹ ನಮಗೆ ಕಷ್ಟವಾಗುತ್ತದೆ. ಅಲ್ಲಿ blast ಆದಂತಹ ಸಂದರ್ಭದಲ್ಲಿ ಯಾವ್ಯಾವ ಮೆಟೀರಿಯಲ್ ಎಲ್ಲಿಂದ ಬಂತು ಎಂಬುದನ್ನು ಪೊಲೀಸ್ ಇಲಾಖೆಯಾಗಲಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಾಗಲಿ ಅಥವಾ tollgate ನಲ್ಲಿ ಇರುವಂತಹವರಾಗಲಿ ಪರಿಶೀಲನೆ ಮಾಡಬೇಕಾಗಿತ್ತು. ಆದರೆ, ಇವತ್ತಿಗೂ ಅದು ಎಲ್ಲಿಂದ ಬಂತು ಎಂದು ಯಾರು ಸಹ ಹೇಳುತ್ತಿಲ್ಲ. ದಿನ ಪತ್ರಿಕೆಗಳಲ್ಲಿ ಒಂದು ಕಡೆ ತಮಿಳುನಾಡಿನ ಕೊಯಮತ್ತೂರಿನಿಂದ ಹಾಗೂ ಆಂಧ್ರಪ್ರದೇಶದಿಂದ ಬಂತ್ತು ಎಂದು ಹೇಳುತ್ತಾರೆ. ಆ ಲಾರಿ ನಮ್ಮ ರಾಜ್ಯದ ಗಡಿಭಾಗದಿಂದ ಬರಬೇಕಾದರೆ, ಎಷ್ಟು tollgate ಗಳು ಇವೆ, ಇದನ್ನು ಯಾವ ರೀತಿ ದಾಟಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂತು, ಇದಕ್ಕೆ ಯಾರು ಕಾರಣಕರ್ತರು, ಇವತ್ತು ಪೊಲೀಸ್ ಇಲಾಖೆಯಾಗಲಿ ಅಥವಾ ಬೇರೆ ಬೇರೆ ಇಲಾಖೆಗಳಾಗಲಿ, ಕರೋನಾ ಸೋಂಕು ಬಂದ ಮೇಲೆ ಯಾರು ಮಾಸ್ಕ್ ಹಾಕುತ್ತಿಲ್ಲವೋ ಅಂತಹವರನ್ನು ಹಿಡಿದು ದಂಡ ಹಾಕುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ಈ ಲಾರಿಯಲ್ಲಿ ಬಂದಂತಹ ಸ್ಫೋಟಕ ವಸ್ತು ಯಾರ ಕಣ್ಣಿಗೂ ಕಾಣಲಿಲ್ಲವೇ, ಯಾವ ರೀತಿ ಆ ಸ್ಫೋಟಕ ವಸ್ತು ಬೇರೆ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬರುವುದಕ್ಕೆ ಸಾಧ್ಯವಾಯಿತೇ? ಇದರ ಹಿಂದೆ ಯಾರು ಇದ್ದಾರೆ? ರಾಜಕಾರಣಿಗಳು ಇದ್ದಾರೆಯೇ? ಅಧಿಕಾರಿಗಳು ಇದ್ದಾರೆಯೇ? ಪೋಲಿಸ್ ಇಲಾಖೆಯವರು ಇದ್ದಾರೆಯೇ? ಅರಣ್ಯ ಇಲಾಖೆಯವರು ಇದ್ದಾರೆಯೇ? ಗಣಿ ಮತ್ತು ಭೂ–ವಿಜ್ಞಾನ ಇಲಾಖೆಯವರು ಇದ್ದಾರೆಯೇ ಎಂಬುದು ತನಿಖೆಯಾಗಬೇಕಲ್ಲವೇ; ಇವತ್ತು ಶ್ರೀ ಬಿ.ವಿ.ಸುಧಾಕರ್ ಎನ್ನುವಂತಹ ಒಬ್ಬ ವ್ಯಕ್ತಿ ಐದು ಎಕರೆ ಜಾಗದಲ್ಲಿ ಕ್ವಾರಿಯನ್ನು ಮಾಡುತ್ತಿದ್ದಾನೆ. ಅದಕ್ಕೆ ಹೊಂದಿಕೊಂಡಂತೆ ಅವರ ಕ್ರಷರ್ ಸಹ ಇದೆ. ಅವರು ಈ ಎಲ್ಲಾ ಸಾಮಾಗ್ರಿಗಳನ್ನು ತರಿಸಿದ್ದಾರೆಂದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಈ ಘಟನೆಯಾದ ಇಷ್ಟು ದಿವಸಗಳ ನಂತರ ನಿನ್ನೆ ದಿವಸ 4 ಜನರನ್ನು ಬಂಧಿಸಲಾಗಿದೆ ಎಂದು ಮಾಧ್ಯಮಗಳಲ್ಲಿ ನೋಡಿದ್ದೇವೆ. ಎಫ್.ಐ.ಆರ್., ಆಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ಆಯನೂರು ಮಂಜುನಾಥ್‌ರವರು ಹೇಳಿದಂತೆ, ಇದು ಇವತ್ತಿನ ಅಥವಾ ನಿನ್ನೆಯ ಘಟನೆಯಲ್ಲ. ಇದು ಹತ್ತಾರು ವರ್ಷಗಳಿಂದ ಆಗಿರುವಂಥದ್ದು, ಸರ್ಕಾರಗಳು ಯಾವುದೇ ಇರಬಹುದು. ಯಾರ ಮೇಲೆಯೂ ಸಹ ನಾವು ದೋಷಣೆ ಮಾಡುವಂತಹದ್ದು ಅಲ್ಲ. ಈಗ ಘಟನೆ ಆಗಿಹೋಗಿದೆ. ಆದರೆ, ನಾವು ಇದಕ್ಕೆ ಎಲ್ಲಾದರೂ ಒಂದು ಕಡೆ ಇತಿಶ್ರೀ ಆಡಬೇಕಲ್ಲವೇ; ಏಕೆ ನಾವು ಪ್ರಮಾಣಿಕವಾದ ಪ್ರಯತ್ನಗಳನ್ನು ಮಾಡುತ್ತಿಲ್ಲ? ಘಟನೆ ನಡೆದಂತಹ ಜಿಲ್ಲೆ ಮಾನ್ಯ ಮುಖ್ಯ ಮಂತ್ರಿಯವರ ತವರೂರು. ಅವರ ಜಿಲ್ಲೆ. ಪ್ರಭಾವಿ ಮಂತ್ರಿಗಳು ಇರುವಂತಹ ಜಿಲ್ಲೆ. ಶಿವಮೊಗ್ಗಕ್ಕೆ ಕೇವಲ 5 ಕಿಲೋಮೀಟರ್‌ನ ಆಸುಪಾಸಿನಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಒಂದು ವೇಳೆ ಆ ಲಾರಿ ಸ್ಫೋಟಕ ವಸ್ತುಗಳನ್ನು ತರುವಂತಹ ವೇಳೆಯಲ್ಲಿ ಶಿವಮೊಗ್ಗ ನಗರದ ಮಧ್ಯ ಭಾಗದಲ್ಲಿ ಎಲ್ಲಿಯಾದರೂ ಸ್ಫೋಟವಾಗಿದ್ದರೆ ಇನ್ನೆಷ್ಟು ಅನಾಹುತ ಆಗುತ್ತಿತ್ತು? ಈ ಅನಾಹುತದಿಂದ ಅವತ್ತು 6 ಜನರು ಸತ್ತಿದ್ದಾರೆ. ತದನಂತರ 2/3 ದಿವಸಗಳು ಕಳೆದ ಮೇಲೆ ಮತ್ತಿಬ್ಬರು ಸತ್ತಿದ್ದಾರೆ. ಒಟ್ಟು 8 ಜನರ ಪ್ರಾಣವನ್ನು ಕಳೆದುಕೊಳ್ಳುವಂತಹ ಘಟನೆ ಇದಾಯಿತು.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(49)01-02-2021(4-10)ಎಂವಿ-ಜಿಆರ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಇಡೀ ದೇಶವೇ ಗಾಬರಿಯಾದ ರೀತಿಯಲ್ಲಿ ಫುಲ್ವಾಮಾದಲ್ಲಿ ಆದ ಘಟನೆಯನ್ನು ನಾವೆಲ್ಲರೂ ನೋಡಿದ್ದೇವೆ. ಅಲ್ಲಿ ಸುಮಾರು 350 ಕೆ.ಜಿ., ಯಷ್ಟು ಸ್ಫೋಟಕ ವಸ್ತು ಇತ್ತು ಎಂದು ಹೇಳಿದರು. ಆಗ ಅಲ್ಲಿ ಸುಮಾರು 40 ಜನ ವೀರಯೋಧರು ಮರಣ ಹೊಂದಿದರು. ಆದರೆ, ಇಲ್ಲಿಗೆ ಬಂದಿರುವುದು ಸುಮಾರು 1350 ಕೆ.ಜಿ., ಯಷ್ಟು ಸ್ಫೋಟಕ ವಸ್ತುಗಳು. ಅಲ್ಲಿ ಆದಂತಹ ಸ್ಫೋಟಕ್ಕೆ ಆ ಲಾರಿ ಛಿದ್ರ ಛಿದ್ರವಾಗಿದೆ. ಸುಮಾರು ಎರಡು ಕಿಲೋಮೀಟರ್‌ಗಳ ದೂರದ ತನಕ ಯಾವ ರೀತಿಯ ಸ್ಫೋಟವಾಯಿತು ಎಂದು ಅಲ್ಲಿನ ಜನರು ವರ್ಣನೆ ಮಾಡುವಂಥದ್ದನ್ನು ತಾವು ಕೇಳಬೇಕು. ಅಲ್ಲಿನ ಗಂಡ ಮತ್ತು ಹೆಂಡತಿ ಆ ಇಬ್ಬರು ಏನೆಂದು ಹೇಳುತ್ತಾರೆಂದರೆ, ಅವರು ಮನೆಯ ಚಾವಡಿಯ ಮೇಲೆ ನಿಂತಿದ್ದರಂತೆ, ಸ್ಫೋಟಕ ಆದಾಗ ಬೆಂಕಿಯ ಉಂಡೆ ಬಂತು, ಅದನ್ನು ನೋಡಿ ಗಾಬರಿಯಾಗಿ ನಾವು ಓಡಿ ಹೋಗುವುದಕ್ಕೂ ನಮ್ಮ ಕೈಯಲ್ಲಿ ಆಗಲಿಲ್ಲವೆಂದು ಹೇಳುತ್ತಾರೆ. ಎಲ್ಲೋ ಭೂಕಂಪವಾಯಿತು ಎಂಬ ಭಾವನೆಗೆ ಬಂದೆವು. ಆದರೆ, ಆ ಬೆಂಕಿ ಉಂಡೆ ಕಣ್ಮರೆಯಾದ ಮೇಲೆ ಅದು ಸ್ಫೋಟವೆಂದು ತಿಳಿದುಕೊಂಡೆವು ಎಂದರು. ಅಲ್ಲಿನ ಜನರು ತತ್ತರಿಸಿ ಹೋದರು. ಚಾವಣಿಯಿಂದ ಇಳಿದು ಬರುವಷ್ಟರಲ್ಲಿ ಅವರ ಮನೆಯ ಬಾಗಿಲು ಮತ್ತು ಕಿಟಕಿಯ ಗಾಜು, ಮನೆಯ ಪಾತ್ರೆಗಳು ಎಲ್ಲೆಲ್ಲೋ ಬಿದ್ದುಹೋಗಿ ಅವುಗಳು ಛಿದ್ರ ಛಿದ್ರವಾಗಿ ಒಡೆದು ಹೋಗಿತ್ತು ಎನ್ನುತ್ತಾರೆ. ಆ ಘಟನಾ ಸ್ಥಳದಿಂದ ಅವರ ಮನೆ ಇದ್ದದ್ದು ಕೇವಲ ಇನ್ನೂರು ಮೀಟರ್ ಮಾತ್ರ.

**(ಈ ಹಂತದಲ್ಲಿ ಮಾನ್ಯ ವೈಸ್ ಛೇರ್ಮನ್‌ರವರಾದ ಮಾನ್ಯ ಕೆ.ಸಿ.ಕೊಂಡಯ್ಯನವರು ಪೀಠವನ್ನು ಅಲಂಕರಿಸಿದರು)**

ಆದರೆ, ಅದರ ಗಂಭೀರತೆ ಎರಡು ಕಿಲೋಮೀಟರ್ ತನಕ ಆಗಿದೆ ಎನ್ನುವುದನ್ನು ಅವರು ಎಲ್ಲೋ ಒಂದು ಕಡೆ ವರ್ಣನೆ ಮಾಡುತ್ತಾರೆ. ಈ ಗಣಿಗಾರಿಕೆ ಮಾಡಬೇಕಾದರೆ, ಅದಕ್ಕೆ ಲೈಸನ್ಸ್ ಕೊಡುವವರು ಯಾರು ಎಂದರೆ, ಮಾನ್ಯ ಜಿಲ್ಲಾಧಿಕಾರಿಗಳು ಲೈಸನ್ಸ್ ಕೊಡಬೇಕು. ಇಷ್ಟು ರಾಜಾರೋಷವಾಗಿ ಗಣಿಗಾರಿಕೆ ನಡೆಯುತ್ತಿದೆ. ಪ್ರತಿದಿನ ಕ್ರಷರ್‌ಗಳಲ್ಲಿ ಕೆಲಸ ನಡೆಯುತ್ತಿದೆ. ಅವರ ಕಣ್ಣು ಮುಂದೆ ನೂರಾರು ಲಾರಿಗಳು ಅಲ್ಲಿನ ಮೆಟೀರಿಯಲ್‌ಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಬರುವುದು ಅವರಿಗೆ ಕಾಣುವುದಿಲ್ಲವೇ? ಹಾಗಾದರೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಇಷ್ಟು ಗಣಿಗಾರಿಕೆ ನಡೆಯುತ್ತಿದ್ದು, ಇಷ್ಟು ಕ್ರಷರ್‌ಗಳು ಕಾರ್ಯನಿರ್ವಹಿಸುತ್ತಿದ್ದರೂ, ಪ್ರತಿದಿನ ಲಾರಿಗಳು ಮೆಟೀರಿಯಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಿದ್ದರು ಕೂಡ ಅವರು ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ. ಆದುದರಿಂದ ಅವರು ಎಲ್ಲೋ ಒಂದು ಕಡೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಶಾಮೀಲಾಗಿದ್ದಾರೆ. ಅವರು ಅಲ್ಲಿ ಗಣಿಗಾರಿಕೆ ಮಾಡುತ್ತಿರುವವರ ಹೆಸರುಗಳನ್ನು ಬಯಲು ಮಾಡುತ್ತಿಲ್ಲ ಏಕೆ? ಯಾರ್ಯಾರು ಗಣಿಗಾರಿಕೆ ಮಾಡುತ್ತಿದ್ದಾರೆ ಮತ್ತು ಯಾರ್ಯಾರು ಕ್ರಷರ್‌ಗಳನ್ನು ಇಟ್ಟುಕೊಂಡಿದ್ದಾರೆ ಎಂಬುದರ ಪಟ್ಟಿ ಬಿಡುಗಡೆ ಮಾಡಬಹುದಲ್ಲವೇ? ಯಾರಾದರು ಅವರ ಕೈಯನ್ನು ಕಟ್ಟಿಹಾಕಿದ್ದಾರೆಯೇ? ಈ ಕೆಲಸ ಏಕೆ ಆಗುತ್ತಿಲ್ಲ? ಆದುದರಿಂದ ನಮಗೆ ಎಲ್ಲೋ ಒಂದು ಕಡೆ ಅನುಮಾನವಿದೆ. ಇದು ಪ್ರಭಾವಿ ವ್ಯಕ್ತಿಗಳ ಕುಮ್ಮಕ್ಕಿನಿಂದ ನಡೆಯುತ್ತಿದೆ. ಇವರಲ್ಲಿ ಬಲಾಢ್ಯರ ಕೈವಾಡವಿದೆ. ಅದಕ್ಕೋಸ್ಕರ ಅವರು ಹೆದರುತ್ತಿದ್ದಾರೆ. ಬಂದಿರುವಂತಹ ಸ್ಫೋಟದ ಸಾಮಗ್ರಿಗಳು ಯಾವ ರೀತಿ ಬ್ಲಾಸ್ಟ್ ಆಗುತ್ತದೆಂದರೆ, ಈ ಹಿಂದೆ ಬೆಂಗಳೂರು ಹಳ್ಳಿಯಾಗಿದ್ದಾಗ ಮತ್ತು ನಾನು ಸಣ್ಣ ಹುಡುಗನಾಗಿದ್ದಾಗ ನಮ್ಮ ಕುಟುಂಬದವರು ಕೂಡ ಗಣಿಗಾರಿಕೆಯನ್ನು ಮಾಡುತ್ತಿದ್ದರು. ಕಾರ್ಮಿಕರು ಬಂದು dynamite ಅನ್ನು ನೀಡಿ ಎಂದಾಗ, ಅದನ್ನು ನಮ್ಮ ತಂದೆಯವರು ಮಂಚದ ಕೆಳಗೆ ಇಟ್ಟಿರುತ್ತಿದ್ದರು. ಅಂದರೆ, ಜಿಲೆಟಿನ್ ಕಡ್ಡಿ, ತೋಟಾಯಿ ಎಂದು ಕರೆಯುತ್ತೇವೆ ಅದು ಮತ್ತು ಅದಕ್ಕೆ ಬೇಕಾದಂತಹ ಬತ್ತಿ. ಇವುಗಳನ್ನು ಬಂದು ಕೇಳಿದಾಗ ಒಂದು, ಎರಡು, ಮೂರು ಎಂದು ಲೆಕ್ಕ ಹಾಕಿ ಕೊಡಬೇಕಾಗಿತ್ತು. ನಾನು ಆ ಸಣ್ಣ ವಯಸ್ಸಿನಲ್ಲಿ ಕೆಲಸ ಮಾಡುತ್ತಿದ್ದೆ. ಯಾರು ಬಂಡೆಯಲ್ಲಿ ಬ್ಲಾಸ್ಟ್ ಮಾಡಬೇಕೆಂದು ಹೋಲ್ ಮಾಡಿರುತ್ತಾರೆ, ಅಂದರೆ ಬಂಡೆಯಲ್ಲಿ ಸುಮಾರು ಎರಡು-ಎರಡೂವರೆ ಅಡಿಯಷ್ಟು ಹೋಲ್ ಮಾಡಿರುತ್ತಾರೆ. ಅದಕ್ಕೆ ಜಿಲೆಟಿನ್ ಕಡ್ಡಿಯನ್ನು ಇಟ್ಟು, ಅದರ ಮೇಲೆ ತೋಟಾಯಿ ಎನ್ನುವುದನ್ನು ಹಾಕಿ, ಅದು ಆಳವಿರುತ್ತದೆ, ಅದಕ್ಕೆ ಬತ್ತಿ ಹಾಕಿ ಮೇಲಿನವರೆಗೆ ಬಿಟ್ಟು, ಅದಕ್ಕೆ ಕೆಮಿಕಲ್ ಮತ್ತು ಇಜ್ಜಲು ಪುಡಿಯನ್ನು ಗಟ್ಟಿಯಾಗಿ ಭರ್ತಿ ಮಾಡಿ, ಸಡಿಲವಾಗಿದ್ದರೆ ಅದು ಬ್ಲಾಸ್ಟ್ ಆಗುವುದಿಲ್ಲ. ಈ ರೀತಿ ಮಾಡುವುದಕ್ಕೆ ಎಲ್ಲಾ ಸಾಮಾಗ್ರಿಗಳನ್ನು ತರುವುದು. ಗಣಿಗಾರಿಕೆಗೆ ಲೈಸನ್ಸ್ ಇದ್ದರೂ ಕೂಡ. ಈ ಬ್ಲಾಸ್ಟ್ ಮಾಡುವುದಕ್ಕೆ ಬೇಕಾದಂತಹ ಸ್ಫೋಟಕಗಳಿಗೆ ಇನ್ನೊಂದು ಲೈಸನ್ಸ್ ಅನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಆ ಸಾಮಾಗ್ರಿಗಳು ಬರುವಂತಹ ಆ ಸಂದರ್ಭದಲ್ಲಿ ಜಿಲೆಟಿನ್ ಕಡ್ಡಿ ಮತ್ತು ತೋಟಾಯಿ ಎಂಬುದು ಪ್ರತ್ಯೇಕವಾಗಿ ಬಂದಿದ್ದರೆ ಈ ಸ್ಫೋಟವಾಗುತ್ತಿರಲಿಲ್ಲ. ಎಲ್ಲಾ ವಸ್ತುಗಳನ್ನು ಒಟ್ಟಿಗೆ ಸೇರಿಸಿ, ಗಾಡಿಯಲ್ಲಿ ತೆಗೆದುಕೊಂಡು ಬಂದಿರುವುದರಿಂದ ಎಲ್ಲೋ ಅನಾಹುತವಾಗಿ ಈ ಸ್ಫೋಟವಾಗಿದೆ. ಈ ಕಾರಣದಿಂದ ಇದು ಆಗಿದೆ ಎನ್ನುವಂಥದ್ದು. ಸ್ಫೋಟಕ ವಸ್ತುಗಳ ಲೇಸನ್ಸ್ ಇದ್ದರೂ ಕೂಡ ಇದು ಬರಬೇಕಾದರೆ ಸುಮಾರು ಒಂಭತ್ತು ಇಲಾಖೆಗಳಿಂದ ಎನ್.ಓ.ಸಿ., ಬೇಕಾಗುತ್ತದೆ. ಅಂದರೆ, ಪೊಲೀಸ್ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ ಇದ್ದರೂ ಕೂಡ ಜಿಲ್ಲಾಧಿಕಾರಿಗಳು ಅವರಿಗೆ ಲೈಸನ್ಸ್ ಅನ್ನು ಕೊಡಬೇಕಾಗುತ್ತದೆ. ಇದು ಯಾವುದೂ ಇಲ್ಲದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 1350 ಕೆ.ಜಿ.ಯಷ್ಟು ಸ್ಫೋಟಕ ವಸ್ತು ಶಿವಮೊಗ್ಗ ಜಿಲ್ಲೆಗೆ ಬರಬೇಕಾದರೆ ಅದು ಎಷ್ಟು ಚೆಕ್‌ಪೋಸ್ಟ್‌ಗಳನ್ನು ದಾಟಿಕೊಂಡು ಬರಬೇಕು. ಒಂದು ವೇಳೆ ಆಂಧ್ರಪ್ರದೇಶದಿಂದ ಮತ್ತು ತಮಿಳುನಾಡಿನಿಂದ ಬಂದರೆ ಅದು ಎಷ್ಟು ಚೆಕ್‌ಪೋಸ್ಟ್‌ಗಳನ್ನು ದಾಟಬೇಕಾಗುತ್ತದೆ. ಇದು ಎಲ್ಲೂ ಕೂಡ ಯಾರ ಕಣ್ಣಿಗೂ ಕಾಣಲಿಲ್ಲವೇ? ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತ ಹೇಳಿದರು, ಆ ಸ್ಫೋಟಕಗಳ ಗಾಡಿ ಬರುವುದಕ್ಕೆ ಮುಂಚಿತವಾಗಿ ಅದರ ಹಿಂದೆ ಇರತಕ್ಕಂತಹ ವ್ಯಕ್ತಿಗಳು ಕಾರಿನಲ್ಲಿ ಬಂದು, ಆ ಚೆಕ್‌ಪೋಸ್ಟ್‌ನಲ್ಲಿ ಇರತಕ್ಕಂಥ ಅಧಿಕಾರಿಗಳಿಗೆ ಏನನ್ನು ನೋಡಿಕೊಳ್ಳಬೇಕೋ ಅದನ್ನು ನೋಡಿಕೊಂಡ ಮೇಲೆ, ಇಂತಹ ಲಾರಿ ಬರುತ್ತಿದೆ, ಲಾರಿ ನಂಬರ್ ಅನ್ನು ನೀಡಿದ ತಕ್ಷಣವೇ ಅದನ್ನು ಪರಿಶೀಲಿಸದೆ ಒಳಗೆ ಕಳುಹಿಸಿಕೊಡುವಂಥದ್ದು ನಡೆಯುತ್ತಿದೆ. ಹೌದು ಇದು ಸತ್ಯ. ಇವತ್ತು ಈ ಘಟನೆಯಿಂದ ಕೇವಲ ಆರು ಜನರು ಸತ್ತಿದ್ದಾರೆ. ಒಂದು ವೇಳೆ ನೂರಾರು ಜನರು ಸತ್ತಿದ್ದರೆ ಏನಾಗುತ್ತಿತ್ತು. ನಾನು ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್‌ರವರಿಗೆ ಶಹಬ್ಬಾಸ್ ಹೇಳುತ್ತೇನೆ. ಆ ಘಟನೆ ನಡೆದ ಕೂಡಲೆ ಅವರು ಆ ಸ್ಥಳಕ್ಕೆ ಹೋಗಿ ನೋಡಿ, ಆ ಘಟನೆಯನ್ನು ಕುರಿತು ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಇದು ಇವತ್ತು ನಿನ್ನೆಯದಲ್ಲ ಎಷ್ಟೋ ವರ್ಷಗಳಿಂದ ಆಗುತ್ತಿರುವ ಘಟನೆ. ಇದು ಅನಧಿಕೃತವಾಗಿ ಮತ್ತು ಅಕ್ರಮವಾಗಿ ಆಗುತ್ತಿದೆ. ಇದರಲ್ಲಿ ಜನಪ್ರತಿನಿಧಿಗಳ ಕೈವಾಡವೂ ಇದೆ. ಈ ಘಟನೆ ಆಗಬಾರದಾಗಿತ್ತು, ಈ ರೀತಿಯ ಘಟನೆಯಾಗಿ ಅಮಾಯಕ ಕಾರ್ಮಿಕರು ಸತ್ತಿದ್ದಾರೆಂದು ಹೇಳಿ ಪತ್ರವನ್ನು ಬರೆದಿದ್ದಾರೆ. ಅದಕ್ಕೆ ನಾನು ಅವರಿಗೆ ಶಹಬ್ಬಾಸ್ ಎಂದು ಹೇಳುತ್ತೇನೆ. ಅದೇ ರೀತಿ ಆ ಘಟನೆ ನಡೆದ ಸುಮಾರು ಹನ್ನೆರಡು ಗಂಟೆಯೊಳಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರು ಘಟನಾ ಸ್ಥಳಕ್ಕೆ ಹೋಗಿ ನೇರವಾದ ಮಾಹಿತಿಯನ್ನು ತೆಗೆದುಕೊಂಡು ಬಂದರು. ಅದೇ ರೀತಿ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಕೂಡ ಆ ಭಾಗಕ್ಕೆ ಹೋಗಿ, ಅಲ್ಲಿ ಯಾರ್‍ಯಾರು ಸಂತ್ರಸ್ತರಿದ್ದಾರೆ ಅವರ ಜೊತೆಯಲ್ಲಿ ಮಾತನಾಡಿ, ಅಲ್ಲಿನ ನಿಜವಾದ ಘಟನೆಗಳು ಏನೆಂದು ಅರ್ಥ ಮಾಡಿಕೊಂಡು ಬಂದರು. ನಾನು ಎಲ್ಲೋ ಒಂದು ಕಡೆ ಪತ್ರಿಕೆಯಲ್ಲಿ ಓದಿದ್ದೇನೆ. ಅದರಿಂದ ನನ್ನ ಮನಸ್ಸಿಗೆ ಬಹಳಷ್ಟು ನೋವಾಗುತ್ತದೆ. ಆ ಜಿಲ್ಲೆಯನ್ನು ಪ್ರತಿನಿಧಿಸುವಂತಹ ಗೌರವಾನ್ವಿತ ಸಚಿವರು, ಅವರು ಬಿಜೆಪಿ ಪಕ್ಷದ ಶಕ್ತಿಶಾಲಿ ವ್ಯಕ್ತಿ. ಅವರು ಏನು ಹೇಳುತ್ತಾರೆಂದರೆ, ಆ ಜಿಲ್ಲೆಯಲ್ಲಿ ಕೆಡಿಪಿ ಸಭೆಯಾಗುತ್ತದೆ, ಆ ಕೆ.ಡಿ.ಪಿ., ಸಭೆಯಲ್ಲಿ ಅವರ ಹೇಳಿಕೆ ಈ ರೀತಿ ಇದೆ; ಈ ಹಿಂದೆ ನಡೆದ ಕೆಡಿಪಿ ಸಭೆಯಲ್ಲಿ ಸನ್ಮಾನ್ಯ ಸಚಿವರು ಮಾತನಾಡುತ್ತಾ, ಊರಿನ ಒಳ್ಳೆಯದಕ್ಕೆ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ ಕಣ್ಣುಮುಚ್ಚಿಕೊಂಡಿರಿ ಎಂದು ಸಲಹೆ ನೀಡಿದ್ದಾರೆ. ಜನಪ್ರತಿನಿಧಿಯೇ ಈ ರೀತಿ ಹೇಳಿದ ಬಳಿಕ, ಅಧಿಕಾರಿಗಳು ಬೇಜವಾಬ್ದಾರಿಯಿಂದ ಕೆಲಸ ಮಾಡದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇನ್ನೇನು ಮಾಡುವರು. ನಿಜವಾಗಿಯೂ ಕೂಡ ಬಹಳಷ್ಟು ನೋವಾಗುತ್ತದೆ. ಅಕ್ರಮ ಗಣಿಗಾರಿಕೆ ಆಗುತ್ತಿದೆ ಎಂದು ಗೌರವಾನ್ವಿತ ಸಚಿವರಿಗೆ ಗೊತ್ತಿದೆ. ನೀವು ಆ ಗಣಿಗಾರಿಕೆಯನ್ನು ನಿಲ್ಲಿಸುವಂತಹ ಪ್ರಯತ್ನವನ್ನು ಮಾಡಬೇಕೋ ಅಥವಾ ಅಲ್ಲಿ ಏನು ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ ಅದನ್ನು ನೋಡಿಯೂ ಕೂಡ ನೋಡದ ರೀತಿಯಲ್ಲಿ ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿರಿ ಈ ಊರಿಗೆ ಒಳ್ಳೆಯದಾಗುತ್ತದೆ ಎಂಬ ಮಾತನ್ನು ಹೇಳಿದರೆ, ಇನ್ನು ಅಧಿಕಾರಿಗಳು ಸುಮ್ಮನೆ ಇರುತ್ತಾರೆಯೇ? ನಮ್ಮ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳು ಮತ್ತು ಅವರು ಒಬ್ಬ ಹಿರಿಯ ವ್ಯಕ್ತಿಗಳು ಹಾಗು ಅವರು ಹಲವಾರು ಸಾಧನೆಗಳನ್ನು ಮಾಡಿ, ಹೋರಾಟ ಮಾಡಿರುವಂತಹವರು. ಅವರು ಈ ಘಟನೆಯಾದ ಮೇಲೆ ಒಂದು ಹೇಳಿಕೆ ನೀಡುತ್ತಾರೆ. ಯಾರು ಅಕ್ರಮ ಗಣಿಗಾರಿಕೆ ಮಾಡುತ್ತಿದ್ದೀರಿ ಅವರು ಅರ್ಜಿ ಹಾಕಿಕೊಳ್ಳಿ ಅದನ್ನು ಸಕ್ರಮ ಮಾಡಿಕೊಡುತ್ತೇವೆಂದು. ಇದು ಏನಾಯಿತು ಸ್ವಾಮಿ. ಅಕ್ರಮವಾಗಿ ಮಾಡುತ್ತಿರುವುದು ನಿಮಗೆ ಗೊತ್ತಿದ್ದರು ಕೂಡ ಅದನ್ನು ಸಕ್ರಮ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದರೆ, ನಾವು ಎಲ್ಲಿಗೆ ಹೋಗಿ ಮುಟ್ಟುತ್ತೇವೆ. ಈ ಗಣಿಗಾರಿಕೆಯನ್ನು ಯಾರು ಅಕ್ರಮವಾಗಿ ಮಾಡುತ್ತಿದ್ದಾರೋ, ಅವರ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕಾದಂತಹ ಜವಾಬ್ದಾರಿ ಇರುವಂತಹ ಮುಖ್ಯಮಂತ್ರಿಗಳು ಇಂತಹ ಹೇಳಿಕೆಯನ್ನು ನೀಡಿದಾಗ, ಮಾನ್ಯ ಗಣಿಗಾರಿಕೆ ಸಚಿವರು ಏನು ಮಾಡುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು, ಯಾರು ಅಕ್ರಮದ ಸ್ಫೋಟಕ್ಕೆ ಕಾರಣರಾಗಿದ್ದಾರೋ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುತ್ತೇವೆಂದು. ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವವರಿಗೆ ಸಕ್ರಮ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಎಲ್ಲೂ ಹೇಳಿಲ್ಲ. ಸಾಂದರ್ಭಿಕವಾದ ಭಾವನೆಗಳು ಏನೆಂದರೆ, ಯಾರು ಈ ಅಕ್ರಮ ಸ್ಫೋಟಕ್ಕೆ ಕಾರಣರಾಗಿದ್ದಾರೋ, ಅವರು ಎಷ್ಟೇ ಪ್ರಭಾವಶಾಲಿಗಳಾಗಿರಲಿ ಅವರ ಮೇಲೆ ದಿಟ್ಟವಾದಂತಹ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಸ್ಥಳದಲ್ಲಿ ಹೇಳಿಕೆ ನೀಡಿರುವುದು ವರದಿಯಾಗಿದೆ. ದಯವಿಟ್ಟು ಮಾನ್ಯ ಸದಸ್ಯರು ಅದನ್ನು ಪುನರ್ ಪರಿಶೀಲನೆ ಮಾಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದನ್ನು ನಾನು ಹೇಳುತ್ತಿರುವ ಮಾತಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯ ಹೇಳಿಕೆಗಳನ್ನು ನೀಡಿದ್ದಾರೆಂದು ಇದು ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

**(50) 01.02.2021 04.20 LL-MD**

**ಶ್ರೀ ಎಂ. ನಾರಾಯಣಸ್ವಾಮಿ(ಮುಂದು):–**

ಎಲ್ಲಾ ಪತ್ರಿಕೆಗಳಲ್ಲಿಯೂ ಮತ್ತು ಎಲ್ಲಾ ಟಿ.ವಿ. ಮಾಧ್ಯಮಗಳಲ್ಲಿಯೂ ಕೂಡ ವರದಿ ಬಂದಿರುತ್ತದೆ. ಇದು ವರದಿಯಾಗಿರುತ್ತದೆ. ಅದೇನೆಂದರೆ, "ಯಾರು ಅಕ್ರಮವಾಗಿ ಲೈಸೆನ್ಸ್ ಇಲ್ಲದೇ ಗಣಿಗಾರಿಕೆ ಮಾಡುತ್ತಿದ್ದೀರಾ, ಅವರು ನಾಳೆ ದಯಮಾಡಿ ಅರ್ಜಿ ಹಾಕಿಕೊಳ್ಳಿ, ಅವರಿಗೆ ಸಕ್ರಮಾತಿ ಮಾಡಿಕೊಡುತ್ತೇನೆ" ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ವರದಿಯಾಗಿರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಸಾಂದರ್ಭಿಕವಾದಂತಹ ಹೇಳಿಕೆಯನ್ನು ತಿರುಚಿ ಹೇಳುವುದು ಸರಿಯಲ್ಲ. ಆ ಹೇಳಿಕೆಯನ್ನು ಅವರು ಯಾವ ಸಂದರ್ಭದಲ್ಲಿ ಹೇಳಿದ್ದಾರೆ, ಆ ಸಂದರ್ಭ ಏನು ಹೇಳಿದ್ದಾರೆ ಎನ್ನುವುದನ್ನು ನಾವು ಗಮನಿಸಬೇಕು. ಕೆಲವೊಂದು ಸಾರಿ ಅಕ್ರಮವಾಗಿರುವ ಗಣಿಗಾರಿಕೆ ಕಾನೂನು ಬಾಹಿರವಾಗಿದ್ದರೆ, ಕಾನೂನು ಪ್ರಕಾರ ಅವರು ಅರ್ಜಿ ಹಾಕಿಕೊಂಡರೆ, ಅವರಿಗೆ ಸರ್ಕಾರದ ಎಲ್ಲಾ ಷರತ್ತುಗಳನ್ನು ವಿಧಿಸಿ ಅವರಿಗೆ ಸಕ್ರಮಾತಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇರುತ್ತದೆ. ಆ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ನೀಡಿರಬಹುದೇ ಹೊರತು, ಅಕ್ರಮ ಗಣಿಗಾರಿಕೆ ಮಾಡುವವರನ್ನೆಲ್ಲಾ ಸಕ್ರಮ ಮಾಡುತ್ತೇವೆ ಎನ್ನುವುದು ಮುಖ್ಯಮಂತ್ರಿಗಳ ಇಂಗಿತ ಭಾವನೆಯಾಗಿರುವುದಿಲ್ಲ. ಇದನ್ನು ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಅರ್ಥ ಮಾಡಿಕೊಳ್ಳಬೇಕೆಂದು ನನ್ನ ವಿನಂತಿ.

**ಶ್ರೀ ಮುರುಗೇಶ್ ಆರ್. ನಿರಾಣಿ(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಅಕ್ರಮ ಗಣಿಗಾರಿಕೆಗಳನ್ನು ಸಕ್ರಮ ಮಾಡುವಂಥದ್ದು, ಕಾನೂನಿನ ಚೌಕಟ್ಟಿನಲ್ಲಿ ಮಾಡಲಾಗುತ್ತದೆ. ಕೆಲವೊಂದು ಗಣಿಗಾರಿಕೆಗಳು ಲೈಸೆನ್ಸ್ ತೆಗೆದುಕೊಳ್ಳದೇ ಗಣಿಗಾರಿಕೆ ಮಾಡುತ್ತಿದ್ದರೆ, ಅವರಿಗೆ ಕಾಲಾವಕಾಶ ಕೊಟ್ಟು, ಅಕ್ರಮಗಳನ್ನು ಸರಿ ಮಾಡಿಸುವುದು. ಅಂದರೆ, ಅವುಗಳನ್ನು ನೂರಕ್ಕೆ ನೂರರಷ್ಟು ಸಕ್ರಮ ಮಾಡುವುದೂ ಅಲ್ಲ. ಅವರಿಗೆ ನಿರ್ದಿಷ್ಟ ಸಮಯ ನೀಡಿ, ಎಲ್ಲಾ ಅಕ್ರಮಗಳನ್ನು ಸರಿ ಪಡಿಸಿದ ನಂತರ ಲೈಸೆನ್ಸ್ ನೀಡಬೇಕು ಎನ್ನುವ ವಿಚಾರದ ಹಿನ್ನೆಲೆ ಇರುವಂಥದ್ದಾಗಿದೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪತ್ರಿಕೆಗಳಲ್ಲಿ ವರದಿ ಬಂದಿರುವಂಥದ್ದನ್ನು ಕೋಟ್ ಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಕೂಡ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ರಾಜ್ಯದ ಒಬ್ಬ ಮುಖ್ಯಮಂತ್ರಿಗಳು ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿ ಹೇಳಿಕೆ ನೀಡುವುದಾದರೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಎನ್ನುವುದು ಏತಕ್ಕೆ ಇರಬೇಕು; ಅಲ್ಲಿರುವಂತಹ ಕಾನೂನು-ಕಟ್ಟಳೆಗಳು ಏತಕ್ಕೆ ಇರಬೇಕೆಂದು ಹೇಳಿಕೆ ನೀಡಿದ್ದಾರೆ. ಅಕ್ರಮ ಗಣಿಗಾರಿಕೆ ನಡೆಸುವಂಥವರು ಯಾರು ಬೇಕಾದರೂ ಸಕ್ರಮ ಮಾಡಿಕೊಳ್ಳಬಹುದು. ಆ ಹೇಳಿಕೆ ನನ್ನ ಬಳಿ ಇದೆ. ಆ ಘಟನೆ ಆದ ನಂತರ, ಸನ್ಮಾನ್ಯ ಕೆ.ಎಸ್. ಈಶ್ವರಪ್ಪನವರು ಆ ಸ್ಥಳಕ್ಕೆ ಹೋಗುತ್ತಾರೆ. ತದನಂತರ, ಅವರು ಮಾಧ್ಯಮಗಳ ಮುಂದೆ, "ಇಲ್ಲಿರುವಂತಹ ಗಣಿಗಾರಿಕೆಗಳು ಯಾವುದೂ ಕೂಡ ಅಕ್ರಮವಾಗಿ ನಡೆಯುತ್ತಿರುವುದಿಲ್ಲ. ಎಲ್ಲವೂ ಕೂಡ ಸಕ್ರಮವಾಗಿರುತ್ತವೆ" ಎಂದು ಹೇಳಿಕೆ ನೀಡುತ್ತಾರೆ. ಅವರು ಹೇಳಿಕೆ ಕೊಟ್ಟ ನಂತರ, ಮಾನ್ಯ ಮುಖ್ಯಮಂತ್ರಿಗಳು ಸ್ಥಳಕ್ಕೆ ಭೇಟಿ ನೀಡುತ್ತಾರೆ. ನಂತರ ಅವರು, "ಇಲ್ಲ, ಇಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ" ಎಂದು ಹೇಳಿಕೆ ನೀಡುತ್ತಾರೆ. (**ಗೊಂದಲ**) ಏಕೆಂದರೆ, ಆ ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವಂತಹ ಒಬ್ಬ ಪ್ರಭಾವಿ ಮಂತ್ರಿಗಳು ಹಾಗೂ ಅದೇ ಜಿಲ್ಲೆಯವರಾದ ಮಾನ್ಯ ಮುಖ್ಯಮಂತ್ರಿಗಳು ತದ್ವಿರುದ್ಧವಾದ ಹೇಳಿಕೆಯನ್ನು ನೀಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು, "ಅಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆಯೆಂದು" ಹೇಳಿಕೆ ನೀಡುತ್ತಾರೆ. ಆದರೆ, ಮಾನ್ಯ ಸಚಿವರು, "ಎಲ್ಲಾ ಗಣಿಗಾರಿಕೆಗಳು ಸಕ್ರಮವಾಗಿ ನಡೆಯುತ್ತಿವೆಯೆಂದು" ಹೇಳಿಕೆ ನೀಡುತ್ತಾರೆ. ನಮಗಿರುವ ಮಾಹಿತಿ ಪ್ರಕಾರವಾಗಿ, "ಬೇನಾಮಿ ಹೆಸರಿನಲ್ಲಿ ಅಲ್ಲಿ ಗಣಿಗಾರಿಕೆ ನಡೆಯುತ್ತಿದೆ" ಎಂದು ಆ ಜಿಲ್ಲೆಯ ಜನ ಮಾತನಾಡುತ್ತಾರೆ. ಅದನ್ನು ನಾನು ಹೇಳುವಂಥದ್ದಲ್ಲ. ರಾಜ್ಯ ಬಿ.ಜೆ.ಪಿ.ಯ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ವಿಜಯೇಂದ್ರರವರು ಒಂದು ಹೇಳಿಕೆ ಮಾಡುತ್ತಾರೆ. ಅದೇನೆಂದರೆ, "ಇಲ್ಲಿ ಸ್ಫೋಟ ಆಗಿರುವಂಥದ್ದು ನನಗೆ ಗೊತ್ತಿಲ್ಲ. ಅದು ನನ್ನ ಗಮನಕ್ಕೆ ಬಂದಿರುವುದಿಲ್ಲ. ಅಕ್ರಮ ಗಣಿಗಾರಿಕೆ ಆಗಿರುವಂಥದ್ದು" ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಿಕೆ ನೀಡುತ್ತಾರೆ. ಅದರ ಪ್ರತಿ ನನ್ನ ಬಳಿ ಇದೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ರೀತಿಯ ಯಾರ ಹೆಸರುಗಳನ್ನು ಸಹ ಆಗಲೇ ನಾವು ಮಾತನಾಡುವಾಗ ತೆಗೆದುಕೊಂಡಿರುವುದಿಲ್ಲ. ಮಾನ್ಯ ಸದಸ್ಯರು ಹಾಗೆಯೇ ಮಾತನಾಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಹೆಸರು ಹೇಳಿರುವುದನ್ನು ಡಿಲೀಟ್ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಓಕೆ, ಓಕೆ. ಹೆಸರು ಹೇಳಬಾರದು, ಆಯಿತು. ಅದನ್ನು ಒಪ್ಪಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ.

**(ಗೊಂದಲ)**

**ವೈಸ್ ಚೇರ್ಮನ್‌ರವರು:–** ಮಾನ್ಯ ನಾರಾಯಣಸ್ವಾಮಿಯವರೇ, ಆ ರೀತಿಯ ಹೆಸರು ಬೇಡ.

**(ಗೊಂದಲ)**

**ಡಾ: ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಪಕ್ಷದ ಉಪಾಧ್ಯಕ್ಷರು ಎಂದು ಹೇಳಿರುವುದು ಸರಿಯಲ್ಲ. ಅವರ ಹೆಸರನ್ನು ಸಹ ತೆಗೆದುಕೊಂಡಿರುತ್ತಾರೆ. ಅವರು ಈ ಸದನದಲ್ಲಿ ಇರುವುದಿಲ್ಲ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಓಕೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ನಾರಾಯಣಸ್ವಾಮಿಯವರ ವಿರುದ್ಧ ಮಾತನಾಡುತ್ತಿಲ್ಲ.

**ವೈಸ್ ಚೇರ್ಮನ್‌ರವರು:–** ಮಾನ್ಯ ಸಭಾನಾಯಕರೇ, ಮಾನ್ಯ ನಾರಾಯಣಸ್ವಾಮಿಯವರು ಯಾವುದೇ ಹೆಸರು ಪ್ರಸ್ತಾಪ ಮಾಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದಂತಹ ವಿಚಾರವನ್ನು ಚರ್ಚೆಗೆ ತೆಗೆದುಕೊಂಡು ಬಂದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಎಸ್.ಆರ್. ಪಾಟೀಲರು ಸೇರಿದಂತೆ, ಎಲ್ಲರೂ ಹೇಳಿದಂತಹ ಅಭಿಪ್ರಾಯಗಳನ್ನು ಸರ್ಕಾರ ಗಂಭೀರವಾಗಿ ಗಮನಿಸುತ್ತಿದೆ. ಈ ವಿಷಯದಲ್ಲಿ ಎಲ್ಲರಿಗೂ ಸರಿ ಎನಿಸುವಂತಹ ಮತ್ತು ಬಹಳ ಗಟ್ಟಿಯಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಲೇಬೇಕು. ಸರ್ಕಾರ ಈ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸಿದ್ಧವಿಲ್ಲ. ಹಾಗಾಗಿ, ಪ್ರತಿಪಕ್ಷದವರು ಏನು ಹೇಳುತ್ತಾರೋ ಹೇಳಲಿ. ಆದರೆ, ವಿಷಯ ದಿಕ್ಕು ತಪ್ಪದ ರೀತಿ ತಾವು ಕೂಡ ಎಚ್ಚರ ಮಾಡಬೇಕಲ್ಲವೇ?

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ಬಂದಿರುವಂಥದ್ದನ್ನು ನಾನು ಉಲ್ಲೇಖ ಮಾಡಿರುತ್ತೇನೆ. ಅವರು ಹೆಸರು ಹೇಳಿರುವುದು ತಪ್ಪು ಎನ್ನುವುದಾದರೆ, ನಾನು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಅದರಲ್ಲಿ ಎರಡು ಮಾತಿಲ್ಲ. ಏನು ಘಟನೆ ಆಗಿದೆ, ಗಂಭೀರವಾದ ವಿಷಯದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಇದು ನಾನು ಹೇಳುತ್ತಿರುವ ಮಾತಲ್ಲ. ಅವರು ಹೇಳಿಕೆ ನೀಡಿರುವಂಥದ್ದನ್ನು ಪತ್ರಿಕೆಯಲ್ಲಿ ಫೋಟೋ ಸಹಿತ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

**ವೈಸ್ ಚೇರ್ಮನ್‌ರವರು:-** ಅವರು ಈ ಸದನದ ಸದಸ್ಯರಲ್ಲವೆಂದು ಆಡಳಿತ ಪಕ್ಷದವರು ಹೇಳುತ್ತಿದ್ದಾರೆ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯ ಉಪಾಧ್ಯಕ್ಷರು ಶ್ರೀ ವಿಜಯೇಂದ್ರ ಎಂದು ಹೇಳಿರುವುದನ್ನು ದಯಮಾಡಿ ಕಡತದಿಂದ ತೆಗೆಯಬೇಕೆಂದು ನಾನು ಪೀಠಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ನನ್ನ ಮಾತಲ್ಲ.

**ವೈಸ್ ಚೇರ್ಮನ್‌ರವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ತಮ್ಮ ಮಾತನ್ನು ಮುಂದುವರೆಸಿ. ಆ ಹೆಸರು ಬೇಡ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ...

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು ಬಿಡಿ. ಅದರ ಬಗ್ಗೆ ಚರ್ಚೆ ಏತಕ್ಕೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆ ಮಾತುಗಳು ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಮಾತುಗಳು ಅಲ್ಲವೆಂದು ಹೇಳಿದರೂ ಸಹ, ಈ ಸಂದರ್ಭದಲ್ಲಿ ಹೇಳಿದ್ದು, ಅವರೇ ಅಲ್ಲವೇ? **(ಗೊಂದಲ)** ಅವರ ಬಗ್ಗೆ ನಮಗೆ ವಿರೋಧವಿಲ್ಲ. ದಯಮಾಡಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲದೇ ಇರುವಂತಹ ವ್ಯಕ್ತಿಗಳ ಹೆಸರು ಉಲ್ಲೇಖ ಮಾಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ವೈಸ್ ಚೇರ್ಮನ್‌ರವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಗಬಹುದು. ಆ ಹೆಸರು ತೆಗೆಯಬಹುದು. ಏನು ತೊಂದರೆ ಇಲ್ಲ. **(ಗೊಂದಲ)** ಬೇನಾಮಿ ಹೆಸರಿನಲ್ಲಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಏತಕ್ಕಾಗಿ ಕ್ರಮ ಕೈಗೊಳ್ಳುತ್ತಿಲ್ಲವೆಂದರೆ, ಪ್ರತಿಯೊಂದು ಚುನಾವಣೆಗಳು, ಅಂದರೆ ಗ್ರಾಮ ಪಂಚಾಯಿತಿ ಚುನಾವಣೆ ಇರಬಹುದು, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ ನಗರಸಭೆ ಇರಬಹುದು, ಎಂ.ಎಲ್.ಎ. ಅಥವಾ ಎಂ.ಪಿ. ಚುನಾವಣೆಗಳಿಗೆ ಈ ರೀತಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ಚಂದಾ ಬರುತ್ತದೆ ಎನ್ನುವ ಮಾಹಿತಿ ಇರುತ್ತದೆ. ಅದಕ್ಕೋಸ್ಕರವಾಗಿ, ಯಾರು ಕೂಡ ಅವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಹಿಂದೆ-ಮುಂದೆ ನೋಡುತ್ತಿದ್ದಾರೆಂದು ಅಲ್ಲಿನ ಜನ ಹೇಳುತ್ತಿದ್ದಾರೆ ಮತ್ತು ಈ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುವಂಥದ್ದು. ಇದು ಆಗುತ್ತಿದೆ. ನಾವು ಯಾವುದೋ ನಮ್ಮ ಸ್ವಾರ್ಥಕ್ಕಾಗಿ ಈ ರೀತಿ ಕೈ ಚಾಚುವುದಾದರೆ ಇಂತಹ ಅನಾಹುತಗಳನ್ನು ತಡೆಯುವವರು ಯಾರು? ಇಡೀ ರಾಜ್ಯದ ಜನ ನಮ್ಮನ್ನು ಆಯ್ಕೆ ಮಾಡಿ, ಇವೊತ್ತಿನ ದಿವಸ ಈ ಸದನಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ನಮ್ಮ ಜವಾಬ್ದಾರಿ ಏನು? ಈ ರಾಜ್ಯ ಹಾಳಾದರೂ ಪರವಾಗಿಲ್ಲ, ಏನಾದರೂ ಪರವಾಗಿಲ್ಲ ನಾವು ಚೆನ್ನಾಗಿರಬೇಕು. ಅದಕ್ಕೋಸ್ಕರ ನಾವು ಬಂದು ಇಲ್ಲಿ ಕುಳಿತಿದ್ದೇವೆಯೇ? ನಾವು ಪ್ರತಿಭಟನೆ ಮಾಡದೇ ಹೋದರೆ, ಇದರಲ್ಲಿ ಭಾಗಿಗಳಾಗಿದ್ದಾರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳದೇ ಹೋದರೆ, ನಾವು ಇಲ್ಲಿ ಯಾವ ಕಾರಣಕ್ಕಾಗಿ ಇರಬೇಕೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆಯಲ್ಲವೇ? ಶ್ರೀ ಆಯನೂರು ಮಂಜುನಾಥ್‌ರವರು ಆಗಲೇ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಇದರಲ್ಲಿ ಯಾರು ಸಾವಿಗೀಡಾಗಿದ್ದಾರೆ, ಅವರಿಗೆ ಸರ್ಕಾರ ಕೂಡಲೇ 5 ಲಕ್ಷ ರೂಪಾಯಿ ಪರಿಹಾರ ಹಣವನ್ನು ಘೋಷಣೆ ಮಾಡಿದರು. ಆದರೆ, ಅವರು ಕೂಡ ಅಪರಾಧಿ ಸ್ಥಾನದಲ್ಲಿದ್ದಾರೆ, ಅವರಿಗೆ ಪರಿಹಾರ ಹಣ ನೀಡಬಾರದೆಂದು ಹೇಳಿದರು. ಆದರೆ, ಅದರಲ್ಲಿ ಅಮಾಯಕರು ಸತ್ತಿದ್ದಾರೆ. ಈ ಬಗ್ಗೆ ಉದಾಹರಣೆ ನೀಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು ಕೂಡ ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ. ಅದರಂತೆ, ಈ ಘಟನೆಯಲ್ಲಿ ಭದ್ರಾವತಿಯವರು ಇಬ್ಬರು ಜನರಿದ್ದಾರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಂಧ್ರಪ್ರದೇಶದ ಇಬ್ಬರು ಜನರಿದ್ದಾರೆ, ಮತ್ತೊಬ್ಬರು identify ಆಗಿರುವುದಿಲ್ಲ. ಅಮಾಯಕರಿಗೆ ಮತ್ತು ಕಾರ್ಮಿಕರಿಗೆ ಪರಿಹಾರ ಹಣ ಕೊಡುವುದಕ್ಕೆ ನನ್ನ ತಕರಾರು ಇರುವುದಿಲ್ಲ. ಆದರೆ, ಸ್ಥಳೀಯನಾಗಿ ನನಗಿರುವ ಮಾಹಿತಿ ಪ್ರಕಾರ, ರಿಟೈಲ್ ಬರುವಂಥದ್ದನ್ನು ತೆಗೆದುಕೊಂಡು ಹಂಚುವಂತವರು, ಸ್ಫೋಟಕ ವಸ್ತುಗಳ ವ್ಯಾಪಾರಿಗಳಾಗಿದ್ದರೆ, ಪರಿಹಾರ ಹಣವನ್ನು ತಡೆಹಿಡಿಯಲೇಬೇಕು. ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಹಾಗೆ, ಅವರು ಅಮಾಯಕರುಗಳಾಗಿದ್ದರೆ, ಪರಿಹಾರ ಹಣ ನೀಡುವುದಕ್ಕೆ ನನ್ನ ತಕರಾರು ಇರುವುದಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಉದಾಹರಣೆಗೆ, ಸತ್ತವರಲ್ಲಿ ಒಬ್ಬರು ಪ್ರವೀಣ್‌ಕುಮಾರ್ ಎಂದು, ಮತ್ತೊಬ್ಬರು ಮಂಜುನಾಥ್ ಎಂದು. ಶ್ರೀ ಪ್ರವೀಣ್‌ಕುಮಾರ್ ಎನ್ನುವವರಿಗೆ 40 ವರ್ಷಗಳು. ಅವರಿಗೆ ತಾಯಿ, ಹೆಂಡತಿ ಮತ್ತು 6 ವರ್ಷದ ಒಂದು ಗಂಡು ಮಗು ಇರುತ್ತದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಶ್ರೀ ಪ್ರವೀಣ್‌ಕುಮಾರ್ ಎನ್ನುವ ವ್ಯಕ್ತಿ ಸತ್ತು ಹೋಗಿರುತ್ತಾನೆ. ಆತನಿಗೆ ತಾಯಿ ಇದ್ದಾರೆ, ಹೆಂಡತಿ ಮತ್ತು 6 ವರ್ಷದ ಗಂಡು ಮಗು ಇರುತ್ತದೆ ಹಾಗೂ ಈಗ ಆತನ ಹೆಂಡತಿ ಎರಡನೇ ಹೆರಿಗೆಗೆ ತುಂಬು ಗರ್ಭಿಣಿಯಾಗಿರುತ್ತಾರೆ. ಜನವರಿ 29ನೇ ತಾರೀಖಿಗೆ ಹೆರಿಗೆಯಾಗುತ್ತದೆ ಡಾಕ್ಟರ್ ದಿನಾಂಕ ನೀಡಿರುತ್ತಾರೆ. ಆದರೆ, ಶ್ರೀ ಪ್ರವೀಣ್‌ಕುಮಾರ್‌ರವರು ಸತ್ತು ಹೋಗಿರುತ್ತಾರೆ. ಆ ಕುಟುಂಬಕ್ಕೆ ಅವರೇ ಆಧಾರಸ್ತಂಭವಾಗಿದ್ದರು. ಅವರಿಗೆ ಪರಿಹಾರ ಹಣ ಬೇಡ ಎಂದರೆ ಹೇಗೆ? ಆ ಕುಟುಂಬವನ್ನು ಯಾರು ಸಾಕುತ್ತಾರೆ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ತಪ್ಪು ಸಂದೇಶ ಹೋಗಬಾರದು. ಆ ದಿನ ರಾತ್ರಿ 10.30 ಗಂಟೆ ಸಮಯದಲ್ಲಿ ಅಲ್ಲಿ ಯಾವುದೇ ಕಾರ್ಮಿಕರಾಗಲಿ ಅಥವಾ ಸಾಮಾನ್ಯ ಜನರಾಗಲಿ ಇರಲಿಲ್ಲ. ಅದು ಐಸೋಲೇಟೆಡ್ ಜಾಗ. ಅಲ್ಲಿಗೆ ವಾಹನದ ಜೊತೆಯಲ್ಲಿ ಹೋಗಿದ್ದಂತಹವರು ಮಾತ್ರ ಸತ್ತಿದ್ದಾರೆಂದು ನನಗೂ ಮತ್ತು ಶ್ರೀ ಪ್ರಸನ್ನಕುಮಾರ್‌ರವರಿಗೆ ಮಾಹಿತಿ ಇರುತ್ತದೆ. ಅಲ್ಲಿ ಹಳ್ಳಿ ಜನ ಸತ್ತಿದ್ದರೆ ಪರಿಹಾರ ಹಣ ಕೊಡಲೇಬೇಕೆಂದು ನಾನು ಕೂಡ ಹೇಳುತ್ತಿದ್ದೆ. ಆ ದೂರದ ಕ್ವಾರಿಯಲ್ಲಿ, ಜನವಸತಿ ಇಲ್ಲದೇ ಇರುವ ಜಾಗದೊಳಗೆ ಆ ವಾಹನದ ಜೊತೆಗೆ ಸಿಡಿದು ಹೋದವರು ಅದಕ್ಕೆ ಸೇರಿದವರು ಆಗಿದ್ದಾರೆಂದು ನಮಗೆ ಗಟ್ಟಿ ಮಾಹಿತಿ ಇದೆ. ಸತ್ತವರ ಬಗ್ಗೆ ನಮಗೆ ಅನುಕಂಪ ಇದೆ. ಸಾವು ಸರಿಯಲ್ಲ ಎನ್ನುವ ಒಪ್ಪಿಗೆ ಇದೆ. ಆದರೆ, ಆ ಜಾಗದಲ್ಲಿ ರಾತ್ರಿ ಜನ ಓಡಾಡುತ್ತಿರಲಿಲ್ಲ, ಕ್ವಾರಿ ಕೆಲಸ ನಡೆಯುತ್ತಿರಲಿಲ್ಲ, ಕಾರ್ಮಿಕರು ಇರಲಿಲ್ಲ, ಆ ವಾಹನದ ಜೊತೆ ಹೋದವರು ಯಾರೆಂದು ಎನ್ನುವುದನ್ನು ಪತ್ತೆ ಹಚ್ಚಬೇಕು. ಮಾನ್ಯ ನಾರಾಯಣಸ್ವಾಮಿಯವರು ಹೇಳಿದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೀತಿ ಅವರು ಅಮಾಯಕರಾದರೆ, ಪರಿಹಾರ ಹಣ ನೀಡಲಿ. ಆದರೆ, ಅವರು ಸ್ಫೋಟಕ ವಸ್ತು ಸರಬರಾಜು ಮಾಡುವವರಾದರೆ, ಯಾವುದೇ ಕಾರಣಕ್ಕೆ ಪರಿಹಾರ ಹಣ ನೀಡಬಾರದು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ವಿಷಯದಲ್ಲಿ ನಾವು ಕೂಡ ಸರ್ಕಾರದವರ ಪರವಾಗಿದ್ದೇವೆ.

**ಶ್ರೀ ಮುರುಗೇಶ್ ನಿರಾಣಿ:–** ಮಾನ್ಯ ಸಭಾಪತಿಯವರೇ, ನನಗೆ ಬಂದಿರುವ ಮಾಹಿತಿ ಪ್ರಕಾರ, ಸದರಿ 6 ಜನರಿಗೆ ಈಗಾಗಲೇ 5 ಲಕ್ಷ ರೂಪಾಯಿಗಳಂತೆ ಸರ್ಕಾರದಿಂದ ಪರಿಹಾರ ಹಣ ಕೊಡಲಾಗಿರುತ್ತದೆ. ಅದರಂತೆ, ಚರ್ಚೆ ಮಾಡುವ ವಿಷಯದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿರುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಹೇಳಿರುವ ಹೇಳಿಕೆಗೆ ಸಂತೋಷ ವ್ಯಕ್ತಪಡಿಸುತ್ತೇವೆ.

**ಶ್ರೀ ಆರ್. ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಸರ್ಕಾರದಿಂದ ಹಣ ಬಿಡುಗಡೆಯಾಗಿರುತ್ತದೆ. ಆದರೆ, ಸಂತ್ರಸ್ತರ ಕುಟುಂಬಗಳಿಗೆ ಹಣ ನೀಡಿರುವುದಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೂಡ ಅದೇ ಜಿಲ್ಲೆಯವರಾಗಿರುತ್ತಾರೆ. ಆ ಘಟನೆಯಲ್ಲಿ ಸತ್ತಂತಹ ಮತ್ತೊಬ್ಬ ವ್ಯಕ್ತಿ, ಶ್ರೀ ಮಂಜುನಾಥ್ ಎಂದು. ಅವರಿಗೆ 38 ವರ್ಷದ ಯುವಕರಾಗಿರುತ್ತಾರೆ. ಅವರಿಗೆ, ತಾಯಿ, ಪತ್ನಿ, 4 ವರ್ಷದ ಹೆಣ್ಣು ಮಗು, 15 ವರ್ಷದ ಗಂಡು ಮಗು ಮತ್ತು 4 ಜನ ಸಹೋದರಿಯರು ಇರುತ್ತಾರೆ. ಆ 4 ಜನ ಸಹೋದರಿಯರಿಗೆ ಇನ್ನೂ ಮದುವೆಯಾಗಿರುವುದಿಲ್ಲ. ಇವರೇ ಆ ಕುಟುಂಬವನ್ನು ಸಾಕಿ ಸಲುವಂತಹ ವ್ಯಕ್ತಿಯಾಗಿರುತ್ತಾರೆ. ಆದರೆ, ಈ ಘಟನೆಯಲ್ಲಿ ಸತ್ತು ಹೋಗಿರುತ್ತಾರೆ. ಅವರಿಗೆ, ತಾಯಿ ಇದ್ದಾರೆ, ಪತ್ನಿ ಇದ್ದಾರೆ, ಇಬ್ಬರು ಮಕ್ಕಳು ಮತ್ತು 4 ಜನ ಸಹೋದರಿಯರು ಇರುತ್ತಾರೆ. ನಿಜವಾಗಿಯೂ ಮಾನ್ಯ ಮಂತ್ರಿಗಳು ಮತ್ತು ಶ್ರೀ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೆ, ಅವರು ಸ್ಫೋಟಕ ವಸ್ತುಗಳನ್ನು ಸಾಗಿಸುವುದರಲ್ಲಿ ಭಾಗಿಯಾಗದೇ ಇದ್ದರೆ, ಆ ಕುಟುಂಬಗಳಿಗೆ ಏನು 5 ಲಕ್ಷ ಪರಿಹಾರ ಹಣ ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ, ದಯಮಾಡಿ ಅದನ್ನು 25 ಲಕ್ಷದಿಂದ 50 ಲಕ್ಷ ರೂಪಾಯಿಗಳಿಗೆ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**(ಮುಂದು)**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(51) 01.02.2021 4.30 ವೈಎಲ್-ಎಂಡಿ**

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ಒಂದು ವೇಳೆ ಅವರು ಬಾಗಿಯಾಗಿದ್ದರೆ ಪರಿಹಾರಧನವನ್ನು ನೀಡುವುದು ಬೇಡ. ದಯಮಾಡಿ ಇದರ ಕಡೆ ಸರ್ಕಾರ ಗಮನಹರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಆಂಧ್ರ ಪ್ರದೇಶದಿಂದ ಬಂದಂಥ ಮುಸ್ಲಿಂ ಜನಾಂಗದ ಸುಮಾರು 60 ವರ್ಷದ ವ್ಯಕ್ತಿ, ಸುಮಾರು ವರ್ಷಗಳಿಂದ ಈ ಗಣಿಗಾರಿಕೆಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡು ಬರುತ್ತಿರುತ್ತಾರೆ. ಆತ ನೇರವಾಗಿ ಲಾರಿಯಲ್ಲಿ ಸ್ಫೋಟಕ ವಸ್ತುಗಳು ಬಂದಂಥ ಸಂದರ್ಭದಲ್ಲಿ ಆ ಜಾಗಕ್ಕೆ ಹೋಗುತ್ತಾರೆ. ಆತ ಸುಮಾರು ವರ್ಷಗಳಿಂದ ಈ ಸ್ಫೋಟಕ ವಸ್ತುಗಳನ್ನು blast ಮಾಡುವುದರಲ್ಲಿ ನುರಿತಂತಹವರು. ಇದರಿಂದಾಗಿ ಆತನ ಮಗನನ್ನು ಸಹ ಇದೇ ಕಸುಬಿಗೆ ಸೇರಿಸುತ್ತಾರೆ. ಆತನ ಮಗ ಸಹ blast ಮಾಡುವುದರಲ್ಲಿ ನುರಿತನಾಗುತ್ತಾನೆ. ಹಾಗೆಯೇ ಲಾರಿ ಬಂದು ನಿಂತಾಗ ಇವರಿಬ್ಬರು ಮನೆಗೆ ಊಟ ಮಾಡಲು ಹೋಗುತ್ತಾರೆ. ಆದರೆ, ಊಟವನ್ನು ಬೇಗ ಮುಗಿಸಿ ಮಗ ವಾಪಸ್ಸು ಬರುತ್ತಾನೆ, ತಂದೆ ಬೇಗ ಬರುವುದಿಲ್ಲ. ಇದರಿಂದಾಗಿ ಮಗ ಬಂದು 10 ನಿಮಿಷದಲ್ಲಿಯೇ ಸ್ಫೋಟಕ ವಸ್ತುಗಳು blast ಆಗಿ ಮಗ ಸಾವಿಗೀಡಾಗುತ್ತಾನೆ. ದೇವರ ದಯೆಯಿಂದ ತಂದೆ ವಾಪಸ್ಸು ಬರುವುದು ತಡವಾದ್ದರಿಂದ ಅವರು ಸಾವಿನಿಂದ ಬಚಾವ್ ಆಗಿ, ಬದುಕಿಕೊಳ್ಳುತ್ತಾರೆ.

ನಾನು ನೇರವಾಗಿ ಹೋಗಿ ನೋಡಿಲ್ಲ. ಇದ್ದರೂ ಸಹ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಆಯನೂರು ಮಂಜುನಾಥ್‌ರವರು ಅಲ್ಲಿಯೇ ಇರುವುದರಿಂದ ಅಲ್ಲಿಯ ತೀವ್ರತೆ ಯಾವ ರೀತಿ ಇತ್ತು ಎಂಬುದನ್ನು ನೋಡಿದ್ದಾರೆ. ಮಾಧ್ಯಮದಲ್ಲಿ ಹಾಗೂ ಪತ್ರಿಕೆಯಲ್ಲಿ ನೋಡಿದಾಗ, ಅಲ್ಲಿಯ ತೀವ್ರತೆ ಯಾವ ರೀತಿ ಇತ್ತು ಎಂದರೆ, blast ಆದಾಗ ಆ ದೇಹದ ಮಾಂಸವು ತುಂಡು-ತುಂಡಾಗಿ ಸುಮಾರು 500 ಮೀಟರ್‌ಗಳಷ್ಟು ದೂರದಲ್ಲಿ ಹೋಗಿ ಬಿದ್ದಿತ್ತು. ಆ ಮಾಂಸದ ತುಂಡುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಸಂಗ್ರಹಿಸಿ ತಂದು ಒಂದು ಕಡೆ ಇಡುತ್ತಾರೆ. ಇಷ್ಟು ತೀವ್ರವಾದ ವಿಚಾರವಾಗಿದೆ. ಇಷ್ಟೆಲ್ಲಾ ಆಗುವಾಗ ಇಂಥ ದೊಡ್ಡ ಪ್ರಮಾಣದ ಸ್ಫೋಟಕ ವಸ್ತು ಅಲ್ಲಿಗೆ ಬರುತ್ತಿರುವಾಗ ರಾಜಾರೋಷವಾಗಿ ಕೆಲಸ ಮಾಡುವವರ ಮೇಲೆ ಏತಕ್ಕೆ ಕ್ರಮ ಕೈಗೊಳ್ಳಲು ಹಿಂದೆ-ಮುಂದೆ ನೋಡುತ್ತಿದ್ದಾರೆ? ಮಾನ್ಯ ಸಚಿವರು ಸಹ ಅಲ್ಲಿಗೆ ಭೇಟಿ ಕೊಟ್ಟು, ಕಣ್ಣಾರೆ ಕಂಡು ಬಂದಿದ್ದಾರೆ. ಇವತ್ತು ಅದರ ಬಗ್ಗೆ ನಾವೆಲ್ಲರೂ ಮಾತನಾಡುತ್ತಿರಬಹುದು. ಆದರೆ, ಇದಕ್ಕೆ ಏನಾದರೂ ಪರಿಹಾರ ನೀಡುವುದಕ್ಕೆ ಶಕ್ತಿ ಇರುವುದು ಸರ್ಕಾರಕ್ಕೆ ಹಾಗೂ ತಮಗೆ ಮಾತ್ರ. ಇದುವರೆವಿಗೂ ಕರ್ನಾಟಕ ರಾಜ್ಯದಲ್ಲಿ ನಮ್ಮ ಸರ್ಕಾರವಾಗಲಿ, ಬಿಜೆಪಿ ಸರ್ಕಾರವಾಗಲಿ ಅಥವಾ ಬೇರೆ ಸರ್ಕಾರವಾಗಲಿ ಅಧಿಕಾರದಲ್ಲಿದ್ದುಕೊಂಡು ಗಣಿಗಾರಿಕೆಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಅಕ್ರಮ ನಡೆದುಕೊಂಡೇ ಬರುತ್ತಿದ್ದು, ಇದುವರೆವಿಗೂ ಒಬ್ಬರಿಗಾದರೂ ಎಫ್.ಐ.ಆರ್. ದಾಖಲಿಸಿ ಶಿಕ್ಷೆ ವಿಧಿಸಲಾಗಿದೆಯೇ? ಯಾರಾದರೂ ಒಬ್ಬಿಬ್ಬರ ಮೇಲೆ ಕಠಿಣ ಕ್ರಮ ಕೈಗೊಂಡಿದರೆ, ಎಲ್ಲಿಯೋ ಒಂದು ಕಡೆ ಈ ಗಣಿಗಾರಿಕೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ, ಆ ರೀತಿ ಮಾಡಲಿಲ್ಲ. ಇದರ ಕಡೆ ಸರ್ಕಾರದ ಗಮನ ಸೆಳೆಯಲು ನಾನು ಪ್ರಯತ್ನ ಮಾಡುತ್ತಿದ್ದೇನೆ. ಆ blast ಆದಂತಹ ಸಂದರ್ಭದಲ್ಲಿ ಮನುಷ್ಯನ ದೇಹ ಚೂರು ಚೂರಾದರೆ, ಲಾರಿ ಒಂದು ಚೂರು ಸಹ ಉಳಿದಿಲ್ಲ. ಅಲ್ಲಿಯೇ ಪಕ್ಕದಲ್ಲಿ ದೊಡ್ಡ ಕಬ್ಬಿಣದಿಂದ ತಯಾರಿಸಿರುವಂಥ ಜೆ.ಸಿ.ಬಿ. ಯಂತ್ರ ಸಂಪೂರ್ಣವಾಗಿ ನಾಶವಾಗಿದೆ. ಎಷ್ಟರಮಟ್ಟಿಗೆ ಆ ಸ್ಫೋಟದ ತೀವ್ರತೆ ಇತ್ತು ಎಂಬುದನ್ನು ನಾವು ಊಹಿಸಿಕೊಳ್ಳಬೇಕಾಗುತ್ತದೆ.

ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ, ಇಂತಹ ಘಟನೆಗಳು ಯಾವತ್ತು ಸಹ ಆಗಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ, ಇವತ್ತಿನ ದಿವಸ ಆಗಿದೆ. ಮುಂದಾದರೂ ತಡೆಯುವುದಕ್ಕೆ ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಲ್ಲವೇ? ಪ್ರಾಮಾಣಿಕ ಪ್ರಯತ್ನ ಮಾಡದೇ ಇದ್ದರೆ, ಇಂತಹ ಘಟನೆಗಳು ಯಾವಾಗಲೂ ನಡೆಯುತ್ತಲೇ ಇರುತ್ತದೆ. ಬೆಂಗಳೂರು ಮಹಾನಗರಕ್ಕೆ ತಮ್ಮ ಇಲಾಖೆ ವತಿಯಿಂದ corporation limit ನಿಂದ ಸುಮಾರು ಕಿಲೋ ಮೀಟರ್ ಒಳಗೆ ಯಾರು ಗಣಿಗಾರಿಕೆ ನಡೆಸುತ್ತಾರೆ, ಅದನ್ನು ಸಂಪೂರ್ಣವಾಗಿ ತಡೆಯಬೇಕೆಂದು ಕಾನೂನು ಜಾರಿ ಮಾಡಲಾಗಿದೆ. ಬೆಂಗಳೂರಿಗೆ ಒಂದು ಕಾನೂನು, ರಾಜ್ಯದ ಇತರೆ ಭಾಗಗಳಿಗೆ ಬೇರೆ ಕಾನೂನೇ? ಶಿವಮೊಗ್ಗ ನಗರದಿಂದ ಕೇವಲ 5 ಕಿಲೋ ಮೀಟರ್ ಆಸು-ಪಾಸಿನಲ್ಲಿರುವ ಈ ಜಾಗದಲ್ಲಿ ರಾಜಾರೋಷವಾಗಿ ಈ ಕೆಲಸ ನಡೆಯುತ್ತಿದೆ ಎಂದರೆ, ಏನಾಗಬಹುದು? ಜನರಿಗೆ ನೆನಪಿನ ಶಕ್ತಿ ಕಡಿಮೆ. ಈ ಘಟನೆ ನಡೆದು ಒಂದು ವಾರ, 10 ದಿವಸಗಳ ನಂತರ ಮರೆತುಬಿಡುತ್ತಾರೆ. ಪತ್ರಿಕೆ, ಮಾಧ್ಯಮದಲ್ಲಿ ಸಹ ಪ್ರಕಟವಾಗುವುದು ನಿಂತು ಹೋಗುತ್ತದೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇದಕ್ಕೆ ಕಾನೂನಿನಲ್ಲಿಯೇ ಏನಾದರೂ ಬಿಗಿ ಮಾಡದೇ ಹೋದರೆ, ಯಾರೋ ಒಬ್ಬರು ಕುಮ್ಮಕ್ಕು ನೀಡಿದರು ಎಂದು ಅಧಿಕಾರಿಗಳಿಗೆ ಒಂದು ಕೆಲಸ ಮಾಡಲು lenience ನೀಡಿದರೆ, ಅದನ್ನೇ ಅಧಿಕಾರಿಗಳು ಆಧಾರವಾಗಿಟ್ಟುಕೊಂಡು ನೂರಾರು ತಪ್ಪುಗಳನ್ನು ಮಾಡುತ್ತಾರೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ಇವತ್ತು ಈ ಘಟನೆ ಪೊಲೀಸ್ ಇಲಾಖೆಯ ನಿರ್ಲಕ್ಷ್ಯವನ್ನು ತೋರಿಸಿದ್ದು, ಅವರ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕು.

ಮಾನ್ಯ ಸಭಾನಾಯಕರೇ, ಈ ವಿಷಯವನ್ನು ಗೃಹ ಸಚಿವರಿಗೆ ತಿಳಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಅರವಿಂದ ಲಿಂಬಾವಳಿಯವರು ಸದನದಲ್ಲಿಲ್ಲ. ಅವರು ಅರಣ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರಾಗಿದ್ದು, ಅವರಿಗೂ ಸಹ ಇದು ಸಂಬಂಧಪಡುತ್ತದೆ. ಗಣಿ ಮತ್ತು ಭೂ ವಿಜ್ಞಾನ ಸಚಿವರು ಸದನದಲ್ಲಿಯೇ ಇದ್ದು, ಅವರು ಹಿರಿಯರು ಹಾಗೂ ಅನುಭವಸ್ಥರು. ಅವರು ಈ ಇಲಾಖೆಯನ್ನು ವಹಿಸಿಕೊಂಡ ಕೂಡಲೇ ಇಂತಹ ದುರ್ಘಟನೆ ನಡೆದು ಹೋಗಿದೆ. ಎಂದಿಗೂ ಇಂತಹ ದುರ್ಘಟನೆ ನಡೆಯಬಾರದು, ನಡೆದು ಹೋಗಿದೆ. ಹಾಗಾಗಿ ಅವರು ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿದರೆ, ನಿಜವಾಗಿಯು ಒಳ್ಳೆಯ ಹೆಸರು, ಕೀರ್ತಿ ಬರುತ್ತದೆ. ಇನ್ನು ಮುಂದೆ ಅಮಾಯಕರು ಯಾರು ಈ ರೀತಿ ತೊಂದರೆಗೆ ಒಳಪಡಬಾರದು. ಅದಕ್ಕಾಗಿ ಮಾನ್ಯ ಸಚಿವರು ಕಾಳಜಿವಹಿಸಿ ಸೂಕ್ತವಾದ ಕ್ರಮ ಕೈಗೊಳ್ಳಬೇಕು. ಇದರಲ್ಲಿ ಯಾವುದೇ ರಾಜಕಾರಣವನ್ನು ಬೇರಸದೇ ಈ ಘಟನೆಗೆ ಏನು ಕಾರಣ ಎಂಬ ಬಗ್ಗೆ ಅದಕ್ಕೆ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಮೂರ್ತಿಗಳಿಂದ ತನಿಖೆ ಆಗಬೇಕು. ವಾಸ್ತವವಾಗಿ, ನಾವು National Investigation Agency (NIA) or National Security Agency (NSA) ಯವರನ್ನು ಕೇಳಬೇಕೆಂದು ಹೇಳಿದ್ದೇವೆ. ಇದರಿಂದಾಗಿ ನಮ್ಮ ಘನತೆ–ಗೌರವವನ್ನು ಕಳೆದುಕೊಳ್ಳುವುದು ಬೇಡ, ನಮ್ಮ ರಾಜ್ಯದ ಅಧಿಕಾರಿಗಳ ಮೇಲೆ ವಿಶ್ವಾಸವನ್ನು ಕಳೆದುಕೊಳ್ಳುವುದು ಬೇಡ. ಅದಕ್ಕಾಗಿ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ತನಿಖೆಯಾಗಬೇಕು. ಸರಿಯೋ, ತಪ್ಪೋ ಅದು ಹೊರಗೆ ಬರಲಿ. ಇದರಲ್ಲಿ ಯಾರ ಪ್ರತಿಷ್ಠೆಯು ಒಳಪಡುವುದಿಲ್ಲ. ಆಡಳಿತ ಪಕ್ಷ, ವಿರೋಧ ಪಕ್ಷ ಎಂಬುವುದು ಬೇಡ. ಸತ್ಯಾ–ಸತ್ಯತೆಯು ಹೊರಗೆ ಬರಬೇಕು. ಅದಕ್ಕಾಗಿ ಇದರ ಬಗ್ಗೆ ತನಿಖೆಯಾಗಬೇಕೆಂದು ಕೇಳುತ್ತಾ, ನನಗೆ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಆಯನೂರು ಮಂಜುನಾಥ್‌ರವರು, ಶ್ರೀ ನಾರಾಯಣಸ್ವಾಮಿಯವರು ಈ ವಿಚಾರವಾಗಿ ಮಾತನಾಡಿದ್ದಾರೆ. ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಬಯಸುತ್ತಿದ್ದೇನೆ. ಕಳೆದ ತಿಂಗಳ 20ನೇ ತಾರೀಖು ಸುಮಾರು ರಾತ್ರಿ 10 ಗಂಟೆ 20 ನಿಮಿಷಕ್ಕೆ ನಾವೆಲ್ಲರೂ ಟಿ.ವಿ. ವೀಕ್ಷಣೆ ಮಾಡುತ್ತಿದ್ದಾಗ, ನಮ್ಮ ಮನೆಯಿಂದ ಸುಮಾರು 7 ರಿಂದ 8 ಕಿಲೋ ಮೀಟರ್ ದೂರದಲ್ಲಿ ಸ್ಫೋಟ ಸಂಭವಿಸಿದಾಗ ದೊಡ್ಡ ಶಬ್ಧವಾಗಿತ್ತು. ಆಗ ನಾವು 'ನಮ್ಮ ಮನೆಯ ಪಕ್ಕದಲ್ಲಿಯೇ ಏನೋ ಸಂಭವಿಸಿರಬಹುದು, ಯಾವುದೋ ಬಿಲ್ಡಿಂಗ್ ಬಿದ್ದು ಹೋಗಿರಬಹುದು' ಎಂದು ಎಲ್ಲಾ ಜನರು ಹೊರಗೆ ಬರುವಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂದಿನ ದಿವಸ 'ಸುತ್ತ–ಮುತ್ತಲಿನ ಜನರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಭೂಕಂಪವೇನಾದರೂ ಸಂಭವಿಸಿತ್ತೋ, ಏನಾಗಿತ್ತೋ' ಎಂದು ಯಾರೂ ಸಹ ನಿದ್ದೆ ಮಾಡಲಿಲ್ಲ. ಸುಮಾರು ಅರ್ಧ ಗಂಟೆ, ಒಂದು ಗಂಟೆ ಅಷ್ಟರೊಳಗೆ ದೃಶ್ಯ ಮಾಧ್ಯಮದಲ್ಲಿ ಸ್ಫೋಟವಾಗಿರುವ ಕುರಿತು ಪ್ರಸಾರವಾಗುತ್ತಿತ್ತು. ಶಿವಮೊಗ್ಗ ನಗರ ಮಾತ್ರವಲ್ಲ, ಇಡೀ ಶಿವಮೊಗ್ಗ ಜಿಲ್ಲೆ, ದಾವಣಗೆರೆ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗಳಿಗೆ ಈ ಶಬ್ಧ ಕೇಳಿಸಿದೆ. ಆ ಸ್ಫೋಟದ ತೀವ್ರತೆ ಎಷ್ಟೆಂಬುದು ಬೆಳಗಿನ ಜಾವ ಅಲ್ಲಿ ಹೋಗಿ ನೋಡಿದಾಗ ನಮಗೆ ಗೊತ್ತಾಯಿತು. ಈಗಾಗಲೇ ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಹಾಗೆ ಅಂದಿನ ದಿವಸ ಅಬ್ಬಲಗೆರೆಯಿಂದ ಮುಂದೆ ಹುಣಸೋಡು ಗ್ರಾಮದ ಪಕ್ಕದಲ್ಲಿ ಕಲ್ಲಗಂಗೂರು ಸರ್ವೇ ನಂಬರ್‌ನಲ್ಲಿ ಪ್ರಾರಂಭಗೊಂಡು ಸವಳಂಗ ರಸ್ತೆಯಿಂದ ಸಾಗರ ರಸ್ತೆವರೆಗೂ ಕ್ವಾರಿಗಳು ಮತ್ತು ಕ್ರಶರ್‌ಗಳು ಗೆಜ್ಜೆನಹಳ್ಳಿಯಿಂದ ಹಿಡಿದು ಚಿಕ್ಕನಕೊಪ್ಪದವರೆಗೂ ನಡೆಯುತ್ತಿವೆ. ಈ ಸ್ಫೋಟದಿಂದ 6 ಜನರು ಮರಣ ಹೊಂದಿದ್ದಾರೆ ಎಂಬುದು ಗೊತ್ತಾಗಿತ್ತು. ಅದಲ್ಲದೇ 15, 20 ದಿವಸಗಳ ಹಿಂದೆ ಅಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದರು.

**(ಮುಂದು)**

(52)01.02.2021/4.40/ಎಸ್‌ಕೆ-ಎಕೆ **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಆರ್. ಪ್ರಸನ್ನ ಕುಮಾರ್ (ಮುಂದು):-**

ಮೃತ ಪಟ್ಟವರ ಮೇಲೆ ಪೋಲೀಸ್ ಕೇಸ್ ಇಲ್ಲ. ಇಲ್ಲಿರುವ ಕ್ವಾರಿಯವರೇ ಸೇರಿಕೊಂಡು ಅವರಿಗೆಲ್ಲಾ ಹಣವನ್ನು ಕೊಟ್ಟು ಮುಚ್ಚು ಹಾಕುವಂತಹ ಕೆಲಸವನ್ನು ಮಾಡಿದರು. ನಾವು ಇದರ ಬಗ್ಗೆ ಏತಕ್ಕೆ ಪ್ರಸ್ತಾಪ ಮಾಡಿ, ಮಾತನಾಡಬೇಕೆಂದು ಹೇಳಿದರೆ, ಇಲ್ಲಿ ಇದು ಹತ್ತಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೇ, ಇದರಲ್ಲಿ ಎಲ್ಲಾ ಪ್ರಭಾವಿ ವ್ಯಕ್ತಿಗಳಿದ್ದಾರೆ. ಈ ಪ್ರಭಾವಿ ವ್ಯಕ್ತಿಗಳು ಯಾರ್‍ಯಾರಿದ್ದಾರೋ, ರಾಜಕಾರಣಿಗಳನ್ನು ಅವರು ಆಟ ಆಡಿಸುತ್ತಾರೆ. ಆ ರೀತಿಯಲ್ಲಿ ಇವತ್ತು ಕ್ರಷರ್‌ಗಳನ್ನು ನಡೆಸುವಂತಹವರು, ಈ ಕ್ವಾರಿಗಳನ್ನು ನಡೆಸುತ್ತಿದ್ದಾರೆ. ಇವತ್ತು ಶಿವಮೊಗ್ಗ ಜಿಲ್ಲೆಯವರು ಮುಖ್ಯಮಂತ್ರಿಗಳಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ದೊಡ್ಡ ಅಭಿವೃದ್ಧಿ ಕಾರ್ಯಗಳಾಗಬಹುದು ಮತ್ತು ಶಿವಮೊಗ್ಗ ಜಿಲ್ಲೆಯಿಂದ ಶಿಕಾರಿಪುರದ ಮೇಲೆ ರಾಣೆಬೆನ್ನೂರಿಗೆ ಹೋಗುವಂತಹ ಒಂದು ರೈಲ್ವೆ ಲೈನ್ ಆಗುತ್ತದೆ. ಅಲ್ಲಿ ರೈಲ್ವೆ ಲೈನ್ ಮಾಡುವುದಕ್ಕೆ ಬಹಳ ಜಲ್ಲಿ ಬೇಕಾಗುತ್ತದೆ ಎಂದು ಹೇಳಿ, ಅವರು ಮುಂದಾಲೋಚನೆ ಮತ್ತು ದುರಾಲೋಚನೆಯಿಂದ ಬಹಳಷ್ಟು ಜನರು ಹೋಗಿ ಅಲ್ಲಿ ಕ್ವಾರಿಗಳನ್ನು ಮಾಡುತ್ತಿದ್ದಾರೆ. ನಾಳೆ ಅಲ್ಲಿಗೆ ಸರಬರಾಜು ಮಾಡಿ, ಹಣವನ್ನು ಮಾಡಬಹುದೆಂದು ಎಲ್ಲೆಲ್ಲಿ ಜಾಗವಿರುತ್ತದೆ ಅಲ್ಲೆಲ್ಲಾ ಕ್ವಾರಿಗಳನ್ನು ತೆಗೆದುಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಆದರೆ ಕ್ವಾರಿಗಳನ್ನು ಮಾಡುವುದಕ್ಕೆ ಇಲ್ಲಿ ಪರವಾನಿಗೆಯನ್ನು ಕೊಟ್ಟುಬಿಡುತ್ತಾರೆ. ಪರವಾನಿಗೆ ಕೊಟ್ಟಮೇಲೆ ಅದಕ್ಕೆ ಎಲ್ಲಿಂದ raw material ಬರಬೇಕೆನ್ನುವುದು ಗೊತ್ತಿರುತ್ತದೆ. ಹೀಗಿರುವಾಗ ಕಣ್ಣುಮುಚ್ಚಿ ಅವರೇನು ಕೊಟ್ಟಿದ್ದಾರೆಯೇ ಎಂಬುದು ಅರ್ಥವಾಗುವುದಿಲ್ಲ. ಅದಕ್ಕೆ ಬೇಕಾಗುವಷ್ಟು ಕ್ರಷರ್‌ಗಳಿಗೆ ಕೊಟ್ಟಿದ್ದಾರೆ. ಆದರೆ ಕ್ವಾರಿಗಳಿಲ್ಲದೇ, ಆ ಕ್ವಾರಿಗಳಲ್ಲಿ ವೈಜ್ಞಾನಿಕವಾಗಿ ಬ್ಲಾಸ್ಟ್ ಮಾಡಿ, ಕಲ್ಲುಗಳನ್ನು ತೆಗೆದುಕೊಳ್ಳುವುದಕ್ಕಾಗದೇ ಸುಮ್ಮನೆ ಇವತ್ತು ಈ ತರಹ ಪ್ರಸಂಗಗಳೆಲ್ಲಾ ಆಗುತ್ತಿವೆ. ಇವತ್ತು ಅಲ್ಲಿ ಯಾವ ರೀತಿ ಇದೆ ಎಂದರೆ ಜನ ಬೇಸತ್ತು ಹೋಗಿಬಿಟ್ಟಿದ್ದಾರೆ. ಲಾರಿಗಳು ಬೆಳಗ್ಗೆ ಐದು ಗಂಟೆಯಿಂದ ರಾತ್ರಿ ಸುಮಾರು ಹತ್ತರಿಂದ ಹನ್ನೊಂದು ಗಂಟೆಯವರೆಗೂ ರಸ್ತೆಯಲ್ಲಿ ಲಾರಿಗಳು ಚಲಿಸುತ್ತಿರುತ್ತವೆ. ಜನರು ರಸ್ತೆಗಳನ್ನು ದಾಟಲು ಬಹಳ ಕಷ್ಟವಾದಂತಹ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ಜಿಲ್ಲೆಯೊಳಗೆ ಕಲ್ಲಿನ ಗಣಿಗಾರಿಕೆಯ ಕ್ವಾರಿಯೊಂದೇ ಅಲ್ಲ, ಅದರ ಜೊತೆಗೆ ಮರಳಿನ ಗಣಿಗಾರಿಕೆಯೂ ಕೂಡ ಇದೆ. ಈ ಹಿಂದೆ ನಮ್ಮ ಗಣಿಗಾರಿಕೆ ಇಲಾಖೆಗೆ ಸಂಬಂಧಪಟ್ಟಂತಹ Senior Geologist ಇದ್ದರು. ಅವರನ್ನು ಸರ್ಕಾರವೇ ವರ್ಗಾವಣೆ ಮಾಡಿದರೂ ಕೂಡ ಅವರು ಅಲ್ಲಿಂದ ಹೋಗುವುದಕ್ಕೆ ಒಂದು ವರ್ಷ ಕಾಲವಕಾಶ ತೆಗೆದುಕೊಂಡರು. ಅಂದರೆ, ಅವರು ಅಷ್ಟೊಂದು ಪ್ರಭಾವಿಗಳಾಗಿದ್ದರು. ಅವರು ಅಲ್ಲಿಂದ ಹೋಗುವುದಕ್ಕೆ ತಯಾರಿಲ್ಲ. ನಾವು ಮುಂಚೆ ಕೇಳಿರುವ ಹಾಗೇ ಮಾನ್ಯ ಸಭಾಪತಿಯವರೇ ಇಲ್ಲಿ ಕುಳಿತಿದ್ದಾರೆ. ಈ ಮೊದಲು ನಾವು ಅವರ ಜಿಲ್ಲೆಯಲ್ಲಿಯೇ ಮಾತ್ರ ಗಣಿಗಾರಿಕೆ ಹಾಗೂ ಅವರ ಜಿಲ್ಲೆಯಲ್ಲಿಯೇ ಮಾತ್ರ ಅಧಿಕಾರಿಗಳು ಲೂಟಿ ಮಾಡುತ್ತಾರೆ ಎಂದುಕೊಂಡಿದ್ದೆವು. ಆದರೆ ನಮ್ಮ ಜಿಲ್ಲೆಯಲ್ಲಿ ಅದಕ್ಕಿಂತ ನೂರರಷ್ಟು ಆಗಿಬಿಟ್ಟಿದೆ. ಹಾಗಾಗಿ ನಾವು ಏನು ಹೇಳುವಂತಿಲ್ಲ ಗಣಿಗಾರಿಕೆ ಇಲಾಖೆಯೊಳಗೆ ಎಷ್ಟು ಜನ ಸಿಬ್ಬಂದಿ ಇರುತ್ತಾರೆ? ಅಲ್ಲಿ 2 ರಿಂದ 3 ಜನರು ಸಿಬ್ಬಂದಿಯವರು ಮಾತ್ರ ಇರುತ್ತಾರೆ. ಅವರು ಎಲ್ಲಿಗೆ ಹೋಗುತ್ತಾರೆ, ಬರುತ್ತಾರೆ ಏನು ಮಾಡುತ್ತಾರೆ ಎಂದು ಯಾರಿಗೂ ತಿಳಿಯುವುದಿಲ್ಲ. ಯಾರಾದೊಬ್ಬರು ಅವರಿಗೆ ಗದರಿಸಿದರೆ ಕೂಡಲೇ ಆ ಕಡೆ ಬರುವುದಿಲ್ಲ. ಅಲ್ಲಿ ಏನಾಗುತ್ತಿದೆ ಎಂದು ನೋಡುವುದೂ ಇಲ್ಲ. ಅಲ್ಲಿ ಈ ರೀತಿಯಾದಂತಹ ಪರಿಸ್ಥಿತಿ ಇದೆ. ಇವತ್ತು ಆ ತರಹ ಪರಿಸ್ಥಿತಿಯಾಗಿದೆ. ಇವತ್ತು ಮರಳು ಗಣಿಗಾರಿಕೆಯಲ್ಲಿಯೂ ಇದೇ ತರಹ ಪರಿಸ್ಥಿತಿಯಾಗಿದೆ. ಇವತ್ತು ಯಾರೋ ಒಂದು ಕಡೆ ಕ್ವಾರಿಗಳನ್ನು ತೆಗೆದುಕೊಂಡು ಬಿಡತ್ತಾರೆ. ಕ್ವಾರಿಗಳನ್ನು ತೆಗೆದುಕೊಂಡು ಬಿಟ್ಟು, ಅಲ್ಲಿ ಅವರದೇ ಆದ ದರ್ಬಾರ್ ನಡೆಸುತ್ತಾರೆ. ಅಲ್ಲಿ ಯಾವ ರೀತಿ ಮರಳನ್ನು ತೆಗೆಯುತ್ತಾರೆ, ಯಾರಿಗೆ ಕೊಡುತ್ತಾರೆ ಮತ್ತು ಯಾವ ರೀತಿ ಹೋಗುತ್ತದೆ. ಇದನ್ನೆಲ್ಲಾ ನೋಡುವುದಕ್ಕಾಗುವುದಿಲ್ಲ, ಅಂತಹ ಪರಿಸ್ಥಿತಿಯಾಗಿದೆ. ಇವತ್ತು ಕ್ವಾರಿಗಳಲ್ಲಿ ಬ್ಲಾಸ್ಟ್ ಆಗುವುದಕ್ಕೆ ಕಾರಣವೇನು ಎಂದು ಕೇಳಿದರೆ, ಯಾರು ಇದರ ಬಗ್ಗೆ ಹೇಳುವವರಿಲ್ಲ ಮತ್ತು ಕೇಳುವವರಿಲ್ಲ. ಅಲ್ಲಿರುವಂತಹ ಪೋಲಿಸ್ ಇಲಾಖೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂದಾಯ ಇಲಾಖೆ, ಅರಣ್ಯ ಇಲಾಖೆಯವರಿಗೂ ಯಾವುದೇ ರೀತಿಯಾದಂತಹ ಮಾಹಿತಿಯಿಲ್ಲ. ಅಲ್ಲಿರುವಂತಹ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತುಕೊಂಡು ಬಿಟ್ಟಿದ್ದಾರೆ. ಅಲ್ಲಿರುವ ಅಧಿಕಾರಿಗಳು ರಾಜಕೀಯ ಪ್ರಭಾವಕ್ಕೆ ಹೆದರುತ್ತಿದ್ದಾರೋ ಅಥವಾ ಈ ಗಣಿಗಾರಿಕೆ ಮಾಡುವವರ ಹಣಕ್ಕೆ ಹೆದರುತ್ತಿದ್ದಾರೋ ಎಂಬುದು ಅರ್ಥವಾಗುತ್ತಿಲ್ಲ. ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿದೆ. ಒಂದು ಕಡೆ ಅಭಿವೃದ್ಧಿಗೆ ಪೂರಕವಾದಂತಹ ವ್ಯವಸ್ಥೆಗಳನ್ನು ಮಾಡಬೇಕು. ಅದಕ್ಕೆ ಮರಳು, ಜಲ್ಲಿ ಹಾಗೂ ಎಲ್ಲವೂ ಬೇಕು. ಆದರೆ ಎಲ್ಲವೂ ಒಂದು ಕ್ರಮಬದ್ಧವಾಗಿ ನಡೆಸುವಂತಹದ್ದನ್ನು ನಾವು ಮಾಡಬೇಕು. ಅದನ್ನು ಮಾಡದೇ ಇರುವಂತಹದ್ದು ಬಹಳ ದೊಡ್ಡ ಅನಾಹುತವಾಗಿದೆ.

ಮಾನ್ಯ ಸದಸ್ಯರು ಹೇಳಿದ ಹಾಗೇ ಸ್ಫೋಟಕಗಳನ್ನು ತೆಗೆದುಕೊಂಡು ಬರುವಾಗ ಶಿವಮೊಗ್ಗದಲ್ಲಿ ಏನಾದರೂ ಅಂತಹ ಅನಾಹುತವಾಗಿದ್ದರೆ, ಸಾವಿರಾರು ಜನರು ಸಾಯುವಂತಹ ಪರಿಸ್ಥಿತಿಯಾಗುತ್ತಿತ್ತು. ಆ ಲಾರಿಯಲ್ಲಿ ಸ್ಫೋಟಕ ವಸ್ತುಗಳು ಎಷ್ಟಿತ್ತು ಎಂಬುದರ ಬಗ್ಗೆ ನೋಡಿದವರು ಯಾರೂ ಇಲ್ಲ. ಪುಲ್ವಾಮದಲ್ಲಿ 250 ಕೆಜಿಗೆ ಅಷ್ಟು ಸ್ಫೋಟವಾಗಿತ್ತು. ಇಲ್ಲಿ 1350 ಕೆಜಿ ಇತ್ತು ಎಂದು ಹೇಳುತ್ತೇವೆ. ಆದರೆ ಅದು ನಮ್ಮ ಕಲ್ಪನೆ. ಆದರೆ ಅಲ್ಲಿ ಎಷ್ಟಿತ್ತು, ಏನಿತ್ತು ಎಂಬುದು ನಮಗೆ ಗೊತ್ತಿಲ್ಲ. ಆದರೆ ಈ ಸ್ಫೋಟಕ ವಸ್ತುಗಳನ್ನು ಇಲ್ಲಿ ಕಲ್ಪಿಸುವಂತಹ ಕೆಲಸವನ್ನು ಅಧಿಕಾರಿಗಳು ಅರಾಮವಾಗಿ ಮಾಡುತ್ತಿದ್ದಾರೆ. ನಮ್ಮ ವ್ಯವಸ್ಥೆ ಏನೆಂಬುದರ ಬಗ್ಗೆ ನಾವು ಒಮ್ಮೆ ಬಾರಿ ಯೋಚನೆ ಮಾಡಿಕೊಳ್ಳಬೇಕಾಗಿದೆ. ನಮ್ಮ ಮುಖ್ಯಮಂತ್ರಿಗಳನ್ನು ನಾವು ನೋಡಿಕೊಳ್ಳುತ್ತೇವೆ ಬಿಡು ಎನ್ನುವಂತಹ ಪರಿಸ್ಥಿತಿ ಇವತ್ತು ಎಲ್ಲೋ ಒಂದು ಕಡೆ ಉದ್ಭವವಾಗಿದೆ ಎಂಬುದರ ಬಗ್ಗೆ ನನಗೆ ಅನಿಸುತ್ತಿದೆ. ಹಾಗಾಗಿ ಹೊಸದಾಗಿ ಗಣಿ ಸಚಿವರಾದಂತಹವರು ಮಾರನೇ ದಿನವೇ ಆ ಸ್ಥಳಕ್ಕೆ ಬಂದು ನೋಡಿಕೊಂಡು ಹೋಗಿದ್ದಾರೆ. ಆದರೆ ಅವರು ನೋಡಿಕೊಂಡು ಹೋಗಿರುವುದನ್ನು ಬಿಟ್ಟರೆ, ಅವರ ಇಲಾಖೆಯಿಂದ ಯಾವ ಅಧಿಕಾರಿಗಳಿಗೂ ಆ ಶಕ್ತಿ ಇಲ್ಲ. ಇವತ್ತು ಆ ಲಿಮಿಟ್ಸ್‌ನಲ್ಲಿರುವಂತಹ ಸಬ್-ಇನ್ಸ್‌ಪೆಕ್ಟರ್ ಬರುತ್ತಾನೆಂದು ಹೇಳಿದರೆ, ಅವನು ಅಲ್ಲಿಂದ ಮಹಾರಾಜನಾಗಿ ಹೋಗುತ್ತಾನೆ. ಅವನು ಅಲ್ಲಿಂದ ಸಬ್-ಇನ್ಸ್‌ಪೆಕ್ಟರ್ ಆಗಿ ಹೋಗುವುದಿಲ್ಲ. ಇವತ್ತು ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರಿಗೆ ಯಾವ ರೀತಿ ಮಾತನಾಡುತ್ತಾರೋ, ಅದಕ್ಕೆ ನೂರರಷ್ಟು ಮಾತನಾಡುವಂತಹ ಅಧಿಕಾರಿಗಳಾಗಿ ಬಿಟ್ಟಿದ್ದಾರೆ. ಇವತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಆ ಭಾಗದಲ್ಲಿ ಏನಾದರೂ ಬಂದರೆ, ಹಣ ಮಾಡುವುದಕ್ಕೋಸ್ಕರವಾಗಿಯೇ ಅಲ್ಲಿಗೆ ಬರುತ್ತಾರೆ. ಅಲ್ಲಿ ಅವ್ಯವಹಾರಗಳನ್ನು ಮಾಡುವುದಕ್ಕೆ ಅನುಕೂಲವಾಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಅವರು ಆ ಕೆಲಸಕ್ಕೆ ಬಂದಿರುತ್ತಾರೆ.

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆದರೆ ಇದೇನೂ ಬ್ಲಾಸ್ಟ್ ಆಯಿತಲ್ಲಾ ಎಂದು ಯಾರಿಗಾದರೂ ಮಾಹಿತಿಯಿದೆಯಾ ಎಂದು ಕೇಳಿದರೆ, ಅವರ್‍ಯಾರು ಮಾತನಾಡುವುದಿಲ್ಲ ಹಾಗೂ ಬಾಯಿಯೇ ಬಿಡುವುದಿಲ್ಲ. ಮಾನ್ಯ ಸಿದ್ದರಾಮಯ್ಯರವರು ಮತ್ತು ಮಾನ್ಯ ಎಸ್.ಆರ್ ಪಾಟೀಲ್‌ರವರು ಆ ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿರುವ ಅಧಿಕಾರಿಗಳನ್ನು ಮಾತನಾಡಿಸಿದರೆ, ಅವರಿಂದ ಒಂದು ಮಾತು ಬರುತ್ತಿಲ್ಲ. ಗಣಿಗಾರಿಕೆ ಇಲಾಖೆಯ ರಾಮ್ ಜಿ ನಾಯ್ಕ್‌ರವರು ಹೊಸದಾಗಿ ಅಲ್ಲಿಗೆ ಬಂದಿದ್ದಾರೆ. ಆದರೆ ಅವರನ್ನು ಕೇಳಿದರೆ, ನಾನು ಮೂರು ತಿಂಗಳಾಯಿತು ಸಾರ್ ಇಲ್ಲಿಗೆ ಬಂದು ಎನ್ನುತ್ತಾರೆ. ಅಲ್ಲಿ ಏನಾಪ್ಪ ಏನಾಯಿತು ಎಂದು ಕೇಳಿದರೆ, ಅಲ್ಲಿರುವವರು ಯಾರೂ ಬಾಯಿಯೇ ಬಿಡುವುದಿಲ್ಲ. ಅವರು ಏನ್ನನ್ನೂ ಹೇಳುವುದಕ್ಕೆ ತಯಾರಿಲ್ಲ. ಅಲ್ಲಿ ಅಂತಹ ಪರಿಸ್ಥಿತಿಯಾಗಿದೆ. ಇವತ್ತು ಯಾವ ಅಧಿಕಾರಿಗಳು ಕೂಡ ಎಲ್ಲೋ ಒಂದು ಕಡೆ adjust ಆಗಿಬಿಟ್ಟಿದ್ದಾರೆ ಎಂದು ನನಗೆ ಅನಿಸುತ್ತಿದೆ. ಯಾವ ತರಹ adjust ಆಗಿದ್ದಾರೋ ಅಥವಾ ಏನೋ ಎಂತಹದ್ದಕ್ಕೆ ಎಂಬುದು ಗೊತ್ತಿಲ್ಲ. ಅಲ್ಲಿರುವ ಜನರ ಬದುಕು ಬಹಳ ದುಸ್ಥರವಾಗಿದೆ. ಅವರು ಸುಮಾರು ದಿವಸಗಳಿಂದ ಜಿಲ್ಲಾಢಳಿತ, ಪೋಲೀಸ್ ಇಲಾಖೆ, ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಗೆ ದೂರನ್ನು ಕೊಟ್ಟಿದ್ದಾರೆ. ಆದರೆ ಇಲಾಖೆಗಳ ಅಧಿಕಾರಿಗಳು ಯಾವುದಕ್ಕೂ ಜಪ್ಪಯ ಎಂದಿಲ್ಲ. ಅವರನ್ನು ಎಷ್ಟರಮಟ್ಟಿಗೆ ಹೆದರಿಸಿಕೊಂಡಿದ್ದಾರೆಂಬುದು ಗೊತ್ತಿಲ್ಲ. ಅದಾದ ನಂತರ ಅವರು ಲೋಕಾಯುಕ್ತ ಇಲಾಖೆಗೆ ಬರೆದಿದ್ದಾರೆ. ಲೋಕಾಯುಕ್ತದವರು 29ನೇ ತಾರೀಖಿನಂದು ಬಂದು ತೀರ್ಪು ಕೊಡುತ್ತೇವೆಂದು ಹೇಳಿದ್ದರು. ಅಷ್ಟರೊಳಗೆ ಈ ಘಟನೆಯಾಗಿದೆ. ಇಂತಹ ಘಟನೆಗಳು ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುವುದಿಲ್ಲವೆಂದು ತಿಳಿದುಕೊಂಡಿದ್ದೆವು. ಆದರೆ ಈ ಘಟನೆಗಳು ನಡೆದಿರುವ ಬಗ್ಗೆ ಜನರು ಮರೆತು ಬಿಡುತ್ತಾರೆ. ಇನ್ನೊಂದು ವಾರ ಹೋದ ಕೂಡಲೇ ಮತ್ತೆ ಇದೇ ಪ್ರಾರಂಭವಾಗುತ್ತದೆ. ದಯವಿಟು, ಇದು ಏನಾಯಿತು? ಇದು ಏಕಾಯಿತು? ಈ ಸ್ಫೋಟಕಗಳು ಎಲ್ಲಿಂದ ಬಂತು? ಆರು ಜನ ಕಾರ್ಮಿಕರ ಸಾವಿಗೀಡಾದರು, ಅವರಿಗೆ ಪರಿಹಾರ ಕೊಡಬೇಕೋ ಅಥವಾ ಬೇಡವೋ ಎಂಬುದು ಜಿಜ್ಞಾಸೆ. ಏಕೆಂದರೆ ಅವರೇನಾದರು ಇದರಲ್ಲಿ ಸೇರಿಕೊಂಡಿದ್ದಾರೇನೋ, ಅವರು ಅಪಾದಿತರಾಗಿದ್ದಾರೇನೋ ಎಂಬ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಆದರೆ ಇಲ್ಲಿ ಒಂದು ವಿಷಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ಏನೆಂದರೆ, ಸ್ಫೋಟಕಗಳನ್ನು ತಂದವರು, ಇಳಿಸಿದವರು ಹಾಗೂ ಎತ್ತಿಟ್ಟವರನ್ನು ಬಿಟ್ಟರೆ, ಅಲ್ಲಿ ಯಾರೋ ದೊರೆಯಿದ್ದಾನೆ. ಅವನು ಲಾರಿಯಲ್ಲಿ ತೆಗೆದುಕೊಂಡು ಬಂದು ಕಳುಹಿಸಿರುವುದು. ಇವರದು ಕೂಲಿ ಕೆಲಸ. ಅವರಿಗೆ ಒಂದು ಸಾವಿರ ರೂಪಾಯಿ ಕೂಲಿ ಕೊಡುವ ಕಡೆ, ಎರಡು ಸಾವಿರ, ಮೂರು ಸಾವಿರ ರೂಪಾಯಿಗಳು ಸಿಗುತ್ತದೆ ಎಂದು ಹೇಳಿ, ಈ ಕೆಲಸವನ್ನು ಮಾಡಿದ್ದಾರೆ ಎನ್ನುವುದು ಬಿಟ್ಟರೆ, ಅವರಿಗೆ ಏನೂ ಇದರಲ್ಲಿ ಲಾಭವಿಲ್ಲ. ಈಗ ಮಾನ್ಯ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಾರಾಯಣಸ್ವಾಮಿಯವರು ಹೇಳಿದ ಹಾಗೇ, ಅವರ ಪರಿಸ್ಥಿತಿಗಳು ಬಹಳಷ್ಟು ಹದಗೆಟ್ಟಿ ಹೋಗಿದೆ. ಈಗ ಪೊಲೀಸ್ ಇಲಾಖೆಯಾಗಲೀ, ಜಿಲ್ಲಾಡಳಿತವಾಗಲಿ ಸತ್ತವರ ಮೇಲೆ ಅವರೇ ಎಲ್ಲಾ ಮಾಡಿದ್ದು ಎಂದು ಹೇಳುವಂತಹ ಪರಿಸ್ಥಿತಿಯಾಗಬಾರದು. ಹಾಗಾಗಿ ಇದರಲ್ಲಿ ನಮ್ಮ ಸರ್ಕಾರ ಅಥವಾ ಯಾವ ಸರ್ಕಾರ ಮಾಡಿದೆಯೋ ಎನ್ನುವುದಲ್ಲ. ಸರ್ಕಾರದ ವೈಫಲ್ಯ ಮಾತ್ರ ಕಂಡು ಬರುತ್ತಿದೆ. ಈ ಸರ್ಕಾರದ ವೈಫಲ್ಯಗಳನ್ನು ಸರಿ ಮಾಡಬೇಕು. ನಾಳೆ ಗಣಿಗಾರಿಕೆಗೆ ಪುನಃ ಏನಾದರೂ ಅನುಮತಿಯನ್ನು ಕೊಡಬೇಕಾದರೆ ಮತ್ತು ಕ್ವಾರಿಗಳಲ್ಲಿ ಕಲ್ಲು ಸಿಡಿಸುವುದಕ್ಕೆ ಅನುಮತಿಯನ್ನು ಕೊಡಬೇಕಾದರೆ, ಸರ್ಕಾರ ಸರಿಯಾದ ಕ್ರಮಗಳನ್ನು ತೆಗೆದುಕೊಂಡು, ಅದಕ್ಕೆ ಯಾವ ರೀತಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಅದಕ್ಕೆ ಯಾರ್‍ಯಾರು ಜವಾಬ್ದಾರಿ ಎಂದು ಇಲಾಖೆಗಳು ಅರ್ಥ ಮಾಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ ಇವತ್ತು ನಮ್ಮ ರಾಜಕಾರಣಿಗಳ ಮೇಲೆ ಏನೊಂದು ಪ್ರಭಾವವಿದೆ, ಅವರು ಒಂದು ತರಹ ಚುನಾವಣೆಯಲ್ಲಿ ನಾವು ಗೆಲ್ಲಿಸುತ್ತೇವೆ ಮತ್ತು ಸೋಲಿಸುತ್ತೇವೆ ಎನ್ನುವಂತಹ ಪರಿಸ್ಥಿತಿಯಲ್ಲಿದ್ದಾರೆ. ಅದಕ್ಕೆ ಅವರನ್ನೆಲ್ಲಾ ಮಟ್ಟ ಹಾಕಬೇಕು. ನ್ಯಾಯಯುತವಾಗಿ ಅವರು ಏನಾದರೂ ಮಾಡಿಕೊಳ್ಳಲಿ, ಅವರು ಮಾಡಿದರೆ, ನಮಗೆ ಏನು ಹೊಟ್ಟೆ ಕಿಚ್ಚು ಇಲ್ಲ. ಆದರೆ ಮಾಡುವಂತಹ ಕೆಲಸಗಳು ಸರಿಯಾದ ರೀತಿಯಲ್ಲಿ ಆಗಬೇಕಾಗಿದೆ. ಇವತ್ತು ಆಗಿರುವ ವೈಫಲ್ಯಗಳೇನು ಎಂಬುದರ ಬಗ್ಗೆ ಮಾತ್ರ ಉಚ್ಚ ನ್ಯಾಯಾಲಯದ ಹಾಲೀ ನ್ಯಾಯಾಧೀಶರಿಂದ ಒಂದು ತನಿಖೆಯಾಗಬೇಕು.

**(ಮುಂದು)**

**(53)01.02.2021, 4.50, ಟಿಸಿಹೆಚ್-ಎಕೆ**

**ಶ್ರೀ ಆರ್.ಪ್ರಸನ್ನಕುಮಾರ್(ಮುಂದು):-**

ಆ ತನಿಖೆ ಮಾಡಿದ ನಂತರ ಏನು ವರದಿ ಬರುತ್ತದೆ ಅದರ ಮೇಲೆ ನೀವು ಕ್ರಮಗಳನ್ನು ಮಾಡಬೇಕಾಗುತ್ತದೆ. ಅದುಬಿಟ್ಟು ನೀವೇ ಎಲ್ಲೋ ಒಂದುಕಡೆ ತನಿಖೆಗಳನ್ನು ಮಾಡಿ ಮುಗಿಸಿದ್ದೇವೆಂದು ಹೇಳಿದರೆ, ಆ ತನಿಖೆಯಲ್ಲಾ ವ್ಯರ್ಥವಾಗುತ್ತದೆ. ಆದ್ದರಿಂದ ಬಹಳ ಹುಷಾರಾಗಿ ಹೈಕೋರ್ಟ್‌ನ ನ್ಯಾಯಾಧೀಶರಿಂದ ತನಿಖೆಯನ್ನು ಮಾಡಿಸುವುದರ ಮೂಲಕ ಈ ತನಿಖೆಗೆ ಒಂದು ಒಳ್ಳೆಯ ದಾರಿಯನ್ನು ಮಾಡಬೇಕೆಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ಈಗಾಗಲೇ 106 ಕಲ್ಲು ಕ್ವಾರಿಗಳಿವೆ. ಅವುಗಳಲ್ಲಿ 20-25 ಕಲ್ಲು ಕ್ವಾರಿಗಳಿಗೆ ಮಾತ್ರ ಕ್ವಾರಿ ಮಾಡುವುದಕ್ಕೆ ಅನುಮತಿ ಇದೆ. ಇನ್ನುಳಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದಕ್ಕೂ ಅನುಮತಿ ಇಲ್ಲ. ಆಮೇಲೆ ಅನುಮತಿ ಇಲ್ಲವೆಂದರೆ ಅವ್ಯಾವು ನಿಂತಿಲ್ಲವೆಂದು ಹೇಳಬೇಡಿ. ಈಗಲೂ ಕ್ವಾರಿ ಕೆಲಸ ನಡಯುತ್ತಿದೆ. ಈಗಲೂ ಕ್ವಾರಿ ಕೆಲಸಗಳಾಗುತ್ತಿವೆ. ಈ ಸ್ಫೋಟಕಗಳನ್ನು ತಂದವರು ಯಾರು ಎನ್ನುವುದನ್ನು ಪತ್ತೆ ಹಚ್ಚಬೇಕು. ಯಾರಿಗಾದರೂ ದೇಶದ ವಿಭಜನೆ ಮಾಡತಕ್ಕಂಥ ವಿಧ್ವಂಸಕರಿಗೆ ಯಾರಿಗಾದರೂ ಸಿಕ್ಕಿಬಿಟ್ಟಿದ್ದರೆ, ಆ ಪರಿಸ್ಥಿತಿ ಏನಾಗುತ್ತಿತ್ತು ಎನ್ನುವುದರ ಬಗ್ಗೆ ನಮ್ಮ ನಾಯಕರು ಮಾತನಾಡಿ ಹೇಳಿದ್ದಾರೆ. ಹಾಗಾಗಿ, ಯಾರೂ ಸ್ಫೋಟಕಗಳನ್ನು ತರಬಾರದು. ಆ ಸ್ಫೋಟಕಗಳನ್ನು ತರುವಂಥ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು. ಏನು ಮುಂದೆ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಮಾಡಬೇಕು. ನಮ್ಮ ಪೊಲೀಸ್ ಇಲಾಖೆ ಇರಬಹುದು, ಜಿಲ್ಲಾಡಳಿತ ಇರಬಹುದು ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಈ ಮೂರು ಇಲಾಖೆಯವರು ಬಹಳ ಪ್ರಮುಖವಾಗಿ ಆ ಕೆಲಸಗಳನ್ನು ಮಾಡಬೇಕು. ಜೊತೆಗೆ ಅರಣ್ಯ ಇಲಾಖೆಯಲ್ಲಿ ಬರುವಂಥ ಯಾವ ಪ್ರದೇಶಗಳಲ್ಲಿ ಯಾವುದೇ ಕಾರಣಕ್ಕೂ ಗಣಿಗಾರಿಕೆಗೆ ಕೊಡಬಾರದು. ಅಲ್ಲಿಯ ಜನರ ಮನೆಗಳೆಲ್ಲಾ ಬಿರುಕುಬಿಟ್ಟಿದ್ದು, ಅವರ ಮನೆಯಲ್ಲಿ ಇರಬೇಕೋ, ಬೇಡವೋ ಎಂದು ಯೋಚನೆ ಮಾಡತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ಇವತ್ತಿನ ದಿವಸ ಬಹಳಷ್ಟು ಜನಕ್ಕೆ ಹೊಡೆತ ಬಿದ್ದಿದೆ. ಯಾರು ಅಲ್ಲಿಗೆ ಹೋಗಿ ಅವರನ್ನು ಮಾತನಾಡಿಸುವವರು ಇಲ್ಲ. ಇವತ್ತು 'ಮ್ಯಾಕ್ಸ್' ಎಂದು ಒಂದು ಆಸ್ಪತ್ರೆ ಇದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಆ ಆಸ್ಪತ್ರೆಯ ಪಿ.ಆರ್.ಓ ಆದಂತಹ ಪೂಜಾ ಎಂ.ಬಿ.ಎ., ಮಾಡಿರತಕ್ಕಂಥವರನ್ನು ನಾವು ಮಾತನಾಡಿಸುವುದಕ್ಕೆ ಹೋದರೆ, ಆ ಹುಡುಗಿ ತತ್ತರಿಸಿ ಹೋಗುತ್ತಿದೆ. ಅವರು ಅಷ್ಟು ಭಯಾನಕ ಪರಿಸ್ಥಿತಿಯನ್ನು ನೋಡಿದ್ದಾರೆ. ಅಂತಹವರಿಗೆ ಸೂಕ್ತವಾದಂತಹ ರಕ್ಷಣೆಯನ್ನು ಕೊಡಬೇಕು. ಜೊತೆಗೆ ಚಿಕಿತ್ಸೆಯನ್ನು ಕೊಡಿಸುವಂಥ ಕೆಲಸ ಮಾಡಬೇಕು. ಅವರಿಗೆ ಏನಾದರೂ ಪರಿಹಾರವನ್ನು ಕೊಡತಕ್ಕಂಥ ಕೆಲಸ ಆಗಬೇಕು. ಅಲ್ಲಿ ಇರತಕ್ಕಂಥ ಮನೆಗಳು ಈಗ ಏನು ಡ್ಯಾಮೇಜ್ ಆಗಿವೆ, ಅವರಿಗೆಲ್ಲಾ ಸರ್ಕಾರ ಪರಿಹಾರವನ್ನು ಕೊಡತಕ್ಕಂಥ ಕೆಲಸ ಮಾಡುವುದರ ಜೊತೆಗೆ ಈ ತನಿಖೆಯನ್ನು ಮಾಡುವಂಥ ಕೆಲಸವನ್ನು ಮಾಡಬೇಕು. ಅಲ್ಲಿ ಯಾರಿಗೂ ಅಕ್ರಮವಾಗಿ ಗಣಿಗಾರಿಕೆ ಮಾಡುವುದಕ್ಕೆ ಬಿಡಬಾರದೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತಾ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸುತ್ತಿದ್ದೇನೆ. ಬಹುಶಃ ದಶಮಾನದಲ್ಲೇ ಕಂಡಂತಹ ಇಂತಹ ಘಟನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬಾರದಿತ್ತು ಎನ್ನತಕ್ಕಂಥದ್ದು ಎಲ್ಲರ ಮಾತು. ಆದರೆ, ಇದು ಎಂತಹ ಜಾಗದಲ್ಲಿ ನಡೆದಿದೆ? ಮಾನ್ಯ ಮುಖ್ಯಮಂತ್ರಿಗಳು ಇರತಕ್ಕಂಥ ಜಾಗ. ಅವರು ಎಷ್ಟೋ ವರ್ಷಗಳಿಂದ ಅಲ್ಲಿಂದಲೇ ಆಯ್ಕೆಯಾಗಿ ಬರುತ್ತಿದ್ದಾರೆ.  ಇಂತಹ ಘಟನೆಗಳಲ್ಲಿ ಎರಡು ಪ್ರಮುಖವಾದ ಇಲಾಖೆಗಳಿವೆ. ಮೊದಲನೆಯದಾಗಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ. ಎರಡನೆಯದು ಗೃಹ ಇಲಾಖೆ. ಇತ್ತೀಚೆಗೆ ಸ್ಫೋಟಕ ಆಗಿದ್ದರ ಹೊಣೆ ಗೃಹ ಇಲಾಖೆಯದ್ದು. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಬರುತ್ತದೆ. ಬಹುಶಃ ಇಂತಹ ಸ್ಫೋಟಕ ವಸ್ತುಗಳನ್ನು ತಂದು ಮಾರಾಟ ಮಾಡತಕ್ಕಂಥವರು ಎಷ್ಟು ವರ್ಷಗಳಿಂದ ಮಾರಾಟ ಮಾಡುತ್ತಿದ್ದಾರೆ? ಇವರು ಮಾಡಿರುವುದು ದೇಶ ದ್ರೋಹದ ಕೆಲಸ ಅಲ್ಲವೇ? ಅಲ್ಲಿ ಅನಧಿಕೃತವಾಗಿ ಸ್ಫೋಟಕವಾಗಿದೆ. ಅಧಿಕೃವಾಗಿ ನಡೆದಿಲ್ಲ. ಅವರಿಗೆ ಲೈಸೆನ್ಸ್ ಇಲ್ಲ. ಅಷ್ಟು ಲಾರಿಗಟ್ಟಲೆ ಆ ಸ್ಫೋಟಕ ವಸ್ತು ಬರುತ್ತಿದೆಯೆಂದರೆ, ಅವರ ಮೇಲೆ ಏಕೆ ದೇಶ ದ್ರೋಹದ ಕೇಸ್ ಹಾಕಬಾರದು? ಒಂದು ಕಡೆ ತಂದವರನ್ನು ಬಿಡಿ. ಯಾವ ರಾಜ್ಯದಿಂದ ಇಲ್ಲಿಯವರೆಗೆ ಬರುತ್ತಿದೆ ಅಲ್ಲಿ ಎಸ್.ಪಿ ಮತ್ತು ಡಿ.ಎಸ್.ಪಿ ಅಧಿಕಾರಿಗಳು, ಪೊಲೀಸ್ ಇಲಾಖೆ ಮತ್ತು ರೆವೆನ್ಯೂ ಇಲಾಖೆ ಏನಿತ್ತು, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದೊಂದು ಸಮಿತಿ ಇಲ್ಲವೇನು. ಆ ಸಮಿತಿಯವರ ಕೆಲಸವೇನು? ಅವರು ಅಲ್ಲಿ ಕುಳಿತುಕೊಂಡು ಮಾಡುತ್ತಿರುವುದು ಏನು? ಆ ಸಮಿತಿಗೆ ಜಿಲ್ಲೆಯ ಜಿಲ್ಲಾಧಿಕಾರಿ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ವರಿಷ್ಠಾಧಿಕಾರಿ ಸದಸ್ಯರಾಗಿರುತ್ತಾರೆ. ಉಪ ನಿರ್ದೇಶಕರು, ಹಿರಿಯ ಭೂ ವಿಜ್ಞಾನಿ ಸಹ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಅರಣ್ಯ ಇಲಾಖೆಯವರು ಸದಸ್ಯರಾಗಿರುತ್ತಾರೆ. ಪರಿಸರ ಮಾಲಿನ್ಯ ಇಲಾಖೆಯವರು ಸದಸ್ಯರಾಗಿರುತ್ತಾರೆ. ಪ್ರಾದೇಶಿಕ ಸಾರಿಗೆ ಆಯುಕ್ತರು, ಸಾರಿಗೆ ಇಲಾಖೆ ಇವರು ಸದಸ್ಯರಾಗಿರುತ್ತಾರೆ. ಹಾಗಾದರೆ, ಇವರೆಲ್ಲಾ ಜಿಲ್ಲೆಯಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದಾರೆ? ಯಾವ ಜಿಲ್ಲೆಯಿಂದ ಎಷ್ಟು ಸ್ಫೋಟಕ ವಸ್ತು ಬಂತು. ಅದು ಯಾವ ಮಾರ್ಗದಿಂದ ಬಂದಿತ್ತು. ಸರ್ಕಾರ ಅಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿದ್ದರೆ, ಮತ್ತೆ ಇನ್ನೊಂದು ಕಡೆ ಸ್ಫೋಟಕಗೊಳ್ಳುವುದು ಪ್ರಾರಂಭವಾಗಬಹುದು. ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ದಿಟ್ಟ ಕ್ರಮದಿಂದ ನೋಡಬೇಕಾಗುತ್ತದೆ. ಈ ರೀತಿ ದೇಶದಲ್ಲಿ ನಡೆಯತಕ್ಕಂಥ ವಿದ್ವಂಸಕ ಕೃತ್ಯಕ್ಕೆ ಈ ಗೃಹ ಇಲಾಖೆ ಕಾರಣೀಭೂತವಾಗುತ್ತಿದೆ. ಇದೇನು ಸಣ್ಣ ಕೆಲಸವೇನು?  ಸರ್ಕಾರದ ಪರವಾನಿಗಿ ಪಡೆಯದೇ ಸ್ಫೋಟಕ ವಸ್ತುವನ್ನು ನಮ್ಮ ರಾಜ್ಯಕ್ಕೆ ತರುತ್ತಿದ್ದಾನೆ. ಅದನ್ನು ಯಾರು ತರುತ್ತಿದ್ದಾನೊ ಗೊತ್ತಿಲ್ಲವೆಂದು ಹೇಳುತ್ತಿದ್ದೀರಿ. ಇಷ್ಟು ದೊಡ್ಡ ಪ್ರಮಾಣದಲ್ಲಿ ಸ್ಫೋಟಕ ವಸ್ತುವನ್ನು ತರುವುದಕ್ಕೆ ಯಾರು ಕಾರಣರು? ಅವನಿಗೆ ಹಣ ಬರುತ್ತಿದೆಯೆಂದರೆ, ಯಾವ ವಿದ್ವಂಸಕ ಕೃತ್ಯವೆಸಗಿ ಕೊಡುತ್ತಾನೆ? ಇದು ದೇಶದ್ರೋಹದ ಕೆಲಸ. ಇದಕ್ಕೆ ಹೊಣೆ ಹೊರುವವರು ಯಾರು? ಅಷ್ಟು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಾರ್ಮಿಕರು ಸತ್ತಿದ್ದಾರೆ. ನಾಲ್ಕು ಜಿಲ್ಲೆಯ ಜನ ಭಯಭೀತರಾಗಿದ್ದಾರೆ. ಸುಮಾರು ಒಂದೂವರೆ ಕಿಲೋಮೀಟರ್‌ವರೆಗೆ ಮನೆ–ಮಠಗಳು ಘಡಘಡ ನಡುತ್ತಿವೆ. ಇನ್ನೂ ಎಷ್ಟೋ ಜನರು ಆ ಭಯದಿಂದ ಹೊರಗಡೆ ಬಂದಿಲ್ಲ. ಇಂತಹ ದೊಡ್ಡ ವಿಧ್ವಂಸಕ ಕೃತ್ಯವೆಸಗಿರುವುದಕ್ಕೆ ಯಾರು ಹೊಣೆಗಾರರು? ಮಾನ್ಯ ಆಯನೂರು ಮಂಜುನಾಥ್‌ರವರೇ, ಎಲ್ಲರೂ ಸುಮ್ಮನೆ ಕುಳಿತುಕೊಳ್ಳುವುದೇ? ನಾವೆಲ್ಲಾ ಇಲ್ಲಿಗೆ ಪ್ರವಚನ ಕೇಳಿಕೊಂಡು ಹೋಗುವುದಕ್ಕೆ ಬಂದಿದ್ದೇವೆಯೇ? ಇದಕ್ಕೆಲ್ಲಾ ಯಾರು ಹೊಣೆ? ಇದಕ್ಕೆ ಸರ್ಕಾರ ಹೊಣೆಯೇ? ಇದನ್ನು ಯಾರಾದರೂ ಹೊರಬೇಕಲ್ಲವೇ? ನೀವು ಪ್ರವಚನ ಹೇಳುವುದು, ನಾವು ಕೇಳುವುದು ಮತ್ತು ಮೃದುವಾಗಿ ಮಾತನಾಡೋಣವೆ? ನೀವು ಬೇಡ ಮತ್ತು ನಾವು ಬೇಡ, ನಾವೆಲ್ಲರೂ ಸೇರಿ ಹೋಗೋಣವೆ? ನಾವು ಇಲ್ಲಿ ಏತಕ್ಕೆ ಇದ್ದೇವೆ. ಯಾವುದೇ ಪಕ್ಷದವರು ಆಗಿರಲಿ. ಅವರು ಎಂತಹ ದೊಡ್ಡ ವ್ಯಕ್ತಿಯೇ ಆಗಿರಲಿ. ಮೊದಲು ಸರ್ಕಾರ ಈ ಹೊಣೆಯನ್ನು ಹೊರಬೇಕು. ಅದರ ಮೇಲೆ ಕ್ರಮ ಕೈಗೊಳ್ಳತಕ್ಕಂಥ ಕೆಲಸ ಆಗಬೇಕು. ಸರ್ಕಾರ ಹೊಣೆ ಹೊರುವುದಕ್ಕೆ ಏನಾಗಿದೆ? ಇವರು ಏಕೆ ಹೊಣೆ ಹೊರುವುದಿಲ್ಲ. ಸಣ್ಣಸಣ್ಣ ವಿಧ್ವಂಸಕ ಕೃತ್ಯಗಳಾದಾಗೆಲ್ಲಾ ಹೊಣೆ ಹೊತ್ತಿದ್ದೀರಿ. ಈಗ ಇಷ್ಟೆಲ್ಲಾ ಅನಾಹುತಗಳಾದಾಗ ಹೊಣೆ ಹೊರುವುದಕ್ಕೆ ಆಗುವುದಿಲ್ಲವೇ? ನೀವು ಹೊಣೆ ಹೊರಬಾರದೆ? ಇದು ತಪ್ಪು ಎಂದು ಹೇಳುವುದಕ್ಕೆ ನಿಮಗೆ ತೊಂದರೆಯೇ? ನೀವೇಕೆ ಹೊಣೆ ಹೊರುವುದಿಲ್ಲ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರ ಬಹಳ ನಿರ್ಧಾಕ್ಷಿಣ್ಯವಾಗಿ ಯಾರೇ ತಪ್ಪಿತಸ್ಥರಿದ್ದರೂ ಕೂಡ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದೇವೆ. ಈಗ ಕಾಲ ಕಾಲಕ್ಕೆ ವಿರೋಧಪಕ್ಷದವರು ಅಧಿಕಾರಲ್ಲಿದ್ದಾಗಲೂ ಕೂಡ ಹಾಗೂ ನಾವು ಅಧಿಕಾರದಲ್ಲಿರುವಾಗ ಇಂತಹ ಅನಾಹುತಗಳಾದಾಗ ಯಾವುದೇ ಸರ್ಕಾರ ಜವಾಬ್ದಾರಿಯುತವಾದಂತಹ ಕ್ರಮವನ್ನು ಕೈಗೊಳ್ಳಬೇಕಾಗಿರುವುದು ಸರ್ಕಾರದ ಹೊಣೆ. ಅದರಲ್ಲಿ ಏನೂ ಗೊಂದಲವಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾನು ಯಾವುದೋ ಕಲ್ಲು ಮತ್ತು ಮಣ್ಣಿನ ಬಗ್ಗೆ ಮಾತನಾಡುತ್ತಿಲ್ಲ. ಈ ರಾಜ್ಯದಲ್ಲಿ ವಿಧ್ವಂಸಕ ಕೃತ್ಯವೆಸಗುವಂಥ ಸ್ಫೋಟಕ ಟನ್‌ಗಟ್ಟಲೇ ಬರುತ್ತಿದೆ. ಕಣ್ಣು ಮುಚ್ಚಿಕೊಂಡು ಕುಳಿತುಕೊಂಡರೆ ಏನಾಗುತ್ತದೆ ಸ್ವಾಮಿ. ಇದರ ಹೊಣೆಯನ್ನು ನೀವು ಹೊರುವುದಕ್ಕೆ ಆಗುವುದಿಲ್ಲವೇ? ಇದರ ಹೊಣೆ ಹೊತ್ತು, ನಾವು ಮಾಡುತ್ತೇವೆಂದು ಹೇಳಿ. ಹೌದು. ಎಲ್ಲಾ ಸರ್ಕಾರಗಳು ಇದ್ದಾಗಲೂ ಇಂತಹ ಘಟನೆಗಳು ನಡೆಯುತ್ತಿತ್ತು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಕೂಡ ನಡೆದಿದೆ. ನಾವು ಹೊಣೆ ಹೊರುತ್ತೇವೆಂದು ಹೇಳುವುದಕ್ಕೆ ನಿಮಗೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆಗುವುದಿಲ್ಲವೇ? ಮಾನ್ಯ ಸಭಾಪತಿಯವರೇ, ಇದರಲ್ಲಿ ಭಾರಿ ಅನಾಹುತ ಆಗತಕ್ಕಂಥದ್ದು ತಪ್ಪಿದೆ. ಆದರೆ ಇದರ ಹೊಣೆಯನ್ನು ಈ ಸರ್ಕಾರ ಹೊರಲೇಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಬಿ.ತಿಮ್ಮಾಪೂರ್‌ರವರು ಮಾತನಾಡುವುದು ಒಪ್ಪುತ್ತೇವೆ. ಅವರು ಅಕ್ಷರಶಃ ಸತ್ಯವಾದಂತಹ ಮಾತುಗಳನ್ನು ಆಡುತ್ತಿದ್ದಾರೆ. ಈ ಸರ್ಕಾರದ ಆಡಳಿತದ ಅವಧಿಯಲ್ಲಿ ಇಂತಹ ಒಂದು ಭಾರಿ ಅನಾಹುತವಾಗಿದೆ. ನಾವೆಂದೂ ಕೇಳರಿಯದ, ಕಂಡರಿಯದಂತಹ ಒಂದು ಸ್ಫೋಟವಾಗಿದೆ. ಶಿವಮೊಗ್ಗ ಸೇರಿದಂತೆ ಒಟ್ಟು ಆರು ಜಿಲ್ಲೆಗಳಲ್ಲಿ ಕಂಪನ ಆಗಿದೆ. 100 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಭೂಮಿ ಅದುರಿದೆ. ಇಂತಹ ಸಂದರ್ಭದಲ್ಲಿ ಈ ಸರ್ಕಾರ ಜವಾಬ್ದಾರಿ ಹೊರಬೇಕೆಂದು ಹೇಳುತ್ತಿದ್ದಾರೆ. ಆಯಿತು, ನಿಮ್ಮ ಅವಧಿಯಲ್ಲಿ ಆಗಿದೆ, ಅದರಲ್ಲೇನಿದೆ, ಜವಾಬ್ದಾರಿ ಹೊತ್ತುಕೊಳ್ಳಿ. ಆ ಹೊಣೆಗಾರಿಕೆ ಹೊತ್ತು, ತನಿಖೆಯನ್ನು ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಲಾಗುವುದೆಂದು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಸಭಾನಾಯಕರಾಗಿ ಕೆಲಸ ಮಾಡಿದವರು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, the Government should shoulder the responsibility. ಈ ಸಂದರ್ಭದಲ್ಲಿ ಇಂತಹ ಘಟನೆ ನಡೆದಿದೆ. ಜವಾಬ್ದಾರಿ ಹೊತ್ತು, ಯಾರು ತಪ್ಪಿತಸ್ಥರಿದ್ದಾರೆಂದು ಸರಿಯಾದ ತನಿಖೆ ಮಾಡಿ. ತಪ್ಪಿಸ್ಥರಿಗೆ ಶಿಕ್ಷೆ ಕೊಡುತ್ತೇವೆ, ಇನ್ನು ಮುಂದೆ ಇಂತಹ ಘಟನೆಗಳು ಆಗದಂತೆ ನೋಡಿಕೊಳ್ಳುತ್ತೇವೆಂದು ಹೇಳುವುದು ಸರ್ಕಾರದ ಆಧ್ಯ ಕರ್ತವ್ಯವಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸರಿ ಒಪ್ಪಿದ್ದೇವೆ. ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ವಿಸ್ತಾರವಾಗಿ ಮಾತನಾಡಿ, ಶಿಷ್ಟರ ರಕ್ಷಣೆಯಾಗಬೇಕು. ದುಷ್ಟರಿಗೆ ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು. ಪ್ರಾಮಾಣಿಕವಾದ ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿ ನಿಯೋಜನೆ ಮಾಡಬೇಕೆಂದು ಅವರು ಹೇಳಿದರು. ಇದಕ್ಕೆ ಸರ್ಕಾರ ಸಂಪೂರ್ಣವಾಗಿ ಒಪ್ಪಿದೆ. ಸರ್ಕಾರ ಉತ್ತರ ಕೊಡುವಾಗ ಮಾಹಿತಿಯನ್ನು ಕೊಡುತ್ತೇವೆ. ಆದರೆ, ಈಗ ಮಾನ್ಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪೂರ್‌ರವರು ಹೇಳುವಂತಹ ಈ ದುರಂತಗಳಿಗೆ ಸರ್ಕಾರ ಹೊಣೆ ಹೊರಬೇಕೆ ಎನ್ನುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

**(54)01.02.2021/5.00/ಎಂ.ಎಂ-ಆರ್.ಎನ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ನಾನು ಚರ್ಚೆಗೆ ಹೇಳಿದೆ. ಇದಕ್ಕೆ ಸರ್ಕಾರ ಇನ್ನೂ ಉತ್ತರ ಕೊಟ್ಟಿಲ್ಲ. ಇಂತಹ ದುರಂತಗಳು ಆಗಲೇಬಾರದು. ಆದ ತಕ್ಷಣ ಆಳುವ ಸರ್ಕಾರ ಅದರ ಮೇಲೆ ತಕ್ಷಣವೇ ಸರಿಯಾದ ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು. ಎಲ್ಲಿ ತಪ್ಪಾಗಿದೆ ಅದನ್ನು ಸರಿಪಡಿಸಬೇಕು. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಯಾರಿಗೆ ಅನ್ಯಾಯವಾಗಿದೆ ಅವರ ರಕ್ಷಣೆಗೆ ಇರಬೇಕು, ಎಲ್ಲಿ ವ್ಯವಸ್ಥೆಗಳು ಹಾಳಾಗಿದೆ ಅಲ್ಲಿ ದಕ್ಷ ಅಧಿಕಾರಿಗಳನ್ನು ನಿಯೋಜನೆ ಮಾಡಬೇಕು ಎನ್ನುವ ನಿಮ್ಮ ಮಾತನ್ನು ಸರ್ಕಾರ ಒಪ್ಪುತ್ತದೆ. ತಾವು ಮುಂದುವರೆಸಿ, ಅಡ್ಡಿಯಿಲ್ಲ.

**ಶ್ರೀ ಆರ್.ಬಿ. ತಿಮ್ಮಾಪೂರ:-** ತಾವು ಒಳ್ಳೆಯ ಸಲಹೆ ಕೊಡುತ್ತಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಲಹೆ ಕೊಟ್ಟಿದ್ದು ನೀವು ನಾನಲ್ಲ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಹೊಣೆ ಹೊರಬೇಕೆಂದು ಹೇಳುತ್ತೀರಿ, ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುತ್ತೀರಿ. ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಹೇಳಿ.

**ಶ್ರೀ ಆರ್.ಬಿ. ತಿಮ್ಮಾಪೂರ:- (ಗೊಂದಲ)** ವಿಧಾನಸೌಧದವರೆಗೆ ಬಂದಿದೆ. (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಿಮ್ಮ ಕಲಾತ್ಮಕವಾದ ಮಾತುಗಳಿಗೆ ನಾನು ಗೌರವ ಕೊಡುತ್ತೇನೆ.

**ಶ್ರೀ ಆರ್.ಬಿ. ತಿಮ್ಮಾಪೂರ:- (ಗೊಂದಲ)** ಇದರಲ್ಲಿ ರಾಜಕಾರಣಿಗಳಿದ್ದಾರೆ ಎಂಬಂತಹ ಮಾತನ್ನು ಹೇಳಿದ್ದೀರಿ. ವಿಧಾನಸೌಧದವರೆಗೆ ಬಂದಿದೆ, ನಾನು ಅಸಹಾಯಕ ಎನ್ನುವ ಮಾತನ್ನು ಮಾನ್ಯ ಮಂಜುನಾಥ ಸಾಹೇಬರು ಹೇಳಿದ್ದಾರೆ. ಏನು ಮಾತನಾಡುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಿಮ್ಮ ಕಲಾತ್ಮಕವಾದ ಮಾತುಗಳಿಗೆ ನಾನು ಗೌರವ ಕೊಡುತ್ತೇನೆ. ಆದರೆ ವಾಸ್ತವಿಕ ಇಷ್ಟೇ. ಮಾನ್ಯ ಹರಿಪ್ರಸಾದ್‌ರವರೇ ತಾವೇ ನೋಡಿದ್ದೀರಿ. ಎಷ್ಟೋ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದುರಂತಗಳು ನಡೆಯುತ್ತಿರುತ್ತವೆ ಸರ್ಕಾರ ಆ ದುರಂತಗಳನ್ನು ಮಾಡಿಸಿರುವುದಿಲ್ಲ. ಆನಂತರ ದುರಂತಕ್ಕೆ ಸರ್ಕಾರ ಶಿಕ್ಷೆ ಕೊಡಬೇಕಾದ ಜವಾಬ್ದಾರಿ ಇದೆ. ನಿಮ್ಮ ಮಾತಿಗೆ ನಾನು ಗೌರವ ಕೊಡುತ್ತೇನೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಎಷ್ಟೋ ಜನ ಎಲ್ಲಿಯೋ ರೈಲು ಹಳಿ ತಪ್ಪಿದಾಗ ರಾಜೀನಾಮೆ ಕೊಟ್ಟವರು ಇದ್ದಾರೆ. ನೀವು ಕೊಡುವುದಿಲ್ಲ ಬಿಡಿ, ಕೊಡಬೇಡಿ, ನೀವು ಹೊಣೆಯನ್ನು ಹೊರುವುದಕ್ಕೆ ಹೋಗಬೇಡಿ. ಏಕೆಂದರೆ ನಿಮಗೆ ಆ ಹೊಣೆ ಹೊರುವುದು ಬೇಡವಾಗಿದೆ. ಆದರೆ ಜನತೆಗೆ ಹೇಳಬೇಕಲ್ಲವೇ? ಫೋಟೋದಲ್ಲಿದ್ದಾರೆ ನೋಡಿ, ರೈಲು ಹಳಿ ತಪ್ಪಿ ಬಿದ್ದಿದ್ದಕ್ಕೆ ರಾಜೀನಾಮೆ, ಆಪಾದನೆ ಬಂದಾಗ ಒಂದು ರಾಜೀನಾಮೆ; ಮುಖ್ಯಮಂತ್ರಿಗಳಾಗಿ ನಿಮ್ಮ ಜಿಲ್ಲೆಯಲ್ಲಿಯೇ ನಡೆಯುತ್ತಿದೆ. 15, 20, 30 ವರ್ಷಗಳಿಂದ ಅಲ್ಲಿ ಅಧಿಕಾರದಲ್ಲಿದ್ದೀರಿ. ನಿಮಗೆ ಗೊತ್ತಿಲ್ಲವೇ? ಏನೂ ಗೊತ್ತಿರಲಾರದೇ ನಡೆಯುತ್ತಿದೆಯೇ? ಏನು ಸ್ವಾಮಿ ನಿಮ್ಮ ಮಾತಿನ ಅರ್ಥ? ನೀವು ಯಾರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಹೇಳುತ್ತೀರಿ? ಸಭಾನಾಯಕರಿಗೇ ಹೇಳಬೇಕಲ್ಲವೇ, ನಾನು ಯಾರಿಗೆ ಹೇಳಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಒಪ್ಪಿಕೊಂಡೆ, ಈಗ ಮೌಲ್ಯಾಧಾರಿತ ರಾಜಕಾರಣ ಮಾಡಿದವರು ಆಪಾದನೆ ಬಂದಾಗ ರಾಜೀನಾಮೆ ಕೊಟ್ಟಂತಹ ಉದಾಹರಣೆಗಳನ್ನು ನಾವು ಕರ್ನಾಟಕದಲ್ಲಿ ಕಂಡಿದ್ದೇವೆ ಇಲ್ಲವೆಂದಲ್ಲ. ಈಗ ನೀವೂ ರಾಜ್ಯವನ್ನು ಆಳಿದವರು, ನಾವೂ ರಾಜ್ಯವನ್ನು ಆಳಿದವರು. ಆಪಾದನೆ ಬಂದಾಗ ಯಾರ್ಯಾರು ರಾಜೀನಾಮೆ ಕೊಟ್ಟಿದ್ದಾರೆ ಎಂಬ ಪಟ್ಟಿ ತೆಗೆಯಿರಿ. ವಾಸ್ತವಿಕವಾದ ಒಂದು ವಿಚಾರವನ್ನು ಮಾನ್ಯ ಹರಿಪ್ರಸಾದ್‌ರವರೇ, ತಾವು ಒಂದು ವಿಚಾರವನ್ನು ಹೇಳಬೇಕು.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾನಾಯಕರೇ ನೀವು ರಾಜೀನಾಮೆ ಕೊಡುವುದಕ್ಕೆ ಹೋಗಬೇಡಿ ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಒಂದು ನಿಮಿಷ ಇರಿ. ಇಂತಹ ಗಂಭೀರವಾದ ಚರ್ಚೆಯನ್ನು . . .

**ಶ್ರೀ ಆರ್.ಬಿ. ತಿಮ್ಮಾಪೂರ:–** ರಾಜೀನಾಮೆ ಕೊಡುತ್ತೀರಾ? ನೀವು ಅಧಿಕಾರಕ್ಕೆ ಬರುವುದಕ್ಕೆ ಎಂತಹ ಮಾರ್ಗ ಹಿಡಿದುಕೊಂಡು ಬಂದಿದ್ದೀರಿ ಎನ್ನುವುದು ನಮಗೆ ಗೊತ್ತಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ಚರ್ಚೆಯನ್ನು ವಿರೋಧಪಕ್ಷದವರು ಕೈಗೆತ್ತಿಕೊಂಡಿದ್ದಾರೆ. ಇದು ನಿಜಕ್ಕೂ ಬಹಳ ಗಂಭೀರವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆಯಾಗಿದೆ ಇದರಲ್ಲಿ ಗೊಂದಲವಿಲ್ಲ. ನಾವು ಅದಕ್ಕೆ ಏನೇನು ತಪ್ಪುಗಳು ನಡೆದಿವೆ, ಏನೇನು ದುರಂತಗಳು ನಡೆದಿವೆ, ಏನೇನು ಕ್ರಮ ಕೈಗೊಳ್ಳಬೇಕೆಂದು ಏನು ಹೇಳುವುದಕ್ಕೆ ಹೊರಟಿದ್ದೀರಿ ಎಲ್ಲರೂ ಬಹಳ ಅರ್ಥಗರ್ಭಿತವಾಗಿ ಹೇಳಿದ್ದೀರಿ. ಸರ್ಕಾರ ನಿಮಗೆ ಸ್ಪಂದನೆ ಕೊಡುತ್ತದೆ ನಿಮ್ಮ ಮಾತನ್ನು ಮುಂದುವರೆಸಿ. ದಯವಿಟ್ಟು ಆಪಾದನೆಗಳನ್ನು ಮಾಡಿದರೆ ಏನು ಹೇಳುವುದು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾನಾಯಕರೇ, ಅವರು ರಾಜೀನಾಮೆ ಕೊಡಿ ಎಂದು ಹೇಳುತ್ತಾರಲ್ಲವೇ? ಇಂದಿನ ದಿನಮಾನಗಳಲ್ಲಿ ಯಾರೂ ರಾಜೀನಾಮೆ ಕೊಡುವುದಿಲ್ಲ. ನೀವು ಹೆದರುವುದಕ್ಕೆ ಹೋಗಬೇಡಿ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, Hublot watch ಹಗರಣದಲ್ಲಿ ಮಾನ್ಯ ಸಿದ್ದರಾಮಯ್ಯನವರು ರಾಜೀನಾಮೆ ಕೊಟ್ಟರಲ್ಲವೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** **(ಗೊಂದಲ)** ಆ ರೀತಿ ಏನಾದರೂ party with a difference ಬರುತ್ತದೆಯೇ ಎಂದು ಕೇಳುತ್ತಿದ್ದಾರೆ ಅಷ್ಟೇ (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, party with a difference ಎಂದು ಹೇಳಿದ್ದು ಅವತ್ತೇ, ಅದರಲ್ಲೇನೂ ವಾದ ಇಲ್ಲ. ರಾಷ್ಟ್ರೀಯತೆ ವಿಚಾರಕ್ಕೆ ಸಂಬಂಧಪಟ್ಟಂತೆ ಅಭಿವೃದ್ಧಿ ವಿಚಾರಗಳಲ್ಲಿ, ಕೆಲವು ನಿರ್ಧಾರಗಳಲ್ಲಿ party with a difference. ಇವತ್ತು ಅದರಲ್ಲೇನೂ ಗೊಂದಲವಿಲ್ಲ. ನೀವು ಹೇಳಿದ ಹಾಗೆ ನಾವು ಕೇಳಬೇಕೆಂಬುದು ಸರಿಯಲ್ಲ. ದಯಮಾಡಿ ತಾವು ಚರ್ಚೆಯನ್ನು ಮುಂದುವರೆಸಿ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾನಾಯಕರೇ, ರಾಷ್ಟ್ರೀಯತೆ ಯಾರಪ್ಪನ ಸ್ವತ್ತು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾನು ನಿಮ್ಮದಲ್ಲ ಎಂದು ಹೇಳಿದೆನೇ?

**ಶ್ರೀ ಆರ್.ಬಿ. ತಿಮ್ಮಾಪೂರ:-** ನಮ್ಮದೂ ಅಷ್ಟೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇಬ್ಬರದ್ದೂ ಸ್ವತ್ತು ಇದೆ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಯಾರಪ್ಪನ ಸ್ವತ್ತಲ್ಲ, ನಾನು ಈ ದೇಶದಲ್ಲಿದ್ದೇನೆ. ಯಾರಪ್ಪನ ಸ್ವತ್ತಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅಪ್ಪ, ಅಮ್ಮ ಎಲ್ಲಾ ಹೇಳಬೇಡಿ. ನಾವು ಉತ್ತರ ಕೊಡಬೇಕಾಗುತ್ತದೆ. ಗಣಿಗೆ ಸಂಬಂಧಪಟ್ಟಂತೆ ಚರ್ಚೆ ಪ್ರಾರಂಭ ಮಾಡಿ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಸಮಿತಿ ಇದೆ. ರಾಜ್ಯದ ತುಂಬಾ ಎಷ್ಟು ಸಲ ಮೀಟಿಂಗ್ ಮಾಡಿದ್ದಾರೆ? ಇದೊಂದು ಟಾಸ್ಕ್ ಫೋರ್ಸ್ ಸಮಿತಿ. ಎಷ್ಟು ಸಲ ಮೀಟಿಂಗ್ ಮಾಡಿದೆ? ಇವರು ಒಬ್ಬರೂ ಮೀಟಿಂಗ್ ಮಾಡುವುದಿಲ್ಲ. ಮಂಜೂರಾತಿ ಕೊಡುವುದಕ್ಕೆ ಫೈಲ್ ಬರುತ್ತವಲ್ಲಾ ಅವತ್ತಿನ ದಿವಸ ಎಷ್ಟು ಬಂದಿವೆ ಎಂಬುದನ್ನು ನೋಡಿ ಲೆಕ್ಕ ಹಾಕಿ ಅವತ್ತು ಮೀಟಿಂಗ್ ಮಾಡುತ್ತಾರೆ. ಸ್ಫೋಟಕ ವಸ್ತು ಎಲ್ಲಿತ್ತು ಎಂಬುದನ್ನು ಯಾರಾದರೂ ಹೋಗಿ ನೋಡಿದ್ದಾರೆಯೇ? ನಿಮ್ಮ ಗೃಹ ಮಂತ್ರಿಯೂ ಇಲ್ಲ, ಗಣಿಗಾರಿಕೆ ಮಂತ್ರಿಯೂ ಇಲ್ಲ ಅವರು ಎಲ್ಲಿ ಹೋಗಿದ್ದಾರೆ? ಪಾಪ ನೀವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಒದ್ದಾಡುತ್ತೀರಿ. ಅವರನ್ನು ಕರೆಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ತಿಮ್ಮಾಪೂರರವರೇ, ಅವರು ಇದ್ದಾರೆ. ಒಂದೈದು ನಿಮಿಷ ಆಚೆ ಹೋಗಿ ಬರಬಾರದೇ? ನೀವು ಸುಮ್ಮನೇ ಏತಕ್ಕೆ ಹುಡುಕಾಡುತ್ತೀರಿ? ನೀವು ಹೇಳಿ ಎಲ್ಲವೂ ರೆಕಾರ್ಡ್‌ಗೆ ಹೋಗುತ್ತಿದೆ. ಮಾನ್ಯ ಸಭಾಪತಿಯವರೇ, ಅವರನ್ನು ಮಾತನಾಡುವುದಕ್ಕೆ ಹೇಳಿ. ತಾವು ಹೇಳಿದಂತೆ ಎಲ್ಲರೂ ಮಾತನಾಡಿಯಾಗಿದೆ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾನಾಯಕರೇ, ಸುಮ್ಮನೇ ಕುಳಿತುಕೊಳ್ಳಿ ನಾನು ಹೇಳುವುದನ್ನು ಹೇಳುತ್ತೇನೆ. ನಾವು ಕೇಳುವವರನ್ನು ಕೇಳುತ್ತೇನೆ. ಪಾಪ ನೀವು ಸಭಾನಾಯಕರು, ನಮ್ಮ ಜಿಲ್ಲೆಯವರು, ನಾವು ಅಲ್ಲಿಯೇ ಕುಳಿತುಕೊಂಡು ಹೇಳಬಹುದು ಆದರೆ ಇಲ್ಲಿ ಹೇಳಬೇಕಲ್ಲವೇ?

**(ಈ ಸಂದರ್ಭದಲ್ಲಿ ಗಣಿ ಮತ್ತು ಭೂ ವಿಜ್ಞಾನ ಸಚಿವರು ಸದನಕ್ಕೆ ಆಗಮಿಸಿದರು)**

ಪಾಪ ಅವರು ನಿನ್ನೆ ಮೊನ್ನೆ ತಾನೇ ಬಂದಿದ್ದಾರೆ. ಮುಖ್ಯಮಂತ್ರಿಗಳ ನಾಡಿನಲ್ಲಿ ಅವರೇನು ಮಾತನಾಡಬಹುದು? ಮುಖ್ಯಮಂತ್ರಿಯವರ ನಾಡಿನಲ್ಲಿ ನಡೆದಂತಹ ಘಟನೆಗೆ ನಿನ್ನೆ ಬಂದಂತಹ ಮಂತ್ರಿಗಳು ಏನು ಹೇಳಬಹುದು?

**ಶ್ರೀ ಮುರುಗೇಶ್ ನಿರಾಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, explosive blast ಆಗುವುದು ಮುಖ್ಯಮಂತ್ರಿಗಳ ಜಿಲ್ಲೆಯೆಂದು ಆಗಿಲ್ಲ. ಬೇರೆ ಬೇರೆ ಜಿಲ್ಲೆಗಳಲ್ಲಿ ಕೂಡ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ರಾಜ್ಯದ ಮಂತ್ರಿಗಳು ತಾವು, ನಾಡಿನ ಮುಖ್ಯಮಂತ್ರಿಗಳು ಆ ಜಿಲ್ಲೆಯವರು. ನೀವು ಅವರ ಜೊತೆ ಮಾತನಾಡಬೇಕಾಗುತ್ತದೆ. ಆ ವಿಷಯದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ನಿಮಗಿಂತ ಅವರು ಬಹಳ ಡೀಪ್ ಆಗಿದ್ದಾರೆ, ಎಷ್ಟೋ ವರ್ಷಗಳ ಮೇಲೆ ಆಯ್ಕೆಯಾಗಿ ಬಂದಿದ್ದಾರೆ. ಅವರು ದಿಢೀರನೇ ಮುಖ್ಯಮಂತ್ರಿಯಾದವರಲ್ಲ. ಈ ರಾಜ್ಯದಲ್ಲಿ ಎಷ್ಟು ಅಕ್ರಮಗಳು ನಡೆಯುತ್ತಿವೆ? ಅಕ್ರಮಗಳ ಬಗ್ಗೆ ತಾವು ಏನು ಕ್ರಮ ಕೈಗೊಳ್ಳಬೇಕೆಂಬ ಯೋಜನೆಯಿದೆ? ಒಟ್ಟಾರೆ ಪೊಲೀಸ್ ಇಲಾಖೆ, ನೀವು, ಈ ರಾಜ್ಯದಲ್ಲಿ ನಿಮ್ಮ ಸಮಿತಿ ಯಾವ್ಯಾವುದು ಇದೆ, ಜಿಲ್ಲೆಯಲ್ಲೊಂದು ಟಾಸ್ಕ್ ಫೋರ್ಸ್ ಸಮಿತಿ ಇದೆಯಲ್ಲ ಹಾಗೆ ಅರಣ್ಯ, ಗಣಿಗಾರಿಕೆಗಳಿಗೆ ಸಂಬಂಧಿಸಿದ ಸಮಿತಿ ಇದೆಯೇ? ಸಮಿತಿ ಇದ್ದರೆ ಯಾವಾಗ ಮೀಟಿಂಗ್‌ಗಳನ್ನು ಮಾಡುತ್ತಿದ್ದಾರೆ? ಅಲ್ಲಿ ಏನೇನು ಕ್ರಮಗಳಾಗಿವೆ ಎನ್ನುವುದನ್ನು ನೀವು ತಿಳಿಸಬೇಕಾಗುತ್ತದೆ. ಎಂತಹ ಸ್ಫೋಟಕ ಇತ್ತು ಎನ್ನುವುದನ್ನು ವರ್ಣನೆ ಮುಖಾಂತರ ಹಲವಾರು ಜನರು ಹೇಳಿದ್ದಾರೆ. ನಾನು ಗಣಿಗಾರಿಕೆಗಿಂತಲೂ ಹೆಚ್ಚಾಗಿ ಆ ಸ್ಫೋಟಕ ವಸ್ತು ಯಾವ ರೀತಿ ಬಂತು ಎನ್ನುವುದನ್ನು ಗೃಹ ಸಚಿವರಾದ ಬೊಮ್ಮಾಯಿ ಸಾಹೇಬರು ಹೇಳುತ್ತಾರೆಂದು ತಿಳಿದುಕೊಂಡಿದ್ದೆ. ಅವರ ಹೇಳಿಕೆ ಹೀಗಿದೆ, "ಕಲ್ಲು ಗಣಿಗಾರಿಕೆಯಲ್ಲಿ ಇಂತಹ ಅವಘಡಗಳು ಪದೇ ಪದೇ ಮರುಕಳಿಸುತ್ತಿರುತ್ತವೆ. ಅದರ ಹಿನ್ನೆಲೆಯಲ್ಲಿ ಅನುಮತಿಯನ್ನು ಕೊಡುವ ಬಗ್ಗೆ ವಿಚಾರಣೆ ಮಾಡುತ್ತೇವೆ, ಹೊಸ ಕಾನೂನನ್ನು ತರುತ್ತೇವೆ". ತಮ್ಮ ಇಲಾಖೆಯದ್ದು ಏನು ಕೆಲಸ? ಮಾನ್ಯ ಗೃಹ ಸಚಿವರು ಸ್ಫೋಟಕ ವಸ್ತು ಹೇಗೆ ಬಂದದ್ದು? ನಾವಿಲ್ಲಿ ಗಣಿಗಾರಿಕೆಗೆ ಒತ್ತು ಕೊಡುತ್ತಿದ್ದೇವೆ. ಸ್ಫೋಟಕ ವಸ್ತು ಹೇಗೆ ಬಂತು? ಅದಕ್ಕೆ ಗೃಹ ಸಚಿವರ ಮಾತೇನು? ಅದು ಗೃಹ ಸಚಿವರಿಗೆ ಸಂಬಂಧವಿಲ್ಲವೇ? ಅದು ತಮಗೆ ಬರುತ್ತದೆಯೋ ಅಥವಾ ಗೃಹ ಸಚಿವರಿಗೆ ಬರುತ್ತದೆಯೋ?

**ಶ್ರೀ ಮುರುಗೇಶ್ ನಿರಾಣಿ:–** ಅದನ್ನು ನಾನು ಮಾತನಾಡುವಾಗ ಹೇಳುತ್ತೇನೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ನಾನು ಹೇಳಿದೆ. Paper Statement ನಲ್ಲಿ ಬಂದಿದೆ. ಅವರು ನಿಮ್ಮ ಇಲಾಖೆ ಬಗ್ಗೆ ಹೇಳಿದ್ದಾರೆ ತಮ್ಮ ಇಲಾಖೆಯ ಬಗ್ಗೆ ಏನೂ ಹೇಳಿಲ್ಲ. ನಾವು ಅಲ್ಲಿಂದ ಇಲ್ಲಿಯವರೆಗೆ ಎಸ್.ಪಿ., ಯಾರಿದ್ದಾರೆ, ಡಿ.ಸಿ., ಯಾರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ಅದರ ಹೊಣೆಯನ್ನು ತಾನು ಹೊರುತ್ತೇನೆ ಎಂದು ಹೇಳಬೇಕಾಗಿತ್ತು. ಅಕ್ರಮ ಗಣಿಗಾರಿಕೆ ನಡೆಯುತ್ತಿದೆ, ಅಲ್ಲಿ ಕಲ್ಲು ತೆಗೆಯುತ್ತಾರೆ, ಅದಕ್ಕೊಂದು ಹೊಸ ಕಾನೂನನ್ನು ತರುವುದಕ್ಕೆ ಒಬ್ಬರನ್ನು ಮಂತ್ರಿ ಮಾಡಿದ್ದೀರಲ್ಲವೇ? ನಾನು ಹೇಳುತ್ತೇನೆ, ಆದಷ್ಟು ತೀವ್ರಗತಿಯಲ್ಲಿ ಸ್ಫೋಟಕ ವಸ್ತುಗಳು ಈ ರಾಜ್ಯದಲ್ಲಿ ಬರಲಾರದ ರೀತಿಯಲ್ಲಿ ಮಾಡಿ. ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶದ್ರೋಹದ ಕೆಲಸ. ಭಾರತದ ಸಂಪತ್ತು ರಾಜಸ್ವಕ್ಕೆ ಬರಲಾರದಂತಹ ದರೋಡೆಕೋರರು ಒಂದು ಕಡೆ, ಸ್ಫೋಟಕ ತಂದು ಅದನ್ನು ಹೊಡೆಯುವವರು ಒಂದು ಕಡೆ ಇದ್ದಾರೆ. ಎಂತೆಂತಹ ಭಯೋತ್ಪಾದಕರಿದ್ದಾರೆ ನೋಡಿ. ರಾಜಸ್ವವನ್ನು ನೀವು ಅಕ್ರಮ ಸಕ್ರಮ ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಹಣ ಬರುತ್ತದೆಂದು ಆ ರಾಜಸ್ವವನ್ನು ತಪ್ಪಿಸಿದ್ದೀರಲ್ಲಾ; ಅವರ ಮೇಲೆ ಯಾವ ಕ್ರಮ ಕೈಗೊಂಡು ನೀವು ಅಕ್ರಮ ಸಕ್ರಮ ಮಾಡುತ್ತೀರಿ? ಅವರದ್ದೇನು 'ಬಾರಾ ಕೂನ್ ಮಾಫ್'? ಅಕ್ರಮ ಸಕ್ರಮವೆಂದರೆ ಏನು? ಬಡವರ ಮನೆಗೆ 2-3 ಗುಂಟೆ ಭೂಮಿಯನ್ನು ಅಕ್ರಮ ಸಕ್ರಮ ಮಾಡುತ್ತಾರೆಂದು ನಮಗೆ ಗೊತ್ತಿದೆ. ದೇಶದ ಸಂಪತ್ತನ್ನು ದರೋಡೆ ಮಾಡುವ ದೇಶದ್ರೋಹಿಗಳಿಗೆ ಅಕ್ರಮ ಸಕ್ರಮ ಬೇಕಾ? ಯಾರ ಅಕ್ರಮ ಸಕ್ರಮ ಮಾಡುತ್ತೀರಿ? ಅಕ್ಕಪಕ್ಕದವರದ್ದೇ? ಅಂತಹ ದೇಶದ ಸಂಪತ್ತನ್ನು, ರಾಜ್ಯಕ್ಕೆ ಬರುವ ರಾಜಸ್ವವನ್ನು ತಪ್ಪಿಸಿ ಲೂಟಿ ಮಾಡುವವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ನೀವು ಹೇಳಬೇಕು.

**(ಮುಂದು)**

**(55) 01-02-2021/ 05-10/ ಕೆಹೆಚ್-ಆರ್ಎನ್**

**ಶ್ರೀ ಆರ್.ಬಿ.ತಿಮ್ಮಾಪೂರ (ಮುಂದು):-**

ಈ ರಾಜ್ಯದಲ್ಲಿ ಎಷ್ಟು ಅಕ್ರಮಗಳು ನಡೆಯುತ್ತಿವೆ ಎಂದರೆ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಹಾಸನದಲ್ಲಿ-615, ರಾಯಚೂರು ಜಿಲ್ಲೆಯಲ್ಲಿ-2, ಧಾರವಾಡದಲ್ಲಿ-13, ಹಾವೇರಿಯಲ್ಲಿ-15.8, ಕೊಪ್ಪಳದಲ್ಲಿ-52, ಗದಗ ಮತ್ತು ಉತ್ತರ ಕನ್ನಡದಲ್ಲಿ ಯಾವುದೇ ಅಕ್ರಮಗಳು ಇಲ್ಲ. ಅಲ್ಲಿಗೆ ಹೋದರೆ ಗೊತ್ತಾಗುತ್ತದೆ. ಬಳ್ಳಾರಿಯಲ್ಲಿ-17.64, ಚಿತ್ರದುರ್ಗ, ಬೆಳಗಾಂ ಮತ್ತು ಮೈಸೂರು ಜಿಲ್ಲೆಯಲ್ಲಿ ಯಾವುದೇ ಅಕ್ರಮಗಳು ಇಲ್ಲ. ಬಿಜಾಪುರದಲ್ಲಿ-28, ಮಂಡ್ಯದಲ್ಲಿ-87, ಕಲುಬುರ್ಗಿಯಲ್ಲಿ-33, ಬೀದರ್‌ನಲ್ಲಿ-33.65, ರಾಮನಗರದಲ್ಲಿ-11, ಉಡುಪಿಯಲ್ಲಿ-64.51, ದಕ್ಷಿಣ ಕನ್ನಡದಲ್ಲಿ-85 ಈ ಎಲ್ಲಾ ಮಾಹಿತಿಗಳು ಪತ್ರಿಕೆಯಲ್ಲಿ ಬಂದಿದೆ. ಈ ಎಲ್ಲಾ ಮಾಹಿತಿಗಳು ಪತ್ರಿಕೆಯವರ ಕೈಗೆ ಸಿಗುತ್ತದೆ. ಹಾಗಾದರೆ ಪತ್ರಿಕೆಯವರ ಕೈಗೆ ಸಿಗಲಾರದವರು ಇನ್ನು ಎಷ್ಟು ಜನ ಇದ್ದಾರೆ? ಇಷ್ಟು illegal mining ನಡೆಯುತ್ತಿರುವಾಗ ಇದನ್ನು ಇವರು ಏನು ಮಾಡುತ್ತಾರೆ? ಇದನ್ನು ಸಕ್ರಮ ಮಾಡುತ್ತಾರೆಯೇ, ಲೂಟಿ ಹೊಡೆದಿರುವುದೆಲ್ಲಾ ಮಾಫು ಮಾಡಲಾಗುತ್ತದೆಯೇ, ಇಷ್ಟು ಅಕ್ರಮ ಮಾಡಿರುವಂತಹ ವ್ಯಕ್ತಿಗಳನ್ನು ತತ್‌ಕ್ಷಣ ಜೈಲಿಗೆ ಅಟ್ಟಬೇಕು; ಇವರನ್ನು ಜೈಲಿಗೆ ಅಟ್ಟಿ, ಈ ದೇಶದ ಸಂಪತ್ತನ್ನು ಲೂಟಿ ಮಾಡಿದ್ದಾರೆಯಲ್ಲವೇ? ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದು ಸರ್ಕಾರ. ಹೌದು, ಮಾನ್ಯ ಯಡಿಯೂರಪ್ಪನವರ ಸರ್ಕಾರ ಎಂತಹ ಕೆಲಸ ಮಾಡಿತಪ್ಪಾ, ದರೋಡೆಕೋರರನ್ನು ಒಳಗೆ ಹಾಕಿಸಿತು. ಅಕ್ರಮವಾಗಿ ಗಣಿಗಾರಿಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದವರನ್ನು ಒಳಗೆ ಹಾಕಿಸಿತು. ಅಲ್ಲಿಂದ ರಾಜಸ್ವವನ್ನು ತೆಗೆದುಕೊಂಡು ಬಂದಿತು ಎನ್ನುವುದು ಸಕ್ರಮ. ಇವರು ಏನು ಸಕ್ರಮ ಮಾಡುತ್ತಾರೆ, ಏತಕ್ಕಾಗಿ ಸಕ್ರಮ ಮಾಡುತ್ತಾರೆ? ಇವರು ಬಹಳ ಒಳ್ಳೆಯದನ್ನು ಮಾಡುತ್ತಿದ್ದಾರೆ. ಒಂದು ಕಡೆ ಶಿವಮೊಗ್ಗ ಜಿಲ್ಲೆಯ ಮಂತ್ರಿಯವರು. ಊರಿನ ಉಪಕಾರಕ್ಕಾದರೂ ಗಣಿಗಾರಿಕೆ ನಡೆಯಲಿ, ಬಿಡಲಿ. ಅದು illegal. ಇದು paper statement. ಅದಕ್ಕೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಬಹಳಷ್ಟು ಜನರು ವಿಶೇಷವಾಗಿ ಮಾತನಾಡಿದ್ದಾರೆ. ರಾಜಕೀಯ ಮತ್ತು ರಾಜಕಾರಣ ಸಂಬಂಧ, ಒಬ್ಬೊಬ್ಬ ಮಂತ್ರಿ ಆದ ನಂತರ ಅವರ ಕೈಗೆ ಎಷ್ಟೋ ಜನ ಮರಿ ಪುಡಾರಿಗಳಂತಹವರು ಬರುತ್ತಾರೆ. ಅವರನ್ನು ಸಂತೃಪ್ತಿಪಡಿಸುವುದಕ್ಕೋಸ್ಕರ 'ಹೇ, ನಾನು ಮಂತ್ರಿ ಇದ್ದೀನಿ ಬಿಡು, ನಾನು ಮಾಡಿಕೊಂಡು ಹೋಗುತ್ತೇನೆ ಎಂದು ನಮ್ಮ ಬೆನ್ನ ಹಿಂದೆ ಇದ್ದಾರೆ. ಇವರನ್ನು ಸಂತೃಪ್ತಿಪಡಿಸಿದ್ದೇವೆ' ಎಂದರೆ, ರಾಜಸ್ವ ಹಾಳಾಗುತ್ತದೆ, ನೀವೂ ಹಾಳಾಗುತ್ತೀರಿ. ಇದರಿಂದ, ದೇಶದ ಸಂಪತ್ತು ಹಾಳಾಗುತ್ತಿದೆ. ಅಂತಹವರ ವಿಚಾರದಲ್ಲಿ ಎಚ್ಚರಿಕೆಯಿಂದ ಇರದೇ ಇದ್ದರೆ ತಮಗೆ ಕೆಟ್ಟ ಹೆಸರು ಬರುತ್ತದೆ. ಅವರು ಯಾರೇ ಇರಲಿ, ಯಾವುದೇ ಪಕ್ಷದ ಮಂತ್ರಿಗಳು ಆದಾಗ ಅವರು ಇವರನ್ನು ಬಹಳ ಓಲೈಸುತ್ತಿರುತ್ತಾರೆ. ಇವರನ್ನು ಊಟಕ್ಕೆ ಕರೆಯುವುದು, ಏನೇನೋ ಮಾಡುತ್ತಿರುತ್ತಾರೆ. ಅವರ ಓಲೈಕೆಗೆ ತಾವೇನಾದರೂ ಬಲಿಯಾದರೆ, ರಾಜ್ಯ ಹಾಳಾಗುತ್ತದೆ. ನಾನು ಇನ್ನು ಹೆಚ್ಚಾಗಿ ಮಾತನಾಡದೇ, ಆಡಳಿತ ವೈಖರಿಗೆ ಯಾವುದೇ ಕನ್ನಡಿ ಬೇಕಾಗಿಲ್ಲ. ಸ್ಫೋಟಕ ವಸ್ತು ಬಂದಿರುವುದು ಸತ್ಯ. ಬೇರೆ ರಾಜ್ಯದಿಂದ ಇಲ್ಲಿಗೆ ಬಂದಿರುವುದು ಸತ್ಯ. ಇದರಲ್ಲಿ ಕಾರ್ಮಿಕರು ಸತ್ತಿರುವುದು ಸತ್ಯ. ಅದನ್ನು ತಂದಿರುವ ವ್ಯಕ್ತಿಗಳು ಸತ್ತಿರುವುದು ಸತ್ಯ. ಸರ್ಕಾರ ಇದರ ಹೊಣೆ ಹೊರುತ್ತೇನೆ ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ. ಆ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು. ಅಕ್ರಮ ಗಣಿಗಾರಿಕೆಯ ಬಗ್ಗೆ ನಾನು ಇಲ್ಲಿಯವರೆಗೆ ಏನು ಹೇಳಿದ್ದೇನೆ, ಇನ್ನು ಹೆಚ್ಚಿಗೆ ವಿಷಯಗಳು ಇವೆ. ಯಾವ್ಯಾವು 5 ಕಿ.ಮೀ ಹೊರಗೆ ಇದೆ, ಯಾವುದು 5 ಕಿ.ಮೀ ಒಳಗೆ ಇದೆ, ಯಾವುದು ಊರ ಹೊರಗೆ ಇದೆ, ಇದನ್ನು ತಾವು ಅಕ್ಕ-ಪಕ್ಕ ನೋಡಿಕೊಳ್ಳಿ. ನಾವು ಸಹ ಅಕ್ಕ-ಪಕ್ಕ ನೋಡುತ್ತೇವೆ. ಇದರ ಬಗ್ಗೆ ದಿಢೀರ್ ಕ್ರಮ ಕೈಗೊಂಡು ಜನಸಾಮಾನ್ಯರು ಒಳ್ಳೆಯ ರೀತಿಯಿಂದ ಬದುಕುವುದಕ್ಕೆ ಒಂದು ಅವಕಾಶವನ್ನು ಕೊಡಿ. ಆ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದರ ಬಗ್ಗೆ ಹಾಲಿ ನ್ಯಾಯಾಧೀಶರಿಂದ ತನಿಖೆಯಾಗಬೇಕೆಂದು ಹೇಳುತ್ತಿದ್ದೇನೆ. ಆದರೆ ಇದರ ಹೊಣೆ ಮಾತ್ರ ಈ ಸರ್ಕಾರ ಹೊರಲೇಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. Mining ಅಥವಾ ಗಣಿಗಾರಿಕೆ ಎನ್ನುವುದು ನಮ್ಮ ಅಭಿವೃದ್ಧಿಗೆ ಅವಶ್ಯಕತೆ ಇದೆ. ಆದರೆ ಆ ಅವಶ್ಯಕತೆ ಹೇಗೆ ಇರಬೇಕು, ಅದನ್ನು ಹೇಗೆ extract ಮಾಡಬೇಕು. ಅದಕ್ಕೆ ಹಲವಾರು ಕಾನೂನುಗಳು ಮತ್ತು ಪ್ರೊಸೀಜರ್ಸ್ ಇವೆ. ಇವರು ಆ ಪ್ರೊಸೀಜರ್‌ಗಳನ್ನು ಏಕೆ ಮಾಡಿದ್ದಾರೆ ಎಂದರೆ, ಪೋಲೀಸ್ ಇಲಾಖೆ ಇರಬಹುದು, Mines & Geology Department ಇರಬಹುದು ಮತ್ತು ಇದಕ್ಕೆ ಸಂಬಂಧಪಟ್ಟ ಕಂದಾಯ ಇಲಾಖೆ ಇರಬಹುದು ಮತ್ತು Revenue Department and Planning Department ಇರಬಹುದು, ಎಲ್ಲಾ ಇಲಾಖೆಗಳಲ್ಲಿಯೂ ಅದರದೇ ಆದಂತಹ norms, ಅದರದೇ ಆದಂತಹ ನಿಬಂಧನೆಗಳು, ಅದರದೇ ಆದಂತಹ ಕಾಯಿದೆಗಳು ಇವೆ. ಆದರೆ, ಈ ಕಾಯಿದೆಗಳು workable ಮಾಡುವಂತಹ ರೀತಿಯಲ್ಲಿ ಈ ಗಣಿಗಾರಿಕೆಯಲ್ಲಿ ಇವರು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ ಮತ್ತು ಸಂಪೂರ್ಣವಾಗಿ failure ಆಗಿದ್ದಾರೆ. ಇದಕ್ಕೆ ಕಾರಣ ಏನೇಂದರೆ, ವಿಶೇಷವಾಗಿ ಇವತ್ತು ಕಲ್ಲು ಗಣಿಗಾರಿಕೆ ಮತ್ತು ಮರಳು ಇದರಲ್ಲಿ M-Sand ಇರಬಹುದು, ಇನ್ನೊಂದು ಇರಬಹುದು. ಇದು ಬಹಳ ಲಾಭದಾಯಕವಾದ ಹುದ್ದೆ. ಇದು ಯಾವ ರೀತಿ ಲಾಭದಾಯಕ ಎಂದರೆ, ಇವರು ಒಂದು ಟನ್‌ಗೆ 25 ರಿಂದ 100 ರೂಪಾಯಿಗಳಷ್ಟು ಸರ್ಕಾರಕ್ಕೆ ಕೊಡಬಹುದು. ಟನ್‌ಗೆ ಎಷ್ಟು ಕೊಡುತ್ತಾರೆ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಇದರ ಬಗ್ಗೆ ತಾವು ಹೇಳಬೇಕು. ಇದನ್ನು royalty ಎಂದು ಸಹ ಹೇಳುತ್ತಾರೆ. ಸರ್ಕಾರಕ್ಕೆ ಒಂದು ಟನ್‌ಗೆ 27 ರೂಪಾಯಿ ಬೀಳುತ್ತದೆ ಎಂದು ಹೇಳುತ್ತಾರೆ. ಒಂದು ಮೆಟ್ರಿಕ್ ಟನ್‌ಗೆ ಆಗುವಂತಹದ್ದು, ಅದನ್ನು ತೆಗೆದುಕೊಂಡು ಹೊರಗಡೆ ಒಂದು ಟನ್‌ಗೆ 6500 ರಿಂದ 7000 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಈ ರೀತಿ ಮಾರಾಟ ಮಾಡುವಂತಹ ಒಂದು ಕೆಲಸಕ್ಕೆ ಒಂದು ಮಾಫಿಯಾ ಕ್ರಿಯೇಟ್ ಆಗಿದೆ. ಗಣಿಗಾರಿಕೆ ಮಾಫಿಯಾ. ಇದು ಯಾವ ರೀತಿಯ ಮಾಫಿಯಾ ಎನ್ನುವುದು ತಮಗೆ ತಿಳಿದಿದೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ರಾಜಕಾರಣಿಗಳು ಇರಬಹುದು. ತೋಳ್ಬಲ ಇರುವಂತಹ ಜನ ಇರಬಹುದು ಅಥವಾ ಬಂಡವಾಳಶಾಹಿಗಳು ಇರಬಹುದು. ಇವೆಲ್ಲಾ ಸೇರಿಕೊಂಡು ಒಂದು ಸಂಪೂರ್ಣವಾದ ಕೂಪವನ್ನು ಮಾಡಿರುವಂತಹದ್ದು ಆಗಿದೆ. ಇಂತಹ ಸಂದರ್ಭದಲ್ಲಿ ಇದನ್ನು ತೆಗೆದುಕೊಂಡು blast ಮಾಡುವುದಕ್ಕೆ 5 ರಿಂದ 6 ಜನ ಕಾರ್ಮಿಕರು ಇದ್ದರೆ ಸಾಕು. ಹಾಗಾಗಿ ಇವತ್ತಿನ ದಿವಸ ಕರ್ನಾಟಕದಲ್ಲಿ ಸುಮಾರು 2000 ಕ್ಕಿಂತ ಹೆಚ್ಚಿಗೆ illegal mining

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತಿದೆ. 2000 illegal mining ಇದೆ ಎಂದು ತಮಗೆ ಗೊತ್ತಿದೆಯೇ, ತಮ್ಮ ಅಧಿಕಾರಿಗಳು ಈ ಮಾಹಿತಿಯನ್ನು ಕೊಟ್ಟಿದ್ದಾರೆ, ಆದರೆ ಅಲ್ಲಿ 2000 illegal mining ಆಗುತ್ತಿರುವುದರಿಂದ, ಇಡೀ ಕರ್ನಾಟಕದಲ್ಲಿ ಸುಮಾರು 30,000 violations ಆಗಿದೆ. ಅಲ್ಲಿಗೆ ಒಂದು violation ಎಂದು ಹೇಳಿದರೂ ತಮ್ಮ ಕಾನೂನು ವಿರುದ್ಧ, ಈ ಪರಿಸರದ ವಿರುದ್ಧ, ಈ ecology system ವಿರುದ್ಧ, ಈ ನಮ್ಮ ಜನರ ವಿರುದ್ಧ, ನಮ್ಮ ನಾಡಿನ ವಿರುದ್ಧ, ಈ ರೀತಿಯ ಒಂದು ಗಣಿಗಾರಿಕೆ ಆಗುತ್ತಿರುವಾಗ, ಅದರ ಬಗ್ಗೆ ಕಾನೂನಾತ್ಮಕವಾದಂತಹ ಒಂದು ಕೆಲಸವನ್ನು ನಿರ್ದಿಷ್ಟವಾಗಿ ಅಥವಾ ಅದನ್ನು ನಿಯಂತ್ರಣ ಮಾಡುವುದಕ್ಕೆ ತಮ್ಮ ಕೈಯಲ್ಲಿ ಆಗಲಿಲ್ಲವೆಂದರೆ ಸರ್ಕಾರ ಏಕೆ ಬೇಕು? ನಮ್ಮ ಅಧಿಕಾರಿಗಳು ಏಕೆ ಬೇಕು? ಚುನಾವಣೆಯ ಮುಖಾಂತರ ಈ ಸರ್ಕಾರವನ್ನು ತರುವಂತಹ ಕೆಲಸ ಏಕೆ ಬೇಕು? ನಮ್ಮ Executive Force ಏಕೆ ಬೇಕು? ಇವತ್ತಿನ ದಿವಸ judicial ಬೇಕಾದಷ್ಟು ನಿರ್ದೇಶನವನ್ನು ಕೊಡುತ್ತಿದೆ. ಸುಪ್ರೀಂ ಕೋರ್ಟ್ ಪೊಲೀಸ್‌ನವರಿಗೆ ಅಧಿಕಾರ ಕೊಟ್ಟಿದೆ. Illegal Mining ಗೆ ಪೊಲೀಸ್‌ನವರನ್ನು ತೆಗೆದುಕೊಳ್ಳಬಹುದು. ಮ್ಯಾಜಿಸ್ಟ್ರೇಟ್‌ಗೆ ಹೇಳಿದ್ದಾರೆ. ನೋಡಿ, ನನಗೆ ಬಹಳ ವಿಚಿತ್ರವಾಗಿದೆ. ಮಾನ್ಯ ಸದಸ್ಯರುಗಳು ಬಹಳ ವಿಷಯಗಳನ್ನು ಮಾತನಾಡಿದ್ದಾರೆ. ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಯಾರು ಮಾತನಾಡಿಲ್ಲ ಅಂತಹ ವಿಷಯಗಳನ್ನು ಮಾತ್ರ ನಾನು ಹೇಳುತ್ತೇನೆ. ಇವತ್ತಿನ ದಿವಸ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಬಹಳ ಗಂಭೀರವಾದಂತಹ ವಿಚಾರವನ್ನು ಹೇಳಿದ್ದಾರೆ. ಈ ಘಟನೆ ನಡೆದು ಮರುದಿನ ಆ ಸ್ಥಳಕ್ಕೆ ಹೋಗುತ್ತಾರೆ ಎಂದು ಮ್ಯಾಜಿಸ್ಟ್ರೇಟ್ ಒಬ್ಬರು ಹೇಳಿದರು. District Judicial Magistrate. ಇದು ಬಹಳ ಮುಖ್ಯವಾದ ವಿಚಾರ. ಇವರು ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. He or she can direct the local administration to give a report. ಆ ಜಡ್ಜ್ ಕೈ-ಕಾಲನ್ನು ಕಟ್ಟಿ ಹಾಕಿದರು. ಅವರನ್ನು ಯಾರು ಕಟ್ಟಿ ಹಾಕಿದರು? ದಯವಿಟ್ಟು ಇದಕ್ಕೆ ತಾವು ಉತ್ತರವನ್ನು ಕೊಡಬೇಕು. ಜಡ್ಜ್ ಘಟನಾ ಸ್ಥಳಕ್ಕೆ ಹೋಗಿರುವಂತಹದ್ದು, public domain ನಲ್ಲಿ ಇದೆ. ಇದರ ಬಗ್ಗೆ ಸಂಪೂರ್ಣವಾಗಿ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಕೆಲವು ಮಾಫಿಯಾಗಳ ಬಗ್ಗೆ ಸುದ್ದಿ-ಮಾಧ್ಯಮಗಳಲ್ಲಿ ಬಂದಿದೆ. ಆದರೆ, ಅಂತಹ ಒಬ್ಬ ಜಡ್ಜ್ ಹೋದ ಮೇಲೆ ಅವರ ಒಂದು ಅಭಿಪ್ರಾಯ ಮತ್ತು ಹೇಳಿಕೆ ಏನಿದೆ ಎಂಬುದು ಇವತ್ತಿಗೂ ಸಹ ಎಲ್ಲಿಯೂ ಗೊತ್ತಾಗುತ್ತಿಲ್ಲ. ಇದನ್ನು ಏಕೆ ಸಂಪೂರ್ಣವಾಗಿ ಮುಚ್ಚಿ ಹಾಕಿದರು? ಖಂಡಿತವಾಗಿಯೂ ಸುಪ್ರೀಂ ಕೋರ್ಟ್ ಬೇಕಾದಷ್ಟು ಪ್ರಕರಣಗಳಲ್ಲಿ ಉತ್ತಮವಾದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ದೇಶನಗಳನ್ನು ಕೊಟ್ಟಿದೆ. Police can take action against illegal mining. ಇವತ್ತು ಈ ಒಂದು gelatin ಆಗುವಂತಹದ್ದು, ಅದು ಪೊಲೀಸ್ ಇಲಾಖೆಗೆ ಬರುತ್ತದೆ.

**(ಮುಂದು)**

**(56) 01/02/2021/5:20/ಎಸ್‌ಪಿಆರ್/ಬಿಎನ್‌ಎಸ್**

**ಶ್ರೀ ಪಿ.ಆರ್.ರಮೇಶ್(ಮುಂದು):-**

ಅಕ್ರಮ ಗಣಿಗಾರಿಕೆ ನಡೆದಿದ್ದರೆ ಅದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವ್ಯಾಪ್ತಿಗೊಳಪಡುತ್ತದೆ. ಆದರೆ ಎರಡೂ ಪ್ರಸಂಗಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಳ್ಳುವ ಕ್ರಮಗಳು ಪೊಲೀಸ್ ಇಲಾಖೆಯ ವ್ಯಾಪ್ತಿಗೊಳಪಡುತ್ತದೆ. ಇದರ ಜೊತೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯೂ ಸಹ ತನ್ನ ಅಭಿಪ್ರಾಯ ಮತ್ತು ಸಮ್ಮತಿಯನ್ನು ನೀಡಬೇಕು. 1.5 ಹೆಕ್ಟೇರ್‌ಗಳ ಒಳಗಿರುವ ಪ್ರದೇಶದಲ್ಲಿನ ಕೆಲವು ಗಣಿಗಾರಿಕೆಗೆ ಯಾವುದೇ ಸಾರ್ವಜನಿಕ ಅಭಿಪ್ರಾಯವಿಲ್ಲದೆ ಅನುಮತಿಯನ್ನು ನೀಡುವ ಅಧಿಕಾರವು ಇವತ್ತಿನ ದಿವಸ ಸರ್ಕಾರಕ್ಕೆ ಇದೆ. ಇದು ತಪ್ಪು. ಈ ನಿಯಮಗಳಿಗೆ ತಿದ್ದುಪಡಿ ತರಬೇಕೆಂದು ಸರ್ವೋಚ್ಚ ನ್ಯಾಯಾಲಯವು ಹಲವಾರು ನಿರ್ದೇಶನಗಳನ್ನು ನೀಡಿದೆ. ಆದರೆ ಇವತ್ತಿಗೂ ಸಹ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಯಾವುದೇ ಸಣ್ಣ ಪ್ರಮಾಣದ ಗಣಿಗಾರಿಕೆಗೆ ಅನುಮತಿ ನೀಡಬೇಕಾದರೆ, ಕಾನೂನಾತ್ಮಕವಾಗಿ ಸಾರ್ವಜನಿಕರ ಅಭಿಪ್ರಾಯಗಳಿಗೊಳಪಟ್ಟಂತೆ ಅನುಮತಿಯನ್ನು ನೀಡಬೇಕು. ಇದು ಕೇವಲ ಶಿವಮೊಗ್ಗ ಜಿಲ್ಲೆಗೆ ಮಾತ್ರವೇ ಸಂಬಂಧಪಡದೇ ಇವತ್ತಿನ ದಿವಸ ರಾಜ್ಯದ ಹತ್ತಾರು ಜಿಲ್ಲೆಗಳಲ್ಲಿ ಈ ರೀತಿಯಾದ ಅವ್ಯವಹಾರಗಳು ನಡೆಯುತ್ತಿವೆ. ಇದಕ್ಕೆ ಬೆಂಗಳೂರು ನಗರವು ಹೊರತೇನಲ್ಲ. ಅನಧಿಕೃತವಾಗಿ ಬಹಳ ಗಣಿಗಾರಿಕೆಗಳು ನಡೆಯುತ್ತಿವೆ. ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹಲವಾರು ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯ ಸಾರ್ವಜನಿಕರು ಕಳೆದ ಹತ್ತಾರು ವರ್ಷಗಳಿಂದ ಸಾಕಷ್ಟು ದೂರುಗಳನ್ನು ಸಲ್ಲಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಥವಾ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ? ಸರ್ಕಾರವು ಉತ್ತರ ನೀಡುವ ಸಂದರ್ಭದಲ್ಲಿ ಇದರ ಬಗ್ಗೆ ತಿಳಿಸಬೇಕು. ಇದು ಇವತ್ತು ನಿನ್ನೆಯ ವಿಷಯವಲ್ಲ; ಕಳೆದ ಹತ್ತಾರು ವರ್ಷಗಳಿಂದ ನಡೆಯುತ್ತಿದೆ. ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿದ ನಂತರ ಇವತ್ತಿನವರೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಗ್ರೌಂಡ್‌ನಲ್ಲಿ ಯಾವುದೇ ರೀತಿಯಾಗಿ ಜಾರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿಲ್ಲ. ಜೆಲಟಿನ್‌ನಿಂದ ಸ್ಫೋಟಗೊಂಡಿರುವುದು ಇವತ್ತಿನ ದಿವಸ ತಿಳಿದುಬಂದಿದೆ. ಪ್ರತಿದಿನ ಇಂತಹ ನಾಲ್ಕೈದು ಲೋಡ್‌ಗಳ ಜೆಲಟಿನ್ ಅಲ್ಲಿ ಬರುತ್ತವೆ ಹಾಗೂ ಇದು ಸ್ಫೋಟಗೊಳ್ಳುತ್ತಲೇ ಇರುತ್ತದೆ. ದೇವರ ಕೃಪೆ ಹಾಗೂ ದುರ್ದೈವದಿಂದಾಗಿ ಇವತ್ತಿನ ದಿವಸ ನಮ್ಮ ಕಣ್ಣು ತೆರೆದಿದೆ. ಜೆಲಟಿನ್‌ನಿಂದಾಗಿ ಈ ಕೃತ್ಯವು ಸಂಭವಿಸಿದ್ದು, ಇದು ಘಟಿಸಬಾರದ್ದಾಗಿದ್ದು ಆದರೆ, ಘಟಿಸಿದೆ. ಇದರಿಂದಾಗಿ ಸರ್ಕಾರವು ಎಚ್ಚೆತ್ತುಕೊಳ್ಳುವ ಕೆಲಸಗಳನ್ನು ಮಾಡಬೇಕು. ಇದು ಬಹಳ ಮುಖ್ಯವಾಗಿದೆ.

ಮುಂದುವರೆದು, ನಾನು ರಾಜಧನದ ಬಗ್ಗೆ ಮಾತನಾಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 2,000 ಅನಧೀಕೃತ ಕಲ್ಲುಗಣಿಗಾರಿಕೆ ನಡೆಯುತ್ತಿದೆ. ಒಂದು ಟನ್‌ಗೆ ರಾಯಧನ 108 ರೂಪಾಯಿಗಳಿರುತ್ತದೆಂದು ನಾನು ಭಾವಿಸುತ್ತೇನೆ. ಒಂದು ದಿನಕ್ಕೆ ಸರಾಸರಿಯಾಗಿ 10 ಲಾರಿಗಳನ್ನು ಒಂದು ಕಲ್ಲುಗಣಿಗಾರಿಕೆಗೆ ತೆಗೆದುಕೊಂಡರೆ, ಪ್ರತಿದಿನಕ್ಕೆ ಸುಮಾರು 20 ಸಾವಿರ ಲಾರಿಗಳ ಅವಶ್ಯಕತೆ ಬರುತ್ತದೆ. ಅಂದಾಜಿಗೆ ಸರಾಸರಿಯಾಗಿ ಒಂದು ಲಾರಿಯು 20 ಟನ್‌ಗಳ ಸಾಮರ್ಥ್ಯವುಳ್ಳದ್ದಾಗಿರುತ್ತದೆ. ಇಡೀ ರಾಜ್ಯದಲ್ಲಿ ಅನಧೀಕೃತವಾಗಿ ಮಾಡುವ ಕಲ್ಲುಗಣಿಗಾರಿಕೆಯು ಒಂದು ದಿನಕ್ಕೆ 20 ಸಾವಿರ ಲಾರಿಗಳಷ್ಟು ಆಗುತ್ತದೆ ಹಾಗೂ ಇದನ್ನು ಮಾರಾಟ ಮಾಡುತ್ತಾರೆ. ಇದನ್ನು ರಾಯಧನವನ್ನಾಗಿ ಪರಿವರ್ತಿಸಿದಾಗ ಒಂದು ದಿನಕ್ಕೆ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತದೆ. ಸರಾಸರಿಯಾಗಿ ಇದನ್ನು ವರ್ಷಕ್ಕೆ ಲೆಕ್ಕ ಹಾಕಿ, 65 ದಿನಗಳನ್ನು ಹೊರತುಪಡಿಸಿ, 300 ದಿನಗಳನ್ನು ಪರಿಗಣಿಸಿದಾಗ 1,200 ಕೋಟಿ ರೂಪಾಯಿಗಳಷ್ಟು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ರಾಯಧನವು ನಿಂತು ಹೋಗಿದೆ. ಆದರೆ ಇಷ್ಟು ದೊಡ್ಡ ಪ್ರಮಾಣದ ಹಣವು ಎಲ್ಲಿ ಹೋಗುತ್ತಿದೆ? ಇದು ಸೋರಿಕೆಯಾವಾಗಿದೆ. ಸುಮ್ಮನೆ ಕುಳಿತುಕೊಂಡಲ್ಲೇ ಹಣ ಮಾಡುವ ದೊಡ್ಡ ಜಾಲವಾಗಿ ಮಾರ್ಪಟ್ಟಿದೆ. ಇಂತಹ ಜಾಲವು ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ನಡೆಯುತ್ತಿದೆ. ಇದು ಕೇವಲ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯದಲ್ಲೆಲ್ಲಾ ಬಹಳ ವಿಸ್ತಾರವಾಗಿ ನಡೆಯುತ್ತಿರುವ ಕೃತ್ಯವಾಗಿದೆ. ಶಿವಮೊಗ್ಗ ಜಿಲ್ಲೆಯು 'Gate for Malenadu' ಎಂಬಂತಿದೆ. ಪಶ್ಚಿಮ ಘಟ್ಟಗಳು ಮಲೆನಾಡು ಪ್ರದೇಶಕ್ಕೆ ಬರುವ Laterite stone deposit ಗಳೇನಿವೆ, ಇವು ಶಿವಮೊಗ್ಗದಿಂದಲೇ ಪ್ರಾರಂಭಗೊಳ್ಳುತ್ತವೆ. ಶಿವಮೊಗ್ಗ ಜಿಲ್ಲೆಯಲ್ಲಿ ಕೇವಲ 21 ಕಲ್ಲುಗಣಿಗಾರಿಕೆಗೆ ಮಾತ್ರವೇ ಅನುಮತಿ ನೀಡಿದ್ದಾರೆ. ಇನ್ನುಳಿದ ಪೈಕಿ ಕೆಲವು ಕ್ರಷರ್‌ಗಳಾಗಿವೆ. Crusher cannot become a quarry. It is only to crush the stone. ಹೀಗಾಗಿ ಕ್ರಷರ್‌ಗಳಿಗೆ ಅನುಮತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಲಾಗಿದೆ. ಈ ಪೈಕಿ ಎಷ್ಟೋ ಕ್ರಷರ್‌ಗಳು ಅನಧಿಕೃತವಾಗಿವೆ. ಇವತ್ತಿನ ದಿವಸ ಕಲ್ಲು ಗಣಿಗಾರಿಕೆ ಮಾಡುವ ದಂಧೆಯು ಯಥೇಚ್ಛವಾಗಿ ನಡೆಯುತ್ತಿದೆ. ಇದು permitted zone ಗಳಲ್ಲಿ ಬರುತ್ತದೆಯೇ ಎನ್ನುವುದನ್ನು ಪರಿಶೀಲಿಸಬೇಕು. ಇದಕ್ಕೆ ಸರಿಯಾದ ಹಾಗೂ ಯೋಜನಾ ಬದ್ಧವಾಗಿ ಮಾಡಿದ 'safe zone' ನಲ್ಲಿ ಇದು ಬರುತ್ತದೆಯೇ ಎಂದು ಪರಿಶೀಲಿಸುವುದು ಬಹಳ ಮುಖ್ಯವಾಗಿದೆ.

ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಮಾಲಿನ್ಯ ನಿಯಂತ್ರಣ ಮಂಡಳಿಯವರು ಯಾವ ರೀತಿಯಾದ ಕೆಲಸಗಳನ್ನು ಮಾಡುತ್ತಿದ್ದಾರೆ ಎನ್ನುವುದು ತಿಳಿದಿಲ್ಲ. ಏಕೆಂದರೆ ನಾನು ಸುಮಾರು 15 ವರ್ಷಗಳಿಂದ ಮಂಡಳಿಯನ್ನು ಬಹಳ ಹತ್ತಿರದಿಂದ ನೋಡುತ್ತಿದ್ದೇನೆ. ಈ ಮಂಡಳಿಯು ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಈ ಮಂಡಳಿಯು ಸಾಕಷ್ಟು establishment and operation ಮಾಡುವುದಕ್ಕೆ ಅನುಮತಿಯನ್ನು ನೀಡಬೇಕು. ಯಾವುದೇ establishment ಮತ್ತು operationಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿಯನ್ನು ಪಡೆಯುವುದಿಲ್ಲ. ಆದರೆ, ಎಲ್ಲವೂ ಸಹ ನಡೆಯುತ್ತಿವೆ. ಇವುಗಳೆಲ್ಲವೂ ಸಂಪೂರ್ಣವಾಗಿ ಪರಿಸರಕ್ಕೆ ಹಾನಿಯಾಗುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ಸಾರ್ವಜನಿಕರಿಗೆ ಬೇಸರವುಂಟಾಗಿದೆ ಹಾಗೂ ಅವರ ಜೀವನವು ಬಹಳವಾಗಿ ಕೆಟ್ಟುಹೋಗಿದೆ.

ಅಂತರ್ಜಲ ಮಟ್ಟವು ಕ್ಷೀಣಿಸುತ್ತಿದೆ ಹಾಗೂ ಸಂಪೂರ್ಣವಾಗಿ ಕಲುಷಿತಗೊಳ್ಳುತ್ತಿದೆ. ಇದಲ್ಲದೇ ನಮ್ಮ ಪರಿಸರವೂ ಸಹ ಸಂಪೂರ್ಣವಾಗಿ ನಾಶಹೊಂದುತ್ತಿದೆ. ಇವತ್ತಿನ ದಿವಸ ಮಲೆನಾಡು ಪ್ರದೇಶಗಳಲ್ಲಿ ಅಂದರೆ ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಭೂಕುಸಿತವಾಗುತ್ತಿದೆ. ನಾವು ಇವತ್ತಿನ ದಿವಸ ಪರಿಸರದ ವಿರುದ್ಧವಾಗಿ ಹೋಗುತ್ತಿದ್ದೇವೆ ಹಾಗೂ ಆ ರೀತಿಯ ಕೆಲಸಗಳನ್ನು ಮಾಡುತ್ತಿದ್ದೇವೆ ಎನ್ನುವುದೇ ಇದಕ್ಕೆ ಕಾರಣವಾಗಿದೆ. ಇದನ್ನು ನೋಡಿದಾಗ ಖಂಡಿತವಾಗಿಯೂ ಸಹ ಬೇಸರವಾಗುತ್ತದೆ. ಹೀಗಾಗಿ ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಅವಶ್ಯಕವಾಗಿರುವ ಕೆಲಸಗಳನ್ನು ಮಾಡಬೇಕು. ಸರ್ಕಾರವು ಮಾಡುವ ಕೆಲಸಗಳ ಮೇಲೆ ಇದು ಖಂಡಿತವಾಗಿಯೂ ಸಹ ಪ್ರಭಾವ ಬೀರುತ್ತದೆ.

ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳ ಹೇಳಿಕೆಯನ್ನು ನಾನು ದಿನಪತ್ರಿಕೆಯಲ್ಲಿ ನೋಡಿದ್ದೇನೆ. ಅವರು, 'we cannot catch the culprits' ಎಂದು ಹೇಳುತ್ತಾರೆ. ಅಂದರೆ ಯಾವುದೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೀತಿಯ ತಪ್ಪಿತಸ್ಥರನ್ನು ಹಿಡಿಯುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳುತ್ತಾರೆ. ಸ್ಫೋಟಕ ವಸ್ತುಗಳು ಸ್ಫೋಟಿಸಲು ನಿಮಿಷಗಳ ಅವಧಿಯನ್ನು ನಿಗದಿಪಡಿಸಿ ಯಾರೋ ಇಟ್ಟು ಹೋಗುತ್ತಾರೆ; ಅವರುಗಳು ಸ್ಥಳದಲ್ಲಿರುವುದಿಲ್ಲ ಎನ್ನುವುದೇ ಇದಕ್ಕೆ ಕಾರಣವಾಗಿದೆ ಎಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಹೀಗಾಗಿ ತಪ್ಪಿತಸ್ಥರನ್ನು red-handedly ಹಿಡಿಯುವುದೇ ಒಂದು ಸವಾಲಾಗಿದೆ ಎಂದೂ ಸಹ ತಿಳಿಸುತ್ತಾರೆ. ಇದರರ್ಥ ಶಿವಮೊಗ್ಗ ಜಿಲ್ಲೆಯಲ್ಲಿ ಆಡಳಿತವು ಯಾವ ರೀತಿಯಾಗಿದೆ? ಶಿವಮೊಗ್ಗ ಜಿಲ್ಲೆಯು ಮುಖ್ಯಮಂತ್ರಿಗಳ ಮತ್ತು ಶ್ರೀ ಕೆ.ಎಸ್.ಈಶ್ವರಪ್ಪರವರುಗಳ ಜಿಲ್ಲೆಯಾಗಿದ್ದು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಅವರ ವರ್ಚಸ್ಸನ್ನು ಎಷ್ಟರ ಮಟ್ಟಿಗೆ ಇಟ್ಟುಕೊಳ್ಳಬೇಕಾಗಿತ್ತೋ ಅಷ್ಟರ ಮಟ್ಟಕ್ಕೆ ಇಟ್ಟುಕೊಂಡಿಲ್ಲ. ಅವರುಗಳ ವರ್ಚಸ್ಸು ಎಲ್ಲಿ ಹೋಗಿದೆ? ಅಲ್ಲಿನ ಅಧಿಕಾರಿಗಳು ತಪ್ಪಿಸಿಕೊಂಡು ಓಡಾಡುತ್ತಿದ್ದಾರೆಯೇ? ಅವರುಗಳು ಮಾಫಿಯಾದವರಿಗೆ ಬೆಂಬಲಿಸುತ್ತಿದ್ದಾರೆಯೇ? ಇದರಿಂದ ಮುಖ್ಯಮಂತ್ರಿಗಳ ಹಾಗೂ ಶ್ರೀ ಕೆ.ಎಸ್.ಈಶ್ವರಪ್ಪನವರುಗಳ ವರ್ಚಸ್ಸಿಗೆ ಧಕ್ಕೆ ಬರುತ್ತದೆ. ಅಲ್ಲಿ ಆಡಳಿತವಿದೆಯೇ ಎನ್ನುವ ಪ್ರಶ್ನೆಯು ಬರುತ್ತದೆ. ಹೀಗಾಗಿ ನಾವು ಇದನ್ನು ಪ್ರಶ್ನಿಸುವುದು ಬಹಳ ಮುಖ್ಯವಾಗುತ್ತದೆ. ಇವತ್ತಿನ ದಿವಸ ನಡೆದಿರುವ ಘಟನೆಯು ಕೇವಲ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಕೆ.ಆರ್.ಎಸ್.ಅಣೆಕಟ್ಟು ಹಾಗೂ ಇದರ ಮೇಲಿನ ಆಪಾದನೆಗಳ ವಿಚಾರ ಎಲ್ಲರಿಗೆ ತಿಳಿದಿರಬೇಕು. ಇದರ ಸುತ್ತುಮುತ್ತಲಿನ ಮಂಡ್ಯ ಹಾಗೂ ಮೈಸೂರು ಪ್ರದೇಶಗಳಲ್ಲಿಯೂ ಸಹ ಯಥೇಚ್ಛವಾಗಿ ಅನಧಿಕೃತವಾದ ಗಣಿಗಾರಿಕೆ ಮತ್ತು ಸ್ಫೋಟಗಳು ನಡೆಯುತ್ತಿವೆ. ಅಲ್ಲಿನ ಕೆಲವು ತಾಂತ್ರಿಕ ತಜ್ಞರು ಇವುಗಳನ್ನು ಅವಲೋಕಿಸಿದ್ದಾರೆ. ಸ್ಫೋಟಗಳ ಕಂಪನದಿಂದಾಗಿ ಅಣೆಕಟ್ಟಿನಲ್ಲಿ ಯಾವುದಾದರೂ ತೊಂದರೆಯಾದರೆ ಮುಂದಿನ ದಿನಗಳಲ್ಲಿ ಏನಾಗಬಹುದೆಂಬ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಪರಿಸರವನ್ನು ಕಾಪಾಡಿಕೊಂಡು ಅಭಿವೃದ್ಧಿಯನ್ನು ಮಾಡಬೇಕೇ ವಿನಃ ನಮ್ಮ ಅಭಿವೃದ್ಧಿಯು ಪರಿಸರದ ವಿರುದ್ಧವಾಗಿರಬಹುದು. ಒಂದು ವೇಳೆ ಇದು ಪರಿಸರದ ವಿರುದ್ಧವಾದರೆ ನಾವುಗಳು ಬದುಕುವುದಕ್ಕಾಗುವುದಿಲ್ಲ. ನಮ್ಮ ಜೀವನ ನಡೆಯಬೇಕು; ನಮ್ಮ ಪರಿಸರದಲ್ಲಿ ಪ್ರಾಣಿ–ಪಕ್ಷಿಗಳು, ಗಿಡ–ಮರಗಳು ಎಲ್ಲವೂ ಇರಬೇಕೆಂದರೆ ನಾವು ಪರಿಸರವನ್ನು ಚೆನ್ನಾಗಿ ಇಟ್ಟುಕೊಂಡಿರಬೇಕು. ಆಗ ಮಾತ್ರವೇ ನಮ್ಮ ಅಭಿವೃದ್ಧಿಯಾಗುತ್ತದೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(57)/1-2-2021/5-30/ಎಲ್ಎಂ/ಬಿಎನ್ಎಸ್

**ಶ್ರೀ ಪಿ.ಆರ್.ರಮೇಶ್(ಮುಂದು):-**

ಇಂದು ನಾವು ಇಲ್ಲಿ ನಿಂತು ಮಾತನಾಡುತ್ತಿದ್ದೇವೆ ಎಂದರೆ ನಮಗೆ ಜೀವ ಇದೆ, ನಾವು ಬದುಕಿದ್ದೇವೆ ಎಂದು ಅರ್ಥ. ಬದುಕೇ ಇಲ್ಲ ಎಂದರೆ ಏನೂ ಇಲ್ಲ. ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ಪರಿಸರದ ಕಾಳಜಿಯನ್ನು ಇಟ್ಟುಕೊಂಡು ಮಾಡಬೇಕು ಎಂದು ಹೇಳಿ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು. ನಮ್ಮ ವಿರೋಧ ಪಕ್ಷದ ನಾಯಕರಾದ ಪಾಟೀಲ್ ಸಾಹೇಬರು ಈ ದುರ್ಘಟನೆ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿಯಾಗಿ ಶಿವಮೊಗ್ಗ ಜಿಲ್ಲೆಯ ಇಬ್ಬರು ಸದಸ್ಯರು ಕೂಡಾ ನಡೆದಿರುವ ಘಟನೆ ಬಗ್ಗೆ ಬಹಳಷ್ಟು ಹೇಳಿದ್ದಾರೆ. ಮಾನ್ಯ ನಿರಾಣಿಯವರು ಮಂತ್ರಿಗಳಾದ ಮೇಲೆ ಇಂತಹ ದುರ್ಘಟನೆ ಅವರನ್ನು ಸ್ವಾಗತ ಮಾಡಬಾರದಾಗಿತ್ತು. ಮಂತ್ರಿಗಳಾಗದೆ ಇರುವಾಗ ಅವರು ಒಂದು ಖಾಸಗಿ ದುರ್ಘಟನೆಯನ್ನು ನೋಡಿದರು. ಮಂತ್ರಿಗಳಾದ ಮೇಲೆ ಈ ಅನಾಹುತವಾಗಿದೆ. ಮಾನ್ಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪೂರ ಸಾಹೇಬರು ಮಾತನಾಡುತ್ತಾ ನೈತಿಕತೆ ಬಗ್ಗೆ ಹೇಳಿದರು. ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಫೋಟೋವನ್ನು ಬಹಳ ದೊಡ್ಡದಾಗಿ ಹಾಕಲಾಗಿದೆ. ನಾವು ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಬಗ್ಗೆ ಅಷ್ಟೊಂದು ಹೇಳುವುದಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಪಕ್ಷದ ವಿರೋಧವಾಗಿರುವಂತಹವರು ಬಹಳವಾಗಿ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಆ ರೀತಿ ಈ ರೀತಿಯವರು ಎಂದು ಹೇಳುತ್ತಿದ್ದರು. ಆದರೆ, ಒಂದು ಘಟನೆ ನಡೆದಾಗ ಅವರು ರಾಜೀನಾಮೆಯನ್ನು ಕೊಡುತ್ತಾರೆ. ಇದು ಮಾನ್ಯ ಹೊರಟ್ಟಿ ಸಾಹೇಬರಿಗೂ ಗೊತ್ತಿದೆ. ಕರ್ನಾಟಕದಲ್ಲಿ ಒಂದು ಘಟನೆ ನಡೆದಾಗ ಮಾನ್ಯ ರಾಮರಾಯರು ರಾಜೀನಾಮೆಯನ್ನು ಕೊಡುತ್ತಾರೆ. ಆದರೆ ನಾನು ನೀವು ರಾಜೀನಾಮೆಯನ್ನು ಕೊಡಿ ಎಂದು ಕೇಳುವುದಿಲ್ಲ. ಅದರಲ್ಲಿ ಅರ್ಥವೂ ಇಲ್ಲ, ನೀವು ಕೊಡುವುದೂ ಇಲ್ಲ. ಮಾನ್ಯ ಸ್ನೇಹಿತರಾದ ಆಯನೂರ ಮಂಜುನಾಥ್‌ರವರು ಮಾತನಾಡುತ್ತಾ ಇದರಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಎಲ್ಲರೂ ಸಹ ಇದಕ್ಕೆ ಕಾರಣರು ಎಂದು ಹೇಳಿದರು. ರಾಜಕಾರಣಿಗಳ ಬೆಂಬಲವಿಲ್ಲದೆ ಯಾವುದೆ ಅಧಿಕಾರಿಗೆ ಈ ರೀತಿ ಕೆಲಸ ಮಾಡಲು ಧೈರ್ಯವಿರುತ್ತದೆಯೇ? ಯಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರಿಗೂ ಆ ರೀತಿಯ ಧೈರ್ಯವಿರುವುದಿಲ್ಲ. ನಾನು political activist. ನಮಗೆ ಮಂತ್ರಿಯಾಗಿ ಯಾವುದೇ ಅನುಭವವಿಲ್ಲ. ಆದರೆ ರಾಜಕಾರಣಿಗಳ ಬೆಂಬಲವಿಲ್ಲದೆ ಯಾವುದೇ ಅಧಿಕಾರಿಯು ಇಂತಹ ಅವ್ಯವಹಾರ ಅಥವಾ ಕಾನೂನು ಬಾಹಿರವಾದ ಕೆಲಸವನ್ನು ಮಾಡಲು ಹೋಗುವುದಿಲ್ಲ. ಆದ್ದರಿಂದ ಕೇವಲ ಅಧಿಕಾರಿಗಳ ಮೇಲೆ ಹೇಳಿದರೆ ಪ್ರಯೋಜನ ಆಗುವುದಿಲ್ಲ. ಅಧಿಕಾರಿಗಳು ನಮ್ಮ ಸರ್ಕಾರವಿರುವಾಗ ನಮ್ಮ ಪರ ಇರುತ್ತಾರೆ, ಅವರ ಸರ್ಕಾರವಿದ್ದಾಗ ಅವರ ಪರ ಇರುತ್ತಾರೆ. ಮಾನ್ಯ ಮಂತ್ರಿಗಳಾದ ನಿರಾಣಿ ಸಾಹೇಬರ ಪಕ್ಕದ ಜಿಲ್ಲೆಯಲ್ಲಿ ಈ ರೀತಿ ಘಟನೆ ನಡೆದಿದ್ದರೆ ಅಷ್ಟೊಂದು ಚರ್ಚೆಗೆ ಬರುತ್ತಿರಲಿಲ್ಲ. ಈಗಲೂ ಸಹ ಇದರ ಬಗ್ಗೆ ಹೆಚ್ಚು ಚರ್ಚೆಯಾಗುತ್ತಿಲ್ಲ. ಅದಕ್ಕೆ ಕಾರಣಗಳು ಹಲವಾರು ಇರಬಹುದು. ಅವರ ಜಿಲ್ಲೆಯಿಂದ 150 ಕಿ.ಮೀ. ದೂರದಲ್ಲಿರುವ ಒಂದು ಸಂಸ್ಥೆಯ ಒಬ್ಬ ಮುಖ್ಯಸ್ಥರು ಹೇಳಿದರು, 'we manufacture light intensive bounce only to scare people' ಎಂದು. ಇಂದು ಆತ ಜೈಲಿನಲ್ಲಿದ್ದಾನೆ. ಬೆಳಗಾವಿ, ಬಿಜಾಪೂರದಲ್ಲಿ ನಡೆದಿದ್ದರೆ ನಮಗೇನೂ ಆಶ್ಚರ್ಯವಾಗುತ್ತಿರಲಿಲ್ಲ. ಶಿವಮೊಗ್ಗ ಒಂದು ರೀತಿ land lock district ಎಂದು ಹೇಳಬಹುದು. ಅಷ್ಟು ಭದ್ರಕೋಟೆ ಅದು. ಚೈನಾದಿಂದ, ಪಾಕಿಸ್ತಾನದಿಂದ ಏನಾದರೂ ಬರಬಹುದು ಎನ್ನುವಂತಹ ಸ್ಥಳವಲ್ಲ ಅದು. ಆಂಧ್ರಪ್ರದೇಶ, ತಮಿಳುನಾಡಿನಿಂದ ಅಥವಾ ಏನಾದರೂ ಸಮುದ್ರ ಮಾರ್ಗವಾಗಿ ತರಬೇಕು ಎಂದರೂ ಬಹಳ ಕಷ್ಟ. ಕೇವಲ land lock ಮಾತ್ರ ಅಲ್ಲ, ಇಬ್ಬರು ಪ್ರಭಾವಿ ನಾಯಕರಿದ್ದಾರೆ. ಅವರನ್ನು ಬಿಟ್ಟು ಏನು ಇಲ್ಲ ಅಲ್ಲಿ. ಒಂದು ಕಡೆ ಹೋದರೆ ಶ್ರೀ ಕೆ.ಎಸ್.ಈಶ್ವರಪ್ಪ ಎನ್ನುತ್ತಾರೆ, ಇನ್ನೊಂದು ಕಡೆ ಹೋದರೆ ಶ್ರೀ ಬಿ.ಎಸ್.ಯಡಿಯೂರಪ್ಪ ಅನ್ನುತ್ತಾರೆ. ಅವರ ಜಿಲ್ಲೆಯಲ್ಲಿ ನಡೆದಿರುವ ಘಟನೆಯನ್ನು ಅಷ್ಟು ಸುಲಭವಾಗಿ ನಾವು ತಳ್ಳಿ ಹಾಕಲು ಆಗುವುದಿಲ್ಲ. ಬಹಳ ಜನ ಸದಸ್ಯರು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು ಪುಲ್ವಾಮಾದಲ್ಲಿ 250 ಕೆ.ಜಿ. ಆರ್‌ಡಿಎಕ್ಸ್ ಬಂದಾಗ ಇಡೀ ದೇಶದಲ್ಲಿ ಅಲ್ಲೋಲ-ಕಲ್ಲೋಲ ಉಂಟಾಯಿತು. ಇಲ್ಲಿ 1350 ಕೆ.ಜಿ. explosives ಅಂದರೆ, gelatin ಬಂದಿರುವುದು, ammonium nitrate ಎಂದು ಇದನ್ನು dynamite ಎಂದು ಕರೆಯುತ್ತೇವೆ. ಮಾನ್ಯ ವಿಶ್ವನಾಥ್‌ರವರಿಗೆ ಗೊತ್ತಿದೆ. Dynamite ಎಂದರೆ ಮಾನ್ಯ ಜಾರ್ಜ್ ಫರ್ನಾಂಡೀಸ್‌ರವರ ಜ್ಞಾಪಕ ಬರುತ್ತದೆ. Baroda dynamite ನಿಂದ ಹಿಡಿದು ಅದೇನು ಕಾರಣಗಳಲ್ಲಿ dynamites ಇವೆ ಎನ್ನುವುದೆಲ್ಲವು ಈಚೆಗೆ ಬರುತ್ತವೆ. ಮೊದಲು ಇದಕ್ಕಾಗಿ ಬಹಳಷ್ಟು precautionary measure ಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಿದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಸೂರು ಸೋಪ್ಸ್ ಏನು ಇದೆ, ಇಂದು ಅದು heart of the city. ಆದರೆ, ಮೊದಲು ಬೆಂಗಳೂರು ಅಲ್ಲಿಗೆ ಕೊನೆಯಾಗುತ್ತಿತ್ತು. ಹಿಂದೆ ಅದರ ಹಿಂದಿನ 100 ಎಕರೆ ಜಾಗದಲ್ಲಿ dynamites ಇಡುತ್ತಿದ್ದರು, ಸರ್ಕಾರಿ ಸ್ವಾಮ್ಯದ ಒಂದು ಸಂಸ್ಥೆಗೆ godown ಮಾಡಿಕೊಳ್ಳಲು ಕೊಟ್ಟಿದ್ದರು. ಅಲ್ಲಿ ನಾವು ಕ್ರಿಕೆಟ್ ಆಡಲು ಹೋದರೆ ಅಲ್ಲಿ ಹೋಗಬೇಡಿ, ಅಲ್ಲಿ ಪೂರ್ಣ ಜಾಗದಲ್ಲಿ ಭೂಮಿಗೆ ಕೆಳಗೆ dynamites ಇಟ್ಟಿದ್ದೇವೆ ಎಂದು ಹೇಳುತ್ತಿದರು. ಈಗ ಅದು ಅಲ್ಲಿಂದ ಶಿಫ್ಟ್ ಆಗಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಸಭಾಪತಿಗಳ ಜಿಲ್ಲೆಯ ಏರ್‌ಪೋರ್ಟ್‌ನಲ್ಲಿ ಯಾರೋ ಪಟಾಕಿ ಹೊಡೆಯುತ್ತಾರೆ. ಆಗ N.I.A. (National Investigation Agency) ಯವರು ಬರಬೇಕು ಎಂದು ಕೂಗಾಡಿಬಿಟ್ಟರು. ಭಟ್ಕಳ ಜಿಲ್ಲೆಯಲ್ಲಿ ಏನೊ ಆಗುತ್ತದೆ ಆಗ National Security Agency ಬರಬೇಕೆಂದು ಕೂಗಾಡಿದರು. ನಮ್ಮ party stand, ಅವರು ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆಯಾಗಬೇಕು ಎಂದು ಹೇಳಿದ್ದಾರೆ. ಅದಕ್ಕೆ ನಾನು ಬದ್ಧ. ಇಷ್ಟೊಂದು ಗಂಭೀರವಾದ, ಯಾವ ಭಯೋತ್ಪಾದಕರು ಇಷ್ಟೊಂದು dynamites ತರಲು ಆಗುವುದಿಲ್ಲ. ನನ್ನ ಸಣ್ಣ ಅನುಭವದಲ್ಲಿ ಹೇಳುತ್ತೇನೆ, ಈ ದೇಶದಲ್ಲಿ ನಡೆಯುವ ಎಲ್ಲಾ ಅನಾಹುತಗಳ ಬಗ್ಗೆ Intelligence Department ಗೆ ಗೊತ್ತಿರುತ್ತದೆ. ಒಳಗಡೆ, internal security ಇರುತ್ತದೆ ಹಾಗೂ external security ಯವರು ನೋಡುತ್ತಿರುತ್ತಾರೆ. ಪುಲ್ವಾಮಾ ಘಟನೆಯಲ್ಲಿ ಪಾಕಿಸ್ತಾನದಿಂದ ಬರುತ್ತಿರುವುದು ಅವರಿಗೆ ಗೊತ್ತಿಲ್ಲ ಎಂದು ಇಲ್ಲ ಗೊತ್ತಿರುತ್ತದೆ. ಈಗಲೂ ಸಹ ಗೊತ್ತಿರುತ್ತದೆ. ರಾಜ್ಯದ ವಿಚಾರ ಬಂದಾಗ State Intelligence ಇರುತ್ತದೆ. District Intelligence ಇರುತ್ತದೆ. Station information ಇಟ್ಟುಕೊಂಡಿರುತ್ತಾರೆ. Internal security ಕೂಡಾ ಇರುತ್ತದೆ. ಇವೆಲ್ಲವು ಸಹ fail ಆಗಿವೆ ಎಂದು ಹೇಳಿದರೆ, ಯಾರಿಗೆ ತಾವು ಜವಾಬ್ದಾರನ್ನಾಗಿ ಮಾಡುತ್ತೀರಿ. ನಮ್ಮ ಗೃಹ ಸಚಿವರು ಒಳ್ಳೆಯ ವ್ಯಕ್ತಿ. ಅವರ background ಬೇರೆ. ಅವರನ್ನು ನಾನು blame ಮಾಡಲು ಹೋಗುವುದಿಲ್ಲ. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತದೆ ಎಂದರೆ, ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಇನ್ನೊಬ್ಬರು, most powerful cabinet ಮಂತ್ರಿಗಳು ಇದ್ದಾರೆ. ಇವರ ಮೂಗಿನ ಅಡಿಯಲ್ಲಿ ಈ ಕೆಲಸ ನಡೆದಿದೆ ಎಂದರೆ, ಇದನ್ನು ಬಹಳ ಲೈಟ್ ಆಗಿ ತೆಗೆದುಕೊಂಡಿದ್ದೇವೆ ನಾವು. ಇದರ ಸತ್ಯ ಹೊರಗಡೆ ಬರಬೇಕಾದರೆ, **ಇದರಲ್ಲಿ**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರೀ ಗಣಿಗಾರಿಕೆ, ಕ್ರಷರ್ ಎನ್ನುವುದನ್ನು ನಾನು ಒಪ್ಪಲು ತಯಾರಿಲ್ಲ. ಯಾವುದೋ ಒಂದು ದೊಡ್ಡ ದುರ್ಘಟನೆಯನ್ನು ಮಾಡಲು ಹೊರಟ್ಟಿದ್ದಾರೆ ಎನ್ನುವುದು ನನ್ನ ಆರೋಪ. ಇದರಲ್ಲಿ ಯಾರದೊ ಆರ್ಶೀವಾದ, ಕೈವಾಡವಿದೆ. ಅದೆಲ್ಲವು ಹೊರಗಡೆ ಬರಬೇಕು ಎಂದರೆ, N.I.A., N.S.A. ದಿಂದ ವಿಚಾರಣೆ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ನಮ್ಮ ನಾಯಕರು ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ಆಗಬೇಕು ಎಂದು ಹೇಳಿದ್ದಾರೆ ಅದಕ್ಕೆ ನಾನು ಬದ್ಧನಾಗಿದ್ದೇನೆ. ಕೆಲವು ವಿಚಾರಗಳು ಬಂದಾಗ, ಅಕ್ರಮಗಳನ್ನು ಸಕ್ರಮ ಮಾಡುವುದು, 23ನೇ ಮತ್ತು 24ನೇ ತಾರೀಖಿನಂದು ಮಾಡಿರುವ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನೋಡಿ. ಮೂಲಭೂತ ಸೌಕರ್ಯಗಳು ಜಾಸ್ತಿಯಾಗುತ್ತಿರುವುದರಿಂದ, ಚಟುವಟಿಕೆಗಳು ಜಾಸ್ತಿಯಾಗಿರುವುದರಿಂದ ಅದಕ್ಕೆ ಬೇಕಾಗಿರುವ ಕಲ್ಲು ಮತ್ತು M-Sand ಬೇಕಾಗಿರುವುದರಿಂದ ಜಾಸ್ತಿ ಪರವಾನಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. 24 ಜಿಲ್ಲೆಗಳಲ್ಲಿ ಅನಧಿಕೃತವಾಗಿ, unauthorized crushing, mining ಎಲ್ಲವು ನಡೆಯುತ್ತಿದೆ. ಆದರೆ ಅವರು crushers ಗೆಲ್ಲಾ license ಕೊಟ್ಟು quarries ಗೆ license ಇಲ್ಲ ಎಂದು ಹೇಳಿಕೆ ಮಾಡುತ್ತಾರೆ. ಯಾವ ಕ್ವಾರಿಯಿಂದ ಬಂದಿದೆ ಎಂದು ಹೇಗೆ ಹೇಳಲಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು shipment ಎಲ್ಲಿಂದ ಬಂದಿದೆ ಅದನ್ನು ತನಿಖೆ ಮಾಡುತ್ತಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಜಾಸ್ತಿ ದೂರಬೇಡ, ಇಲ್ಲಿಯೇ ಅನಂತಪುರಕ್ಕೆ ಹೋದರೆ ಅದನ್ನು red corridor ಎಂದು ಕರೆಯಲಾಗುತ್ತದೆ. ನೇಪಾಳದಿಂದ ಹಿಡಿದು ಅನಂತಪುರದವರೆಗೆ ನಕ್ಸಲೈಟ್ ಬೆಲ್ಟ್ ಇದೆ. ಸುಮಾರು 230 ಜಿಲ್ಲೆಗಳಲ್ಲಿ ಇದರ ಪ್ರಭಾವವಿದೆ. Red corridor ಎಂದರೆ Kathmandu ವಿನಿಂದ ಪ್ರಾರಂಭ ಮಾಡಿದರೆ ಅನಂತಪುರದವರೆಗೆ ಬರುತ್ತದೆ. ಅದು ಪಾವಗಡದವರೆಗೆ ಬಂದಿದೆ. ಇದನ್ನು ತೆಗೆದು ಹಾಕಲು ಸುಲಭವಾದ ವಿಚಾರವಲ್ಲ. ಯಾರ ಬಳಿಯಾದರು ಎರಡೂವರೆ ಕೆ.ಜಿ. ದನದ ಮಾಂಸವಿದ್ದರೆ ಪೊಲೀಸ್‌ನವರು ಹಿಡಿಯುತ್ತಾರೆ. ಲವ್‌ಜಿಹಾದ್ ಎಂದರೆ ಅದನ್ನು NIA ಗೆ ಹಾಕಿ ಎನ್ನುತ್ತಾರೆ. ಆದರೆ 1300 ಕೆ.ಜಿ. dynamite, gelatin ಬಂದಿದೆ. ಇದನ್ನು ಪೊಲೀಸ್‌ನವರು ತನಿಖೆ ಮಾಡುತ್ತಾರೆ, ಇನ್ನೊಂದು ವಿಚಾರಣೆ ಮಾಡಿಸುತ್ತೇವೆ ಎಂದರೆ ಅದರಿಂದ ಸತ್ಯ ಹೊರಗೆ ಬರುವುದಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(058)01-02-2021(05-40)ಬಿಎಸ್‌ಡಿ-ಜಿಆರ್**

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು)**

ಇದರಲ್ಲಿ ಭಾರಿ ಅವ್ಯವಹಾರಗಳಿವೆ, ನಮ್ಮ ಸ್ನೇಹಿತರು ಮಾಫಿಯಾ ಇದೆ ಎಂದು ಹೇಳಿದರು. ಮೊದಲು ಲಿಕ್ಕರ್ ಮಾಫಿಯಾ, ನಂತರ ಕಲ್ಲಿನ ಮಾಫಿಯಾ ಎಂದರೆ granite ಮಾಫಿಯಾ, mining ಜಗತ್‌ಪ್ರಸಿದ್ಧವಾಗಿದ್ದು ಬಳ್ಳಾರಿಯಿಂದ. ಏನೇನಾಗಿದೆ ಎಂಬ ಬಗ್ಗೆ ನಾನು ವಿಸ್ತಾರವಾಗಿ ಹೇಳುವುದಿಲ್ಲ, ಇದು ಎಲ್ಲರಿಗೂ ಗೊತ್ತಿದೆ. ಇಡೀ ರಾಷ್ಟ್ರದಲ್ಲಿ ಕರ್ನಾಟಕದ ಹೆಸರು ಇಷ್ಟೊಂದು ಕೆಟ್ಟಿರಲಿಲ್ಲ. ನಾವು ಕಾನೂನುಬಾಹಿರವಾಗಿ ಇಂತಹ ಕೆಲಸಗಳಿಗೆ ಅವಕಾಶ ಕೊಡುತ್ತೇವೆ ಎಂದು ಇರಲಿಲ್ಲ. ಯಾವುದೋ ಬಿಹಾರ, ಉತ್ತರ ಪ್ರದೇಶದಲ್ಲಿ ಇಂತಹ ಘಟನೆಗಳು ನಡೆಯುತ್ತಿದ್ದರೆ ಅಲ್ಲಿ ಹಾಗೆಯೇ ನಡೆಯುತ್ತಿರುತ್ತವೆ. ಅಲ್ಲಿ ಅಕ್ರಮವೇ ಸಕ್ರಮ. ಆದರೆ ನಮ್ಮಲ್ಲಿ ಆಗುವುದು ಬೇಕಾಗಿರಲಿಲ್ಲ. ಅಂದರೆ ಇವರು ಕಾನೂನು ಮಾಡುವುದೆಲ್ಲಾ only to be bypassed. ಕಾನೂನನ್ನು ಮಾಡಿ, ಆಮೇಲೆ one fine day ಅಕ್ರಮವೆಲ್ಲವನ್ನು ಸಕ್ರಮ ಮಾಡುತ್ತಾರೆ. ಶಿವಮೊಗ್ಗದಲ್ಲಿ ಪರಿಸರವಾದಿಗಳು ಸರ್ಕಾರದಿಂದ ತಪ್ಪಾಗಿ, permission ಕೊಟ್ಟಾಗಿದೆ ಎಂದು ಹೇಳುತ್ತಿದ್ದಾರೆ. ಆಗಬೇಕಾದ ದೊಡ್ಡ ಅನಾಹುತ ತಪ್ಪಿದೆ. ಇದು ರಾಜ್ಯದ ಜನತೆಯ ಅದೃಷ್ಟ ಅಷ್ಟೇ. ನಮ್ಮ ಹೊರಟ್ಟಿಯವರು ಹೇಳಿದಂತೆ ಶಿವಮೊಗ್ಗ ಸಿಟಿಯಲ್ಲಿನ ಯಾವುದೋ ಹೊಟೇಲ್‌ನಲ್ಲಿ ತಿಂಡಿ ತಿಂದು ಮುಂದೆ ಹೋದರಂತೆ! ಅಲ್ಲಿಯೇ blast ಆಗಿದ್ದರೆ ಏನಾಗುತ್ತಿತ್ತು? ಮಲೆನಾಡಿನ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಕಡೆಗಳಲ್ಲಿ ಇಂತಹ ಚಟುವಟಿಕೆಗಳನ್ನು ಯಾರೂ ನೋಡುತ್ತಿರಲಿಲ್ಲ. ಕಾನೂನು ಬಾಹಿರ ಕೆಲಸಗಳು ರಾತ್ರಿ ಹೊತ್ತಿನಲ್ಲಿಯೇ ಆಗುತ್ತವೆಯೇ ಹೊರತು ಬೆಳಗ್ಗೆ ಹೊತ್ತು ಆಗುವುದಿಲ್ಲ. ಅಲ್ಲಿ ರಾತ್ರಿ ಆಗಿದ್ದರಿಂದ 5 ಜನ ಸತ್ತರು, ಬೆಳಗ್ಗೆ ಆಗಿದ್ದರೆ ಹೆಚ್ಚು ಜನ ಸಾಯುತ್ತಿದ್ದರು. ಆದರೆ ಅಲ್ಲಿ ಕೆಲಸ ಮಾಡುತ್ತಿರುವವರು ಎಲ್ಲಿದ್ದಾರೆ ಎಂದು ಯಾರಿಗೂ ಸಹ ಗೊತ್ತಿಲ್ಲ. ಆದ್ದರಿಂದ ನಮ್ಮ ಪಕ್ಷದ ತೀರ್ಮಾನದಂತೆ High Court Judge ನಿಂದ ವಿಚಾರಣೆ ಆಗಬೇಕು, ಆದರೆ ದೊಡ್ಡ ದುರ್ಘಟನೆ ಮಾಡಲು ಯಾರೋ ಪ್ರಯತ್ನ ಮಾಡಿದ್ದಾರೆ, ಅದು ಹೊರಗಡೆ ಬರಬೇಕೆಂದರೆ N.I.A., or N.S.A., ಯಿಂದ ತನಿಖೆಯಾಗಿ ಸತ್ಯ ಹೊರಬರಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು. ಈಗಾಗಲೇ ಅಕ್ರಮ ಗಣಿಗಾರಿಕೆ ಬಗ್ಗೆ ವಿರೋಧ ಪಕ್ಷದ ನಾಯಕರು ಸೇರಿದಂತೆ ಬಹಳಷ್ಟು ಸದಸ್ಯರು ತಮ್ಮದೇ ಆದ ರೀತಿಯಲ್ಲಿ ಸರ್ಕಾರಕ್ಕೆ ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಹೆಚ್ಚು ಸಮಯ ಮಾತನಾಡುವುದಿಲ್ಲ. ನಾನು ಕಳೆದ ಇಪ್ಪತ್ತೊಂದೂವರೆ ವರ್ಷಗಳಿಂದ ಈ ಸದನದಲ್ಲಿ ಸದಸ್ಯನಾಗಿದ್ದು, ಇಂತಹ ಅಕ್ರಮ ಗಣಿಗಾರಿಕೆ ಬಗ್ಗೆ ಹತ್ತಾರು ಬಾರಿ ಸರ್ಕಾರ ಮತ್ತು ಸದನಗಳಲ್ಲಿ ಚರ್ಚೆ ಮಾಡಲಾಗಿದೆ. ಆದರೆ ಯಾವ ಸರ್ಕಾರವು ಇದನ್ನು ತಪ್ಪಿಸತಕ್ಕ ಕಾಯ್ದೆಯಾಗಲಿ ಅಥವಾ ವ್ಯವಸ್ಥೆಯನ್ನು ರೂಪಿಸಲಿಲ್ಲ. ಇದನ್ನು ಬಹಳ ಮನನೊಂದು ಹೇಳುತ್ತಿದ್ದೇನೆ. ಕಳೆದ 10 ವರ್ಷಗಳ ಹಿಂದೆ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ gelatin stick ಸ್ಫೋಟಗೊಂಡು 6 ಮಂದಿ ದುರ್ಮರಣ ಹೊಂದಿದರು. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿದ್ದು, ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಹಾಗೂ ಮಂತ್ರಿಗಳೆಲ್ಲರೂ visit ಮಾಡಿದ್ದಾರೆ. ಮರಣ ಹೊಂದಿದವರಿಗೆ ಪರಿಹಾರ ಘೋಷಣೆ ಮಾಡಿದ್ದಾರೆ. ಉನ್ನತ ಮಟ್ಟದ ತನಿಖೆ ಮಾಡಿಸುವುದಾಗಿ ಹೇಳಿದ್ದಾರೆ. ಅಕ್ರಮ ಗಣಿಗಾರಿಕೆ ಬಗ್ಗೆ ಎಲ್ಲಾ ಸರ್ಕಾರಗಳು ಇದನ್ನೇ ಮಾಡುತ್ತಿರುವುದು. ಯಾವ ತನಿಖಾ report ಹೊರಬಂದು ಅದರ ಮೇಲೆ ಕ್ರಮ ಆಗಿರುವುದನ್ನು ನಾವು ನೋಡಲಿಲ್ಲ. ಇಂತಹ ವ್ಯವಸ್ಥೆ ಇನ್ನೂ ಮುಂದುವರೆಯುವುದಾದರೆ ನಾಡಿನ, ಸಮಾಜದ ಹಾಗೂ ಪರಿಸರದ ರಕ್ಷಣೆ ಯಾವ ಸರ್ಕಾರದಿಂದ ಸಾಧ್ಯ ಎಂಬುದರ ಬಗ್ಗೆ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಇಂತಹ ಪ್ರಕರಣಗಳು ಮರುಕಳಿಸಿದಾಗ ಎಲ್ಲಾ ಸರ್ಕಾರಗಳು ಈ ರೀತಿ ಮಾಡುವುದಾದರೆ ನಾವು ನಮ್ಮನ್ನು ವಿಮರ್ಶೆಗೆ ಒಳಪಡಿಸಿಕೊಳ್ಳದಿದ್ದರೆ ಬಡ ಜನರ ಜೀವನ ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಸಮಾಜದ ಪರಿಸರವನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಹರಿಪ್ರಸಾದ್‌ರವರು ಶಿವಮೊಗ್ಗ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಬಹಳ ವಿಶಿಷ್ಟವಾದ ಮಾನ್ಯತೆ ಪಡೆದಿದೆ ಎಂದು ಹೇಳಿದರು. ಅಲ್ಲಿನ ರಾಜಕಾರಣಿಗಳು, ಪರಿಸರವಾದಿಗಳು, ವ್ಯವಸಾಯಗಾರರು, ಸಾಹಿತಿಗಳು ಇರಬಹುದು, ಶ್ರೀಯುತ ಕುವೆಂಪುರವರ ನಾಡು, ಮಾನ್ಯ ಕುವೆಂಪುರವರ ಸಾಹಿತ್ಯ ಪ್ರಕರಣಗಳಲ್ಲಿ ಅವರ ಎಲ್ಲಾ ಸಾಹಿತ್ಯಗಳು ಪರಿಸರದ ಮೇಲೆ ಜಗತ್ತಿನಾದ್ಯಂತ ಹೆಸರು ಪಡೆದಿದೆ. ಅವರ ಮಗ ಶ್ರೀ ಪೂರ್ಣಚಂದ್ರ ತೇಜಸ್ವಿರವರು ಕೂಡ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಸ್ಥಾನದಲ್ಲಿದ್ದರು. ಸುಮಾರು 4 ಮುಖ್ಯಮಂತ್ರಿಗಳನ್ನು ಶಿವಮೊಗ್ಗ ಜಿಲ್ಲೆಯಿಂದ ಕಂಡುಕೊಂಡಿದ್ದೇವೆ. ಮಾನ್ಯ ಕಡಿದಾಳ್ ಮಂಜಪ್ಪನವರು, ಮಾನ್ಯ ಎಸ್.ಆರ್. ಬಂಗಾರಪ್ಪನವರು, ಮಾನ್ಯ ಜೆ.ಹೆಚ್. ಪಟೇಲ್ ರವರು ಹಾಗೂ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಆ ಜಿಲ್ಲೆಯಿಂದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದವರಾಗಿದ್ದಾರೆ. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ನಾಲ್ಕು ಬಾರಿ ಮುಖ್ಯಮಂತ್ರಿಗಳಾಗಿರುವುದು ವಿಶ್ವ ದಾಖಲೆಯಾಗಿದೆ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ನಿಜಲಿಂಗಪ್ಪನವರು ನಾಲ್ಕು ಬಾರಿ ಆಗಿದ್ದರು, ಮಾನ್ಯ ಯಡಿಯೂರಪ್ಪನವರು ಇವರ ದಾಖಲೆಯನ್ನು ಸರಿಗಟ್ಟಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಅವರು ಚಿತ್ರದುರ್ಗ ಜಿಲ್ಲೆಯವರು. ಶಿವಮೊಗ್ಗ ಜಿಲ್ಲೆಯವರಾದ ಯಾರಾದರೂ 5ನೇ ಬಾರಿ ಮುಖ್ಯಮಂತ್ರಿಯಾದರೆ......

**ಶ್ರೀ ಎಸ್. ಆರ್. ಪಾಟೀಲ್:–** ದಾಖಲೆ ಸರಿಗಟ್ಟುವ ವಿಷಯದಲ್ಲಿ ಹೇಳಿದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ರೀತಿಯ ಪರಿಸ್ಥಿತಿಯಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ನಂತರ ಶಿವಮೊಗ್ಗ ಜಿಲ್ಲೆಯನ್ನು ಬಹಳ ಅಭಿವೃದ್ಧಿ ಮಾಡಿದರು ಎಂಬುದನ್ನು ನಾವು ಮಾಧ್ಯಮ ಮತ್ತು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ ಈ ಪ್ರಕರಣದಿಂದ ನಮಗೆ ಗೊತ್ತಾಗುತ್ತಿದೆ. ಬರೀ ರಸ್ತೆಗಳನ್ನು ನೋಡಿಕೊಳ್ಳಬೇಕು. ಒಳಗೆ ಪರಿಸರ ಎಷ್ಟು ಹಾಳಾಗಿದೆ, ಪಶ್ಚಿಮ ಘಟ್ಟ ಎಷ್ಟು ಹಾಳಾಗಿದೆ? ಇದರ ಪರಿಸ್ಥಿತಿ ಏನು? ಮಾನ್ಯ ಸಭಾಪತಿಯವರೆ, 20% ಅಧಿಕೃತ ಪರವಾನಗಿ ಹೊಂದಿರುವ ಗಣಿಗಾರಿಕೆಗಳಿವೆ. ಇನ್ನು 80% ಅನಧಿಕೃತ ಗಣಿಗಾರಿಕೆಗಳಿವೆ. ಶಿವಮೊಗ್ಗ ಜಿಲ್ಲೆಯಲ್ಲಿ ಸಾವಿರಾರು ಅಕ್ರಮ ಗಣಿಗಾರಿಕೆಗಳು ನಡೆಯುತ್ತಿವೆ ಎಂದಾಗ ಅಲ್ಲಿನ ಪರಿಸರ ಉಳಿದಿದೆಯೇ? ಇವತ್ತು ರಾಜ್ಯದಲ್ಲಿ ರಾಜಕಾರಣಿಗಳ ಪ್ರಭಾವದಿಂದ ಗಣಿಗಾರಿಕೆಯಲ್ಲಿ ದೊಡ್ಡ ಲಾಬಿ ಇದೆ. ಕೆಲವು ರಾಜಕಾರಣಿಗಳ ಪ್ರಭಾವಿಗಳು, ಅವರ ಮಕ್ಕಳು, ಹೆಂಡತಿ, ನಾದಿನಿ, ಬಂಧು–ಬಾಂಧವರು, ಸ್ನೇಹಿತರು ಹಾಗೂ ಕಾರ್ಯಕರ್ತರ ಹೆಸರುಗಳಲ್ಲಿ ಗಣಿಗಾರಿಕೆಗಳು ಇವೆ. ಅದಕ್ಕಾಗಿಯೇ ಯಾವ ಸರ್ಕಾರದಲ್ಲಿಯೂ ಎಷ್ಟೋ ಅಮಾಯಕರು ಸತ್ತರೂ ಒಂದು ಪರಿಹಾರ ಘೋಷಣೆ ಮಾಡಿ, ಒಂದು ತನಿಖೆಗೆ ಆದೇಶ ಮಾಡಿಬಿಡುವುದು. ಇದರಿಂದ ಮತ್ತೆ ಮತ್ತೆ ನಡೆಯುತ್ತಿದೆ. ಇಡೀ ರಾಜ್ಯದಲ್ಲಿ 80% ಅನಧಿಕೃತ ಗಣಿಗಾರಿಕೆ ನಡೆಯುತ್ತಿದ್ದರೂ, ಯಾವುದೇ ಜಿಲ್ಲೆಯಲ್ಲಿಯೂ ಅನಧಿಕೃತ ಗಣಿಗಾರಿಕೆ ಪಟ್ಟಿಯನ್ನು ಭೂ ವಿಜ್ಞಾನ ಇಲಾಖೆಯವರು ಪ್ರಚುರ ಪಡಿಸುವುದಿಲ್ಲ. ಹಳ್ಳಿಯಲ್ಲಿರುವ ಸಾಮಾನ್ಯ ಜನರಿಗೆ ಗಣಿಗಾರಿಕೆ ಬಗ್ಗೆ ಅಧಿಕೃತ ಮತ್ತು ಅನಧಿಕೃತ ಎಂದು ಗೊತ್ತಿಲ್ಲ. ಎಲ್ಲರೂ ಸರ್ಕಾರವೇ ಅನುಮತಿ ಕೊಟ್ಟು ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ತಿಳಿದಿದ್ದಾರೆ. ಗಣಿಗಾರಿಕೆಯಿಂದ ಕೆಲವು ಗ್ರಾಮಗಳಲ್ಲಿ ಜನರ ಜೀವನವೇ ಅಸ್ತವ್ಯಸ್ಥವಾಗಿದೆ. ವ್ಯವಸಾಯ ಹಾಳಾಗಿದೆ. ದೂರು ನೀಡಿದರೂ ಯಾವ ಇಲಾಖೆಗಳು ಗಣಿಗಳನ್ನು ಮುಚ್ಚುವ ಕ್ರಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುವ ಪರಿಸ್ಥಿತಿಗೆ ಹೋಗುತ್ತಿಲ್ಲ. ಇತ್ತೀಚೆಗೆ ನಾನು ಪತ್ರಿಕೆಗಳಲ್ಲಿ ಓದಿದಂತೆ ತಮ್ಮದೇ ಸಕ್ಕರೆ ಕಾರ್ಖಾನೆಯಲ್ಲಿ ಮೂರು ಮಂದಿಗೆ ಅನಾಹುತ ಆಯಿತು. ಅವರು ಪರಿಹಾರ ಕೊಟ್ಟರು ಮತ್ತು ಸರ್ಕಾರವು ಪರಿಹಾರ ನೀಡಿದೆ. ಈ ರೀತಿ ಮಾಡಿಕೊಂಡು ಹೋಗುತ್ತಿದ್ದರೆ ಸಮಾಜದ ಮತ್ತು ಸಾಮಾನ್ಯ ಜನರ ರಕ್ಷಣೆ ಎಲ್ಲಿ ಆಗುತ್ತದೆ? ಈ ಅಕ್ರಮ ಗಣಿಗಾರಿಕೆಯಲ್ಲಿ ಅಧಿಕಾರಿಗಳ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಎರಡು ಕೈಗಳು ಜೊತೆಯಾಗಿವೆ. ಕೆಲವು ರಾಜಕಾರಣಿಗಳ ಅಧಿಕಾರದ ಪ್ರಭಾವವೂ ಇದೆ. ಅದರಿಂದ ಯಾವ ಸರ್ಕಾರ ಬಂದರೂ ಏನೂ ಮಾಡುವುದಕ್ಕೆ ಆಗುತ್ತಿಲ್ಲ. ನಾಲ್ಕನೆಯ ಬಾರಿ ಮುಖ್ಯಮಂತ್ರಿಯಾಗಿರುವ ಮಾನ್ಯ ಬಿ.ಎಸ್. ಯಡಿಯೂರಪ್ಪನವರೂ ಸಂಪೂರ್ಣವಾಗಿ ಸೋತು ಹೋಗಿದ್ದಾರೆ. ಅದರಲ್ಲಿಯೂ ನಾಲ್ಕನೆಯ ಬಾರಿ ಮುಖ್ಯಮಂತ್ರಿಯಾಗಿರುವ ಈ ಬಾರಿ ತೀರಾ ಸೋತು ಹೋಗಿ ಅವರು ಒಂದು ದಿವಸವೂ ನೆಮ್ಮದಿಯಾಗಿ ಆಡಳಿತ ಮಾಡಲು ಆಗುತ್ತಿಲ್ಲ. ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಲು ಆಗುತ್ತಿಲ್ಲ, ಕೋವಿಡ್–19 ಬಂತು, ಸಂಪುಟ ವಿಸ್ತರಣೆಯಿಂದ ಭಯಂಕರ ಜಗ್ಗಾಟ ಆಯಿತು.

**(ಮುಂದು)**

**(59)/01.02.2021/5.50/ಹೆಚ್‌ವಿಃಜಿಆರ್**

**ಶ್ರೀ ಮರಿತಿಬ್ಬೇಗೌಡ(ಮುಂದು):–**

ಸನ್ಮಾನ್ಯ ಸಭಾಪತಿಯವರೇ, ಅನಂತರ ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ನೇಮಕ ಮಾಡುವ ಬಗ್ಗೆ ಹಗ್ಗಜಗ್ಗಾಟ ನಡೆದಿತ್ತು. ನಂತರ ಖಾತೆ ಹಂಚಿಕೆ ವಿಚಾರದಲ್ಲಿ ಭಯಂಕರ ಜಗ್ಗಾಟ ನಡೆದಿತ್ತು. ಈ ಎಲ್ಲ ಕಾರಣಗಳಿಂದಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನೆಮ್ಮದಿಯೇ ಇಲ್ಲದಂತಾಗಿದೆ. ಈ ಮನಸ್ಥಿತಿಯಲ್ಲಿ ಅವರು ರಾಜ್ಯದ ಆಡಳಿತವನ್ನು ಯಾವ ರೀತಿ ನೋಡಿಕೊಳ್ಳುವುದಕ್ಕೆ ಸಾಧ್ಯವಿದೆ? ಅನಾಹುತವಾದ ದಿನ ಮಾನ್ಯ ಮುಖ್ಯಮಂತ್ರಿಗಳು ಘಟನಾ ಸ್ಥಳಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗಿ ಸಂತ್ರಸ್ತರಿಗೆ ಸಾಂತ್ವನ ಹೇಳಿ ಪರಿಹಾರ ಘೋಷಣೆ ಮಾಡಿದ್ದಾರೆ. ಘಟನೆಯ ಬಗ್ಗೆ ತನಿಖೆ ಮಾಡುವುದಕ್ಕೆ ಆದೇಶ ಮಾಡಿದ್ದಾರೆ. ಈ ಘಟನೆ ನಡೆದು ಸುಮಾರು 8 ದಿನಗಳಾಗಿವೆ. ಪೊಲೀಸ್ ಇಲಾಖೆಯಿಂದ ಮತ್ತು ಸಂಬಂಧಪಟ್ಟ ಇಲಾಖೆಯಿಂದ ಘಟನೆಯ ಬಗ್ಗೆ ವರದಿ ತರಿಸಿಕೊಂಡು ಕ್ರಮ ಜರುಗಿಸಿರುವ ಸುದ್ದಿಯನ್ನು ನಾವು ಇಲ್ಲಿಯವರೆವಿಗೂ ಯಾವುದೇ ಪತ್ರಿಕೆಗಳಲ್ಲಿ ಓದಿಲ್ಲ. ಸರ್ಕಾರ ತನಿಖೆಗೆ ಆದೇಶ ಮಾಡಿ, ಪರಿಹಾರ ನೀಡಿ ಸುಮ್ಮನಾಗಿದೆ. ಈ ಘಟನೆಯಲ್ಲಿ ಅಸುನೀಗಿದವರು ಎಂಥ ಅಮಾಯಕರು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಈ ಗಣಿಗಾರಿಕೆಯನ್ನು ಅನಧಿಕೃತವಾಗಿ ನಡೆಸುತ್ತಿದ್ದರೆ, ಸತ್ತವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋರ್ಟಿನಿಂದ ಯಾವುದೇ ಪರಿಹಾರ ದೊರೆಯುವುದಿಲ್ಲ ಮತ್ತು ಯಾರ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕೋರ್ಟಿನಲ್ಲಿ ಯಾವ ಕೇಸು ನಿಲ್ಲುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಗೋಹತ್ಯೆ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡರೆ, ಸುಮಾರು 7 ವರ್ಷಗಳ ಕಾಲ ಜೈಲು ಶಿಕ್ಷೆ ಮತ್ತು 10 ಲಕ್ಷ ರೂಪಾಯಿಗಳ ದಂಡವನ್ನು ವಿಧಿಸಲಾಗಿದೆ. ಇಂತಹ ಅಕ್ರಮ ಗಣಿಗಾರಿಕೆ ಮಾಡುವ ಲೂಟಿಕೋರರಿಗೆ ಕಾಯಿದೆಯಲ್ಲಿ 2 ವರ್ಷಗಳ ಕಾಲ ಜೈಲು ಶಿಕ್ಷೆ, ಕೇವಲ 5 ಲಕ್ಷ ರೂಪಾಯಿಗಳ ದಂಡವನ್ನು ವಿಧಿಸಲಾಗಿದೆ. ಶಾಸನ ರಚನೆ ಮಾಡುವಂತಹ ಶಾಸಕರಾದ ನಾವು, ಈ ರಾಜ್ಯದ ಪರಿಸರ ರಕ್ಷಣೆ, ಬಡವರ ಮತ್ತು ಗ್ರಾಮೀಣ ಜನರ ಹಿತದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಕಾಯಿದೆ ರೂಪಿಸಿದ್ದೇವೆ. ಪರಿಸರ ಹಾಳು ಮಾಡುವಂಥ ಕಳ್ಳಕಾಕರಿಗೆ 2 ವರ್ಷಗಳ ಜೈಲು ಶಿಕ್ಷೆ ಮತ್ತು 5 ಲಕ್ಷ ರೂಪಾಯಿಗಳ ಜುಲ್ಮಾನೆ ವಿಧಿಸಲಾಗಿದೆ. ಅಕ್ರಮ ಗಣಿಗಾರಿಕೆ ಮಾಡುವವರಿಗೆ ಇದು ಸಣ್ಣ ಪ್ರಮಾಣದ ಮೊತ್ತವಾಗಿದೆ. ಸರ್ಕಾರ ವಿಧಿಸಿರುವ ಈ ದಂಡದ ಪ್ರಮಾಣ ಅವರು ಯಾವುದೋ ಪಂಚತಾರಾ ಹೋಟೆಲ್‌ಗೆ ಹೋಗಿ ಕಾಫಿ ಕುಡಿಯುವುದಕ್ಕೆ ಸಮನಾಗಿರುತ್ತದೆ. ಕಾಯಿದೆ ಮಾಡುವಾಗ, ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡವರಿಗೆ 2 ವರ್ಷ ಜೈಲು 5 ಲಕ್ಷ ರೂಪಾಯಿಗಳ ದಂಡ ಎಂದು ಇದೆ. ಆದರೆ, ಇದಕ್ಕೆ ಪೂರಕವಾಗಿ ಕೆಲಸ ಮಾಡುವ ಕೆಲವು ಜಿಲ್ಲಾಧಿಕಾರಿಗಳು, ಗಣಿ ಮತ್ತು ಭೂಗರ್ಭ ಇಲಾಖೆಯ ಅಧಿಕಾರಿಗಳು ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಾಗುವುದಿಲ್ಲ. ನಮ್ಮ ರಾಜ್ಯದಲ್ಲಿರುವ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ವಿಶೇಷ ಅವಕಾಶವನ್ನು ನೀಡಬೇಕೆನ್ನುವುದು ನನ್ನ ಮನವಿಯಾಗಿದೆ. ಇಲ್ಲಿ ದೊಡ್ಡ ದಂಧೆ ನಡೆಯುತ್ತಿದೆ. ಇಂತಹ ಇಲಾಖಾ ಅಧಿಕಾರಿಗಳಿಗೆ ಕೋರ್ಟ್‌ನಲ್ಲಿ ಅಥವಾ ಕಾಯಿದೆಯಲ್ಲಿ ಯಾವುದೇ ರೀತಿಯ ಜುಲ್ಮಾನೆಯನ್ನು ವಿಧಿಸಿಲ್ಲ. ಇಂತಹ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಸಂಬಳಕ್ಕಿಂತ ಗಿಂಬಳವನ್ನೇ ಹೆಚ್ಚಾಗಿ ಪಡೆಯುತ್ತಾರೆ. ಅಧಿಕಾರಿಗಳು ಭ್ರಷ್ಟಾಚಾರಕ್ಕೆ ಕೈಜೋಡಿಸಿದಾಗ ಏನೇನು ಸಂಭವಿಸುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರವನ್ನು ಯಾವ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕಾಗಿತ್ತು ಅದರ ಎಲ್ಲೆಮೀರಿ ಪರಿಸರವನ್ನು ಸಂಪೂರ್ಣವಾಗಿ ನಾಶ ಮಾಡುತ್ತಿದ್ದೇವೆ. ನಾಡಿನ ಎಲ್ಲ ಜಿಲ್ಲೆಗಳಲ್ಲಿ ಅಕ್ರಮ ಗಣಿಗಾರಿಕೆ ಎನ್ನುವುದು ವ್ಯಾಪಕವಾಗಿದೆ. ಈ ಅಕ್ರಮ ಗಣಿಗಾರಿಕೆಯನ್ನು ತಪ್ಪಿಸುವುದಕ್ಕೆ ಯಾವ ಜಿಲ್ಲಾಧಿಕಾರಿಗಳು ಮುಂದೆ ಬರುತ್ತಿಲ್ಲ. ಯಾರೋ ಒಬ್ಬ ನಿಷ್ಠಾವಂತ ಅಧಿಕಾರಿಗೆ ಇಂತಹ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದರ ಬಗ್ಗೆ ಗೊತ್ತಾಗಿ ಅದನ್ನು ತಡೆಗಟ್ಟುವುದಕ್ಕೆ ಆತ ಆ ಸ್ಥಳಕ್ಕೆ ಭೇಟಿ ನೀಡಲು ಹೋದರೆ, ಬೇರೆ ಇಲಾಖೆಯವರ ಸಹಕಾರ ಆತನಿಗೆ ಇರುವುದಿಲ್ಲ. ಬೇರೆ ಇಲಾಖೆಯವರೇ ಅಕ್ರಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಣಿಗಾರಿಕೆ ಮಾಡುವವರಿಗೆ, 'ಇವತ್ತು ರಾತ್ರಿ ಅವರು ಸ್ಥಳಕ್ಕೆ ಭೇಟಿ ನೀಡುತ್ತಿದ್ದಾರೆ. ಅವರನ್ನು ಗುಂಡಿಕ್ಕಿ ಸಾಯಿಸಿ' ಎಂದು ಹೇಳಿಕೊಡುತ್ತಾರೆ. ಪ್ರಾಮಾಣಿಕ ಹಾಗೂ ನಿಷ್ಠಾವಂತ ಅಧಿಕಾರಿಗಳು ಕೆಲವರು ಇದ್ದಾರೆ. ಆದರೆ, ಅವರಿಗೆ ಕೆಲಸ ಮಾಡಲು ಇಂತಹ ಜನರು ಬಿಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ಸರ್ಕಾರ ತಂದಿರುವ ಕಾಯಿದೆಯಲ್ಲಿ ಶಕ್ತಿ ಇಲ್ಲ. ಎಲ್ಲ ಅಧಿಕಾರಿಗಳು ಭ್ರಷ್ಟರ ಪರವಾಗಿ ಮತ್ತು ಅಕ್ರಮ ಗಣಿಗಾರಿಕೆಯ ಪರವಾಗಿ ನಿಂತಿದ್ದಾರೆ. ಆದ್ದರಿಂದ ಕೆಲವೇ ಬೆರಳೆಣಿಕೆಯಷ್ಟು ಇರುವಂತಹ ಪ್ರಾಮಾಣಿಕ ಅಧಿಕಾರಿಗಳು ಹೆಂಡತಿ ಮಕ್ಕಳ ಮುಖ ನೋಡಿಕೊಂಡು ಅಕ್ರಮ ಗಣಿಗಾರಿಕೆಯನ್ನು ತಡೆಯುವ ಕೆಲಸದಿಂದ ಹಿಂದೆ ಸರಿಯುತ್ತಾರೆ. ಯಾಕೋ ಶಕುನ ಸರಿಯಿಲ್ಲವೆಂದು ಯಾವ ದಾಳಿಯನ್ನು ಮಾಡುವುದಿಲ್ಲ, ಯಾವ ಶಿಕಾರಿಯನ್ನು ಮಾಡುವುದಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಿಂದಾಗಿ ಸಮಾಜದ ಸರ್ವಸ್ವವೇ ಹಾಳಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಈ ಘಟನೆಯಲ್ಲಿ ಮೃತಪಟ್ಟಿರುವ ಕುಟುಂಬದವರಿಗೆ 5 ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟರೆ ಸಾಕಾಗುವುದಿಲ್ಲ. ಕೂಲಿಕಾರ್ಮಿಕನ ಜೀವಕ್ಕೆ ಬೆಲೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ತಕ್ಕಡಿಯಲ್ಲಿ ತೂಕ ಮಾಡಿದಂತೆ ಅವರ ಜೀವಕ್ಕೆ 5 ಲಕ್ಷ ರೂಪಾಯಿಗಳ ಬೆಲೆ ಕಟ್ಟುವುದು ನ್ಯಾಯ ಸಮ್ಮತವಲ್ಲ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೂ ಅವರುಗಳ ಹಿತ ಕಾಪಾಡಬೇಕಾಗಿದೆ. ಜಿಲೆಟಿನ್ ಹೇಗೆ ಬಂತು, ಯಾವ ರೀತಿಯಲ್ಲಿ ಸಾಗಾಣಿಕೆ ಆಯಿತು, ಆ ಗಣಿಗಾರಿಕೆಯವರು ಜಿಲೆಟಿನ್ ತರಿಸಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ, ಜಿಲೆಟಿನ್ ಬಳಸುವುದಕ್ಕೆ ತಂತ್ರಜ್ಞರ ಅಗತ್ಯತೆ ಇದೆಯೇ, ಗಣಿಗಾರಿಕೆ ನಡೆಸುವವರು ಆ ತಂತ್ರಜ್ಞರನ್ನು ಇಟ್ಟುಕೊಂಡಿದ್ದಾರೆಯೇ? ಈ ರೀತಿಯ ಸ್ಫೋಟ ಸಂಭವಿಸಿರುವುದು ಇದೇ ಮೊದಲನೆಯ ಬಾರಿಯೇ ಅಥವಾ ಹಿಂದೆ ಯಾವಾಗಲಾದರೂ ಈ ರೀತಿ ಸ್ಫೋಟ ಸಂಭವಿಸಿದೆಯೇ, ಜಿಲೆಟಿನ್ ಅನ್ನು ಸಾಗಾಣಿಕೆ ಮಾಡುವಾಗ ಅನುಸರಿಸಿರುವಂತಹ ವಿಧಾನಗಳು ಮತ್ತು ನಿಯಮಾವಳಿಗಳ ಪ್ರಕಾರ ಜಿಲೆಟನ್ ಅನ್ನು ಖರೀದಿ ಮಾಡಲಾಗಿದೆಯೇ ಎನ್ನುವ ಅಂಶಗಳ ಬಗ್ಗೆ ಸರ್ಕಾರ ಗಮನ ಹರಿಸಬೇಕಾಗುತ್ತದೆ. ಈ ಜಿಲೆಟಿನ್‌ಗಳನ್ನು ತೆಗೆದುಕೊಂಡು ಬಂದು ಓದು ಬರಹ ಬಾರದೇ ಇರುವ ಬಡ ಕಾರ್ಮಿಕರ ಕೈಗೆ ಕೊಟ್ಟು, 'ಸ್ಫೋಟಕವನ್ನು ಸಿಡಿಸು' ಎಂದು ಹೇಳಿದರೆ, ಆ ಜೀವಗಳಿಗೆ ಬೆಲೆ ಇಲ್ಲವೇ? ಬದುಕಿಗಾಗಿ ಕೂಲಿ ಮಾಡುವವರ ಜೀವಕ್ಕೆ ಸರ್ಕಾರ 5 ಲಕ್ಷ ರೂಪಾಯಿಗಳ ಬೆಲೆ ಕಟ್ಟಿದೆ. ಈ ವಿಚಾರದ ಬಗ್ಗೆ ಎಲ್ಲ ಸರ್ಕಾರಗಳು ಮತ್ತು ಜನ ಪ್ರತಿನಿಧಿಗಳು ತಲೆತಗ್ಗಿಸಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಪರಿಹಾರ ಘೋಷಣೆಯ ಜೊತೆಗೆ ಸರ್ಕಾರ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಜಿಲ್ಲಾವರು ಮತ್ತು ತಾಲ್ಲೂಕುವಾರು ಎಷ್ಟು ಅಕ್ರಮ ಗಣಿಗಾರಿಕೆಗಳು ನಡೆಯುತ್ತಿವೆ ಎನ್ನುವ ಅಂಕಿ ಅಂಶಗಳನ್ನು ಸರ್ಕಾರ ಘೋಷಣೆ ಮಾಡಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವ ಜನರೇ ಇಂತಹ ಅಕ್ರಮ ಗಣಿಗಾರಿಕೆಯನ್ನು ತೆಗೆದು ಹೊರಗೆಸೆಯುತ್ತಾರೆ. ಕೆಲವು ಗಣಿಗಾರಿಕೆಗಳು ಪರವಾನ್ನಗಿ ಪಡೆದುಕೊಂಡು, ಜಿಲ್ಲಾಧಿಕಾರಿಗಳಿಂದ ಹಿಡಿದು ಎಲ್ಲರ ಆಶೀರ್ವಾದ ಪಡೆದುಕೊಂಡು ನಡೆಯುತ್ತಿದೆಯೆಂದು ತಿಳಿದುಕೊಂಡು ಗ್ರಾಮೀಣ ಪ್ರದೇಶದ ಅಮಾಯಕ ಜನರು ಯಾರೂ ಕೂಡ ಅವರ ಜೊತೆಗೆ ಹೋಗುತ್ತಿಲ್ಲ. ಗ್ರಾಮೀಣ ಪ್ರದೇಶದ ಕೆಲವು ಯುವಕರು ಆ ಕೆಲಸ, ಈ ಕೆಲಸ ಮಾಡುತ್ತೇವೆಂದು ಹೇಳಿಕೊಂಡು ಗಣಿಗಾರಿಕೆ ನಡೆಸುವವರಿಂದಲೇ ಹಣವನ್ನು ಪಡೆದುಕೊಂಡು, ಅವರ ಜೊತೆಗೆ ಸೇರಿಕೊಂಡಿರುವಂತಹ ವ್ಯವಸ್ಥೆ ನಿರ್ಮಾಣವಾಗಿದೆ. ಗಣಿ ಮತ್ತು ಭೂವಿಜ್ಞಾನ ಖಾತೆಗಾಗಿ ಬಹಳಷ್ಟು ಜನರ ನಡುವೆ ಕಿತ್ತಾಟ ನಡೆಯುತ್ತಿತ್ತು ಕೊನೆಗೆ ಅದು ಮಾನ್ಯ ಮುರುಗೇಶ್ ನಿರಾಣಿಯವರ ಪಾಲಾಯಿತು. ಇವರಾದರೂ ಇದಕ್ಕೊಂದು ಕಾಯಕಲ್ಪ ಒದಗಿಸಿಕೊಡುವಂತಹ ಕೆಲಸ ಮಾಡಬೇಕಾಗುತ್ತದೆ. ಸರ್ಕಾರ ಸಮಗ್ರವಾಗಿ ಕಾಯಿದೆಯನ್ನು ತಿದ್ದುಪಡಿ ತರಬೇಕಾಗಿದೆ. ಯಾವಯಾವ ಇಲಾಖೆಯ ಅಧಿಕಾರಿಗಳಿಗೆ ಈ ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆ, ಅವರು ಒಂದು ಪಕ್ಷ ಕರ್ತವ್ಯಲೋಪ ಎಸಗಿದ ಸಂದರ್ಭದಲ್ಲಿ ಅವರಿಗೂ ದಂಡವನ್ನು ವಿಧಿಸುವಂತಹ ನಿಟ್ಟಿನಲ್ಲಿ ಈ ಕಾಯಿದೆಗೆ ತಿದ್ದುಪಡಿ ತರಬೇಕಾಗಿದೆ. ಅಕ್ರಮ ಗಣಿಗಾರಿಕೆ ನಡೆಸುವವರಿಗೆ ಮಾತ್ರವಲ್ಲ, ಕರ್ತವ್ಯ ಲೋಪ ಎಸಗಿರುವಂತಹ ಅಧಿಕಾರಿಗಳಿಗೂ ಸಹ ದಂಡವನ್ನು ವಿಧಿಸುವ ನಿಟ್ಟಿನಲ್ಲಿ ಕಾಯಿದೆಗೆ ತಿದ್ದುಪಡಿ ತರಬೇಕಾಗಿದೆ. ಕಠಿಣವಾಗಿರುವ ಕಾಯಿದೆಯನ್ನು ಜಾರಿಗೆ ತರಬೇಕಾಗಿದೆ. ಅಕ್ರಮ ಗಣಿಗಾರಿಕೆ ಇಡೀ ರಾಜ್ಯದಲ್ಲಿ ವ್ಯಾಪಿಸಿದೆ. ಹಿಂದೆ ಬ್ರಿಟೀಷರ ಕಾಲದಲ್ಲಿ ನಮ್ಮ ನಾಡಿನ ಜನರ ಜೀವನಕ್ಕಾಗಿ ಅನೇಕ ಅಣೆಕಟ್ಟೆಗಳನ್ನು ಕಟ್ಟಲಾಗಿದೆ. ಇದರಿಂದ ದೊರೆಯುವಂತಹ ನೀರನ್ನು ಪ್ರಮುಖವಾಗಿ ಕುಡಿಯುವುದಕ್ಕಾಗಿ ಮತ್ತು ವ್ಯವಸಾಯದ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಈ ಸ್ಫೋಟಕದಿಂದ ಉಂಟಾದ ಶಬ್ದ ಸುಮಾರು 100 ಕಿಲೋಮೀಟರ್ ದೂರದವರೆಗೆ ಕೇಳಿ ಬಂದಿತ್ತು. ಈ ಸ್ಫೋಟಕದಿಂದಾಗಿ ಯಾವ ಪ್ರಮಾಣದಲ್ಲಿ ಅನಾಹುತಗಳುಂಟಾಗಿದೆ ಎನ್ನುವುದು ಇಲಾಖಾ ಅಧಿಕಾರಿಗಳಿಗೆ ಗೊತ್ತಿದೆ. ಎಲ್ಲ ಡ್ಯಾಂಗಳಿಗೆ ಸಂಬಂಧಪಟ್ಟಂತೆ ತಜ್ಞರ ಸಮಿತಿಯನ್ನು ನೇಮಕ ಮಾಡಿ, ಪ್ರತಿ ಡ್ಯಾಂನ ಸುತ್ತ ಇಷ್ಟು ಅಂತರದಲ್ಲಿ ಗಣಿಗಾರಿಕೆ ನಡೆಸಬಾರದು ಎನ್ನುವುದಕ್ಕೆ ಸಂಬಂಧಪಟ್ಟಂತೆ ತಜ್ಞರ ಸಲಹೆಯನ್ನು ಪಡೆದುಕೊಳ್ಳಬೇಕಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(60) 1.2.2021 6.00 ಪಿಕೆ:ಎಂಡಿ**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಕೆ.ಆರ್.ಎಸ್. ಅಣೆಕಟ್ಟಿನ ಸುತ್ತ ಗಣಿಗಾರಿಕೆ ಇದ್ದ ಕಾರಣ, ಇದರ ಸುತ್ತಳತೆಯ ಎಷ್ಟು ದೂರದ ವ್ಯಾಪ್ತಿಯಲ್ಲಿ ಗಣಿಗಾರಿಕೆ ಮಾಡಬಾರದು ಎಂದು ತಿಳಿಸಲು ತಜ್ಞರ ಸಲಹೆಯನ್ನು ಪಡೆಯಲು ಒಂದು ಸಮಿತಿ ಮಾಡಿ ನೀರಾವರಿ ಇಲಾಖೆ ರೂ. 20 ಲಕ್ಷಗಳನ್ನು ಕಾಯ್ದಿರಿಸಿದೆ. ಈಗ ಆ ತಜ್ಞರ ಸಮಿತಿಯೂ ಇಲ್ಲ, ಕೆಲಸವೂ ಆಗುತ್ತಿಲ್ಲ. ಆ ಕಡತವನ್ನು ಹಾಗೆಯೇ ಸುಮ್ಮನಿರಿಸುವಂತೆ ಮಾಡಿದ್ದಾರೆ. ರಾಜ್ಯದಲ್ಲಿರುವ ಎಲ್ಲಾ ಅಣೆಕಟ್ಟುಗಳ ಸಂರಕ್ಷಣೆಗಾಗಿ, ನಿಮ್ಮ ಇಲಾಖೆಯಿಂದ ದುಡ್ಡು ಕೊಡುತ್ತೀರೋ ಅಥವಾ ನೀರಾವರಿ ಇಲಾಖೆಯಿಂದ ಕೊಡುತ್ತೀರೋ ಕೊಡಿ; ಒಂದು ತಜ್ಞರ ಸಮಿತಿ ಮಾಡಿ, ವರದಿ ಪಡೆದುಕೊಳ್ಳಿ. ಅಣೆಕಟ್ಟುಗಳನ್ನಾದರೂ ಕೂಡ ಇನ್ನು ಮುಂದೆ ಯಾವುದೇ ಗಣಿಗಾರಿಕೆ ನಿರ್ದಿಷ್ಟ ಸುತ್ತಳತೆಯಲ್ಲಿ ಆಗದಂತೆ ನಿರ್ಬಂಧಿಸುವ ಕೆಲಸವನ್ನು ಈ ಸರ್ಕಾರ ಮಾಡಬೇಕು, ನಿಮ್ಮ ಅವಧಿಯಲ್ಲಿ ಆಗಬೇಕು. ಈ ನಾಡಿನ ಜನರಿಗೆ ಆ ನಿಟ್ಟಿನಲ್ಲಿ ಒಂದು ಸಂದೇಶ ಕೊಡಿ.

ಮಾನ್ಯ ಸಭಾಪತಿಯವರೇ, ಧನಗಳಿಗೆ ಯಾವರೀತಿ ಮುಸುಡುಗುಪ್ಪೆ ಹಾಕುತ್ತಾರೋ ಅದೇರೀತಿ ಸರ್ಕಾರ ಈ ಮರಳು ಮಾಫಿಯಾಗೆ ಕಡಿವಾಣ ಹಾಕಿದಾಗ ಆ ಮಾಫಿಯಾ ಈ ಕಡೆ ಗಣಿಗಾರಿಕೆ ಶುರು ಮಾಡಿಕೊಂಡಿತು. ಮರಳಿಗೆ ಬದಲಾಗಿ ಎಂ-ಸ್ಯಾಂಡ್ ಉಪಯೋಗಿಸಬಹುದು ಎಂದಾದಾಗ ಈ ರೀತಿ ಅಕ್ರಮ ಗಾಣಿಗಾರಿಕೆಗಳು ಪ್ರಾರಂಭವಾಯಿತು. ಇದರ ಬಗ್ಗೆ ಸುಪ್ರೀಂ ಕೋರ್ಟ್ ಒಂದು ತೀರ್ಮಾನ ಕೊಟ್ಟಿದೆ. ಕ್ವಾರಿ ಮತ್ತು ಕ್ರಷರ್‌ಗಳು ಎಲ್ಲಿ ನಡೆಯಬೇಕು, ಎಲ್ಲಿ ಹಾಕಬೇಕು ಎಂದು ಸುಪ್ರೀಂ ಕೋರ್ಟ್ ಒಳ್ಳೆಯ ತೀರ್ಪು ಕೊಟ್ಟಿದೆ. ಇದರ ಹಿನ್ನೆಲೆಯಲ್ಲಿ ಒಂದು ಸಲ ಈ ಕಾಯಿದೆಯನ್ನು ಹೊಸದಾಗಿ ತಿದ್ದುಪಡಿ ಮಾಡಿದೆವು. ಆ ಕಾಯಿದೆಗಳನ್ನು ಮಾಡಿದರೂ ಈ ಅಕ್ರಮವನ್ನು ತಡೆಗಟ್ಟುವುದಕ್ಕೆ ಆಗಲಿಲ್ಲ. ಸುಪ್ರೀಂ ಕೋರ್ಟ್‌ನ ತೀರ್ಮಾನವನ್ನು ಗಣನೆಗೆ ತೆಗೆದುಕೊಂಡು, ಶಕ್ತಿಯುತವಾದಂತಹ, ಕಾನೂನಿನ ಶಕ್ತಿ ಇರತಕ್ಕಂತಹ, ಇಲಾಖೆಯ ಅಧಿಕಾರಿಗಳನ್ನೂ ಕೂಡ ನಿರ್ಬಂಧಿಸುವಂತಹ ಮತ್ತು ಅವರ ಮೇಲೆ ದಂಡವನ್ನು ಹಾಕುವ ಕೆಲಸ ಮಾಡಬೇಕು. ಆಗ ಅಧಿಕಾರಿಗಳಿಗೆ ಭಯ ಬರುತ್ತದೆ, ಪ್ರಾಮಾಣಿಕತೆ ಬರುತ್ತದೆ. ಇವತ್ತು ಬಹುತೇಕ ನಮ್ಮ ರಾಜಕಾರಣಿಗಳು ಇದರ ಹಿಂದೆ ಪ್ರಭಾವಿಗಳಾಗಿರುತ್ತಾರೆ. ಈ ಸತ್ಯವನ್ನು ನಾವು ಸದನದಲ್ಲಿ ಹೇಳಬೇಕಾಗುತ್ತದೆ. ಸರ್ಕಾರಗಳನ್ನು, ಕೆಲವು ಶಾಸಕರನ್ನು ಈ ನಾಡಿನ ಜನರಿಂದ ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಹಾಗಾಗಿ, ದಯಮಾಡಿ ಈ ಕಾಯಿದೆಯನ್ನು ಬದಲಾವಣೆ

ಮಾಡುವುದು, ಅಣೆಕಟ್ಟುಗಳನ್ನು ರಕ್ಷಣೆ ಮಾಡುವುದು ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಗಮನಿಸಿ ಕಾಯಿದೆ ಮಾಡುವಂತಹ ಕೆಲಸ ಮಾಡಬೇಕು. ಈಗೇನು ಘಟನೆ ನಡೆದಿದೆಯೋ ಇದರ ಸಂಬಂಧ ತನಿಖೆಗೆ ಆದೇಶ ಮಾಡಿದ್ದೀರಿ. ತನಿಖೆಯ ವರದಿ ಯಾವತ್ತೋ ಒಂದು ದಿನ ಬರುತ್ತದೆ, ಆಗ ಆ ತನಿಖೆಯ ಕಡೆ ಗಮನ ಕೊಡುವವರೂ ಇರುವುದಿಲ್ಲ. ಆದ್ದರಿಂದ ತಾವು ಯಾವ ಇಲಾಖೆಯಿಂದ ವರದಿಯನ್ನು ತರಿಸಿಕೊಳ್ಳಬೇಕೋ ಆ ಇಲಾಖೆಯಿಂದ ವರದಿ ತರಿಸಿಕೊಂಡು ತಪ್ಪು ಮಾಡಿರುವಂತಹ ಅಧಿಕಾರಿಗಳ ಮೇಲೆ ಸರ್ಕಾರಕ್ಕಿರುವ ಅಧಿಕಾರ ವ್ಯಾಪ್ತಿಯಲ್ಲಿ ತಕ್ಷಣ ಕಠಿಣ ಕ್ರಮ ಜರುಗಿಸಿ. ಯಾರು ಇವತ್ತು ನಿರ್ಗತಿಕರು, ಕೂಲಿ ಕಾರ್ಮಿಕರು ಯಾರಿದ್ದಾರೋ, ಅವರು ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಆಗಿದ್ದಾರೋ ಇಲ್ಲವೋ ಎಂದು ನೋಡದೇ, ಬೇರೆ ಯಾವುದೇ ಸವಲತ್ತುಗಳನ್ನು ಪಡೆದುಕೊಳ್ಳುವುದಕ್ಕೆ ಆಗದಿರುವಂತಹ ಕುಟುಂಬಗಳಿಗೆ ಪರಿಹಾರ ಕೊಡಬೇಕು. ಯಾವ ನ್ಯಾಯಾಲಯದಿಂದಲೂ ಅವರಿಗೆ ಪರಿಹಾರ ಸಿಗುವಂತೆ ಕಾಣುತ್ತಿಲ್ಲ. ಆದ್ದರಿಂದ ಈ ಜನರಿಗೆ, ಮೃತರ ಕುಟುಂಬಕ್ಕೆ ಇಲಾಖೆಯಿಂದ ಇನ್ನೂ ಹೆಚ್ಚಿನ ಪರಿಹಾರ ಕೊಡಿಸಬೇಕು. ಸರ್ಕಾರದಿಂದ ನೀವು ತಲಾ ರೂ. 5 ಲಕ್ಷ ಘೋಷಣೆ ಮಾಡಿದ್ದೀರಿ. ಅದಲ್ಲದೇ ನಿಮ್ಮ ಇಲಾಖೆಯಿಂದ ಹೆಚ್ಚಿನ ಪ್ರಮಾಣದ ಪರಿಹಾರವನ್ನು ಕೊಡಿಸಬೇಕು. ತನಿಖಾ ವರದಿಯನ್ನು ಆಧರಿಸಿ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅಕ್ರಮ ಗಣಿಗಾರಿಕೆಗೆ ವಿಶೇಷವಾದ ಕಾಯಿದೆ ತೆಗೆದುಕೊಂಡು ಬಂದು ನಿಯಂತ್ರಣ ಮಾಡಿ, ನಾಡಿನ ಪರಿಸರವನ್ನು, ಗ್ರಾಮೀಣ ಪ್ರದೇಶದ ಬಡವರ ಆರೋಗ್ಯವನ್ನು ರಕ್ಷಣೆ ಮಾಡಬೇಕೆಂದು ವಿನಂತಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ: ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸಹ್ಯಾದ್ರಿಯ ಸೆರಗಿನ ಜಿಲ್ಲೆ ಶಿವಮೊಗ್ಗದಲ್ಲಿ ಗಣಿ ಭಾಗದಲ್ಲಿ ನಡೆದಂತಹ ಸ್ಫೋಟದಲ್ಲಿ 6 ಮಂದಿ ದುರ್ದೈವಿಗಳು ಹೃದಯವಿದ್ರಾವಕ ರೀತಿಯಲ್ಲಿ ಛಿದ್ರಗೊಂಡು ಸಾವನ್ನಪ್ಪಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಕರ್ನಾಟಕ, ಅದರಲ್ಲೂ ಪಶ್ಚಿಮ ಘಟ್ಟಗಳು ಇಡೀ ಜಗತ್ತಿನ ಹವಾಮಾನ ಸಮತೋಲನದಲ್ಲಿ ಹಿಮಾಲಯದ ನೀರ್ಗಲ್ಲುಗಳು ಅತ್ಯಂತ ಹೆಚ್ಚು ಆಮ್ಲಜನಕವನ್ನು ಕೊಡುವ ನಿಟ್ಟಿನಲ್ಲಿ, ಇಡೀ ಜಗತ್ತಿನ, ಮನುಕುಲಕ್ಕೆ, ಸೃಷ್ಟಿಗೆ ದೊಡ್ಡ ಕೊಡುಗೆಯನ್ನು ಕೊಡುತ್ತಿರುವ ಹೆಮ್ಮೆ ನಮಗಿದೆ. ಇವತ್ತಿನ ಚರ್ಚೆ ಕೇವಲ ರಾಜಕಾರಣಿಗಳ ಕೈವಾಡ ಅಥವಾ ವೈಫಲ್ಯ ಅಥವಾ ಕಾನೂನುಗಳನ್ನು ಗಾಳಿಗೆ ತೂರಿ, ಇಂತಹ ಘಟನೆ ನಡೆದಿದೆ ಎನ್ನುವುದಕ್ಕಷ್ಟೇ ಸೀಮಿತವಾಗಿಲ್ಲ. ಇಂತಹ ಒಂದು ಸುಂದರವಾದ ಜಿಲ್ಲೆ, ಮನುಷ್ಯ ಸೃಷ್ಟಿ ಮಾಡಲಾರದಂತಹ ಇಂತಹ ಪ್ರಕೃತಿಯನ್ನು ಹಾಳು ಮಾಡುವುದಕ್ಕೆ ನಮಗೇನು ಹಕ್ಕಿದೆ? ಇದನ್ನು ತಡೆಯಬೇಕಾದ ನಿಟ್ಟಿನಲ್ಲಿ ಭಗವಂತ ನಮಗೆ ಒಂದು ಅವಕಾಶ ಕೊಟ್ಟಿದ್ದಾನೆ. ಈ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದನದಲ್ಲಿ 75 ಜನ ನೀತಿ ನಿರೂಪಕರು ಯಾರಿದ್ದೇವೇಯೋ ನಾವು ಅತ್ಯಂತ ಒಳ್ಳೆಯ ಕಾನೂನುಗಳನ್ನು ತಂದು, ಶಾಸಕಾಂಗದ ಮೂಲಕ, ಕಾರ್ಯಾಂಗದ ಮೂಲಕ ಅವುಗಳನ್ನು ಜಾರಿಗೊಳಿಸಿದರೆ ಸುಂದರ ಪ್ರಕೃತಿಯನ್ನು ಹೇಗೆ ನಮ್ಮ ನಾಗರಿಕತೆಯ ಪ್ರಗತಿಗೆ ಬಳಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ದುರ್ಘಟನೆಯ ಸಂದರ್ಭದಲ್ಲೂ ನಾವು ಒಂದು ಅರ್ಥಪೂರ್ಣ ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ದಾರಿ ತಪ್ಪಿದ, ತಪ್ಪು ಮಾಡಬಹುದಾದ, ಮಾಡಿದ ಸರ್ಕಾರವನ್ನು ಚುಚ್ಚುವುದಕ್ಕೆ ವಿರೋಧ ಪಕ್ಷದಲ್ಲಿ ಕುಳಿತಿರುವವರಿಗೆ ಇದೊಂದು ಸದಾವಕಾಶವಾಗಿದೆ. ಅಧಿಕಾರಿದಲ್ಲಿ ಕುಳಿತಿರುವವರಿಗೆ ತಪ್ಪನ್ನು ಒಪ್ಪಿಕೊಳ್ಳುವಂತಹ ಅಥವಾ ತಪ್ಪಿಲ್ಲದಿದ್ದರೆ ಅದನ್ನು ಹೇಳಬೇಕಾದ ಜವಾಬ್ದಾರಿ ಮತ್ತು ಮುಂದೆ ಇದನ್ನು ತಡೆಯಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಮಾನ್ಯ ಮುರುಗೇಶ್ ನಿರಾಣಿಯವರು ಗಣಿ ಸಚಿವರಾಗಿ ಬಂದಿದ್ದಾರೆ. ಅವರ ಜೊತೆ ಹೆಚ್ಚು ಸಂವಾದ ಆಗಿಲ್ಲ. ಆದರೆ, ಅವರು ಕೈಗಾರಿಕಾ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಪ್ರವಾಸ ಕೈಗೊಂಡಾಗ ಅವರ ಜೊತೆ ಸಂವಾದ ಮಾಡುವುದಕ್ಕೆ ಅವಕಾಶ ಸಿಕ್ಕತ್ತು. ಅವರು ಒಬ್ಬ ಅದ್ಭುತ ಉದ್ಯಮಿ ಮತ್ತು ಅದ್ಭುತ ಅಧ್ಯಯನ ಮಾಡುವಂಥವರಾಗಿದ್ದಾರೆ. ಯಾವುದೇ ಒಂದು ವಿಷಯವನ್ನು ತೆಗೆದುಕೊಂಡರೆ ಎಷ್ಟು ಆಳಕ್ಕೆ ಅಧ್ಯಯನ ಮಾಡುತ್ತಾರೆ ಎನ್ನುವುದನ್ನು ಪತ್ರಕರ್ತೆಯಾಗಿ ನಾನು ಗಮನಿಸಿದ್ದೇನೆ. ಮನಮುಟ್ಟುವ ರೀತಿಯಲ್ಲಿ ಕೈಗಾರಿಕೆಗಳ ಬಗ್ಗೆ, ಉದ್ಯಮಗಳ ಬಗ್ಗೆ ಅವರ ಸಂವಾದವನ್ನು ಕೇಳಿದ್ದೆ. ಖಂಡಿತವಾಗಿ ಗಣಿ ಇಲಾಖೆಯಲ್ಲಿ ಯಾವುದೇ ವ್ಯಕ್ತಿಗತ ಪ್ರತಿಷ್ಠೆಯನ್ನು ಬಿಟ್ಟು ಈಗ ಘಟಿಸಿರಬಹುದಾದ ತಪ್ಪುಗಳು ಎಲ್ಲಿಂದಾಗಿದೆ ಎಂದು ಕಂಡುಹಿಡಿದು ಅದಕ್ಕೆ ಮದ್ದನ್ನು ಕೇವಲ ನಮ್ಮಿಂದ ಕೊಡುವುದಕ್ಕಾಗುವುದಿಲ್ಲ; ವಿರೋಧ ಪಕ್ಷದವರ ಸಹಕಾರವೂ ಬೇಕಾಗುತ್ತದೆ. ಒಂದು ಉತ್ತಮ ಕಾನೂನನ್ನು ತರಬೇಕಾದರೆ ಪ್ರತಿಪಕ್ಷದವರ ಸಹಕಾರ ಇರಬೇಕಾಗುತ್ತದೆ. ಇದು ಪ್ರಜಾಪ್ರಭುತ್ವದ ಒಳ್ಳೆಯ ಲಕ್ಷಣ ಕೂಡ ಆಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರ ಬಗ್ಗೆ ಸದನದಲ್ಲಿ ಮಾತನಾಡುತ್ತಾ, ಅವರು 4 ಸಲ ಮುಖ್ಯಮಂತ್ರಿಗಳಾಗಿದ್ದರು ಎಂದು ಹೇಳಿದರು. ಅದರಲ್ಲಿ, ಅವರು ಹಿರಿಯರು, 50 ವರ್ಷಗಳ ಕಾಲ ವಿರೋಧ ಪಕ್ಷದಲ್ಲಿದ್ದು ಹೋರಾಟ ಮಾಡಿದವರು ಎನ್ನುವ ಅಭಿಮಾನ ಇರುವ ಹಾಗೆ ಕಾಣುತ್ತಿತ್ತು.

**ಸಭಾಪತಿಯವರು:–** ಇನ್ನು ಐದು ನಿಮಿಷದ ಒಳಗೆ ನಿಮ್ಮ ಮಾತನ್ನು ಮುಗಿಸಿ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮೊದಲನೆ ಸಲ ಮಾನ್ಯ ಯಡಿಯೂರಪ್ಪನವರಿಗೆ 3 ವರ್ಷಗಳ ಕಾಲ ಮುಖ್ಯಮಂತಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಕ್ಕಿತು. 50 ವರ್ಷಗಳ ಕಾಲ ರಾಜಕೀಯ ಜೀವನದ ಹೋರಾಟ, ಪ್ರತಿಪಕ್ಷದಲ್ಲಿದ್ದು ರೈತರ ಪರವಾಗಿ, ಕಾರ್ಮಿಕರ ಪರವಾಗಿ ಬೀದಿಗಿಳಿದು ಹೋರಾಟ ಮಾಡಿದ್ದಾರೆ. ಮೊದಲನೆ ಸಲ ಅವರಿಗೆ 3 ವರ್ಷ ಅಧಿಕಾರ ಸಿಕ್ಕಿತ್ತು. 2ನೇ ಸಲ ಮುಖ್ಯಮಂತ್ರಿಯಾಗಿ ಅವಕಾಶ ಸಿಕ್ಕಿದ್ದು 11 ದಿನಗಳು, 3ನೇ ಸಲ ಅವಕಾಶ ಸಿಕ್ಕಿದ್ದು 2 ದಿನಗಳು. ಈಗ ಅವರು ಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರತಿಪಕ್ಷದವರು ಮೊದಲನೆ ಸಲ ಅಧಿಕಾರ ಬಿಟ್ಟು ಕೊಡಲಿಲ್ಲ, ನೀವು ಪ್ರಯತ್ನ ಮಾಡಿದಿರಿ ಆದರೆ ದ್ವಾಳ ಉರುಳಿ ಬಿದ್ದಿದ್ದರಿಂದ ನಮಗೆ ಅಧಿಕಾರಿ ಸಿಕ್ಕಿ, ಸರ್ಕಾರ ನಡೆಸುತ್ತಿದ್ದೇವೆ. ಯಾರೋ ಒಬ್ಬರು ಅಧಿಕಾರ ನಡೆಸಲೇ ಬೇಕಾಗುತ್ತದೆ. ಇದು ಅಭಿಮಾನವೋ . . .

**ಸಭಾಪತಿಯವರು:-** ರಾಜಕಾರಣ ಇನ್ನೊಂದು ದಿವಸ ಮಾತನಾಡೋಣ, ದಯವಿಟ್ಟು ಕುಳಿತುಕೊಳ್ಳಿ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು 5 ನಿಮಿಷ ಕಾಲಾವಕಾಶ ಕೊಟ್ಟಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು ನಮ್ಮ ಪಕ್ಷದ ಸಹಕಾರದಿಂದ 4ನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಇಲ್ಲದೇ ಇದ್ದರೆ ಒಂದು ಸಲವೂ ಅವರು ಮುಖ್ಯಮಂತ್ರಿ ಆಗುತ್ತಿರಲಿಲ್ಲ. ನಿಮ್ಮ ಪಕ್ಷ ಅಧಿಕಾರಕ್ಕೆ ಬರುತ್ತಿರಲಿಲ್ಲ. ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಬೇಕು.

**(ಮುಂದು)**

**(61) 01-02-2021/6.10/ಡಿಎಸ್-ಎಂಡಿ**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಇಲ್ಲದಿದ್ದರೆ ಅವರು ಒಂದು ಸಲವೂ ಈ ನಾಡಿನಲ್ಲಿ ಮುಖ್ಯಮಂತ್ರಿಯಾಗುತ್ತಿರಲಿಲ್ಲ. ಈ ಪಕ್ಷ ಅಧಿಕಾರಕ್ಕೆ ಬರುತ್ತಿರಲಿಲ್ಲ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು.

**ಡಾ||ತೇಜಸ್ವಿನಿಗೌಡ:-** ಮಾನ್ಯ ಮರಿತಿಬ್ಬೇಗೌಡರೇ, ತುಂಬಾ ಸಂತೋಷ. ಧನ್ಯವಾದಗಳು.

**ಸಭಾಪತಿಯವರು:-** ತೇಜಸ್ವಿನಿಗೌಡರವರೇ, ತಾವು ಆಮೇಲೆ ಮಾತನಾಡಿ. ಈಗ ರವಿಯವರೇ, ತಾವು ಮಾತನಾಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ.

**ಸಭಾಪತಿಯವರು:–** ರಾಜಕಾರಣವನ್ನು ಆಮೇಲೆ ಮಾತನಾಡೋಣ.

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನಾನು ರಾಜಕೀಯ ಮಾತನಾಡುತ್ತಿಲ್ಲ.

**ಸಭಾಪತಿಯವರು:–** ಈಗಾಗಲೇ ಆರು ಗಂಟೆಯಾಗಿದೆ.

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ. ನನಗೆ ಎರಡು ನಿಮಿಷವಾದರೂ ಸಮಯ ಕೊಡಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನಾವು ಮಹಿಳೆಯರು ಇರುವುದು ಮೂರು ಜನ. ಮಹಿಳೆಯರಿಗೆ ಯಾವಾಗಲೂ ಇದೇ ರೀತಿ ಮಾಡುತ್ತೀರಿ?

**(ಗೊಂದಲ)**

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ಕೊಡುವುದಕ್ಕಾಗುವುದಿಲ್ಲ.

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಇದು ಬಹಳ ಅನ್ಯಾಯ. ಪೀಠ ಈ ರೀತಿ ಅನ್ಯಾಯ ಮಾಡಬಾರದು.

**ಸಭಾಪತಿಯವರು:–** ನೀವು ರಾಜಕಾರಣ ಮಾಡಿದರೆ ನನ್ನ ತಪ್ಪಾ?

**(ಗೊಂದಲ)**

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ಅವಕಾಶ ಕೊಡುವುದಿಲ್ಲ. ರಾಜಕಾರಣ ಮಾಡುವುದಕ್ಕೆ ಇತಿಮಿತಿಗಳಿವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮಹಿಳೆಯರ ಹಣೆಬರಹ ನಮಗೆ ಗೊತ್ತಿದೆ. ದಯಮಾಡಿ ಐದು ನಿಮಿಷ ಅವಕಾಶ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ನಾಳೆ ಮಾತನಾಡಿ. ರವಿಯವರೇ, ತಾವು ಈಗ ಮಾತನಾಡುತ್ತೀರಾ?

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಪೂರ್ತಿ ಮಾತುಗಳನ್ನು ಕೇಳಿಸಿಕೊಳ್ಳಿ.

**(ಗೊಂದಲ)**

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮಹಿಳೆಯರಿಗೆ ಈ ರೀತಿ ಅನ್ಯಾಯ ಆಗಬಾರದು. ಮಹಿಳೆಯರು ಮೂರು ಜನ ಇರುವುದು. ಮಹಿಳೆಯರ ಹಕ್ಕನ್ನು ಮೊಟಕುಗೊಳಿಸಬಾರದು. ತಾವು ವಿನಾಕಾರಣ ನನ್ನ ಹಕ್ಕನ್ನು ಕಸಿದುಕೊಳ್ಳಬಾರದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರಿಗೆ ಐದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ಅವಕಾಶ ಕೊಡುವುದಿಲ್ಲ. ಇನ್ನು ನಾಲ್ಕೈದು ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿದೆ. ರವಿಯವರೇ, ತಾವು ಈಗ ಮಾತನಾಡದಿದ್ದರೆ ಬೇರೆಯವರನ್ನು ಕರೆಯುತ್ತೇನೆ.

**Sri KAVATAGIMATH MAHANTESH MALLIKARJUN:-** Sir, My request is that, let her conclude.

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮೊನ್ನೆ ಈ ರಾಜ್ಯದಲ್ಲಿ 20ನೇ ತಾರೀಖು ನಡೆದಿರುವಂತಹ ಬಹಳ ಗಂಭೀರವಾದಂತಹ ವಿಷಯಗಳ ಬಗ್ಗೆ ಹಲವಾರು ವಿಚಾರಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ.

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಡದಿರುವುದಕ್ಕೆ ಕಾರಣಗಳೇನು?

**ಸಭಾಪತಿಯವರು:–** ತಮಗೆ ಕೊನೆಯಲ್ಲಿ ಅವಕಾಶ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಹಲವಾರು ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಅದನ್ನೇ ನಾನು ಮತ್ತೆ ಪುನರುಚ್ಚಾರ ಮಾಡುವುದಿಲ್ಲ. ಮಾತನಾಡಿರುವಂತಹ ಸದಸ್ಯರುಗಳು ಆ ಭಾಗದಲ್ಲಿರಬಹುದು, ಈ ಭಾಗದಲ್ಲಿರಬಹುದು. ಇಂತಹ ಗಂಭೀರವಾಗಿ ನಡೆದಿರುವಂತಹ ಘೋರ ದುರಂತವಾದಂತಹ ಘಟನೆಯ ಬಗ್ಗೆ ಎಳೆ ಎಳೆಯಾಗಿ ಮನಮುಟ್ಟುವಂತೆ ಸಾಕಷ್ಟು ವಿಚಾರಗಳನ್ನು ಈಗಾಗಲೇ ಚರ್ಚೆ ಮಾಡಿ ಸದನದ ಮುಖಾಂತರ ಸರ್ಕಾರದ ಗಮನವನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಿಜಕ್ಕೂ ಈ ಘಟನೆ ನಡೆದಿರುವುದು ದುರಾದೃಷ್ಟಕರವಾಗಿರುವಂಥದ್ದು. ಆ ಸ್ಫೋಟದ ತೀವ್ರತೆಯನ್ನು ನಮಗೆ ಸ್ಥಳೀಯರೇ ಆಗಿರುವಂತಹ ಮಾನ್ಯ ಆಯನೂರು ಮುಂಜುನಾಥ್‌ರವರು ಮತ್ತು ಮಾನ್ಯ ಪ್ರಸನ್ನಕುಮಾರ್‌ರವರು ವಿವರಿಸುತ್ತಿದ್ದರೆ ನನಗೆ ಒಂದಿಷ್ಟು ಗಣಿಯಲ್ಲಿ ಅನುಭವ ಇರತಕ್ಕಂಥ ಹಿನ್ನೆಲೆಯಲ್ಲಿ ನನಗೆ ಎಲ್ಲೋ ಒಂದು ಕಡೆ ಭಯವಾಗುತ್ತಿತ್ತು. ಅದೇರೀತಿ ನಾನು ಮಾನ್ಯ ಪ್ರಸನ್ನಕುಮಾರ್‌ರವರ ಹತ್ತಿರ ಮಾತನಾಡಬೇಕಾದರೆ ಏನು ನಡೆಯಿತು ಎಂದು ಕೇಳಿದಾಗ, ನಾನು ಟಿ.ವಿ.ಯನ್ನು ನೋಡುತ್ತಿದ್ದೆ, ಏಳು ಕಿ.ಮೀ. ದೂರದಲ್ಲಿರುವಂತಹ ನಮ್ಮ ಮನೆ ಮೇಲೆ ಏನೋ ಬಿದ್ದು ಹೋಯಿತ್ತೇನೋ ಎನ್ನತಕ್ಕಂಥ ಅನುಭವವಾಯಿತು ಎಂದು ಹೇಳಿದರು. ಅವರು ಕೂಡ ಪ್ರತ್ಯಕ್ಷದರ್ಶಿಗಳು. ನಾವು ಇಲ್ಲಿ ಕುಳಿತುಕೊಂಡು ಮಾತನಾಡುವುದಕ್ಕೂ, ಪತ್ರಿಕೆಯಲ್ಲಿ ಬಂದಿರುವಂತಹ ವರದಿಯನ್ನು ಆಧರಿಸಿ ಮಾತನಾಡುವುದಕ್ಕೂ, ಪ್ರತ್ಯಕ್ಷವಾಗಿ ಅನುಭವಿಸಿರುವಂಥವರ ಅನುಭವದ ಹಿನ್ನೆಲೆಯಲ್ಲಿ ಅದರ ತೀವ್ರತೆಯ ಸ್ವರೂಪ ಏನಿರಬಹುದು ಎಂದು ನಾನು ಕೂಡ ಆಲೋಚನೆಯನ್ನು ಮಾಡಿದೆ. ಸಾಮಾನ್ಯವಾಗಿ ಗ್ರಾನೈಟ್ ಕ್ವಾರಿಗಳಿಗೆ ಸ್ಫೋಟಕವನ್ನು ಉಪಯೋಗಿಸಲೇಬೇಕು. ಈಗ ರಸ್ತೆಗಳನ್ನು ಮಾಡತಕ್ಕಂಥ ಸಂದರ್ಭಗಳಲ್ಲಿ ಅಡ್ಡ ಬಂದಿರುವ ಬಂಡೆಗಳನ್ನು ಸಿಡಿಸಬೇಕು. ಬಹು ಮುಖ್ಯವಾದ ಕಾಮಗಾರಿ ನಡೆಯುತ್ತಿರುವ ಕಡೆಯಲ್ಲೂ ಸ್ಫೋಟಕಗಳ ಬಳಕೆಯಾಗುತ್ತದೆ. ಅದೇರೀತಿ ಕಲ್ಲು ಗಣಿಗಾರಿಕೆಯಲ್ಲಿ ವಿಶೇಷವಾಗಿ ಜಲ್ಲಿ ಕಟ್ಟಡ ಸಾಮಗ್ರಿಗಳಿಗೆ ಬಳಕೆ ಮಾಡುವುದಕ್ಕಾಗಿ ಅಲ್ಲೂ ಸ್ಫೋಟಗಳಾಗುತ್ತವೆ. ಅಲಂಕಾರಿಕ ಶಿಲೆಗಳನ್ನು ಮಾಡತಕ್ಕಂಥ ಗ್ರಾನೈಟ್ ಕ್ವಾರಿಗಳಲ್ಲಿ ಅಲ್ಲೂ ಕೂಡ ಸ್ಫೋಟಕಗಳ ಬಳಕೆ ಅನಿವಾರ್ಯವಾಗಿದೆ. ಅಲಂಕಾರಿಕ ಕಲ್ಲು ಗಣಿಗಾರಿಕೆಗಳಲ್ಲಿ ಈ ಮಟ್ಟದ ಸ್ಫೋಟಕಗಳನ್ನು ಬಳಕೆ ಮಾಡುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಅವರ ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿದ್ದರು. ಇದು ಪ್ರಮುಖವಾಗಿ ನಮ್ಮ ತಂದೆಯವರು ಕೂಡ ಮಾಡುತ್ತಿದ್ದರು. ಜಿಲೆಟಿನ್, ತೋಟಾಯಿ ಮತ್ತು ಬತ್ತಿ. ನಾವು ಕೂಡ ಬಹಳ ಚಿಕ್ಕಂದಿನಿಂದಲೂ ನೋಡಿಕೊಂಡು ಅದರ ಜೊತೆಯಲ್ಲೇ ಬೆಳೆದಿರುವಂತಹ ಅನುಭವ. ನಮ್ಮ ಅಕ್ಕಪಕ್ಕದವರು ಬಳಕೆ ಮಾಡಿದ್ದಾರೆ. ಜಿಲೆಟಿನ್‌ಗೆ ತೋಟಾಯಿಯನ್ನು ಒಳಗೆ jam-pack ಮಾಡಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಬತ್ತಿ connection ಕೊಟ್ಟು ಅದನ್ನು ಸ್ಫೋಟ ಮಾಡಬೇಕಾದರೆ ಇದ್ದಿಲು ಅನ್ನು ಇಂಧನವನ್ನಾಗಿ ಬಳಸುತ್ತಾರೆ. Jam-pack ಅಂದರೆ tight ಆಗಿ ಕೂರಬೇಕು. ಆಗ ಮಾತ್ರ ಸ್ಫೋಟದ ತೀವ್ರತೆಯಾಗುತ್ತದೆ. ಅದನ್ನು ಮನೆಗಳು ವಿರಳವಾಗಿರುವಂತಹ ಕಡೆ, ಜನ ವಸತಿಯಿಂದ ದೂರವಿರುವ ಕಡೆ, ತೊಂದರೆಯಿಲ್ಲದಿರುವ ಕಡೆ rig drilling ಮಾಡುತ್ತಾರೆ. 5 ಅಡಿ, 10 ಅಡಿ, 15 ಅಡಿ drill ಮಾಡಿ ಅದರೊಳಗೆ jam-pack ಮಾಡಿ ಸ್ಫೋಟ ಮಾಡುತ್ತಾರೆ. ಆಮೇಲೆ ಮತ್ತೆ ಬೇರೆ ಮಿಷನರಿಯನ್ನು ಉಪಯೋಗಿಸಿ ಅದನ್ನು ಲೋಡ್ ಮಾಡುವುದಕ್ಕೆ ಯಂತ್ರಗಳನ್ನು ಸಾಗಾಣಿಕೆ ಮಾಡುವುದಕ್ಕೆ ಇನ್ನು ಸಣ್ಣ ಮಾಡಬೇಕಾಗುತ್ತದೆ. ಅಲಂಕಾರಿಕ ಶಿಲೆಗಳಿಗೆ ಈ ಮಟ್ಟದ ಸ್ಫೋಟಕ ಬಳಕೆಯಾಗುವುದಿಲ್ಲ. ಈ ಮಟ್ಟದ ತೋಟಾಯಿ ಬಳಕೆ ಮಾಡಿ ಮಾಡಿದರೆ granite logs ಬರುತ್ತವೆ, ಒಂದು ಅಡಿ, ಎರಡು ಅಡಿ ಅದರ blasting effect ಆಗಿ ಕಟ್ ಮಾಡಿದರೆ ಪಾಲಿಶ್‌ಗೆ material ಸಿಗುವುದಿಲ್ಲ. ಆದ್ದರಿಂದ ಅದರಲ್ಲಿ powder cutting or Wire Saw Machine ಉಪಯೋಗಿಸುವುದು ಅದರ ತಂತ್ರಜ್ಞಾನವೇ ಬೇರೆ. ಅದರಲ್ಲಿ ಈ ಮಟ್ಟದ ಸ್ಫೋಟಕದ ತೀವ್ರತೆ ಬಳಕೆಯಾಗುವುದಿಲ್ಲ. ಈ ಮಟ್ಟದ ಸ್ಫೋಟಕವನ್ನು ಬಳಕೆ ಮಾಡಿದರೆ ನಮಗೆ ಅಲಂಕಾರಿಕ ಶಿಲೆಯ ಗ್ರಾನೈಟ್ ದಿಮ್ಮಿಗಳನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ಅದು waste ಆಗಿಬಿಡುತ್ತದೆ. ಅದು ಫ್ಯಾಕ್ಟರಿಗೆ ಹೋಗಿ ಕಟ್ಟಿಂಗ್ ಮಾಡುವಾಗ ಆ ಕಡೆ ಎರಡು ಅಡಿ ಈ ಕಡೆ ಎರಡು ಅಡಿ ಹೋದರೆ ನಮಗೆ ಪಾಲಿಶ್ ಮಾಡುವುದಕ್ಕೆ material ಸಿಗುವುದಿಲ್ಲ. ಬಹುತೇಕವಾಗಿ ಈ ಮಟ್ಟದ ತೋಟಾಯಿ ಮತ್ತು ಜಿಲೆಟಿನ್ ಬಳಕೆ ಮಾಡುವಂಥದ್ದು ಕ್ರಷರ್‌ಗಳಲ್ಲಿ. ಅಂದರೆ ಜಲ್ಲಿ ಗಣಿಗಾರಿಕೆ ಮಾಡುವಂತಹ ವಿಚಾರದಲ್ಲಿ. ಇಲ್ಲಿ ನಡೆದಿರುವಂಥದ್ದು ಅದೇನು magazine ಅಲ್ಲ. ಅಂದರೆ ಸ್ಫೋಟಕಗಳನ್ನು ಸಂಗ್ರಹಣೆ ಮಾಡುವಂತಹ ಜಾಗ ಅಲ್ಲ. ಇವರ ಅನುಭವದ ಹಿನ್ನೆಲೆಯಲ್ಲಿ ಮಾತನಾಡಿರುವುದು ಮತ್ತು ಮಾಧ್ಯಮಗಳಲ್ಲಿ ಬಂದಿರುವಂತಹ ವರದಿಯನ್ನಾಧರಿಸಿ ನಾನು ಮಾತನಾಡುವುದಾದರೆ ಇದು ಸ್ಫೋಟಕಗಳ ಸಂಗ್ರಹ ಮಾಡಿರುವಂತಹ ಸ್ಥಳದಲ್ಲಿ ಸ್ಫೋಟವಾಗಿಲ್ಲ. ಇಲ್ಲಿ ಆಗಿರುವಂತಹ ಸ್ಫೋಟ ಲಾರಿ ಮೇಲೆ. ಈ ಸ್ಫೋಟಕಗಳನ್ನು ಸಾಗಾಟ ಮಾಡಿರುವಂತಹ ವಾಹನದ outer surface ಮೇಲೆ ಆಗಿರುವಂಥದ್ದು. ನನಗೆ ಈ ಸ್ಫೋಟಕದ ತೀವ್ರತೆ ಹೇಗೆ ಬಂತು ಲಾರಿಯ ಮೇಲೆ ಆಗಿರುವಂಥದ್ದು ಎನ್ನುವುದರ ಬಗ್ಗೆ ನನಗೆ ಇರುವಂತಹ ಅಲ್ಪಸ್ವಲ್ಪ ಅನುಭವದ ಹಿನ್ನೆಲೆಯಲ್ಲಿ ನನಗೆ ಆಗನಿಂದಲೂ ನನ್ನ ತಲೆಯಲ್ಲಿ ಇದೇ ಗೊಂದಲವಾಗಿದೆ. ಏಕೆಂದರೆ, ಜಿಲೆಟಿನ್ ಒಳಗಡೆ ಅಳವಡಿಸಿ ಬತ್ತಿ ಹತ್ತಿಸಿದರೆ ಮಾತ್ರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಮಟ್ಟದ ಸ್ಫೋಟಕವಾಗುತ್ತದೆ. ಬರೀ ಜಿಲೆಟಿನ್ ಒಳಗಡೆ ತೋಟಾಯಿಯನ್ನು ಬತ್ತಿಗೆ ಹಾಕಿ ಏನಾದರೂ ಹತ್ತಿಸಿದರೆ ಅದು ನಮ್ಮಲ್ಲಿ ಪಟಾಕಿ. ನಮ್ಮಲ್ಲಿ ಲೇಬರ್ಸ್ ನ್ನು cutters ಎಂದು ಹೇಳುತ್ತೇವೆ. ಅದನ್ನು ದೀಪಾವಳಿಯಲ್ಲಿ ಮಾಡುತ್ತಾರೆ. ಈ ಕೆಲಸ ಮಾಡುವುದಕ್ಕೆ ತಮಿಳುನಾಡಿನವರು ಮಾಡುತ್ತಾರೆ. ಹುಡುಗರು ದೀಪಾವಳಿಯಲ್ಲಿ ಪಟಾಕಿ ಖರೀದಿ ಮಾಡತಕ್ಕಂಥ ಶಕ್ತಿ ಇಲ್ಲದವರು ಸುಮ್ಮನೆ ಅವರ ಖುಷಿಗೆ ದೀಪಾವಳಿಯಲ್ಲಿ ತೋಟಾಯಿಯನ್ನು ಬತ್ತಿಗೆ ಹಾಕಿ ಹೊಡೆಯುತ್ತಾರೆ. ಅದು ಲಕ್ಷ್ಮಿ ಪಟಾಕಿ ರೀತಿಯಲ್ಲಿ ಶಬ್ಧ ಬರುತ್ತದೆ. ತೋಟಾಯಿಯನ್ನು ಬತ್ತಿಗೆ ಹತ್ತಿಸಿದರೆ ಲಕ್ಷ್ಮಿ ಪಟಾಕಿಯನ್ನು ಹಚ್ಚಿದಾಗ ಎಷ್ಟು ಶಬ್ಧ ಬರುತ್ತದೆ ಅಷ್ಟು ಶಬ್ಧ ಬರುತ್ತದೆ. ಆದರೆ ಜಿಲೆಟಿನ್ ಒಳಗಡೆ jam-pack ಮಾಡಿ ಮಾಡಿದರೆ ಮಾತ್ರ ಆ ಸ್ಫೋಟಕದ ತೀವ್ರತೆ ಐದು ರಷ್ಟು, ಹತ್ತರಷ್ಟು ಆಗುತ್ತಾ ಹೋಗುತ್ತದೆ. ಅದು ಒಂದು ಜಿಲೆಟಿನ್‌ನಲ್ಲಿ ಮಾತ್ರ ಬರುವುದಿಲ್ಲ. continuous ಆಗಿ 8, 10, 20, 30 drill ಮಾಡಿರುತ್ತಾರೆ. continuous ಆಗಿ ಅದರ ಒಳಗಡೆ ಎಲ್ಲಾ ಜಿಲೆಟಿನ್ ಹಾಕಿ ಅದರ ಮೇಲೆ ಇದ್ದಿಲು ಹಾಕಿ, jam-pack ಮಾಡಿ ಮಾಡಿದಾಗ ಮಾತ್ರ ಸ್ಫೋಟದ ಪ್ರಮಾಣ ತೀವ್ರವಾಗುತ್ತದೆ. ಇಲ್ಲಿ ಜಿಲೆಟಿನ್ ಒಳಗಡೆ ಯಾರು ತೋಟಾಯಿಯನ್ನು ಫಿಕ್ಸ್ ಮಾಡಿದ್ದಾರೆ? ಸಾಗಾಟ ಮಾಡುತ್ತಿರುವಾಗ ಜಿಲೆಟಿನ್ ಪ್ರತ್ಯೇಕವಾಗಿರುತ್ತದೆ, ತೋಟಾಯಿ ಪ್ರತ್ಯೇಕವಾಗಿರುತ್ತದೆ, ಬತ್ತಿ ಪ್ರತ್ಯೇಕವಾಗಿರುತ್ತದೆ. ನನಗೆ ಗೊತ್ತಿರುವ ಹಾಗೆ ಕ್ರಷರ್‌ಗಳಲ್ಲಿ ಈ ಸಾಮಗ್ರಿಗಳಲ್ಲದೆ ಬೇರೆ ಸಾಮಗ್ರಿಯನ್ನು ಬಳಕೆ ಮಾಡುವುದಿಲ್ಲ.

**(ಮುಂದು)**

**(62)01–02–2021/6–20/ಬಿಕೆಪಿ–ಎಕೆ**

**ಶ್ರೀ ಎಸ್.ರವಿ(ಮುಂದು):-**

ಈ ಸಾಮಗ್ರಿಗಳಲ್ಲದೆ, ಬೇರೆ ಸಾಮಗ್ರಿಗಳನ್ನು ಬಳಕೆ ಮಾಡುವುದಿಲ್ಲ. ಏಕೆಂದರೆ ಬೇರೆ ಸಾಮಗ್ರಿಗಳನ್ನು ಬಳಕೆ ಮಾಡಲಿಕ್ಕೆ ಹೋದಾಗ ವೆಚ್ಚ ಜಾಸ್ತಿಯಾಗುತ್ತದೆ. ಇದು ಸ್ವಲ್ಪ ಕಡಿಮೆ ಬೆಲೆಯಲ್ಲಿ ಸಿಗುತ್ತದೆ. ಬೇರೆ ಸಾಮಗ್ರಿಗಳನ್ನು ಬಳಕೆ ಮಾಡಿ ನೀವು ಬ್ಲಾಸ್ಟ್ ಮಾಡಲಿಕ್ಕೆ ಹೋದಾಗ ಅದು ಅವನಿಗೆ ನಿರ್ವಹಣೆ ವೆಚ್ಚ ಹೆಚ್ಚಾಗುತ್ತದೆ. ಯಾರಿಗೋ ಒಬ್ಬರಿಗೆ ಬ್ಲಾಸ್ಟಿಂಗ್ ಮಾಡಲಿಕ್ಕೆ ಗುತ್ತಿಗೆಯನ್ನು ಕೊಟ್ಟಿರುತ್ತಾರೆ. ಅವನು ತನಗೆ ನಿರ್ವಹಣೆಯಾಗುವ ವೆಚ್ಚದಲ್ಲಿಯೇ ಆ ಕೆಲಸವನ್ನು ಮಾಡುತ್ತಾನೆ. ಆದ್ದರಿಂದ, ಅವನು ಈ ಸಾಮಗ್ರಿಗಳನ್ನೇ ಉಪಯೋಗ ಮಾಡುತ್ತಾನೆ. ಆದರೆ, ಹೇಳುತ್ತಿರುವಂತಹ ಸ್ಫೋಟಕದ ತೀವ್ರತೆ ಏನಿದೆ, ಅದು ಇದರಿಂದ ಬಂದಿದೆಯೇ ಎನ್ನುವ ಬಗ್ಗೆ ಅನುಮಾನ ಇದೆ. ಏಕೆಂದರೆ, ಎಲ್ಲವನ್ನು ನೂರಾರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲೆಟಿನ್ ಒಳಗಡೆ ಈ ತೋಟಾಯಿನ್ ಅನ್ನು ಇಟ್ಟು, ಏಕ ಕಾಲದಲ್ಲಿ ಬ್ಲಾಸ್ಟ್ ಮಾಡಿದರೆ ಮಾತ್ರ outer surface ನಲ್ಲಿ ಇವರು ಹೇಳಿರತಕ್ಕಂತಹ ತೀವ್ರತೆ, ಇವರು ಹೇಳಿರುವಂತಹ ಶಬ್ದ ಬರಲಿಕ್ಕೆ ಸಾಧ್ಯ. ಆದರೆ, ಅವರು ಆ ರೀತಿಯಾಗಿ ಇಟ್ಟಿರಲಿಕ್ಕೆ ಸಾಧ್ಯವೇ ಇಲ್ಲ ಎನ್ನುವುದು ನನ್ನ ಅನಿಸಿಕೆಯಾಗಿದೆ. ಇದನ್ನು ನಾನು authentic ಆಗಿ ಹೇಳಲಿಕ್ಕೆ ಆಗುವುದಿಲ್ಲ. ಇದು ಬೇರೆ ರೀತಿ ಇರಬಹುದು ಎನ್ನುವುದು ನನ್ನ ಭಾವನೆ. ಇದು ಬೇರೆ ಏನೋ ಮೆಟೀರಿಯಲ್ ಇರಬಹುದು. ಈ ವಿಚಾರವಾಗಿ ಮಾನ್ಯ ಹಿರಿಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಬಹಳ ಚೆನ್ನಾಗಿ ಹೇಳಿದರು. ಶಿವಮೊಗ್ಗ ಜಿಲ್ಲೆಯು ಮೊದಲೇ ಬಹಳ sensitive ಆಗಿದ್ದು, ಕಳೆದ ಕೆಲವು ದಿನಗಳಿಂದ ನಾವು ನೆಮ್ಮದಿಯಾಗಿದ್ದೇವೆ. ಅಲ್ಲಿನ ಕೋಮು ಗಲಭೆಗಳ ಬಹಳ ವಿಷಾದದಿಂದ ಹಾಗೂ ಸವಿಸ್ತಾರವಾಗಿ ಅವರು ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿದರು. ಅದರಿಂದಾಗಿ ನನಗೆ ಇದರಲ್ಲಿ ಬೇರೆ ಏನಾದರೂ ಇರಬಹುದು ಎಂಬ ಅನುಮಾನಗಳು ಬಹಳ ಬಲಿಷ್ಠವಾಗಿ ನನ್ನ ಮನಸ್ಸಿಗೆ ಕಾಡುತ್ತಿವೆ. ಅದರಿಂದಾಗಿ ಈಗಾಗಲೇ ಮಾತನಾಡಿ, sitting judge ಮುಖೇನ ನ್ಯಾಯಾಂಗ ತನಿಖೆಗೆ ಆಗ್ರಹಿಸಿದ್ದಾರೆ. ಆದರೆ, ಇದು ಸಾಕಾಗುವುದಿಲ್ಲವೆಂದು ನನಗನ್ನಿಸುತ್ತದೆ. ಈ ಸ್ಫೋಟಕಗಳನ್ನು ಉತ್ಪಾದನೆ ಮಾಡುವಂತಹದ್ದು ಕರ್ನಾಟಕದಲ್ಲಿಲ್ಲ. ಆದರೆ ಕರ್ನಾಟಕದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಇರುವಂತಹದ್ದಾಗಿದೆ. ಇನ್ನು ರಾಜ್ಯದ ನೆರೆಯ ರಾಜ್ಯಗಳು ಅದರಲ್ಲೂ ವಿಶೇಷವಾಗಿ ತಮಿಳುನಾಡಿನ ಕೊಯಂಬತ್ತೂರು ಮತ್ತು ಆಂಧ್ರಪ್ರದೇಶದ ಭಾಗಗಳಿಂದ ಇದರ ಉತ್ಪಾದನೆ ಮತ್ತು ಬಳಕೆ ನಮ್ಮಗಿಂತ ಹೆಚ್ಚು ಇದೆ. ವಿಶೇಷವಾಗಿ ಅಲ್ಲಿಂದಲೇ ಸರಬರಾಜು ಆಗುತ್ತಿದೆ. ಇದರಿಂದಾಗಿ ಇದರ ವ್ಯಾಪ್ತಿಯು ದೇಶದಾದ್ಯಂತ ಆಗಿದ್ದು, ಇಲ್ಲಿನ ಎಲ್ಲಾ ವಿಚಾರಗಳನ್ನು ನೋಡಿದಾಗ ಇದರ ತನಿಖೆಗೆ N.I.A (National Investigation Agency) ಸಂಸ್ಥೆಯೇ ಸೂಕ್ತವೆಂದೆನಿಸುತ್ತದೆ ಎಂದು ನಾನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ನಾನು ಎಲ್ಲಾ ವಿಷಯಗಳನ್ನು ಹೆಚ್ಚಾಗಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯು ನಡೆದಿರುವುದು ಹಾಗೂ ನಡೆಯುತ್ತಿರುವುದು ನಿಜ. ಇದನ್ನು ತಡೆಯಲು ಅಧಿಕಾರದಲ್ಲಿರುವ ಯಾವುದೇ ಪಕ್ಷದ ಸರ್ಕಾರ ಮತ್ತು ಇಲಾಖಾಧಿಕಾರಿಗಳು ಎಲ್ಲಿಯೋ ಒಂದು ಕಡೆ ವಿಫಲರಾಗಿದ್ದಾರೆ. ಇದರ ಬಗ್ಗೆ ಹತ್ತಾರು ರೀತಿಯ ಕಾನೂನುಗಳು ಜಾರಿಗೆ ಬಂದರೂ ಸಹ ಇಂದಿಗೂ ಅಕ್ರಮ ಗಣಿಗಾರಿಕೆಯು ನಡೆಯುತ್ತಿರುವುದು ನಿಜ. ಅದು ಇಂದಿಗೂ ನಿಯಂತ್ರಣಕ್ಕೆ ಬರುವುದಕ್ಕೆ ಸಾಧ್ಯವಾಗಿಲ್ಲ. ಅಕ್ರಮ ಗಣಿಗಾರಿಕೆಯು ಏಕೆ ನಡೆಯುತ್ತದೆ? ಸಕ್ರಮ ಗಣಿಗಾರಿಕೆ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಕಾಶ ನೀಡಿಲ್ಲವಾದ್ದರಿಂದ ಅಕ್ರಮ ಗಣಿಗಾರಿಕೆಯು ನಡೆಯುತ್ತದೆ. ಅಕ್ರಮ ಗಣಿಗಾರಿಕೆಯು ಎಷ್ಟು ದಿನಗಳವರೆಗೆ ನಡೆಯುತ್ತದೆ? ಜನೋಪಯುಕ್ತವಾದ ಕಟ್ಟಡಗಳನ್ನು ನಿರ್ಮಿಸಬೇಕು. ಭಾರತ ದೇಶವು ಅಭಿವೃದ್ಧಿ ಹೊಂದುತ್ತಿರುವ 'ಅಭಿವೃದ್ಧಿ ಶೀಲ' ದೇಶವಾಗಿದೆ. ಅಗತ್ಯವಾದ ಕಾನೂನುಗಳನ್ನು ಜಾರಿಗೆ ತನ್ನಿ. ನಾವೇನೂ ಅಮೇರಿಕ ಮತ್ತು ಯುರೋಪ್‌ಗಳಂತಹ ಅಭಿವೃದ್ಧಿ ಹೊಂದಿದವರಲ್ಲ. ಬಹುತೇಕ ಸದಸ್ಯರು ಅಲ್ಲಿಗೆ ಹೋದಾಗ ನೋಡಿದ್ದೇವೆ. ಅಲ್ಲಿರುವವರಿಗೆ ಮಾಡುವುದಕ್ಕೆ ಕೆಲಸವಿಲ್ಲ. ಅಲ್ಲಿ ಯಾವುದೇ ರೀತಿಯ ಸೇತುವೆ, ಮೆಟ್ರೋ, ರಸ್ತೆ, ಕಟ್ಟಡ ಇತ್ಯಾದಿ ರೀತಿಯ ಸೌಲಭ್ಯಗಳನ್ನು ನಿರ್ಮಿಸುವಂತಿಲ್ಲ. ಅಲ್ಲಿ ಹಾಲಿ ಇರುವ ವ್ಯವಸ್ಥೆಗಳನ್ನು ದುರಸ್ತಿಗೊಳಿಸಿದರೆ ಸಾಕು; ಯಾವುದೇ ರೀತಿಯ ಹೊಸ ನಿರ್ಮಾಣದ ಅವಶ್ಯಕತೆ ಇಲ್ಲ. ಆದರೆ ನಮ್ಮ ದೇಶವು ಈಗ ಅಭಿವೃದ್ಧಿ ಹೊಂದುತ್ತಿದೆ. ಇವತ್ತಿನ ದಿವಸ ನಾವು ನಮ್ಮ ದೇಶದಲ್ಲಿ ನಡೆಯುತ್ತಿರುವ ಕಾಮಗಾರಿಗಳು ಇದ್ದರೆ ಹತ್ತು-ನೂರರ ಪಟ್ಟು ರಸ್ತೆಗಳು, ಮೇಲ್ಸೆತುವೆಗಳು, ಮೆಟ್ರೋ, ಕಟ್ಟಡಗಳು ನಿರ್ಮಾಣವಾಗಬೇಕು. ಜನಸಾಮಾನ್ಯರಿಗೆ ಅವಶ್ಯಕವಾಗಿರುವ ವಸತಿಗಳು ಇನ್ನೂ ಹತ್ತು ಪಟ್ಟು ನಿರ್ಮಾಣವಾಗಬೇಕು. ಇದಕ್ಕೆಲ್ಲಾ ಅವಶ್ಯಕ ಸಾಮಗ್ರಿಗಳ ಲಭ್ಯತೆ ಇಲ್ಲ. ಹೀಗಾಗಿ ಇವುಗಳಿಗೆಲ್ಲಾ ಜೆಲ್ಲಿ, ದಿಂಡು, ಮರಳುಗಳ ಅವಶ್ಯಕತೆ ಇದೆ. ಇವುಗಳನ್ನು ನೀಡದೇ ಸರ್ಕಾರವು ಕೇವಲ ಕಲ್ಲು ಗಣಿಗಾರಿಕೆಯನ್ನು ನಿಯಂತ್ರಣ ಮಾಡಿದರೆ, ಅಕ್ರಮವಾದ ಗಣಿಗಾರಿಕೆಗಳು ಜಾಸ್ತಿಯಾಗುತ್ತವೆ. ಹೀಗಾಗಿ ಸರ್ಕಾರವು ಇದನ್ನು ಸಕ್ರಮಗೊಳಿಸಬೇಕು; ಆದರೆ ಇದನ್ನು ಸರ್ಕಾರ ಮಾಡಿಲ್ಲ. ಇತ್ತೀಚೆಗೆ ಅಧಿಕಾರಕ್ಕೆ ಬಂದ ಬಿ.ಜೆ.ಪಿ. ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಈ ಹಿಂದೆ ಮಾನ್ಯ ಶ್ರೀ ಸಿ.ಸಿ.ಪಾಟೀಲ್ ರವರು ಸಚಿವರಾಗಿದ್ದಾಗ, ಕ್ರಷರ್ ಮೇಲೆ ಸಿ-ಫಾರಂ ನ್ನು ತರುವ ವಿಚಾರದಲ್ಲಿ ನವೀಕರಣವನ್ನು 20-30 ವರ್ಷಗಳ ಅವಧಿಗೆ ನೀಡಿದರು. ಸಿ-ಫಾರಂ ವಿಚಾರದಲ್ಲಿ ಪೂರ್ಣವಾಗಿ ನೇರವಾದ ಕಾನೂನನ್ನು ಜಾರಿಗೊಳಿಸಿದರು. ಇದನ್ನು ಮಾಡಲೇಬೇಕಾಗಿದ್ದು, ಇದಕ್ಕೆ ಸರ್ಕಾರವು ಅನುಮತಿಸಬೇಕು. ಒಂದು ವೇಳೆ ಸರ್ಕಾರವು ಅನುಮತಿಸದಿದ್ದರೆ, ಯಾರೂ ಸಹ ಮನೆಗಳನ್ನು ನಿರ್ಮಿಸುತ್ತಿರಲಿಲ್ಲ. ಇವತ್ತಿನ ದಿವಸ ಮಧ್ಯಮ ವರ್ಗದವರು ಅಂದರೆ ಒಬ್ಬ ಶಿಕ್ಷಕ, ಆಟೋ ಚಾಲಕ, ಪೊಲೀಸ್ ಇವರುಗಳು ತಮ್ಮ ಜೀವಮಾನದ ವರಮಾನವೆಲ್ಲವನನ್ನೂ ಉಳಿತಾಯ ಮಾಡುತ್ತಾರೆ. ಇವರುಗಳು ಕಷ್ಟಪಟ್ಟು, ಬಿ.ಡಿ.ಎ., ಕಂದಾಯ ಅಥವಾ ಇನ್ಯಾವುದೇ ನಿವೇಶನಗಳನ್ನು ಬೆಂಗಳೂರಿನಂತಹ ಮಹಾನಗರದಲ್ಲಿ ಪಡೆದುಕೊಳ್ಳುತ್ತಾರೆ. ಇಲ್ಲಿ ಕೇವಲ 20 x 30 ವಿಸ್ತೀರ್ಣದ ನಿವೇಶನವನ್ನು ಹೊಂದಲು ಅವರ ಜೀವಮಾನವು ಕಳೆದು ಹೋಗಿರುತ್ತದೆ. ಅವನಿಗೆ ತನ್ನದೇ ಆದ ಗೂಡಿನ ಅವಶ್ಯಕತೆ ಇರುವುದರಿಂದ ಜಾಗವನ್ನು ಪಡೆದುಕೊಂಡು, ಮನೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಆದರೆ ಅದನ್ನು ನಿರ್ಮಿಸಲು ಅವರು ಎಲ್ಲಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುತ್ತಾರೆ? ಅವರು ನಿರ್ಮಿಸುವ ಮನೆಯು ಬೆಂಗಳೂರಿನ ಸುತ್ತಮುತ್ತಲಿರುವ 8–10–12 ತಾಲ್ಲೂಕುಗಳಲ್ಲಿ ಲಭ್ಯವಾಗುವ ಫಿಲ್ಟರ್ ಮರಳಿನಿಂದ ಕೂಡಿರುತ್ತದೆ. ಎಂ–ಸ್ಯಾಂಡ್, ಪಿ–ಸ್ಯಾಂಡ್, ಸಿ–ಸ್ಯಾಂಡ್ ಇವುಗಳು ಉತ್ತಮ ಗುಣಮಟ್ಟದ ಮರಳಾಗಿರುತ್ತವೆ. ಇವುಗಳು ಲಭ್ಯವಾಗಿಲ್ಲವೆಂದಾರೆ, ಮಧ್ಯಮ ವರ್ಗದ ಜನರು ಯಾವುದರಿಂದ ಮನೆಯನ್ನು ನಿರ್ಮಿಸುತ್ತಾರೆ? ನಮ್ಮ ಕನಕಪುರ ತಾಲ್ಲೂಕಿನಲ್ಲಿ ಮರಳುವಾಡಿ ಎಂಬ ಹೋಬಳಿಯು ಇದೆ. ಅದನ್ನು ನೋಡಿದರೆ, ಚಂಬಲ್ ಕಣಿವೆಗೆ ಹೋಗುವಷ್ಟಿಲ್ಲ ಅಲ್ಲಿನ ಪರಿಸ್ಥಿತಿ. ಚಂಬಲ್ ಕಣಿವೆಯನ್ನು ಪ್ರತ್ಯಕ್ಷವಾಗಿ ನೋಡಬೇಕೆಂದರೆ, ಸದರಿ ಮರಳುವಾಡಿ ಹೋಬಳಿಗೆ ಹೋಗಿ ಒಂದು ಸುತ್ತು ಸುತ್ತಿದರೆ ಸಾಕಾಗುತ್ತದೆ. ಅದೇ ರೀತಿಯಾಗಿ ಹಾರೋಹಳ್ಳಿ ಹೋಬಳಿಯ ಪರಿಸ್ಥಿತಿಯಾಗಿದೆ. ಅಲ್ಲಿನ ಪ್ರದೇಶದಲ್ಲಿನ ಭೂಮಿಯನ್ನು 50 ಅಡಿ ಆಳದವರೆಗೆ ಅಗೆದು ಬಿಟ್ಟಿದ್ದಾರೆ. ಅಲ್ಲಿರುವ ಮಣ್ಣು ಎಲ್ಲವೂ ಖಾಲಿಯಾಗಿದೆ. ಅಂತರ್ಜಲ ಲಭ್ಯವಿರುವ ಹಳ್ಳ, ಕೊಳ್ಳ, ನದಿಗಳಲ್ಲೆಲ್ಲಾ ಮಣ್ಣನ್ನು ತೊಳೆದಿದ್ದಾರೆ; ಲಭ್ಯವಾಗಿರುವ ಮಣ್ಣಿನ ನೀರು ಅಲ್ಲಿನ ಸ್ಯಾಂಡ್‌ನಲ್ಲಿ ತೊಟ್ಟಿಕ್ಕುತ್ತಿರುತ್ತದೆ. ಆ ರೀತಿಯಾಗಿ ಅಲ್ಲಿನ ಮರಳಿನ ಸ್ಯಾಂಡ್‌ನಲ್ಲಿ ನೀರು ತೊಟ್ಟಿಕ್ಕುತ್ತಿರುತ್ತದೆ. ಆ ಮಣ್ಣಿನಲ್ಲಿ ನೀರಿನ ತೇವಾಂಶ ಎಷ್ಟು ಹೊತ್ತು ಇರುತ್ತದೆಯೋ ಅಷ್ಟು ಹೊತ್ತು ಸದರಿ ಮರಳು ಒಳ್ಳೆಯ ಗುಣಮಟ್ಟದ ಮರಳಿನಂತೆ ಕಾಣಿಸುತ್ತದೆ. ಯಾವುದೇ ಗುಣಮಟ್ಟದ ಮರಳು ಇದರ ಮುಂದೆ ಬೀಗುವುದಿಲ್ಲ. ಆದರೆ ಅದರಲ್ಲಿ ಕೇವಲ ಮಣ್ಣಿನ ಅಂಶ ಮಾತ್ರವೇ ಇರುತ್ತದೆ. ಮಧ್ಯಮ ಮತ್ತು ಕೆಳವರ್ಗದ ಜನರು ಮತ್ತು ಬಡವರು ಅದನ್ನೇ ಮರಳು ಎಂದು ತೆಗೆದುಕೊಂಡು ಹೋಗುತ್ತಾರೆ ಮತ್ತು ಅದರಿಂದಲೇ ಮನೆಯನ್ನು ನಿರ್ಮಿಸುತ್ತಾರೆ. ಆದರೆ, ನಿರ್ಮಾಣ ಕಾಮಗಾರಿಯಲ್ಲಿ ಬಳಸಲ್ಪಡುವ ಕಬ್ಬಿಣವನ್ನು ಸದರಿ ಮರಳು ತಿನ್ನುತ್ತದೆ. ಅಂತಹ ಮರಳಿನ ಮೊದಲನೇ ಕೆಲಸವೇನೆಂದರೆ, ಅದು ಕಬ್ಬಿಣವನ್ನು ತಿಂದು ಹಾಕುತ್ತದೆ ನಂತರದಲ್ಲಿ ನಿರ್ಮಿಸಿದ ಗೋಡೆಗಳಲ್ಲಿ ಕ್ರ್ಯಾಕ್‌ಗಳುಂಟಾಗುತ್ತವೆ. ನೋಡಿದ ತಕ್ಷಣದಲ್ಲಿ ಸದರಿ ಮಣ್ಣು ಮರಳಿನಂತೆ ಕಾಣುತ್ತದೆ ಆದರೆ ನಂತರದಲ್ಲಿ ಅದು ಒಣಗಿ ಕಲ್ಲಾಗಿಬಿಡುತ್ತದೆ. ಗುಣಮಟ್ಟದ ಮರಳನ್ನು ಒದಗಿಸುವುದು ಜನಪ್ರತಿನಿಧಿಗಳ ಹಾಗೂ ಸರ್ಕಾರದ ಕರ್ತವ್ಯವಾಗಿದೆ. ಕಟ್ಟಡ ನಿರ್ಮಿಸುವವರಿಗೆ ಅವಶ್ಯಕವಾದ ಎಲ್ಲಾ ರೀತಿಯ ಸಾಮಗ್ರಿಗಳನ್ನು ಒದಗಿಸಿಕೊಡಬೇಕು. ಎಷ್ಟು ದಿನಗಳವರೆಗೆ ನದಿ ಪಾತ್ರದ ಮರಳನ್ನು ಲೂಟಿ ಮಾಡಲು ಬಿಡುವುದಕ್ಕೆ ಸಾಧ್ಯವಾಗುತ್ತದೆ? ನದಿ ಪಾತ್ರದ ಮರಳನ್ನು ತೆಗೆದರೆ ಅಲ್ಲಿನ ಪ್ರದೇಶದಲ್ಲಿ ಅತೀ ಹೆಚ್ಚು ಹಾನಿಯುಂಟಾಗುತ್ತದೆ; ಸೇತುವೆಗಳು ಉರುಳಿ ಹೋಗುತ್ತವೆ ಮತ್ತು ನದಿ ಪಾತ್ರವು ಕೊರೆಯುತ್ತದೆ. ನಂತರದಲ್ಲಿ ಅಂತರ್ಜಲ ಮಟ್ಟವನ್ನು ಇಂಗಿಸುವುದು ಯಾವುದು? ನಾನು ಇನ್ನೆರೆಡು ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನೀವು ಈಗ ಮರಳಿನ ವಿಷಯವನ್ನು ಮಾತನಾಡುತ್ತಿದ್ದೀರಿ.

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಕ್ರಮ ಗಣಿಗಾರಿಕೆಯ ವಿಚಾರ ಬಂದಾಗ ಮರಳಿನ ವಿಚಾರವನ್ನು ಪ್ರಸ್ತಾಪಿಸಲೇಬೇಕಾಗುತ್ತದೆ. ನನ್ನ ಪ್ರಕಾರ ನದಿ ಪಾತ್ರವನ್ನು ಅತೀ ಹೆಚ್ಚು ಕೆದಕಬಾರದು. ನದಿಯ ತೀರದಲ್ಲಿ ಮರಳು ಇದ್ದರೆ ಮಾತ್ರ ನದಿಯು ಉಪಯೋಗವಾಗುತ್ತದೆ. ಇವತ್ತಿನ ದಿವಸ ನಾವು ವೃಷಭಾವತಿ ನದಿಯ ಪರಿಸ್ಥಿತಿಯನ್ನು ನೋಡಿದ್ದೇವೆ. ಬೆಂಗಳೂರಿನವರು ಕೊಳಚೆ ನೀರನ್ನು ವೃಷಭಾವತಿ ನದಿಗೆ ಹರಿಸುತ್ತಾರೆ. ಆದರೆ ನಮಗೆ ಅದುವೇ ಗಂಗಾಜಲದಂತೆ. ಕೊಳಚೆ ನೀರನ್ನು ನೈಸರ್ಗಿಕವಾಗಿ ಶುದ್ಧಿಕರಿಸಲು ಮರಳಿನ ಅವಶ್ಯಕತೆ ಇದೆ. ಆದರೆ ಅಲ್ಲಿನ ದಂಡೆಯಲ್ಲಿ ಮರಳು ಇಲ್ಲವೆಂದಾರೆ, ಅರ್ಕಾವತಿ ಮತ್ತು ವೃಷಭಾವತಿ ನದಿಗಳ ನೀರು ಹೇಗೆ ಶುದ್ಧಗೊಳ್ಳುತ್ತದೆ? ವೃಷಭಾವತಿ ನದಿಯು ಇಂದು ಕೊಳಕು ನೀರಿನಿಂದ ಕೂಡಿದೆ. ಇವತ್ತಿನ ದಿವಸ ಅಲ್ಲಿ ನಾವು ನಮ್ಮ ಕಾಲುಗಳನ್ನು ಇಡುವುದಕ್ಕಾಗುವುದಿಲ್ಲ. ಆ ನದಿಯ ತೀರದ 10 ಮೀಟರ್‌ನ ಅಂತರದಲ್ಲಿಯೇ ನನ್ನ ಮನೆ ಇದೆ. ಹಾಗೆಯೇ ಸದರಿ ನದಿಯ ತೀರದ 100 ಮೀಟರ್ ಅಂತರದಲ್ಲಿ ಶ್ರೀ ಸಿ.ಎಂ.ಲಿಂಗಪ್ಪನವರ ಮನೆ ಇದೆ. ಅಲ್ಲಿನ ಪ್ರದೇಶದಲ್ಲಿ ನಾವುಗಳು ಮನೆಗಳನ್ನು ನಿರ್ಮಿಸಿದ್ದೇವೆ. ಅಲ್ಲಿನ ಸೊಳ್ಳೆ ಹಾಗೂ ವಾಸನೆಗಳೇ ನಮ್ಮ ಜೀವನವಾಗಿದೆ. ಅದು ನಮಗೆ ಬೆಂಗಳೂರಿಗರ ಪ್ರಸಾದವಾಗಿದೆ. ಒಂದು ವೇಳೆ ಆ ನದಿಯ ತೀರದಲ್ಲಿ ಮರಳು ಲಭ್ಯವಾಗಿದ್ದರೆ, ಆ ಪರಿಸ್ಥಿತಿ ಬರುತ್ತಿರಲಿಲ್ಲ. ಸರ್ಕಾರವು ಪಿ-ಸ್ಯಾಂಡ್, ಎಂ-ಸ್ಯಾಂಡ್ ಪ್ರಕಾರಗಳ ಮರಳಿನ ಲಭ್ಯತೆಯನ್ನು ಮಾಡಬೇಕು. ಹಾಲಿ ಸರ್ಕಾರವು ಸಿ-ಫಾರ್ಂಗಳನ್ನು ನೀಡುತ್ತಿದೆ. ಆದರೆ ಸರ್ಕಾರವು ಕಚ್ಚಾ ವಸ್ತುಗಳಿಗೆ ಗುತ್ತಿಗೆ ನೀಡಿ ಎಷ್ಟು ವರ್ಷಗಳಾಯಿತು? ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಆ ರೀತಿಯಾದ ಧೈರ್ಯವಿದೆಯೇ? ಕಚ್ಚಾ ವಸ್ತುಗಳನ್ನು ಉತ್ಪಾದಿಸಲು ಪ್ರದೇಶವನ್ನು ಸರ್ಕಾರವು ಗುತ್ತಿಗೆಗೆ ನೀಡಬೇಕು. ಇವತ್ತಿನ ದಿವಸ 10-50 ಲಕ್ಷಗಳಷ್ಟು ಬಂಡವಾಳ ಹೂಡಿ ಕ್ವಾರೆಯನ್ನು ಮಾಡುವುದಕ್ಕಾಗುತ್ತದೆಯೇ? ಪಿ-ಸ್ಯಾಂಡ್ ಮತ್ತು ಸಿ-ಸ್ಯಾಂಡ್‌ಗಳನ್ನು ಯೂನಿಟ್‌ಗಳಲ್ಲಿ ಮಾಡುವುದಕ್ಕಾಗುತ್ತದೆಯೇ? 250-300 ಹೆಚ್‌ಪಿ ಹಾಕಿದರೆ 8-10 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಹೀಗಾಗಿ ಸರ್ಕಾರವು ಗುತ್ತಿಗೆಗೆ ಪ್ರದೇಶವನ್ನು ನೀಡಬೇಕು. ಒಂದು ವೇಳೆ ಸರ್ಕಾರವು ಗುತ್ತಿಗೆಗೆ ನೀಡಲು ಆಗುವುದಿಲ್ಲವೆಂದಾದರೆ ಪ್ರದೇಶವನ್ನು ಗುರ್ತಿಸಿ, ಅದನ್ನು ಹರಾಜು ಮಾಡಿ ಜಾಗವನ್ನು ನೀಡಲಿ. ಹಣವುಳ್ಳವರು 10-20 ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡುತ್ತಾರೆ. ಇದಕ್ಕಾಗಿ ಕಾನೂನನ್ನು ಜಾರಿಗೆ ತನ್ನಿ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ರೀತಿಯ ಮ್ಯಾಗಝೀನ್ ಕಟ್ಟಬೇಕು, ಅದನ್ನು ಹೀಗೆ ನಿರ್ಮಿಸಬೇಕೆಂದರೆ, ತಂತ್ರಜ್ಞರ ಅವಶ್ಯಕತೆ ಇದೆ. ಬ್ಲ್ಯಾಸ್ಟಿಂಗ್‌ನಲ್ಲಿ ಪರಿಣತಿಯನ್ನು ಹೊಂದಿದವರಿಂದ ಬ್ಲ್ಯಾಸ್ಟ್ ಮಾಡಿಸಬೇಕು. ಇಂತಹ ನಿಯಮಗಳನ್ನು ಜಾರಿಗೊಳಿಸಿ. ಆದರೆ ಸರ್ಕಾರವು ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳದೇ, ಪ್ರದೇಶವನ್ನೂ ಗುತ್ತಿಗೆಯನ್ನು ನೀಡುವುದಿಲ್ಲ. ಕಚ್ಚಾ ವಸ್ತುಗಳನ್ನು ಕೊಡುವುದಿಲ್ಲ. ಆದರೆ ಅದರ ಬದಲಾಗಿ ಸರ್ಕಾರವು ಇಂತಹ ಚಟುವಟಿಕೆಗಳನ್ನು tight ಮಾಡುತ್ತದೆ. ಇಂತಹ ಕ್ರಮಗಳಿಂದಾಗಿ ಅಧಿಕಾರಿಗಳಿಗೆ ದುಡ್ಡು ಬರುತ್ತದೆ. ಹೀಗಾಗಿ ಅಲ್ಲಿ ಅಕ್ರಮ ಗಣಿಗಾರಿಕೆಗಳು ನಡೆಯುತ್ತವೆ. ಎಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತದೆಯೋ ಅಲ್ಲಿ ಸರ್ಕಾರವು ಕಾನೂನು ಕ್ರಮ ಜಾರಿಗೆ ಬರುತ್ತದೆ. ಅದರ ಬದಲಾಗಿ ಅವಶ್ಯಕವಾಗಿರುವ ಕಚ್ಚಾ ವಸ್ತುಗಳನ್ನು ನೀಡುವುದಿಲ್ಲ. ಮುಂದುವರೆದು ಸಕ್ರಮ ಗಣಿಗಾರಿಕೆಯನ್ನು ಮಾಡಲು ಅವಕಾಶವನ್ನೂ ಸಹ ನೀಡುವುದಿಲ್ಲ. ಯಾವಾಗ ಅಕ್ರಮ ಗಣಿಗಾರಿಕೆ ಆಗುತ್ತದೆಯೋ ಆಗ ಪೊಲೀಸ್, ಕಂದಾಯ, ಡಿ.ಎಂ.ಜಿ. ಇಲಾಖೆಗಳಿಂದ ಮೊದಲುಗೊಂಡು ಎಲ್ಲರಿಗೂ ಹಣ ಹುಟ್ಟುತ್ತದೆ. ಕಾನೂನನ್ನು ಜಾರಿಗೊಳಿಸಿದಷ್ಟು ಹಣ ಹುಟ್ಟುತ್ತದೆ. ಅದರ ಬದಲಾಗಿ ಅವಶ್ಯಕವಾಗಿ ಬೇಕಾಗಿರುವ ವಸ್ತುಗಳ ಕುರಿತಾದ ನಿಯಮಗಳನ್ನು liberal ಮಾಡಿ. ಪಿ–ಸ್ಯಾಂಡ್, ಸಿ–ಸ್ಯಾಂಡ್, ಜೆಲ್ಲಿ ಇವುಗಳನ್ನು ನಿಲ್ಲಿಸುವುದಕ್ಕಾಗುತ್ತದೆಯೇ? ಅವುಗಳ ಅವಶ್ಯಕತೆ ಇದೆ. ಹೀಗಾಗಿ ಸರ್ಕಾರವು ಇದನ್ನು ಸಕ್ರಮಗೊಳಿಸಬೇಕು. ಇದಕ್ಕೆ ತನ್ನದೇ ಆದ ರೀತಿ, ನೀತಿ ನಿಯಮಗಳಿದ್ದು, ಸಾಕಷ್ಟು ಕಾನೂನುಗಳಿವೆ. ಹಾಲಿ ಇರುವ ಕಾನೂನನ್ನೇ ಜಾರಿಗೊಳಿಸಿದರೆ ಸಾಕು. ಹೀಗೆ ಮಾಡಿದ್ದಲ್ಲಿ ಅಕ್ರಮ ಗಣಿಗಾರಿಕೆಯು ನಿಲ್ಲುತ್ತದೆ. ಬಂಡವಾಳವಿರುವವರು ವೈಜ್ಞಾನಿಕ ರೀತಿಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸೂಕ್ತವಾದ ಕಾನೂನುಗಳ ಅಡಿ ಗಣಿಗಾರಿಕೆಯನ್ನು ಮಾಡುತ್ತಾರೆ. ಇದರಿಂದ ಜನರಿಗೆ ಅವಶ್ಯಕ ವಸ್ತುಗಳು ಲಭ್ಯವಾಗುತ್ತವೆ. ಇವತ್ತಿನ ದಿವಸ ನಾವು ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳ ವಿರುದ್ಧ ಪೈಪೋಟಿಯನ್ನು ಮಾಡುವುದಕ್ಕಾಗುತ್ತಿಲ್ಲ. ನೆರೆಯ ತಮಿಳುನಾಡು ಮತ್ತು ಆಂಧ್ರಪ್ರದೇಶದ ರಾಜ್ಯಗಳವರು ಸಾಮಗ್ರಿಗಳನ್ನು ತೆಗೆದುಕೊಂಡು ಬಂದು ನಮ್ಮ ರಾಜ್ಯದಲ್ಲಿ dump ಮಾಡುತ್ತಾರೆ. ಅವರ ಜೊತೆ ಇಲ್ಲಿನ ಕ್ರಷರ್‌ಗಳು ಪೈಪೋಟಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿಗಿಂತ ಇಲ್ಲಿನ ಮರಳು 100 ರೂಪಾಯಿಗಳು ಜಾಸ್ತಿಯಾಗುತ್ತದೆ. ತಮಿಳುನಾಡು ಮತ್ತು ಆಂಧ್ರಪ್ರದೇಶದ ರಾಜ್ಯಗಳ ವಸ್ತುಸ್ಥಿತಿಯನ್ನು ಅಧ್ಯಯನ ಮಾಡಿಕೊಂಡು ಬನ್ನಿ. ಅವರು ಎಲ್ಲಾ ವಿಚಾರಗಳಲ್ಲಿ liberal ಮಾಡುತ್ತಿದ್ದಾರೆ. ನಮ್ಮಲ್ಲಿರುವಂತಹ ಕಾನೂನುಗಳು ಅವರಿಗಿಂತ ಕಠಿಣವಾಗಿರುತ್ತವೆ. ಹೀಗಾಗಿ ಹೊಸೂರಿನವರು ಅರ್ಧ ಬೆಂಗಳೂರನ್ನು ಕವರ್ ಮಾಡಿದ್ದರೆ, ಇನ್ನುಳಿದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಧ ಬೆಂಗಳೂರನ್ನು ಆಂಧ್ರ ಪ್ರದೇಶದವರು ಕವರ್ ಮಾಡಿದ್ದಾರೆ. ಇದು ವಾಸ್ತವವಾಗಿ ಮಾತನಾಡುವಂತಹ ವಿಚಾರ. ವ್ಯವಸ್ಥೆಯನ್ನು ಸರಿ ಮಾಡಿದರೆ ಅಕ್ರಮ ಗಣಿಗಾರಿಕೆ automatic ಆಗಿ ನಿಲ್ಲಲಿಕ್ಕೆ ಸಾಧ್ಯ. ಇನ್ನೊಂದು ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುವುದೇನೆಂದರೆ ಅದು ಕಂದಾಯ ಇಲಾಖೆ ಇರಬಹುದು, ಅರಣ್ಯ ಇಲಾಖೆ ಇರಬಹುದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇರಬಹುದು, ಪೊಲೀಸ್ ಇಲಾಖೆಗಳ ಅಧಿಕಾರಿಗಳಿಗೆ ಗೊತ್ತಿಲ್ಲದೆ, ಗಣಿಗಾರಿಕೆ ನಡೆಯುವುದಿಲ್ಲ. ಏಕಾಏಕಿ 5–6 ಗಂಟೆಯಲ್ಲಿ ಹೋಗಿ ಬೆಟ್ಟಕ್ಕೆ ಹೋಗಿ ಕಲ್ಲನ್ನು ಕ್ರಷರ್‌ನಲ್ಲಿ ಹಾಕಿ ಪುಡಿ ಮಾಡಿ ಅರ್ಧ ಗಂಟೆಯಲ್ಲಿ ಎತ್ತಿಕೊಂಡು ಹೋಗುವಂತಹ ಕೆಲಸ ಅಲ್ಲ. ಇದು ಯೂನಿಟ್ ಸೆಟ್ ಅಪ್ ಮಾಡಲೇಬೇಕು. ಅದನ್ನು ಬ್ಲಾಸ್ಟ್ ಮಾಡಲೇಬೇಕು. ತಿಂಗಳಾನುಘಟ್ಟಲೆ, ವರ್ಷಾನುಘಟ್ಟಲೆ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ಹೋಗಬೇಕು. ಜಿಲ್ಲೆಯಲ್ಲಿ ಎಷ್ಟು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಹೇಳಿ ಸಾಮಾನ್ಯ ಪಿ.ಸಿ.ಯಿಂದ ಹಿಡಿದುಕೊಂಡು ಡಿಜಿಎಂ ಆಫೀಸ್‌ನಲ್ಲಿ ಕೆಲಸ ಮಾಡುವ ಒಬ್ಬ ಅಟೆಂಡರ್ ವರೆಗೂ ಗೊತ್ತಿರುತ್ತದೆ. ಇದು ಯಾರಿಗೂ ಗೊತ್ತಿಲ್ಲದ ವಿಚಾರ ಏನಲ್ಲ. ಎಲ್ಲರಿಗೂ ಗೊತ್ತಿರುತ್ತದೆ. ಇದನ್ನು ನಿಲ್ಲಿಸಲಿಕ್ಕೆ ಕಷ್ಟ ಏನಿಲ್ಲ. ಈ ವಿಚಾರದಲ್ಲಿ ಕಾನೂನುಗಳನ್ನು ಜಾಸ್ತಿ ಮಾಡಿದರೆ, ಅವರಿಗೆ ದುಡ್ಡು ಜಾಸ್ತಿ ಬರುತ್ತದೆ. ಆ ಮೂಲಕ ಬ್ರಷ್ಟಾಚಾರಕ್ಕೆ ಅವಕಾಶ ಇದೆ.

**ಮುಂದು. . .**

**(63) 01.02.2021 06.30 ಎಸ್‌ವಿ–ಎಕೆ**

**ಶ್ರೀ ಎಸ್.ರವಿ (ಮುಂದು):–**

ಹಿಂದೆ ಗಣಿ ಸಚಿವರಾಗಿದ್ದಂತಹ ಮಾನ್ಯ ಸಿ.ಸಿ.ಪಾಟೀಲರು ಕೆಲವೊಂದು ಆಡಳಿತಾತ್ಮಕವಾದಂತಹ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ತಾವೂ ಸಹ ಎಲ್ಲಾ ವಿಚಾರಗಳನ್ನು ಧನಾತ್ಮಕವಾಗಿ ಪರಿಗಣಿಸಿ ಕ್ರಮಗಳನ್ನು ಕೈಗೊಳ್ಳಬೇಕು. ಶಿವಮೊಗ್ಗದಲ್ಲಿ ನಡೆದಿರುವ ಸ್ಫೋಟ ಸಾಮಾನ್ಯವಾದಂತಹ ಸ್ಫೋಟವಂತೂ ಖಂಡಿತವಾಗಿಯೂ ಅಲ್ಲ. ಇದು ಬಹಳ ಗಂಭೀರವಾದುದು. ಕೇವಲ ಜಿಲೆಟಿನ್ ಅಥವಾ ತೋಟಾಯಿ ಬತ್ತಿಗಳಷ್ಟೇ ಇದರಲ್ಲಿ involve ಆಗಿರುವುದಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ಇದು ಬಹಳ ಘೋರವಾಗುತ್ತದೆ. ಇದರ ತನಿಖೆಯನ್ನು ಮಾಡಲು NIA (National Investigation Agency) ಮಾತ್ರವೇ ಸೂಕ್ತವಾದಂತಹ ಏಜೆನ್ಸಿಯಾಗಿರುತ್ತದೆ. ರಾಷ್ಟ್ರೀಯ ಮಟ್ಟದ ತನಿಖಾ ಸಂಸ್ಥೆಗಳಿಂದ ಈ ಪ್ರಕರಣವನ್ನು ತನಿಖೆ ಮಾಡಿಸಬೇಕು. ಇದರಲ್ಲಿ ಯಾವುದೇ ರಾಜಕೀಯ ಬೇಡ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ಇದರ ಬಗ್ಗೆ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೀರೆಂದು ನಾನಾದರೂ ಭಾವಿಸಿದ್ದೇನೆ. ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ವಿಷಯದ ಕುರಿತು ಹಿರಿಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು, ಶ್ರೀ ಮರಿತಿಬ್ಬೇಗೌಡರು ಮುಂತಾದವರು ಸವಿಸ್ತಾರವಾಗಿ ಬೆಳಕನ್ನು ಚೆಲ್ಲಿದ್ದಾರೆ. ಈಗಾಗಲೇ ಪ್ರಸ್ತಾಪ ಮಾಡಿರುವುದರ ಬಗ್ಗೆ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಮಾನ್ಯ ಎಸ್.ರವಿಯವರು ಮಾತನಾಡುತ್ತಾ ಬಹಳ ಚೆನ್ನಾಗಿ ಹೇಳಿದರು. ಮರಳು ಗಣಿಗಾರಿಕೆಯ ಬಗ್ಗೆ ಹೇಳುವುದಾದರೆ ನಮ್ಮ ದೇವನಹಳ್ಳಿ ತಾಲ್ಲೂಕಿನಲ್ಲಿ ಸರ್ವೆ ನಂ. 110 ಸರ್ಕಾರಿ ಜಾಗವಾಗಿದೆ. ಆ ಸರ್ಕಾರಿ ಜಾಗದಲ್ಲಿ...

**ಸಭಾಪತಿಯವರು:–** ಮಾನ್ಯ ರಮೇಶ್ ಗೌಡ ಅವರೇ, ಶಿವಮೊಗ್ಗ ಸ್ಫೋಟದ ಬಗ್ಗೆ ಮಾತನಾಡಿ. ದೇವನಹಳ್ಳಿಯ ವಿಷಯ ಈಗ ಪ್ರಸ್ತಾಪಿಸಬೇಡಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುವುದೇನೆಂದರೆ ದಯಮಾಡಿ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಶಿವಮೊಗ್ಗ ಸ್ಫೋಟದ ಕುರಿತು ಈಗಾಗಲೇ ಬಹಳಷ್ಟು ಜನ ಮಾತನಾಡಿದ್ದಾರೆ. ಅಲ್ಲಿ ಯಾರಾದರೂ ಪ್ರಾಮಾಣಿಕವಾದಂತಹ ಅಧಿಕಾರಿಯೊಬ್ಬರು ಹೋದರೆ, ಅಕ್ರಮ ಗಣಿಗಾರಿಕೆ ಮಾಡುತ್ತಿರುವವರು ಅಂತಹ ಅಧಿಕಾರಿಯನ್ನು ಅಲ್ಲಿ ಇರುವುದಕ್ಕೆ ಬಿಡುವುದಿಲ್ಲ. ಯಾವ ಅಧಿಕಾರಿಗಳು ಕಡುಭ್ರಷ್ಟರಾಗಿರುತ್ತಾರೆಯೋ, ಅಂತಹ ಭ್ರಷ್ಟ ಅಧಿಕಾರಿಗಳನ್ನು ಅಲ್ಲಿ ಹಾಕಿಸಿಕೊಳ್ಳುತ್ತಾರೆ. ಇದು ನಡೆದು ಬಂದಿರುವಂತಹ ಹಾದಿ. ಇದು ನಮ್ಮೆಲ್ಲರಿಗೂ ತಿಳಿದಿರುವ ವಿಷಯ. ಇದೇ ಸದನದಲ್ಲಿ ಅಕ್ರಮ ಗಣಿಗಾರಿಕೆಯ ಬಗ್ಗೆ ಬಹಳಷ್ಟು ಬಾರಿ ಚರ್ಚೆಗಳಾಗಿವೆ. ಶಿವಮೊಗ್ಗದ ಸ್ಫೋಟದಿಂದಾಗಿ ಸಾಕಷ್ಟು ಜನ ಅಮಾಯಕರು ಮೃತಪಟ್ಟಿದ್ದಾರೆ. ಇದರ ಬಗ್ಗೆ ನಾವು ಇಂದು ಸದನದಲ್ಲಿ ಸಾಕಷ್ಟು ಚರ್ಚೆಯನ್ನು ಮಾಡುತ್ತಿದ್ದೇವೆ. ಆದರೆ ಸದನ ಮುಗಿದ ನಂತರ ಯಾವುದೇ ಕ್ರಮವನ್ನು ಜರುಗಿಸುವುದಿಲ್ಲ, ಅದನ್ನು ಮರೆತು ಬಿಡುತ್ತಾರೆ. ಈ ರೀತಿಯಾಗಬಾರದು. ಭ್ರಷ್ಟ ಅಧಿಕಾರಿಗಳು ರೌಡಿಶೀಟರ್‌ಗಳೊಂದಿಗೆ ಸೇರಿ ಜೆಸಿಬಿಗಳನ್ನು ಇಟ್ಟುಕೊಂಡು 40–50 ಅಡಿ ಆಳ ಅಗೆದು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡು ಮಣ್ಣನ್ನು ತೆಗೆದು ಫಿಲ್ಟರ್ ಮಾಡುತ್ತಾರೆ. ತುಂಬಾ ಪ್ರೆಷರ್‌ನಿಂದ ನೀರನ್ನು ಬಿಟ್ಟಾಗ ಅದು ಮರಳಾಗುತ್ತದೆ. ಅದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ. ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಹೆಸರನ್ನು ಸಹ ಹೇಳುತ್ತೇನೆ. ದೇವನಹಳ್ಳಿಯ ಒಬ್ಬ ತಹಶೀಲ್ದಾರ್ ಅಜಿತ್ ರೈ ಎನ್ನುವವರು ರೌಡಿಶೀಟರ್‌ಗಳೊಂದಿಗೆ, ಅಕ್ರಮ ಗಣಿಗಾರಿಕೆ ಮಾಡುವವರೊಂದಿಗೆ ರಾತ್ರಿಯ ವೇಳೆಯಲ್ಲಿ ಕುಡಿದು ತಿಂದು ಮೋಜು ಮಾಡುತ್ತಾರೆ. ಇವರ ಬಗ್ಗೆ ಕ್ರಮವಾಗುತ್ತದೆಯೇ? ಅಕ್ರಮ ಗಣಿಗಾರಿಕೆ ಮಾಡುವವರಿಗೆ ದಂಡ ವಿಧಿಸುವಂತಹ ಕೆಲಸ ಆಗಬೇಕು, ಅವರನ್ನು ಕಾರಾಗೃಹಕ್ಕೆ ಹಾಕುವ ಕೆಲಸ ಆಗಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

## 06. ಪ್ರಕಟಣೆ

**ಸಭಾಪತಿಯವರು:-** ವಿಧಾನ ಪರಿಷತ್ತಿನ ಅಧಿವೇಶನದ ಸಮಯದಲ್ಲಿ ಸದನದ ಒಳಗೆ ಮೊಬೈಲ್‌ಗಳನ್ನು ಉಪಯೋಗಿಸಬಾರದೆಂದು ಹಾಗೂ ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಬೇಕೆಂದು ದಿನಾಂಕ 03ನೇ ಜೂನ್ 2011ರಲ್ಲಿಯೇ ಲಘು ಪ್ರಕಟಣೆಯ ಮೂಲಕ ತಿಳಿಸಲಾಗಿತ್ತು. ಆದರೆ ಸದನದ ಒಳಗೆ ಮೊಬೈಲ್ ಬಳಕೆಯಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಸದನವನ್ನು ಪ್ರವೇಶಿಸುವ ಪೂರ್ವದಲ್ಲಿಯೇ ಕಡ್ಡಾಯವಾಗಿ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಬೇಕೆಂದು, ಒಂದು ವೇಳೆ ಸದನದ ನಡವಳಿಕೆ ಸಂಬಂಧವಾಗಿ ಸಂಗ್ರಹಿಸಿದ ಮಾಹಿತಿಯನ್ನು ಪಡೆಯಲು ಮೊಬೈಲ್ ಅನ್ನು ಬಳಕೆ ಮಾಡಲು ಇಚ್ಛಿಸಿದಲ್ಲಿ ಪೀಠದ ಅನುಮತಿಯನ್ನು ಪಡೆಯಬೇಕೆಂದು ತಿಳಿಸಲಾಗಿದೆ.

## 07. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಮುಂದುವರೆದ ಚರ್ಚೆ

**ವಿಷಯ:-** ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ, ಅಕ್ರಮವಾಗಿ ಸಂಗ್ರಹಿಸಿದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಬಗ್ಗೆ.

– – –

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದು ಸದನದಲ್ಲಿ ಶಿವಮೊಗ್ಗ ಕ್ವಾರಿ ಸ್ಫೋಟದ ಬಗ್ಗೆ ಪ್ರತಿಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲರು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು, ನಾರಾಯಣಸ್ವಾಮಿ, ಪ್ರಸನ್ನಕುಮಾರ್, ಆರ್.ಬಿ.ತಿಮ್ಮಾಪೂರ, ಬಿ.ಕೆ.ಹರಿಪ್ರಸಾದ್, ಎಸ್.ರವಿ, ಮರಿತಿಬ್ಬೇಗೌಡರು ಎಲ್ಲರೂ ಸವಿಸ್ತಾರವಾಗಿ ಮಾತನಾಡಿದ್ದಾರೆ. ಭಾರಿ ತೀವ್ರತೆಯುಳ್ಳ ಈ ಘಟನೆಯನ್ನು ಎಲ್ಲರೂ ಖಂಡಿಸಿದ್ದಾರೆ. ನಾನು investigation ಅಂಶವನ್ನು ಹೇಳಬಯಸುತ್ತೇನೆ. ಈ gelatin supply ಮಾಡಿರುವವರು ನಮ್ಮ ಬಳ್ಳಾರಿಯ ಗಡಿ ಪ್ರದೇಶವಾಗಿರುವ ಆಂಧ್ರದ ರಾಯದುರ್ಗ ತಾಲ್ಲೂಕಿನ ಮುರುಡಿ ಮತ್ತು ಅಡಿಗುಪ್ಪ ಎನ್ನುವಲ್ಲಿ ಮೂರು ಗೋಡೌನ್‌ಗಳನ್ನು ಮಾಡಿಕೊಂಡಿದ್ದಾರೆ. ಮಂಜುನಾಥ ಸಾಯಿ ಮತ್ತು ಶ್ರೀರಾಮ್ ಎನ್ನುವವರು ಈ ಘಟನೆಯಾದ ರಾತ್ರಿಯಿಂದಲೇ abscond ಆಗಿದ್ದಾರೆ. ನನಗೆ ತಿಳಿದ ಮಟ್ಟಿಗೆ ಪೊಲೀಸ್ ಹೋಗಿ ಇದರ investigation ಮಾಡಿರುವುದಿಲ್ಲ. ಜಿಲೆಟಿನ್ ಅನ್ನು ಬೇರೆ ಕಡೆಗಳಿಂದ ಸಂಗ್ರಹ ಮಾಡಿ ಅವನು ಈ ಕ್ವಾರಿಗಳಿಗೆ ಸರಬರಾಜು ಮಾಡುತ್ತಿದ್ದನು. ನಮ್ಮ ಬಳ್ಳಾರಿಯಲ್ಲಿ, ಆಂಧ್ರದಲ್ಲಿ ಎಲ್ಲಿಯೂ ಕೊಟ್ಟಿರುವುದಿಲ್ಲ. ಅವನ ಗೋಡೌನ್ ಸುತ್ತಮುತ್ತಲೂ ಸುಮಾರು 20 ಕ್ವಾರಿಗಳಿವೆ. ಅಲ್ಲಿಗೆ ಸರಬರಾಜು ಮಾಡಿಲ್ಲ. ಅವನು ಮಂಡ್ಯ, ಶಿವಮೊಗ್ಗ ಮತ್ತು ದಾವಣಗೆರೆ ಈ ಮೂರು ಜಿಲ್ಲೆಗಳಿಗೆ ಮಾತ್ರ ಸರಬರಾಜು ಮಾಡಿದ್ದಾನೆ. ಈ ಸ್ಫೋಟದ ಹಿಂದಿನ ದಿನ ಟ್ರಾನ್ಸ್‌ಪೋರ್ಟ್ ಮಾಡಿದ ಲಾರಿಯಲ್ಲಿ ಆಟೋ ಡ್ರೈವರ್ ಒಬ್ಬನನ್ನು engage ಮಾಡಿದ್ದಾನೆ. ರಾಜು ಮುರುಡಿ ಮತ್ತು ಜಾವೇದ್ ಮಾಸ್ಟರ್ ಎನ್ನುವವರು ಉಳಿದವರು. ಇಂತಹ ಟ್ರಿಪ್ ಹೊಡೆಯುವಾಗ ಅವರಿಗೆ ರೂ.5000 ಕೂಲಿಯನ್ನು ಕೊಡುತ್ತಿದ್ದನು. ಆ ಮೂವರು ಅಲ್ಲಿ ನಡೆದ ಸ್ಫೋಟಕ್ಕೆ ಬಲಿಯಾದರು. ಆದ್ದರಿಂದ ಆಂಧ್ರ ಸರ್ಕಾರವನ್ನು ನಮ್ಮ ಸರ್ಕಾರದವರು contact ಮಾಡಿ ಆ ಗೋಡೌನ್‌ಗಳನ್ನು ಸೀಜ್ ಮಾಡಬೇಕು. ತಪ್ಪಿತಸ್ಥರು ಎಲ್ಲಿದ್ದಾರೆಂದು ಹುಡುಕಿ ಅವರನ್ನು ವಿಚಾರಣೆ ಮಾಡಿದರೆ ಅದು ಜಿಲೆಟಿನ್ ಅಥವಾ ಬೇರಾವುದೇ ವಸ್ತುವನ್ನು ಸರಬರಾಜು ಮಾಡುತ್ತಿದ್ದರೇ ಎನ್ನುವ ಅಂಶವು ಹೊರಬೀಳುತ್ತದೆ.

ಈಗ ಮಾನ್ಯ ರವಿಯವರು ಮಾತನಾಡುತ್ತಾ ಹೇಳಿದರು. ನಮ್ಮದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ. Blasting material ಪ್ರತಿಯೊಂದು ಹಂತದಲ್ಲಿಯೂ ಬೇಕಾಗುತ್ತದೆ. ಆದರೆ ಅದನ್ನು transportation ಮಾಡುವಾಗ ಯಾವ ರೀತಿ ಮಾಡಬೇಕು ಎನ್ನುವ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. 1200 ಕೆ.ಜಿ.ಯನ್ನು ಒಂದೇ ಲಾರಿಯಲ್ಲಿ ತೆಗೆದುಕೊಂಡು ಬರುವಾಗ ಅವನು precautionary measures ತೆಗೆದುಕೊಂಡಿರಲಿಲ್ಲ. ಒಂದು ಕ್ವಾರಿಯನ್ನು ಸ್ಫೋಟ ಮಾಡಬೇಕೆಂದರೆ ಕನಿಷ್ಠ ಎಷ್ಟು ಬೇಕು? 2 ಕೇಸ್ ಅಥವಾ 1 ಕೇಸ್? ಒಂದು ವೇಳೆ ಅದು ಆಕಸ್ಮಿಕವಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಫೋಟಗೊಂಡರೂ ಅದರ ತೀವ್ರತೆಯನ್ನು ತಡೆದುಕೊಳ್ಳುವಂತಹದ್ದನ್ನು ಹೇಗೆ ಮಾಡಬೇಕು? ಇವೆಲ್ಲವನ್ನೂ ತನಿಖೆ ಮಾಡಿದರೆ ಮಾತ್ರ ಇದನ್ನು ಸುಧಾರಣೆ ಮಾಡುವುದು ಸಾಧ್ಯ ಎಂಬುದು ನನ್ನ ಅಭಿಪ್ರಾಯ.

ಆದ್ದರಿಂದ ರಾಜ್ಯ ಸರ್ಕಾರವು ಆಂಧ್ರ ಸರ್ಕಾರದವರನ್ನು contact ಮಾಡಿ ಆ ಸ್ಥಳಗಳ ಮೇಲೆ raid ಮಾಡಿಸಿ ತಪ್ಪಿತಸ್ಥರನ್ನು ಅರೆಸ್ಟ್ ಮಾಡಿಸಿದರೆ ಮಾತ್ರ ಇವೆಲ್ಲಾ ಹೊರಬರುತ್ತದೆಯೆಂಬುದು ನನ್ನ ಸಲಹೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಡಾ:ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇಂತಹ ಒಂದು ದುರಂತಮಯ ಘಟನೆಯ ಕುರಿತು ನಾವು ಚರ್ಚೆ ಮಾಡುವಾಗ ಅನೇಕ ವಿಚಾರಗಳ ಬಗ್ಗೆ ಅಂದರೆ ನಾಡು-ನುಡಿಗೆ, ಪರಿಸರಕ್ಕೆ, ವನ್ಯಜೀವಿ ಸಂಕುಲಕ್ಕೆ ಆಗಬಹುದಾದ ಅಪಾಯಗಳ ಕುರಿತು ಬೆಳಕನ್ನು ಚೆಲ್ಲುತ್ತಿದ್ದೇವೆ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಅನೇಕ ಹಿರಿಯ ಸದಸ್ಯರು ಹೇಳಿದಂತೆ ನಾಡಿನ ಭದ್ರತೆಗೆ ಸಂಬಂಧಪಟ್ಟಂತೆ ಭಯೋತ್ಪಾದಕ ಕೃತ್ಯದ ಉದ್ದೇಶವನ್ನು ಇಟ್ಟುಕೊಂಡು ಈ ಸಾಗಾಣಿಕೆಯನ್ನು ಮಾಡಿದ್ದರೆ, ಅದರ ಬಗ್ಗೆ ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ zero tolerance ಅನ್ನು ಹೊಂದಿರುತ್ತದೆ. ಭಯೋತ್ಪಾದನೆಯ ಕುರಿತು ಯಾವುದೇ ರೀತಿಯ ರಿಯಾಯಿತಿಯಿರುವುದಿಲ್ಲ ಎಂಬುದು ನಮಗೆಲ್ಲಾ ತಿಳಿದಿದೆ. ಮಾನ್ಯ ಹರಿಪ್ರಸಾದ್, ಮಾನ್ಯ ರವಿ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ. ಆ ರೀತಿಯ ಒಂದು ದಿಕ್ಕಿನಲ್ಲಿ ಏನಾದರೂ ಈ ಪ್ರಕರಣವಿದ್ದರೆ ಅದಕ್ಕೆ ನಾವು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಎರಡನೆಯದಾಗಿ ಮಾನ್ಯ ಕೊಂಡಯ್ಯನವರು ಮಾತನಾಡುವಾಗ ಹೇಳಿದರು. ಯಾವ ಕೃತ್ಯಕ್ಕೆ ಎಂತಹ ಸ್ಫೋಟಕಗಳನ್ನು ಬಳಸಲಾಗುವುದು ಎಂದು ಮಾನ್ಯ ರವಿಯವರು ಬೆಳಕು ಚೆಲ್ಲಿದ್ದಾರೆ. ಈಗ ಸದ್ಯಕ್ಕೆ ಅಲ್ಲಿ ಸಿಕ್ಕಿರುವಂತಹ ಮಾಹಿತಿಗಳಲ್ಲಿ ಅದು forensic report ಇರಬಹುದು, ಸ್ಫೋಟಕಗಳಲ್ಲಿ ಬಳಕೆ ಮಾಡಲಾಗಿರುವ ರಾಸಾಯನಿಕಗಳ ಆಧಾರದಲ್ಲಿ ಈಗಾಗಲೇ ಸರ್ಕಾರ ಒಂದು ಉತ್ತರವನ್ನು ಕೊಟ್ಟಿದೆ. ಉತ್ತಮವಾದ ಚುನಾವಣಾ ಪದ್ಧತಿಯು ಬರುವ ತನಕ ಯಾವುದೇ ರಾಜಕಾರಣಿಗಳು ಬಹಳ ಅಸಹಾಯಕರು. ಇಂದು ಯಾರಾದರೂ ತುಂಬಾ ಅಸಹಾಯಕರಿದ್ದಾರೆಂದರೆ, ಅದು ರಾಜಕಾರಣಿಗಳೆಂದು ಹೇಳುವುದಕ್ಕಿಚ್ಛಿಸುತ್ತೇನೆ. ನಾವು ಹೊರಗೆ ಹೋದಾಗ ಯಾರಾದರೂ ಅಪರಿಚಿತರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದು ಫೋಟೊ ತೆಗೆಸಿಕೊಳ್ಳುತ್ತಾರೆ. ತೆಗೆಸಿಕೊಂಡಿಲ್ಲವೆಂದರೆ ಅವರಿಗೆಷ್ಟು ದುರಹಂಕಾರವೆಂದು ಮಾತನಾಡಿಕೊಳ್ಳುತ್ತಾರೆ. ರಾಜಕಾರಣಿಗಳಿಗೆ ಇವರು ಗೊತ್ತಿರುವುದಿಲ್ಲ. ಸಾರ್ವಜನಿಕ ಜೀವನದಲ್ಲಿರುವವರಿಗೆ ಇದೊಂದು ತೊಂದರೆಯಿದೆ. ರಾಜಕೀಯ ಪದ್ಧತಿ, ರಾಜಕೀಯ ಪಕ್ಷಗಳೆಂದರೆ ಪರಿಚಯವಿರುವವರು, ಪರಿಚಯ ಇಲ್ಲದಿರುವವರು visible and invisible chain ಇರುತ್ತದೆ. ಅನೇಕ ಬಾರಿ ಯಾರೋ ಮಾಡಿದ ತಪ್ಪಿಗೂ ಒಬ್ಬ ಜನ ಪ್ರತಿನಿಧಿ ಅಥವಾ ಸಾರ್ವಜನಿಕ ಜೀವನದಲ್ಲಿರುವವರು ಬೆಲೆ ಕೊಡಬೇಕಾಗಿ ಬರುತ್ತದೆ.

**(ಮುಂದು)**

(64) 01.02.2021, 6 .40. KG.RN

**ಡಾ॥ತೇಜಸ್ವಿನಿಗೌಡ(ಮುಂದು):-**

ಇಂತಹದರ ಬಗ್ಗೆ ಸುಧಾರಣೆಗಳು ಆಗಬೇಕು. ಚುನಾವಣಾ ಪದ್ಧತಿಯ ಸುಧಾರಣೆ ಒಂದೇ ಪರಿಹಾರವೆಂದು ನನಗೆ ಅನಿಸುತ್ತದೆ. ಹಾಗೆಯೇ, ಸ್ಪಷ್ಟವಾದ ಕಾನೂನು, ಈಗ ಕಾನೂನು ಚೆನ್ನಾಗಿದೆ. ಆ ಕಾನೂನಿನ ಅರಿವು ಮೂಡಿಸದಿರುವಂತಹದ್ದು, ಕೆಲವೊಮ್ಮೆ ಕಾನೂನು ಗೊತ್ತಿದ್ದರೂ ಸಹ violate ಮಾಡುವಂತಹದ್ದು. ಸ್ಪಷ್ಟವಾದ ಗಡಿಗಳನ್ನು ನಿಖರವಾಗಿ ಗುರುತಿಸದಿರುವುದು, Survey Department, ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಗಳ ನಡುವೆ ಇನ್ನೂ ಒಂದು ಸ್ಪಷ್ಟವಾದ ಮಾಹಿತಿ ಬೇಕಾಗಿದೆ. ನಂದಿಗಿರಿ ಧಾಮ ನನ್ನ ಹುಟ್ಟೂರು ಬರುತ್ತದೆ. ಕನಕಪುರ ನನ್ನ ಕರ್ಮಭೂಮಿ ಅಲ್ಲಿಯೂ ಸಹ ಈ ಒಂದು ಉದ್ಯಮವನ್ನು ನೋಡಿದ್ದೇವೆ. ಅದೇರೀತಿ ಮೈಸೂರು, ಮಂಡ್ಯ ಜಿಲ್ಲೆಯ ಪಾಂಡವಪುರ ಪಕ್ಕದ ಬೇಬಿ ಬೆಟ್ಟದಲ್ಲಿ ನೋಡಿದ್ದೇವೆ. ಖಂಡಿತವಾಗಿ ನಮ್ಮ ನಾಡಿಗೆ ಬೇಕಾದಂತಹ ಗಣಿಗಾರಿಕೆಯ ಉತ್ಪನ್ನಗಳು ನಮಗೆ ಬೇಕೇಬೇಕಾಗುತ್ತದೆ. Scientific approach, ನಾನು ಮಾನ್ಯ ಸಚಿವರಾದಂತಹ ನಿರಾಣಿಯವರಲ್ಲಿ ಅಗ್ರಹ ಮಾಡುತ್ತೇನೆ. ಎಲ್ಲೆಂದರಲ್ಲಿ blast ಮಾಡುತ್ತಾರೆ. Scientific ಆಗಿ ಒಂದು ಗುಡ್ಡ ಅಥವಾ ಕಲ್ಲನ್ನು ಕ್ರಮಬದ್ಧವಾದ ರೀತಿಯಲ್ಲಿ ತೆಗೆದಾಗ ಅದರಲ್ಲಿ ನೀರನ್ನು ಶೇಖರಣೆ ಮಾಡಿಕೊಳ್ಳುವುದಕ್ಕೆ ಜಾಗಮಾಡಿಕೊಳ್ಳಬಹುದು. ಬಳಸುವಂತಹ ಸ್ಫೋಟಕಗಳು ಎಷ್ಟು impact ಮಾಡುತ್ತವೆ, ಇವತ್ತು KRS Dam ಗೆ ಅಪಾಯವಿದೆ ಎಂದು ಹೇಳಿದ್ದೇವೆ. ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಅತ್ಯಂತ ಹೆಚ್ಚು ವನ್ಯ ಸಂಕುಲವಿದೆ ಎಂದು ತುಂಬ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಯನಶೀಲರಾದ ನಮ್ಮ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಹೇಳಿದರು. ಅತ್ಯಂತ ಬೆಲೆ ಕಟ್ಟಲಾಗದತಂಹ ವೃಕ್ಷ ಸಂಪತ್ತು ಇದೆ. ತುಂಗಾ, ಭದ್ರಾ ಮತ್ತು ಶರಾವತಿಯಂತಹ ನಾಡಿನ ಜೀವ ನದಿಗಳು ಅಲ್ಲಿ ಹರಿಯುತ್ತವೆ. ಶಾಶ್ವತವಾದಂತಹ ಅಪಾಯವನ್ನುಂಟು ಮಾಡಬಹುದಾಂತಹ ಯಾವುದೇ ಒಂದು ಚಟುವಟಿಕೆಗಳಿಗೆ ನಾವು ಅವಕಾಶ ಕೊಡಬಾರದೆಂದು ಶ್ರೀ ಮಹಾತ್ಮ ಗಾಂಧಿಜೀಯವರು ಹೇಳಿದ್ದಾರೆ. ಅದೇರೀತಿ ಪಂಡಿತ್ ದೀನ್‌ದಯಾಳ್‌ಜೀರವರು ಪ್ರಕೃತಿ ಮನುಷ್ಯನಿಗೆ need ನ್ನು ನಮ್ಮ ಅವಶ್ಯಕತೆಗಳನ್ನು ಪೂರೈಸುವ ದೊಡ್ಡತನ ಮತ್ತು ಶಕ್ತಿ ಇದೆ ಎಂದು ಹೇಳಿದ್ದಾರೆ. ಆದರೆ, ನಮ್ಮ greed, ದಾಹ ಇನ್ನೂ ಬೇಕು, ರಸ್ತೆ ಮಾಡಬೇಕು, ಅದಕ್ಕೆ ಎಲ್ಲಾ ಮರಗಳನ್ನು ಕಡಿಯಬೇಕು, ಅಲ್ಲಿ ಕೈಗಾರಿಕೆ ಮಾಡಬೇಕು, ಒಳ್ಳೆಯ ಭೂಮಿ ಬೇಕು ಎನ್ನುವುದಾಗಿದೆ. ಈ greed ಅನ್ನು ಮನುಷ್ಯ ಎಲ್ಲಿಯವರೆಗೆ ನಿಗ್ರಹ ಮಾಡುವುದಿಲ್ಲವೋ ಅಲ್ಲಿಯತನಕ ಇದು ಸಾಧ್ಯವಾಗುವುದಿಲ್ಲ. ಹಾಗೆಯೇ, ಇದನ್ನು ಉಲ್ಲಂಘನೆ ಮಾಡಿದರಿಗೆ ಯಾವ ಶಿಕ್ಷೆ ಕೊಡಬೇಕು? ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ಕೆ.ಸಿ.ಕೊಂಡಯ್ಯನವರು ಹೇಳಿದ್ದಾರೆ, ಈ ಸ್ಫೋಟಕಗಳನ್ನು ಸಾಗಾಣಿಕೆ ಮಾಡಬೇಕಾದರೆ, ಜನನಿಬಿಡ ಸ್ಥಳಗಳಲ್ಲಿ ತೆಗೆದುಕೊಂಡು ಹೋಗುತ್ತಾರೆ. ಕೆಲವು ಸಾರಿ ದೊಡ್ಡ ದೊಡ್ಡ ಉದ್ಯಮಗಳನ್ನು ಮಾಡುವಾಗ, ರಾತ್ರಿ ವೇಳೆಯಲ್ಲಿ ಮೂಲಭೂತ ಸೌಕರ್ಯಗಳಿಗೆ ಕಾಮಗಾರಿ ನಡೆಯುವಾಗ night-time permission ಕೊಡುತ್ತೇವೆ. ಮೊದಲನೆಯದಾಗಿ, ಇಂತಹ ಅಪಾಯಕಾರಿ ಸ್ಫೋಟಕಗಳನ್ನು permission ನಿಂದ ಸಾಗಿಸಬೇಕು. ಎರಡನೆಯದಾಗಿ, ಯಾವ ರಸ್ತೆಗಳಲ್ಲಿ, ಯಾವ ಸಮಯದಲ್ಲಿ ಯಾವ ಮುಂಜಾಗ್ರತಾ ಕ್ರಮಗಳಿಂದ ಸಾಗಿಸಬೇಕು ಎನ್ನುವುದನ್ನು ನೋಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಹಾಗೆಯೇ, methodology and depth ಇದರಲ್ಲಿ ನಮಗೆ ಎಲ್ಲೂ ಒಂದು ಕಡೆ lapse ಆಗುತ್ತಿದೆ. ನಮಗೆ ಬೇಕಾಗಿರುವಂತಹ need ಎಷ್ಟು? ಅದು ದೊಡ್ಡ ಉದ್ಯಮಕ್ಕಾಗಿಯೇ ಅಥವಾ ಜನರ ಅವಶ್ಯಕತೆಗಳಿಗೆ ಅನುಗುಣವಾಗಿ ನಾವು ಗಣಿಗಾರಿಕೆಯನ್ನು ಮಾಡುತ್ತಿದ್ದೇವೆಯೇ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಅದೇರೀತಿ ಈ crime ಮತ್ತು corruption ಗೆ party, ಧರ್ಮ, politics ಇದು ಅನ್ವಯವಾಗುವುದಿಲ್ಲ. ಅದನ್ನು ಮಾಡಿದ ತಕ್ಷಣ ನಮ್ಮ ಉದ್ದೇಶ ಸೋಲುತ್ತದೆ. ನಾನು ಇದನ್ನು ಒಂದು ಸದುದ್ದೇಶದಿಂದ ಹೇಳುವುದಕ್ಕೆ ಹೊರಟ್ಟಿದ್ದು, ಇವತ್ತಿನ political system ಒಂದು stable government ಒಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

stable debate ಆಗಬೇಕಾದರೆ, ನಾವೆಲ್ಲರೂ ಒಂದು concern ಇಟ್ಟುಕೊಳ್ಳಬೇಕು. ಪ್ರತಿಪಕ್ಷದ ನಾಯಕರು ಇದನ್ನು ಪ್ರಸ್ತಾಪಿಸಿದಾಗ, ನಾವು ruling party ಯಲ್ಲಿದ್ದವರು ತುಂಬಾ ಸಂಯಮದಿಂದ ಇರಬೇಕು. ಏಕೆಂದರೆ, ನಾನು ನಿಮ್ಮ concern ಅನ್ನು ನಂಬುತ್ತೇವೆ. At the same time, ಬಿ.ಜೆ.ಪಿ., ಸರ್ಕಾರ ಬಂದು ಎಷ್ಟು ವರ್ಷಗಳು ಆಗಿವೆ, ನಾನು ಅದನ್ನು ಹೇಳುವುದಕ್ಕೆ ಹೊರಟೆ. ಬಿ.ಜೆ.ಪಿ.,ಗೆ ಸಿಕ್ಕಿರುವುದೇ ಕಡಿಮೆ ಅವಕಾಶ. ಶಿವಮೊಗ್ಗ ಜಿಲ್ಲೆ ಎಂದರೆ, ನಮ್ಮ ಉಪ ಸಭಾಪತಿಯವರು ಸಹ ಆ ಭಾಗದಿಂದಲೇ ಬಂದಿರುತ್ತಾರೆ. ನಾವು ತುಂಬಾ ಹೆಮ್ಮೆ ಪಟ್ಟುಕೊಳ್ಳುವಂತಹ ಒಂದು ಜಿಲ್ಲೆ. ಈ ಜಿಲ್ಲೆ ಅಪ್ರತಿಮವಾದಂತಹ ಸಾಹಿತ್ಯಕ್ಕೆ ಪ್ರೇರಣೆಯಾಗಿದೆ. ಕವಿ ಶ್ರೀ ಕುವೆಂಪುರವರಿಗೆ "ನೀಲಿ ಅಗಸದಲ್ಲಿ ಸಾಗುವ ಬೆಳ್ಳಕ್ಕಿಗಳ ಸಾಲು ದೇವರು ರುಜು ಮಾಡಿದಾಗ" ಕಾಣಿಸುತ್ತದೆ. ಅದು ಕವಿ ಶ್ರೀ ಕುವೆಂಪುರವರಿಗೆ ಮಾತ್ರ ಕಾಣಿಸುವುದಕ್ಕೆ ಸಾಧ್ಯ. ಕವಿ ಶ್ರೀ ಕುವೆಂಪುರವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಕವಿ ಶ್ರೀ ಕುವೆಂಪುರವರ ಮಗ ಶ್ರೀ ಪೂರ್ಣಚಂದ್ರ ತೇಜಸ್ವಿಸಿರವರು ಮೂಡಿಗೆರೆಗೆ ಹೋದವರು ವಾಪಸ್ಸು ನಗರಕ್ಕೆ ಬರಲಿಲ್ಲ. ಅವರಿಗೆ ಛಾಯಾಗ್ರಹಣದಲ್ಲಿ ಅಭಿರುಚಿ, ಕೃಷಿಯಲ್ಲಿ ಅಭಿರುಚಿ, ಸಾಹಿತ್ಯದಲ್ಲಿ ಅಪ್ರತಿಮ ಅಭಿರುಚಿ ಮತ್ತು ಹಾಗೆಯೇ, ಶ್ರೀ ಕಡಿದಾಳ್ ಮಂಜಪ್ಪನಂತಹವರನ್ನು ಈ ನಾಡಿಗೆ ಕೊಡಿಗೆಯಾಗಿ ಕೊಟ್ಟಂತಹ ಜಿಲ್ಲೆ. ಅದೇ ರೀತಿ ಮಾನ್ಯ ಸಚಿವರಾಗಿದಂತಹ ಕಾಗೋಡು ತಿಮ್ಮಪ್ಪನವರಂತಹ ಹೋರಾಟಗಾರರು, ಶ್ರೀ ಶಾಂತವೇರಿ ಗೋಪಾಲಗೌಡರಂತಹ ಹೋರಾಟಗಾರಿರಿಗೆ, ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಬಂಗಾರಪ್ಪನವರಂತಹವರಿಗೆ, ಹಾಗೆಯೇ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಜೆ.ಹೆಚ್.ಪಾಟೀಲ್ ಅಂತಹವರಿಗೆ, ಶ್ರೀ ಡಿ.ಬಿ.ಚಂದ್ರೇಗೌಡರಂತಹವರಿಗೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದಂತಹ ಬಿ.ಎಸ್.ಯಡಿಯೂರಪ್ಪನಂತಹವರಿಗೆ, ಮಾನ್ಯ ಸಚಿರಾದಂತಹ ಕೆ.ಎಸ್.ಈಶ್ವರಪ್ಪನಂತಹವರಿಗೆ, ಶ್ರೀ ಗಿರೀಶ್ ಕಾರ್ನಾಡ್ ಇಂತಹವರಿಗೆ ಶಿವಮೊಗ್ಗ ಜಿಲ್ಲೆಯು ಒಂದು ವಿಶೇಷವಾಗಿದೆ.

**"ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ**
**ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ**
**ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ**
**ನಿತ್ಯೋತ್ಸವ, ತಾಯಿ ನಿನಗೆ ನಿತ್ಯೋತ್ಸವ"**

ಎಂದು ಹೇಳಿದಂತಹ ಕವಿ ಶ್ರೀ ನಿಸ್ಸಾರ್ ಅಹಮದ್‌ರವರಂತಹ ವೈಶಿಷ್ಟಗಳ ನಾಡು ಇದು. ಅಂತಹ ಜಿಲ್ಲೆಯಲ್ಲಿ ಇಂತಹ ಅವೈಜ್ಞಾನಿಕ ಗಣಿಗಾರಿಕೆಗೆ ಅವಕಾಶ ಕೊಡಲೇಬಾರದು. ನಮ್ಮ ನಾಡಿನಲ್ಲಿರುವಂತಹ ಅಕ್ರಮ ಗಣಿಗಾರಿಕೆಗಳನ್ನು ತಡೆಯಲೇಬೇಕು. ಸಕ್ರಮವಾಗಿ ಕಾನೂನು ಬದ್ದವಾಗಿ ನಾಡಿಗೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಶ್ಯವಿರುವಂತಹ ಗಣಿಗಾರಿಕೆಗಳಿಗೆ ಸ್ಪಷ್ಟವಾದಂತಹ ಕಾನೂನುಗಳ ಮೂಲಕ ಒಂದು ಅವಕಾಶವನ್ನು ಕೊಟ್ಟಾಗ ಮಾತ್ರ ಇಂತಹವುಗಳನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಇದೇ ನಿಟ್ಟಿನಲ್ಲಿ ನಾವು ರಾಜಕೀಯದ ಕೇಸರಾಟ ಮಾಡಿದ ತಕ್ಷಣ ನಾನು ಮತ್ತೆ ಮತ್ತೆ ಹೇಳುತ್ತೇನೆ, ಅದು politicize ಆದ ತಕ್ಷಣ ನಮ್ಮ ಉದ್ದೇಶ ಸತ್ತು ಹೋಗುತ್ತದೆ. ಆದಕಾರಣ, ಇದು ಹಿರಿಯರ ಮನೆ, ಮೇಲ್ಮನೆ. ನಂಬಿಕೆ ಇಡೋಣ. ಪರಸ್ಪರ ಪ್ರತಿ ಪಕ್ಷ ಮತ್ತು ಆಡಳಿತ ಪಕ್ಷ ನಂಬಿಕೆ ಇಡೋಣ. ಸಣ್ಣ ಪುಟ್ಟ ಲೋಪದೋಷಗಳು ಆಗಿದ್ದರೆ, ಸ್ವ-ಪ್ರತಿಷ್ಠೆಯಿಂದ ತಿದ್ದುಕೊಳ್ಳೋಣ. ಒಟ್ಟಾರೆಯಾಗಿ ಇಲ್ಲಿ ಕಾರ್ಮಿಕರಿಗೆ ತೊಂದರೆಯಾಗಿದೆ. ಪರಿಹಾರ ಕೊಡುವಾಗಲೂ, ಮಾನ್ಯ ಹಿರಿಯ ಸದಸ್ಯರಾದಂತಹ ಆಯನೂರು ಮಂಜುನಾಥ್‌ರವರು ಹೇಳಿರುವಂತಹ ಒಂದು ಮಾತನ್ನು ಒಪ್ಪುತ್ತೇನೆ. ಅದೇ ರೀತಿ ಮಾನ್ಯ ಹಿರಿಯ ಸದಸ್ಯರಾದಂತಹ ಕೆ.ಸಿ.ಕೊಂಡಯ್ಯರವರು ಸಹ ಇದರಲ್ಲಿ ಅಂತರ್‌ರಾಜ್ಯದವರು ಭಾಗಿಯಾಗಿರುವುದರಿಂದ ಇದು ತನಿಖೆಯಾಗಬೇಕೆಂದು ಹೇಳಿದ್ದಾರೆ. ಒಂದು ಸ್ಪಷ್ಟವಾದಂತಹ ಫಲಿತಾಂಶ ಬಂದ ಮೇಲೆ ಕಾರ್ಮಿಕರ ರಕ್ಷಣೆಗೆ ಬೇಕಾದಂತಹ ಎಲ್ಲಾ ಭದ್ರತಾ ಕ್ರಮಗಳನ್ನು ಕಾರ್ಮಿಕ ಇಲಾಖೆಯವರು ತೆಗೆದುಕೊಳ್ಳಬೇಕು. ಉದ್ಯಮ ಇಲಾಖೆ ಮತ್ತು ಗಣಿ ಇಲಾಖೆ ಇದು violate ಆಗದಂತೆ ನೋಡಿಕೊಳ್ಳಬೇಕು. ಇದರಲ್ಲಿ ವಿದ್ರೋಹಿಗಳು ಯಾರಾದರೂ involve ಆಗಿದ್ದರೆ, merciless ಆಗಿ ಇದರ ಮೇಲೆ ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳುವಂತಹ ನಿಟ್ಟಿನಲ್ಲಿ ಈ ಸರ್ಕಾರ ಬದ್ಧವಾಗಿದೆ ಎಂದು ನಮಗೆ ಗೊತ್ತಿದೆ. ಆದರೆ, ಮುಂದಿನ ದಿವಸಗಳಲ್ಲಿ ಇನ್ನಷ್ಟು ತನಿಖೆ ಮಾಡಿ ಸತ್ಯಾಂಶ ಹೊರಬಂದ ಮೇಲೆ ಈ ಸರ್ಕಾರ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವಂತಹ ಬದ್ಧತೆಯಿಂದ ನಾನು ಸಹ ಆಗ್ರಹ ಮಾಡುತ್ತೇನೆ. ಧನ್ಯವಾದಗಳು.

**08. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 01.02.2021 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ ವಿಧೇಯಕ, 2021

2) ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕ, 2021

3) ಡಾ||ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 2021

4) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕ, 2020

5) ವಿದ್ಯಾಶಿಲ್ಪ ವಿಶ್ವವಿದ್ಯಾಲಯ ವಿಧೇಯಕ 2020

6) ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ 2020

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 47 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 2ನೇ ಫೆಬ್ರವರಿ 2021ರ ಮಂಗಳವಾರದಂದು ಪೂರ್ವಾಹ್ನ 11-00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"